" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಕರ್ನಾಟಕ ವಿಧಾನ ಪರಿಷತ್ತು**

**10ನೇ ಅಕ್ಟೋಬರ್ 2019**
**ಗುರುವಾರ**

**ವಿಷಯಾನುಕ್ರಮಣಿಕೆ**


1. **ಪ್ರಕಟಣೆಗಳು**

ಅ) ಶ್ರೀ ಕೋಟ ಶ್ರೀನಿವಾಸ ಪೂಜಾರಿಯವರು ವಿಧಾನ ಪರಿಷತ್ತಿನ ಸಭಾನಾಯಕರಾಗಿ ನೇಮಕಗೊಂಡಿರುವ ಬಗ್ಗೆ.

ಆ) ಶ್ರೀ ಎಸ್.ಆರ್.ಪಾಟೀಲ್‌ರವರು ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕರಾಗಿ ನೇಮಕಗೊಂಡಿರುವ ಬಗ್ಗೆ.

ಇ) ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ ಅವರು ವಿಧಾನ ಪರಿಷತ್ತಿನ ಸರ್ಕಾರದ ಮುಖ್ಯ ಸಚೇತಕರಾಗಿ ನೇಮಕಗೊಂಡಿರುವ ಬಗ್ಗೆ.

ಈ) ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ ಹಾಗೂ ಶ್ರೀ ಮರಿತಿಬ್ಬೇಗೌಡ ಅವರುಗಳು ಕ್ರಮವಾಗಿ ವಿಧಾನ ಪರಿಷತ್ತಿನಲ್ಲಿ ಜನತಾದಳ ಶಾಸಕಾಂಗ ಪಕ್ಷದ ನಾಯಕರು ಹಾಗೂ ಉಪನಾಯಕರಾಗಿ ನೇಮಕಗೊಂಡಿರುವ ಬಗ್ಗೆ.

ಉ) ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿ ಅವರು ವಿಧಾನ ಪರಿಷತ್ತಿನ ವಿರೋಧ ಪಕ್ಷದ ಮುಖ್ಯ ಸಚೇತಕರಾಗಿ ನೇಮಕಗೊಂಡಿರುವ ಬಗ್ಗೆ.

2. **ಸಂತಾಪ ಸೂಚನೆಗಳು**

ವಿಧಾನ ಪರಿಷತ್ತಿನ ಮಾಜಿ ಸದಸ್ಯರುಗಳಾಗಿದ್ದ ಶ್ರೀಮತಿ ಪ್ರವೀಣ ಸಿ. ಕಮಲಾನಿ ಮತ್ತು ಶ್ರೀ ಎ.ಕೆ.ಸುಬ್ಬಯ್ಯ ಹಾಗೂ ವಿಧಾನ ಸಭೆಯ ಮಾಜಿ ಸದಸ್ಯರುಗಳಾಗಿದ್ದ ಶ್ರೀ ಉಮೇಶ್ ಭಟ್, ಶ್ರೀ ಸಿ.ವೀರಭದ್ರಯ್ಯ, ಶ್ರೀ ಅರ್ಜುನರಾವ್ ಶ್ರೀ ಹಿಶೋಬಕರ್ ಹಾಗೂ ಕೇಂದ್ರದ ಮಾಜಿ ಸಚಿವರಾಗಿದ್ದ ಶ್ರೀಮತಿ ಸುಷ್ಮಾ ಸ್ವರಾಜ್ ಹಾಗೂ ಕೇಂದ್ರದ ಮಾಜಿ ಸಚಿವರು ಹಾಗೂ ಹಾಲಿ ರಾಜ್ಯಸಭೆಯ ಸದಸ್ಯರುಗಳಾಗಿದ್ದ ಶ್ರೀ ಅರುಣ್ ಜೇಟ್ಲಿ ಹಾಗೂ ಶ್ರೀ ರಾಮ್ ಜೇಠ್ಮಲಾನಿ ಇವರುಗಳ ನಿಧನದ ಬಗ್ಗೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)**
**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)**

3. **ಸಭೆಯ ಮುಂದಿಡಲಾದ ಕಾಗದಪತ್ರಗಳು**
4. **ನೂತನ ಸಚಿವರ ಪರಿಚಯ**
5. **ವಿತ್ತೀಯ ಕಾರ್ಯಕಲಾಪ**
6. **ಸಭೆಯ ಮುಂದಿಡಲಾದ ಕಾಗದಪತ್ರಗಳು**


" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

7. ವರದಿಗಳನ್ನೊಪ್ಪಿಸುವುದು
8. ವಿಶೇಷ ಪ್ರಸ್ತಾವಗಳು

ಅ) ಬೀದಿಯಲ್ಲಿ ವಾಸಿಸುತ್ತಿರುವ ಜನರಿಗೆ ತಂಗುದಾಣ ನಿರ್ಮಿಸಿಕೊಡುವುದರ ಬಗ್ಗೆ.

ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿ(ವಿರೋಧ ಪಕ್ಷದ ಮುಖ್ಯ ಸಚೇತಕರು)
ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

ಆ) ಮಂಗಳೂರು ಮಹಾನಗರ ಪಾಲಿಕೆಗೆ ಚುನಾವಣೆ ಮೂಲಕ ಚುನಾಯಿತ ಆಡಳಿತ ಮಂಡಳಿಯನ್ನು ಅಸ್ತಿತ್ವಕ್ಕೆ ತರುವ ಬಗ್ಗೆ.

ಶ್ರೀ ಐವನ್ ಡಿ'ಸೋಜಾ
ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

9. ನಿಯಮ 59ರ ಮೇರೆಗೆ ನಿಲುವಳಿ ಸೂಚನೆ ಮಂಡಿಸಲು ಅನುಮತಿ ಕೋರಿ ಪ್ರಸ್ತಾವ.

ರಾಜ್ಯದಲ್ಲಿ ಭಾರಿ ಮಳೆ ಮತ್ತು ಪ್ರವಾಹದಿಂದಾಗಿ ಉಂಟಾಗಿರುವ ಅನಾಹುತದಿಂದ ಸಂಕಷ್ಟಕ್ಕೀಡಾಗಿರುವ ಜನರಿಗೆ ಪರಿಹಾರ ಒದಗಿಸುವಲ್ಲಿ ಸರ್ಕಾರವು ವಿಫಲವಾಗಿರುವ ಬಗ್ಗೆ.

ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)
ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

*(ನಿಯಮ 68ಕ್ಕೆ ಪರಿವರ್ತಿಸಲಾಯಿತು)*

10. ನಿಯಮ 68ರ ಮೇರೆಗೆ ಚರ್ಚೆ

ರಾಜ್ಯದಲ್ಲಿ ಭಾರಿ ಮಳೆ ಮತ್ತು ಪ್ರವಾಹದಿಂದಾಗಿ ಉಂಟಾಗಿರುವ ಅನಾಹುತದಿಂದ ಸಂಕಷ್ಟಕ್ಕೀಡಾಗಿರುವ ಜನರಿಗೆ ಪರಿಹಾರ ಒದಗಿಸುವಲ್ಲಿ ಸರ್ಕಾರವು ವಿಫಲವಾಗಿರುವ ಬಗ್ಗೆ.

ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)
ಶ್ರೀ ಆರ್.ಅಶೋಕ್(ಕಂದಾಯ ಸಚಿವರು)
ಶ್ರೀ ಬಸವರಾಜ ಪಾಟೀಲ್ ಇಟಗಿ
ಶ್ರೀ ಲಕ್ಷ್ಮಣ ಎಸ್.ಸವದಿ(ಉಪ ಮುಖ್ಯಮಂತ್ರಿಗಳು)
ಶ್ರೀ ಎಂ.ಕೆ.ಪ್ರಾಣೇಶ್
ಶ್ರೀ ಕೆ.ಟಿ.ಶ್ರೀಕಂಠೇಗೌಡ
ಶ್ರೀ ಪ್ರಕಾಶ್ ಕೆ.ರಾಥೋಡ್
ಶ್ರೀ ಎನ್.ಎಸ್.ಬೋಸ್‌ರಾಜು
ಶ್ರೀ ಐವನ್ ಡಿ'ಸೋಜಾ

<>:<>:<>

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

# *ಕರ್ನಾಟಕ ವಿಧಾನ ಪರಿಷತ್ತು*

**ಗುರುವಾರ, 10ನೇ ಅಕ್ಟೋಬರ್ 2019**

ಸದನವು ವಿಧಾನಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ ಪೂರ್ವಾಹ್ನ **11** ಗಂಟೆ **49** ನಿಮಿಷಕ್ಕೆ ಸಮಾವೇಶಗೊಂಡಿತು.

ಸಭಾಪತಿ (**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ**) ರವರು ಪೀಠವನ್ನು ಅಲಂಕರಿಸಿದರು.

**(ಸದನವು "ವಂದೇ ಮಾತರಂ" ಗೀತೆಯೊಂದಿಗೆ ಪ್ರಾರಂಭಗೊಂಡಿತು)**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

“ ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

(108)10.10.2019 11.50 ಟಿಸಿಹೆಚ್–ವಿಕೆ

## 1. ಪ್ರಕಟಣೆಗಳು

### ಅ) ಶ್ರೀ ಕೋಟ ಶ್ರೀನಿವಾಸ ಪೂಜಾರಿಯವರು ವಿಧಾನ ಪರಿಷತ್ತಿನ ಸಭಾನಾಯಕರಾಗಿ ನೇಮಕಗೊಂಡಿರುವ ಬಗ್ಗೆ.

– – –

**ಸಭಾಪತಿಯವರು:–** ಸನ್ಮಾನ್ಯ ಮುಖ್ಯಮಂತ್ರಿಯವರು ದಿನಾಂಕ 09.10.2019ರ ತಮ್ಮ ಪತ್ರದಲ್ಲಿ ತಿಳಿಸಿರುವ ರೀತಿ ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮ 2(1)ರ ಪ್ರಕಾರ ಶ್ರೀ ಕೋಟ ಶ್ರೀನಿವಾಸ ಪೂಜಾರಿ, ಮಾನ್ಯ ಮುಜರಾಯಿ ಮೀನುಗಾರಿಕಾ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರನ್ನು ವಿಧಾನ ಪರಿಷತ್ತಿನ ಸಭಾನಾಯಕರನ್ನಾಗಿ ನಾಮ ನಿರ್ದೇಶನ ಮಾಡಿರುವ ವಿಷಯವನ್ನು ಸದನದ ಗಮನಕ್ಕೆ ತರಲಾಗಿದೆ.

**(ಈ ಹಂತದಲ್ಲಿ ಆಡಳಿತ ಪಕ್ಷದವರು ಮೇಜು ತಟ್ಟುವ ಮೂಲಕ ತಮ್ಮ ಹರ್ಷವನ್ನು ವ್ಯಕ್ತಪಡಿಸಿದರು)**

### ಆ) ಶ್ರೀ ಎಸ್.ಆರ್.ಪಾಟೀಲ್‌ರವರು ವಿರೋಧ ಪಕ್ಷದ ನಾಯಕರಾಗಿ ನೇಮಕಗೊಂಡಿರುವ ಬಗ್ಗೆ.

– – – –

**ಸಭಾಪತಿಯವರು:–** ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ರಾಜ್ಯಾಧ್ಯಕ್ಷರು ದಿನಾಂಕ 10.10.2019ರ ತಮ್ಮ ಪತ್ರದಲ್ಲಿ ತಿಳಿಸಿರುವ ರೀತಿ ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮ 2(2)ರ ಪ್ರಕಾರ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಸ್.ಆರ್.ಪಾಟೀಲ್ ಇವರನ್ನು ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕರನ್ನಾಗಿ ದಿನಾಂಕ 10.10.2019 ರಿಂದ ಜಾರಿಗೆ ಬರುವಂತೆ ಮಾನ್ಯತೆ ನೀಡಲಾಗಿದೆ.

**(ಈ ಹಂತದಲ್ಲಿ ಆಡಳಿತ ಪಕ್ಷದವರು ಹಾಗೂ ವಿರೋಧ ಪಕ್ಷದವರು ಮೇಜು ತಟ್ಟುವ ಮೂಲಕ ತಮ್ಮ ಹರ್ಷವನ್ನು ವ್ಯಕ್ತಪಡಿಸಿದರು)**

### ಇ) ಶ್ರೀ ಕವಟಗಿಮಠ ಮಹಾಂತೇಶ್ ಮಲ್ಲಿಕಾರ್ಜುನ ರವರು ವಿಧಾನ ಪರಿಷತ್ತಿನ ಸರ್ಕಾರದ ಮುಖ್ಯ ಸಚೇತಕರಾಗಿ ನೇಮಕಗೊಂಡಿರುವ ಬಗ್ಗೆ.

–––––

**ಸಭಾಪತಿಯವರು:–** ಸನ್ಮಾನ್ಯ ಮುಖ್ಯಮಂತ್ರಿಯವರು ದಿನಾಂಕ 09.10.2019ರ ತಮ್ಮ ಪತ್ರದಲ್ಲಿ ತಿಳಿಸಿರುವ ರೀತಿ ಶ್ರೀ ಕವಟಗಿಮಠ ಮಹಾಂತೇಶ್ ಮಲ್ಲಿಕಾರ್ಜುನ ಇವರನ್ನು ಕರ್ನಾಟಕ ವಿಧಾನ ಮಂಡಲದ ವೇತನ, ನಿವೃತ್ತಿ ವೇತನ ಹಾಗೂ ಭತ್ಯೆಗಳ ಅಧಿನಿಯಮ 1956ರ ಪರಿಚ್ಛೇದ 2(1)ಬಿಬಿ ಪ್ರಕಾರ ವಿಧಾನ ಪರಿಷತ್ತಿನ ಸರ್ಕಾರದ ಮುಖ್ಯ ಸಚೇತಕರನ್ನಾಗಿ ದಿನಾಂಕ 09.10.2019ರಿಂದ ಜಾರಿಗೆ ಬರುವಂತೆ ನೇಮಕ ಮಾಡಲಾಗಿದೆ ಎಂಬ ವಿಷಯವನ್ನು ಸದನದ ಗಮನಕ್ಕೆ ತರಲಾಗುತ್ತಿದೆ.

**(ಈ ಹಂತದಲ್ಲಿ ಆಡಳಿತ ಪಕ್ಷದವರು ಹಾಗೂ ವಿರೋಧ ಪಕ್ಷದವರು ಮೇಜು ತಟ್ಟುವ ಮೂಲಕ ತಮ್ಮ ಹರ್ಷವನ್ನು ವ್ಯಕ್ತಪಡಿಸಿದರು)**

**ಈ) ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ ಹಾಗೂ ಶ್ರೀ ಮರಿತಿಬ್ಬೇಗೌಡ ಇವರುಗಳು ಕ್ರಮವಾಗಿ ವಿಧಾನ ಪರಿಷತ್ತಿನಲ್ಲಿ ಜನತಾದಳ ಶಾಸಕಾಂಗ ಪಕ್ಷದ ನಾಯಕರು ಮತ್ತು ಉಪ ನಾಯಕರಾಗಿ ಹಾಗೂ ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿ ಇವರನ್ನು ಸಚೇತಕರಾಗಿ ನೇಮಕ ಮಾಡಿರುವ ಬಗ್ಗೆ.**

-----

**ಸಭಾಪತಿಯವರು:–** ದಿನಾಂಕ 09.10.2019ರಂದು ಕರ್ನಾಟಕ ಜನತಾದಳ (ಜಾತ್ಯಾತೀತ) ಶಾಸಕಾಂಗ ಪಕ್ಷದ ನಾಯಕರಾದ ಶ್ರೀ ಹೆಚ್.ಡಿ.ಕುಮಾರಸ್ವಾಮಿ ಯವರು ತಮ್ಮ ಪತ್ರದಲ್ಲಿ ತಿಳಿಸಿರುವ ರೀತಿ ಕರ್ನಾಟಕ ವಿಧಾನ ಪರಿಷತ್ತಿನಲ್ಲಿ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ ಇವರನ್ನು ಜನತಾ ದಳದ ಶಾಸಕಾಂಗ ಪಕ್ಷದ ನಾಯಕರನ್ನಾಗಿ, ಶ್ರೀ ಮರಿತಿಬ್ಬೇಗೌಡ ಇವರನ್ನು ಉಪ ನಾಯಕರನ್ನಾಗಿ ಮತ್ತು ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿ ಇವರನ್ನು ಸಚೇತಕರನ್ನಾಗಿ ಪರಿಗಣಿಸಲಾಗಿದೆ ಎಂಬ ವಿಷಯವನ್ನು ಸದನದ ಗಮನಕ್ಕೆ ತರಲಾಗಿದೆ.

**(ಈ ಹಂತದಲ್ಲಿ ಆಡಳಿತ ಪಕ್ಷದವರು ಹಾಗೂ ವಿರೋಧ ಪಕ್ಷದವರು ಮೇಜು ಕುಟ್ಟುವ ಮೂಲಕ ತಮ್ಮ ಹರ್ಷವನ್ನು ವ್ಯಕ್ತಪಡಿಸಿದರು)**

**ಶ್ರೀ ಐವನ್ ಡಿ'ಸೋಜಾ (ನಾಮ ನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಇವತ್ತು ಮಾಧ್ಯಮದವರು ಸದನದ ಕಲಾಪವನ್ನು ಚಿತ್ರೀಕರಣ ಮಾಡುವಂತಿಲ್ಲ ಎಂದು ನಾವು ಪತ್ರಿಕೆಗಳಲ್ಲಿ ಓದಿದ್ದೇವೆ. ಆದರೆ ಇವತ್ತು ಮಾನ್ಯ ಸದಸ್ಯರು ಹಾಗೂ ಮಾಧ್ಯಮದವರು ಈ ಸದನದ ಒಳಗಡೆ ಇದ್ದಾರೆ. ಪತ್ರಿಕೆಗಳಲ್ಲಿ ಸರ್ಕಾರಿ ಮಾಧ್ಯಮದವರನ್ನು ಹೊರತುಪಡಿಸಿ, ಬೇರೆ ಯಾರೂ ಸದನದ ಕಲಾಪವನ್ನು ಚಿತ್ರೀಕರಿಸುವಂತಿಲ್ಲ ಎಂದು ಪತ್ರಿಕೆಗಳಲ್ಲಿ ವರದಿಯಾಗಿರುತ್ತದೆ. ಹಾಗಾಗಿ, ಎಲ್ಲೋ ಒಂದು ಕಡೆ ಅವರು ಒಳಗಡೆ ಬರಬಹುದೊ, ಇಲ್ಲವೋ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಎಂಬುದರ ಬಗ್ಗೆ ಕ್ಲಾರಿಫೈ ಮಾಡಬೇಕೆಂದು ನಾನು ತಮ್ಮ ಮೂಲಕ ಆಡಳಿತ ಪಕ್ಷದ ಸಭಾ ನಾಯಕರ ಬಳಿ ಕೇಳಿಕೊಳ್ಳುತ್ತಿದ್ದೇನೆ.

## 2. ಸಂತಾಪ ಸೂಚನೆಗಳು

"ವಿಧಾನ ಪರಿಷತ್ತಿನ ಮಾಜಿ ಸದಸ್ಯರುಗಳಾಗಿದ್ದ ಶ್ರೀಮತಿ ಪ್ರವೀಣ ಸಿ. ಕಮಲಾನಿ ಮತ್ತು ಶ್ರೀ ಎ.ಕೆ.ಸುಬ್ಬಯ್ಯ ಹಾಗೂ ವಿಧಾನ ಸಭೆಯ ಮಾಜಿ ಸದಸ್ಯರುಗಳಾಗಿದ್ದ ಶ್ರೀ ಉಮೇಶ್ ಭಟ್, ಶ್ರೀ ಸಿ.ವೀರಭದ್ರಯ್ಯ, ಶ್ರೀ ಅರ್ಜುನರಾವ್ ಹಿಶೋಬಕರ್ ಹಾಗೂ ಕೇಂದ್ರದ ಮಾಜಿ ಸಚಿವರಾಗಿದ್ದ ಶ್ರೀಮತಿ ಸುಷ್ಮಾ ಸ್ವರಾಜ್ ಹಾಗೂ ಕೇಂದ್ರದ ಮಾಜಿ ಸಚಿವರು ಹಾಗೂ ಹಾಲಿ ರಾಜ್ಯಸಭೆಯ ಸದಸ್ಯರುಗಳಾಗಿದ್ದ ಶ್ರೀ ಅರುಣ್ ಜೇಟ್ಲಿ ಹಾಗೂ ಶ್ರೀ ರಾಮ್ ಜೇಠ್ಮಲಾನಿ ಇವರುಗಳ ನಿಧನದ ಬಗ್ಗೆ."

– – – – –

**ಸಭಾಪತಿಯವರು:–** ವಿಧಾನ ಪರಿಷತ್ತಿನ ಮಾಜಿ ಸದಸ್ಯರುಗಳಾಗಿದ್ದ ಶ್ರೀಮತಿ ಪ್ರವೀಣ ಸಿ. ಕಮಲಾನಿ ಮತ್ತು ಶ್ರೀ ಎ.ಕೆ.ಸುಬ್ಬಯ್ಯ ಹಾಗೂ ವಿಧಾನ ಸಭೆಯ ಮಾಜಿ ಸದಸ್ಯರುಗಳಾಗಿದ್ದ ಶ್ರೀ ಉಮೇಶ್ ಭಟ್, ಶ್ರೀ ಸಿ.ವೀರಭದ್ರಯ್ಯ, ಶ್ರೀ ಅರ್ಜುನರಾವ್ ಹಿಶೋಬಕರ್ ಹಾಗೂ ಕೇಂದ್ರದ ಮಾಜಿ ಸಚಿವರಾಗಿದ್ದ ಶ್ರೀಮತಿ ಸುಷ್ಮಾ ಸ್ವರಾಜ್ ಹಾಗೂ ಕೇಂದ್ರದ ಮಾಜಿ ಸಚಿವರು ಹಾಗೂ ಹಾಲಿ ರಾಜ್ಯಸಭೆಯ ಸದಸ್ಯರುಗಳಾಗಿದ್ದ ಶ್ರೀ ಅರುಣ್ ಜೇಟ್ಲಿ ಹಾಗೂ ಶ್ರೀ ರಾಮ್ ಜೇಠ್ಮಲಾನಿ ಅವರುಗಳು ನಿಧನರಾದುದನ್ನು ಈ ಸದನಕ್ಕೆ ತಿಳಿಸಲು ವಿಷಾದಿಸುತ್ತೇನೆ.

### 01. ಪ್ರವೀಣ ಚಂದ್ರು ಕಮಲಾನಿ

ವಿಧಾನ ಪರಿಷತ್ತಿನ ಮಾಜಿ ಸದಸ್ಯರಾಗಿದ್ದ ಪ್ರವೀಣ ಚಂದ್ರು ಕಮಲಾನಿ ಅವರು ದಿನಾಂಕ:26.08.2019ರಂದು ನಿಧನ ಹೊಂದಿರುತ್ತಾರೆ.

1936ನೇ ಅಕ್ಟೋಬರ್ 19ರಂದು ಲಾರ್ಕಾನದಲ್ಲಿ ಜನಿಸಿದ್ದ ಶ್ರೀಯುತರು ಬಿ.ಎ, ಎಲ್.ಎಲ್.ಬಿ ಪದವೀಧರರಾಗಿದ್ದು, ಸಮಾಜ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಮಾಜಿ ಮುಖ್ಯಮಂತ್ರಿ ದೇವರಾಜ ಅರಸು ಅವರ ಸರ್ಕಾರದಲ್ಲಿ 1972–78ರ ಅವಧಿಗೆ ವಿಧಾನ ಪರಿಷತ್ತಿನ ನಾಮನಿರ್ದೇಶಿತ ಸದಸ್ಯರಾಗಿ ಸೇವೆ ಸಲ್ಲಿಸಿದ್ದರು. ಶ್ರೀಯುತರು ಮೈಸೂರು ರಾಜ್ಯ ಕರಕುಶಲ ಅಭಿವೃದ್ಧಿ ನಿಗಮದ ನಿರ್ದೇಶಕರಾಗಿ, ವನಿತಾ ಸೇವಾ ಸಮಾಜದ ಅಧ್ಯಕ್ಷರಾಗಿ, ಪ್ರೌಢ ಶಾಲಾ ಅಭಿವೃದ್ಧಿ ಸಮಿತಿಯ ಅಧ್ಯಕ್ಷರಾಗಿ, ಕರ್ನಾಟಕ ವಿಶ್ವವಿದ್ಯಾಲಯದ ಸೆನೆಟ್

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸದಸ್ಯರಾಗಿ, ಮೈಸೂರು ರಾಜ್ಯ ಸಮಾಜ ಕಲ್ಯಾಣ ಮಂಡಳಿಯ ಸದಸ್ಯರಾಗಿ ದಕ್ಷಿಣ ಮಧ್ಯ ರೈಲ್ವೆಯ ಅಡುಗೆ ಮೇಲ್ವಿಚಾರಣಾ ಸಮಿತಿಯ ಸದಸ್ಯರಾಗಿ ಕಾರ್ಯನಿರ್ವಹಿಸಿರುವುದಲ್ಲದೆ ದಕ್ಷಿಣ ರಾಜ್ಯಗಳಲ್ಲಿನ ಮೈಸೂರು ವಿಧಾನ ಮಂಡಲದ ಸದಸ್ಯರಾಗಿ ಸಿಂಧಿ ಪ್ರಾಂತ್ಯದ ಮೊದಲ ಪ್ರತಿನಿಧಿಯಾಗಿದ್ದರು.

ಶ್ರೀಯುತರ ನಿಧನದಿಂದಾಗಿ ರಾಜ್ಯವು ಒಬ್ಬ ಹಿರಿಯ ಸರಳ ಸಜ್ಜನ ರಾಜಕಾರಣಿಯನ್ನು ಕಳೆದುಕೊಂಡಂತಾಗಿದೆ.

**02. ಎ.ಕೆ.ಸುಬ್ಬಯ್ಯ**

ಹಿರಿಯ ವಕೀಲರು ಹಾಗೂ ರಾಜಕೀಯ ಮುತ್ಸದ್ಧಿಯಾಗಿದ್ದ ವಿಧಾನ ಪರಿಷತ್ತಿನ ಮಾಜಿ ಸದಸ್ಯರಾದ ಶ್ರೀ ಎ.ಕೆ.ಸುಬ್ಬಯ್ಯ ಅವರು ದಿನಾಂಕ 27.08.2019ರಂದು ನಿಧನ ಹೊಂದಿರುತ್ತಾರೆ.

1936ನೇ ಆಗಸ್ಟ್ 9ರಂದು ಕೊಡಗು ಜಿಲ್ಲೆಯ ವಿರಾಜಪೇಟೆ ತಾಲ್ಲೂಕಿನ ಹುದಿಕೇರಿ ಗ್ರಾಮದಲ್ಲಿ ಜನಿಸಿದ್ದ ಶ್ರೀಯುತರು ಬಿ.ಎಸ್ಸಿ., ಬಿ.ಎಲ್., ಪದವಿಯನ್ನು ಪಡೆದು ವೃತ್ತಿಯಲ್ಲಿ ವಕೀಲರಾಗಿದ್ದರು. ರಾಜ್ಯ ರಾಜಕಾರಣದಲ್ಲಿ ನಿಷ್ಠುರವಾದಿ ರಾಜಕಾರಣಿ ಎಂದೇ ಖ್ಯಾತಿ ಪಡೆದಿದ್ದ ಅಜ್ಜಿಕುಟ್ಟೀರ ಕಾರ್ಯಪ್ಪ ಸುಬ್ಬಯ್ಯನವರು ಸಮಾಜ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದು, 1980ರಲ್ಲಿ ಜನಸಂಘದಲ್ಲಿ ಗುರುತಿಸಿಕೊಂಡಿದ್ದ ಶ್ರೀಯುತರು ರಾಜ್ಯ ಜನತಾ ಪಕ್ಷದ ಮೊದಲ ರಾಜ್ಯಾಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದರು. ಜನತಾಪಕ್ಷ, ಕ್ರಾಂತಿರಂಗ, ಬಿ.ಜೆ.ಪಿ., ಜೊತೆಗೂಡಿ ರಾಮಕೃಷ್ಣ ಹೆಗಡೆ ನೇತೃತ್ವದಲ್ಲಿ ಅಧಿಕಾರಕ್ಕೆ ಬಂದ ಪ್ರಥಮ ಕಾಂಗ್ರೆಸ್ಸೇತರ ಸರ್ಕಾರ ರಚನೆಯಲ್ಲೂ ಶ್ರೀಯುತರು ಪ್ರಮುಖ ಪಾತ್ರವನ್ನು ವಹಿಸಿದ್ದರು.

ಶ್ರೀಯುತರು 1968–74, 1974–80 ಹಾಗೂ 1980–86ರ ಅವಧಿಗೆ ಪದವೀಧರರ ಕ್ಷೇತ್ರದಿಂದ ಹಾಗೂ 1988–94ರ ಅವಧಿಗೆ ವಿಧಾನ ಸಭಾ ಕ್ಷೇತ್ರದಿಂದ ಚುನಾಯಿತರಾಗಿ ಸೇವೆ ಸಲ್ಲಿಸಿದ್ದರು. ಶ್ರೀಯುತರು ದಿನಾಂಕ 18.03.1978 ರಿಂದ 23.01.1980ರವರೆಗೆ ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕರಾಗಿ ಕಾರ್ಯನಿರ್ವಹಿಸಿರುತ್ತಾರೆ.

ಶ್ರೀಯುತರ ನಿಧನದಿಂದಾಗಿ ರಾಜ್ಯವು ಒಬ್ಬ ಹಿರಿಯ ರಾಜಕಾರಣಿ ಹಾಗೂ ಪ್ರಗತಿಪರ ಚಿಂತಕರೊಬ್ಬರನ್ನು ಕಳೆದುಕೊಂಡಂತಾಗಿದೆ.

**(ಮುಂದು...)**

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

**(109)10.10.2019/12.00/ಎಂಎಂ-ಬಿಎನ್‌ಎಸ್**

**03. ಉಮೇಶ್ ಭಟ್**

ವಿಧಾನ ಸಭೆಯ ಮಾಜಿ ಸದಸ್ಯರಾಗಿದ್ದ ಉಮೇಶ್ ಭಟ್ ಅವರು ದಿನಾಂಕ: 13.08.2019 ರಂದು ನಿಧನ ಹೊಂದಿರುತ್ತಾರೆ.

1949ನೇ ಡಿಸೆಂಬರ್ 26ರಂದು ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ತಾಲ್ಲೂಕಿನ ಭಾವಿಕೇರಿಯಲ್ಲಿ ಜನಿಸಿದ್ದ ಶ್ರೀಯುತರು ಬಿ.ಎ., ಪದವೀಧರರಾಗಿದ್ದು, ವೃತ್ತಿಯಲ್ಲಿ ವ್ಯಾಪಾರಿಯಾಗಿದ್ದರು. 1989ರಲ್ಲಿ ಶ್ರೀಯುತರು 9ನೇ ವಿಧಾನ ಸಭೆಗೆ ಅಂಕೋಲಾ ಕ್ಷೇತ್ರದಿಂದ ಆಯ್ಕೆಯಾಗಿ ಸೇವೆಯನ್ನು ಸಲ್ಲಿಸಿದ್ದರು. ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಉಪಾಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದ ಶ್ರೀಯುತರು ಹುಬ್ಬಳ್ಳಿಯ ಲೋಕ ಶಿಕ್ಷಣಾ ಟ್ರಸ್ಟಿನ ಮುಖ್ಯಸ್ಥರಾಗಿ, ಯಲ್ಲಾಪುರ ವಿಶ್ವದರ್ಶನ ಶಿಕ್ಷಣ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷರಾಗಿ, ಶಿರಸಿಯ ಜನಶಕ್ತಿ ವಿಶ್ವಸ್ಥ ಮಂಡಳಿಯ ಗೌರವಾಧ್ಯಕ್ಷರಾಗಿ ಹಾಗೂ ಬೆಂಗಳೂರಿನ ನಮ್ಮ ಮೆಟ್ರೋ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿರುತ್ತಾರೆ.

ಶ್ರೀಯುತರ ನಿಧನದಿಂದಾಗಿ ರಾಜ್ಯವು ಹಿರಿಯ ರಾಜಕಾರಣಿಯೊಬ್ಬರನ್ನು ಕಳೆದುಕೊಂಡಂತಾಗಿದೆ.

**04. ಸಿ. ವೀರಭದ್ರಯ್ಯ**

ವಿಧಾನ ಸಭೆಯ ಮಾಜಿ ಸದಸ್ಯರಾಗಿದ್ದ ವೀರಭದ್ರಯ್ಯ ಅವರು 07.09.2019ರಂದು ನಿಧನ ಹೊಂದಿರುತ್ತಾರೆ.

1927ನೇ ಜೂನ್ 20ರಂದು ತುಮಕೂರು ಜಿಲ್ಲೆಯ ಕೊರಟಗೆರೆ ತಾಲ್ಲೂಕಿನ ಯೆಲೆರಾಮಪುರ ಗ್ರಾಮದಲ್ಲಿ ಜನಿಸಿದ ಶ್ರೀಯುತರು ವೃತ್ತಿಯಲ್ಲಿ ವ್ಯಾಪಾರಿಯಾಗಿದ್ದರು, 1989ರಲ್ಲಿ ಶ್ರೀಯುತರು 9ನೇ ವಿಧಾನ ಸಭೆಗೆ ಕೊರಟಗೆರೆ ಕ್ಷೇತ್ರದಿಂದ ಚುನಾಯಿತರಾಗಿ ಸೇವೆಯನ್ನು ಸಲ್ಲಿಸಿರುತ್ತಾರೆ. ಶ್ರೀಯುತರು 15 ವರ್ಷ ತುಮಕೂರು ಜಿಲ್ಲಾ ವೀರಶೈವ ಮಹಾಸಭಾ ಅಧ್ಯಕ್ಷರಾಗಿ, ತಾಲ್ಲೂಕಿನ ಸಿದ್ದರಬೆಟ್ಟದ ರಂಬಾಪುರಿ ಶಾಖಾ ಮಠದ ಅಧ್ಯಕ್ಷರಾಗಿ, ಬೆಂಗಳೂರಿನ ಜಗದ್ಗುರು ರೇಣುಕಾಚಾರ್ಯ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾಗಿ ಹಾಗೂ ಜಿಲ್ಲಾ ಕಾಂಗ್ರೆಸ್ ಸಮಿತಿಯ ಖಜಾಂಚಿಯಾಗಿಯೂ ಸೇವೆಯನ್ನು ಸಲ್ಲಿಸಿರುತ್ತಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀಯುತರ ನಿಧನದಿಂದಾಗಿ ರಾಜ್ಯವು ಒಬ್ಬ ಹಿರಿಯ ರಾಜಕಾರಣಿ ಹಾಗೂ ಸಮಾಜ ಸೇವಕರನ್ನು ಕಳೆದುಕೊಂಡಂತಾಗಿದೆ.

**05. ಅರ್ಜುನರಾವ್ ಹಿಶೋಬಕರ್**

ವಿಧಾನ ಸಭೆಯ ಮಾಜಿ ಸದಸ್ಯರಾಗಿದ್ದ ಅರ್ಜುನರಾವ್ ಹಿಶೋಬಕರ್ ಅವರು ದಿನಾಂಕ: 27.09.2019ರಂದು ನಿಧನ ಹೊಂದಿರುತ್ತಾರೆ.

ಶ್ರೀಯುತರು 9ನೇ ವಿಧಾನ ಸಭೆಗೆ ಬೆಳಗಾವಿ ಕ್ಷೇತ್ರದಿಂದ ನಡೆದ ಉಪಚುನಾವಣೆಯಲ್ಲಿ ಪಕ್ಷೇತರ ಅಭ್ಯರ್ಥಿಯಾಗಿ ಆಯ್ಕೆಗೊಂಡು ದಿನಾಂಕ: 08.06.1992ರಿಂದ 20.09.1994ರವರೆಗೆ ವಿಧಾನ ಸಭಾ ಸದಸ್ಯರಾಗಿ ಸೇವೆಯನ್ನು ಸಲ್ಲಿಸಿರುತ್ತಾರೆ.

ಶ್ರೀಯುತರ ನಿಧನದಿಂದಾಗಿ ರಾಜ್ಯವು ಒಬ್ಬ ಹಿರಿಯ ರಾಜಕಾರಣಿಯನ್ನು ಕಳೆದುಕೊಂಡಂತಾಗಿದೆ.

**06. ಶ್ರೀಮತಿ ಸುಷ್ಮಾ ಸ್ವರಾಜ್**

ಕೇಂದ್ರದ ಮಾಜಿ ಸಚಿವರು, ಲೋಕಸಭೆಯ ಸದಸ್ಯರು ಹಾಗೂ ದೆಹಲಿಯ ಮಾಜಿ ಮುಖ್ಯಮಂತ್ರಿಯಾಗಿದ್ದ ಶ್ರೀಮತಿ ಸುಷ್ಮಾ ಸ್ವರಾಜ್ ಅವರು ದಿನಾಂಕ: 06.08.2019ರಂದು ನಿಧನ ಹೊಂದಿರುತ್ತಾರೆ.

1952ನೇ ಫೆಬ್ರವರಿ 14ರಂದು ಹರಿಯಾಣದ ಅಂಬಾಲಾ ಕಂಟೋನ್ಮೆಂಟ್‌ನಲ್ಲಿ ಜನಿಸಿದ್ದ ಶ್ರೀಯುತರು ಬಿ.ಎ., ಎಲ್.ಎಲ್.ಬಿ., ಪದವೀಧರರಾಗಿದ್ದು, ವೃತ್ತಿಯಲ್ಲಿ ವಕೀಲರಾಗಿದ್ದರು.

ಶ್ರೀಯುತರು 1977ರಲ್ಲಿ ಹರಿಯಾಣ ವಿಧಾನ ಸಭೆಗೆ ಮೊದಲ ಬಾರಿ ಆಯ್ಕೆಯಾಗಿ ತಮ್ಮ 25ನೇ ವಯಸ್ಸಿನಲ್ಲಿ ರಾಜಕೀಯ ರಂಗವನ್ನು ಪ್ರವೇಶಿಸಿದ್ದು, 1987ರಲ್ಲಿ 2ನೇ ಬಾರಿ ಅದೇ ಕ್ಷೇತ್ರದಿಂದ ಗೆಲುವನ್ನು ಸಾಧಿಸಿದ್ದರು. ಶ್ರೀಯುತರು 1977 ರಿಂದ 1979ರವರೆಗೆ ದೇವಿಲಾಲ್ ಮಂತ್ರಿ ಮಂಡಲದಲ್ಲಿ ಸಂಪುಟ ದರ್ಜೆಯ ಸಚಿವರಾಗಿ ದೇಶದ ಇತಿಹಾಸದಲ್ಲಿ ಕಿರಿಯ ವಯಸ್ಸಿನಲ್ಲಿ ಸಂಪುಟ ದರ್ಜೆ ಸಚಿವರಾದ ಮೊದಲ ರಾಜಕಾರಣಿ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದು, ಶ್ರೀಯುತರು ಹರಿಯಾಣ ರಾಜ್ಯದಲ್ಲಿ ಶಿಕ್ಷಣ, ಆಹಾರ ಮತ್ತು ನಾಗರೀಕ ಸರಬರಾಜು ಸಚಿವರಾಗಿ ಹಾಗೂ ಕಾರ್ಮಿಕ ಮತ್ತು ಉದ್ಯಮಶೀಲತೆ ಖಾತೆಗಳ ಸಚಿವರಾಗಿ ಸೇವೆ ಸಲ್ಲಿಸಿರುತ್ತಾರೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಶ್ರೀಯುತರು 11ನೇ, 12ನೇ, 15ನೇ ಹಾಗೂ 16ನೇ ಲೋಕಸಭಾ ಸದಸ್ಯರಾಗಿ ಹಾಗೂ 1990, 2000, 2006 ಒಟ್ಟು ಮೂರು ಬಾರಿ ರಾಜ್ಯಸಭಾ ಸದಸ್ಯರಾಗಿ ಸೇವೆ ಸಲ್ಲಿಸಿರುತ್ತಾರೆ. 1998ರಲ್ಲಿ ದೆಹಲಿಯ ಮುಖ್ಯಮಂತ್ರಿಯಾಗಿ ಅಧಿಕಾರವನ್ನು ಸ್ವೀಕರಿಸುವ ಮೂಲಕ ದೆಹಲಿಯ ಪ್ರಪ್ರಥಮ ಮಹಿಳಾ ಮುಖ್ಯಮಂತ್ರಿಯೆಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದರು. ಶ್ರೀಯುತರು ಕೇಂದ್ರದ ವಾರ್ತಾ ಮತ್ತು ಪ್ರಚಾರ ಹಾಗೂ ದೂರಸಂಪರ್ಕ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ಸಂಸದೀಯ ವ್ಯವಹಾರಗಳು ಖಾತೆಗಳ ಸಚಿವರಾಗಿ ಸೇವೆ ಸಲ್ಲಿಸಿದ್ದರು, 2014ರಿಂದ 2019ರವರೆಗೆ ವಿದೇಶಾಂಗ ವ್ಯವಹಾರಗಳ ಸಚಿವರಾಗಿ ಸೇವೆ ಸಲ್ಲಿಸಿದ 2ನೇ ಮಹಿಳೆಯಾಗಿದ್ದರಲ್ಲದೆ, ಜಾಲತಾಣಗಳ ಮೂಲಕವೇ ಜನಸಾಮಾನ್ಯರ ಸಂಕಷ್ಟಕ್ಕೆ ಸ್ಪಂದಿಸುತ್ತಿದ್ದರು. ಶ್ರೀಯುತರು 2009ರಲ್ಲಿ ಲೋಕಸಭೆಯ ಪ್ರತಿಪಕ್ಷದ ನಾಯಕಿಯಾಗಿಯೂ ಸಹ ಕಾರ್ಯ ನಿರ್ವಹಿಸಿರುತ್ತಾರೆ.

ಶ್ರೀಯುತರು "ಅತ್ಯುತ್ತಮ ಸಂಸದೀಯ ಪಟು" ಪ್ರಶಸ್ತಿ ಪಡೆದ ಏಕೈಕ ಮಹಿಳಾ ಸಂಸದೆಯಾಗಿದ್ದು, ಸ್ಪೇನ್ ಸರ್ಕಾರ ನೀಡುವ "ಗ್ರಾಂಡ್‌ಕ್ರಾಸ್ ಆಫ್ ಆರ್ಡರ್ ಆಫ್ ಸಿವಿಲ್ ಮೆರಿಟ್" ಪ್ರಶಸ್ತಿ ಪಡೆದ ಮೊದಲ ಭಾರತೀಯ ಮಹಿಳೆಯಾಗಿದ್ದರಲ್ಲದೆ, ನಾಲ್ಕು ವರ್ಷಗಳ ಕಾಲ ಹರಿಯಾಣದ ಹಿಂದಿ ಸಾಹಿತ್ಯ ಸಮ್ಮೇಳನದ ಅಧ್ಯಕ್ಷೆಯಾಗಿಯೂ ಸೇವೆ ಸಲ್ಲಿಸಿದ ಹಿರಿಮೆ ಇವರದ್ದಾಗಿದೆ. 1999ರಲ್ಲಿ ರಾಜ್ಯದ ಬಳ್ಳಾರಿ ಲೋಕಸಭೆ ಕ್ಷೇತ್ರದಿಂದ ಲೋಕಸಭೆಗೆ ಸ್ಪರ್ಧಿಸಿದ ಸಂದರ್ಭದಲ್ಲಿ ಕನ್ನಡ ಭಾಷೆಯನ್ನು ಕಲಿತು ಕನ್ನಡದಲ್ಲಿಯೇ ಭಾಷಣ ಮಾಡುವುದರ ಮೂಲಕ ಎಲ್ಲರ ಅಭಿಮಾನಕ್ಕೆ ಪಾತ್ರರಾಗಿದ್ದರು. ಹಲವು ಪ್ರಥಮಗಳ ಒಡತಿಯಾಗಿ ಈ ದೇಶವು ಕಂಡ ಪ್ರತಿಭಾವಂತ ಮಹಿಳಾ ರಾಜಕಾರಣಿ, ಅತ್ಯುತ್ತಮ ಆಡಳಿತಗಾರ್ತಿಯಾಗಿ ಸ್ಪೂರ್ತಿಯ ಚಿಲುಮೆಯಾಗಿದ್ದರು. ವಿದೇಶದಲ್ಲಿ ನೆಲೆಸಿದ್ದ ಭಾರತೀಯರ ಸಂಕಷ್ಟಕ್ಕೆ ಸ್ಪಂದಿಸುವುದರ ಮೂಲಕ ಮಾತೃ ಹೃದಯವನ್ನು ಹೊಂದಿದ್ದ ಶ್ರೀಯುತರ ನಿಧನದಿಂದಾಗಿ ದೇಶವು ಒಬ್ಬ ಹಿರಿಯ ಸಜ್ಜನ ರಾಜಕಾರಣಿ ಹಾಗೂ ಉತ್ತಮ ವಾಗ್ಮಿಯನ್ನು ಕಳೆದುಕೊಂಡಂತಾಗಿದೆ.

**07. ಅರುಣ್ ಜೇಟ್ಲಿ**

ಕೇಂದ್ರದ ಮಾಜಿ ಸಚಿವರು ಹಾಗೂ ಹಾಲಿ ರಾಜ್ಯ ಸಭೆಯ ಸದಸ್ಯರಾಗಿದ್ದ ಶ್ರೀ ಅರುಣ್ ಜೇಟ್ಲಿ ಅವರು ದಿನಾಂಕ 24.08.2019 ರಂದು ನಿಧನ ಹೊಂದಿರುತ್ತಾರೆ.

1952ನೇ ಡಿಸೆಂಬರ್ 28ರಂದು ದೆಹಲಿಯಲ್ಲಿ ಜನಿಸಿದ್ದ ಶ್ರೀಯುತರು ಬಿ.ಕಾಂ., ಎಲ್.ಎಲ್.ಬಿ., ಪದವೀಧರರಾಗಿದ್ದು, ವೃತ್ತಿಯಲ್ಲಿ ವಕೀಲರಾಗಿದ್ದರು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಿದ್ಯಾರ್ಥಿ ಸಂಘದ ನಾಯಕರಾಗಿ ತಮ್ಮ ರಾಜಕೀಯ ವೃತ್ತಿ ಜೀವನವನ್ನು ಪ್ರಾರಂಭಿಸಿದ್ದು, ಸರ್ವೋಚ್ಚ ನ್ಯಾಯಾಲಯದ ವಕೀಲರಾಗಿ ಸೇವೆ ಸಲ್ಲಿಸಿದ್ದ ಶ್ರೀಯುತರು 2000–2019ರ ವರೆಗೆ ಒಟ್ಟು ನಾಲ್ಕು ಬಾರಿ ರಾಜ್ಯ ಸಭಾ ಸದಸ್ಯರಾಗಿ ಸೇವೆ ಸಲ್ಲಿಸಿದ್ದರಲ್ಲದೆ ಹಣಕಾಸು, ರಕ್ಷಣಾ, ವಾರ್ತಾ ಮತ್ತು ಪ್ರಚಾರ, ಕಾನೂನು ಮತ್ತು ನ್ಯಾಯ ಹಾಗೂ ಕಾರ್ಪೋರೇಟ್ ವ್ಯವಹಾರಗಳು ಖಾತೆಗಳ ಸಚಿವರಾಗಿ ಸೇವೆ ಸಲ್ಲಿಸಿರುತ್ತಾರೆ. ಹಣಕಾಸು ಸಚಿವರಾಗಿದ್ದ ಸಂದರ್ಭದಲ್ಲಿ ಅವರು ಜಾರಿಗೆ ತಂದ ಜಿ.ಎಸ್.ಟಿ. ಕಾಯ್ದೆ ಒಂದು ಕ್ರಾಂತಿಕಾರಿ ನಿರ್ಣಯವಾಗಿದ್ದು, ಅದನ್ನು ಸುಸೂತ್ರವಾಗಿ ಜಾರಿಗೊಳಿಸಿದ ಕೀರ್ತಿಗೆ ಭಾಜನರಾಗಿರುತ್ತಾರೆ. ರಾಜ್ಯ ಸಭೆಯ ವಿರೋಧ ಪಕ್ಷದ ನಾಯಕರಾಗಿ ಸೇವೆ ಸಲ್ಲಿಸಿರುತ್ತಾರೆ.

ಶ್ರೀಯುತರ ನಿಧನದಿಂದಾಗಿ ದೇಶವು ಒಬ್ಬ ಹಿರಿಯ ಸಜ್ಜನ ರಾಜಕಾರಣಿ ಹಾಗೂ ಅತ್ಯುತ್ತಮ ಆರ್ಥಿಕ ಮತ್ತು ಕಾನೂನು ತಜ್ಞರೊಬ್ಬರನ್ನು ಕಳೆದುಕೊಂಡಂತಾಗಿದೆ.

**08. ರಾಮ್ ಜೇಠ್ಮಲಾನಿ**

ಕೇಂದ್ರದ ಮಾಜಿ ಸಚಿವರು ಹಾಗೂ ರಾಜ್ಯ ಸಭೆಯ ಮಾಜಿ ಸದಸ್ಯರಾಗಿದ್ದ ರಾಮ್ ಜೇಠ್ಮಲಾನಿ ಅವರು ದಿನಾಂಕ: 08.09.2019 ರಂದು ನಿಧನ ಹೊಂದಿರುತ್ತಾರೆ.

ರಾಮ್ ಜೇಠ್ಮಲಾನಿ ಅವರು ದಿನಾಂಕ: 14.09.1923 ರಂದು ಸಿಂಧ್ ಪ್ರಾಂತ್ಯದ ಶಿಕಾರ್‌ಪುರ್‌ನಲ್ಲಿ ಜನಿಸಿದ್ದರು. ವೃತ್ತಿಯಲ್ಲಿ ನ್ಯಾಯವಾದಿಗಳಾಗಿದ್ದ ಅವರು ರಾಜಕೀಯದ ತೀವ್ರ ಸೆಳೆತದಿಂದಾಗಿ ತಮ್ಮನ್ನು ಸಕ್ರಿಯ ರಾಜಕಾರಣದಲ್ಲಿಯೂ ತೊಡಗಿಸಿಕೊಂಡಿದ್ದರು. ತುರ್ತು ಪರಿಸ್ಥಿತಿ ವಿರೋಧಿಸಿ ಕೆಲ ಕಾಲ ಸೆರೆವಾಸವನ್ನು ಅನುಭವಿಸಿ, ನಂತರ ಕೆನಡಾಕ್ಕೆ ತೆರಳಿ ತುರ್ತು ಪರಿಸ್ಥಿತಿ ವಿರುದ್ಧ ಅಂತಾರಾಷ್ಟ್ರೀಯ ಆಂದೋಲನ ನಡೆಸಿದ್ದರು.

ದಿವಂಗತರು 1977ರಲ್ಲಿ ಮೊದಲ ಬಾರಿಗೆ ಸಂಸದರಾಗಿ ಲೋಕಸಭೆ ಪ್ರವೇಶಿಸಿ, ನಂತರ 1980ರಲ್ಲಿ ಪುನರಾಯ್ಕೆಗೊಂಡಿದ್ದರು. ರಾಜಸ್ಥಾನ, ಗುಜರಾತ್, ಮುಂಬೈನಿಂದ ಸಂಸದರಾಗಿ ಆಯ್ಕೆಗೊಂಡಿದ್ದ ಅವರು 1988ರಲ್ಲಿ ಕರ್ನಾಟಕದಿಂದ ಮೊದಲ ಬಾರಿಗೆ ರಾಜ್ಯಸಭಾ ಸದಸ್ಯರಾಗಿ ಆಯ್ಕೆಗೊಂಡು ಎರಡು ಬಾರಿ ಕೇಂದ್ರ ಸಚಿವರಾಗಿ ಕಾರ್ಯನಿರ್ವಹಿಸಿ 2010ರಲ್ಲಿ ರಾಜ್ಯಸಭೆಗೆ ಪುನರಾಯ್ಕೆಗೊಂಡಿದ್ದರು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀಯುತರ ನಿಧನದಿಂದಾಗಿ ದೇಶವು ಹಿರಿಯ ನ್ಯಾಯವಾದಿ ಹಾಗೂ ಮಹತ್ವಾಕಾಂಕ್ಷೆಯ ರಾಜಕಾರಣಿಯನ್ನು ಕಳೆದುಕೊಂಡಂತಾಗಿದೆ.

**ಶ್ರೀ ಪ್ರಕಾಶ್ ರಾಥೋಡ್:-** ಮಾನ್ಯ ಸಭಾಪತಿಯವರೇ, ಇದರ ಜೊತೆಗೆ ಸಾಕಷ್ಟು ಜನಸಾಮಾನ್ಯರು ಪ್ರವಾಹದಲ್ಲಿ ತೀರಿಕೊಂಡಿದ್ದಾರೆ, ಅವರ ಬಗ್ಗೆ ಕೂಡ ನಾವು ಸಂತಾಪ ಸೂಚನೆಯನ್ನು ಕೊಡಬೇಕೆಂದು ಹೇಳಬಯಸುತ್ತೇನೆ. ಅವರು ತಮ್ಮ ಜೀವವನ್ನು ಕಳೆದುಕೊಂಡಿದ್ದಾರೆ, ಸರ್ಕಾರವು ಪರಿಹಾರವನ್ನು ಕೊಡುತ್ತಿದೆ. ಆದರೂ ಕೂಡ ನಾವೆಲ್ಲರೂ ಸೇರಿ ಪ್ರವಾಹದಿಂದ ಮೃತರಾದವರ ಆತ್ಮಕ್ಕೆ ಶಾಂತಿ ಸಿಗಲಿ, ಸರ್ಕಾರ ಇನ್ನೂ ಹೆಚ್ಚಿನ ಪರಿಹಾರ ಕೊಟ್ಟು ಸಂತ್ರಸ್ತರು ಜೀವನ ನಡೆಸುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ತಿಳಿಸುತ್ತಾ ಈ ನಿರ್ಣಯವನ್ನು ಸದನದಲ್ಲಿ ಪಾಸ್ ಮಾಡಬೇಕೆಂದು ಒತ್ತಾಯಿಸುತ್ತೇನೆ.

(ಮುಂದುವರದದಿದೆ)

(110) 10-10-2019 / 12-10/ಕೆಹೆಚ್-ಬಿಎನ್ಎಸ್

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾ ನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಪ್ರಕಾಶ್ ಕೆ. ರಾಥೋಡ್‌ರವರ ಅಭಿಪ್ರಾಯಕ್ಕೆ ನಮ್ಮ ಸಹಕಾರ ಇದ್ದು, ಇದರ ಬಗ್ಗೆ ತಾವು ತೀರ್ಮಾನ ತೆಗೆದುಕೊಳ್ಳಬೇಕೆಂದು ವಿನಂತಿಸುತ್ತೇನೆ.

ವಿಧಾನ ಪರಿಷತ್ತಿನ ಮಾಜಿ ಸದಸ್ಯರುಗಳಾಗಿದ್ದ ಶ್ರೀಮತಿ ಪ್ರವೀಣ ಸಿ. ಕಮಲಾನಿ ಮತ್ತು ಹಿರಿಯ ಸದಸ್ಯರಾಗಿದ್ದ ಶ್ರೀ ಎ.ಕೆ. ಸುಬ್ಬಯ್ಯ ಹಾಗೂ ವಿಧಾನ ಸಭೆಯ ಮಾಜಿ ಸದಸ್ಯರುಗಳಾಗಿದ್ದ ಶ್ರೀ ಉಮೇಶ್ ಭಟ್, ಶ್ರೀ ಸಿ.ವೀರಭದ್ರಯ್ಯ, ಶ್ರೀ ಅರ್ಜುನರಾವ್ ಹಿಶೋಬಕರ್ ಹಾಗೂ ಕೇಂದ್ರದ ಮಾಜಿ ಸಚಿವರಾದ ಶ್ರೀಮತಿ ಸುಷ್ಮಾ ಸ್ವರಾಜ್ ಹಾಗೂ ಕೇಂದ್ರದ ಮಾಜಿ ಸಚಿವರು ಹಾಗೂ ಹಾಲಿ ರಾಜ್ಯ ಸಭೆಯ ಸದಸ್ಯರಾದ ಶ್ರೀ ಅರುಣ್‌ಜೇಟ್ಲಿ, ಹಿರಿಯ ಸದಸ್ಯರಾದ ಶ್ರೀ ರಾಮ್ ಜೇಠ್ಮಲಾನಿ ಇವರುಗಳ ಕುರಿತು ಸಂತಾಪ ಸೂಚನೆಯನ್ನು ಸದನದಲ್ಲಿ ಮಂಡಿಸಲಾಗಿದೆ. ಅದಕ್ಕೆ ಸರ್ಕಾರ ಪೂರ್ಣ ಸಹಮತವನ್ನು ವ್ಯಕ್ತಪಡಿಸುತ್ತದೆ.

ಮಾನ್ಯ ಸಭಾಪತಿಯವರೇ, ವಿಧಾನ ಪರಿಷತ್ತಿನ ಮಾಜಿ ಸದಸ್ಯರಾಗಿದ್ದ ಪ್ರವೀಣ ಚಂದ್ರು ಕಮಲಾನಿ ಅವರು ದೇವರಾಜ ಅರಸು ಅವರ ಕಾಲದಲ್ಲಿ ಅಂದರೆ 1972-78ರ ಅವಧಿಯಲ್ಲಿ ಸುಮಾರು 6 ವರ್ಷಗಳ ಕಾಲ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಿಧಾನ ಪರಿಷತ್ತಿನ ನಾಮನಿರ್ದೇಶಿತ ಸದಸ್ಯರಾಗಿ ಸುದೀರ್ಘವಾದ ಸೇವೆ ಸಲ್ಲಿಸಿದ್ದರು. ಶ್ರೀಯುತರು ಮೈಸೂರು ರಾಜ್ಯ ಕರಕುಶಲ ಅಭಿವೃದ್ಧಿ ನಿಗಮದ ನಿರ್ದೇಶಕರಾಗಿದ್ದರು, ಅನೇಕ ಸಂಘ ಸಂಸ್ಥೆಗಳಲ್ಲಿ ಕರ್ತವ್ಯ ನಿರ್ವಹಿಸಿದ್ದಾರೆ. ಕರ್ನಾಟಕ ವಿಶ್ವವಿದ್ಯಾಲಯದ ಸೆನೆಟ್ ಸದಸ್ಯರಾಗಿ ಮತ್ತು ಮೈಸೂರು ರಾಜ್ಯ ಸಮಾಜ ಕಲ್ಯಾಣ ಮಂಡಳಿಯ ಸದಸ್ಯರಾಗಿ ಅನೇಕ ಕೆಲಸಗಳನ್ನು ಮಾಡಿರುವುದು ಸೇರಿದಂತೆ ಅನೇಕ ಸಂಘ ಸಂಸ್ಥೆಗಳ ಸಂಘಟನೆ, ಸಾರ್ವಜನಿಕವಾದ ಮತ್ತು ಜನಪರವಾದಂತಹ ನಿಲುವುಗಳನ್ನು ಹೊಂದಿರುವವರಾಗಿದ್ದಾರೆ. ನಮ್ಮ ಸದನದ ಒಬ್ಬ ಸದಸ್ಯರು ನಿಧನವಾಗಿರುವುದನ್ನು ಗಮನದಲ್ಲಿಟ್ಟುಕೊಂಡು ಅವರ ಸಂತಾಪ ಸೂಚನೆಗೆ ನನ್ನ ಸಹಮತವನ್ನು ವ್ಯಕ್ತಪಡಿಸಿ ಮತ್ತು ರಾಜ್ಯವು ಆದರ್ಶ ರಾಜಕಾರಣಕ್ಕೆ ಮಾದರಿಯಾಗಿರುವಂತಹ ಒಬ್ಬ ಶ್ರೇಷ್ಠ ಹಾಗೂ ವಿಧಾನ ಪರಿಷತ್ತಿನ ಸದಸ್ಯರಾಗಿ ದುಡಿದಂತಹ ಪ್ರವೀಣ ಚಂದ್ರ ಕಮಲಾನಿಯವರನ್ನು ಕಳೆದುಕೊಂಡಿರುವಂತಹ ಸಂತಾಪ ಸೂಚನೆಗೆ ನನ್ನ ಸಹಮತವನ್ನು ವ್ಯಕ್ತಪಡಿಸುತ್ತೇನೆ.

ಅದೇ ರೀತಿ, ಹಿರಿಯ ವಕೀಲರು ಹಾಗೂ ರಾಜಕೀಯ ಮುತ್ಸದ್ದಿಯಾಗಿದ್ದ ವಿಧಾನ ಪರಿಷತ್ತಿನ ಮಾಜಿ ಸದಸ್ಯರಾದ ಎ.ಕೆ. ಸುಬ್ಬಯ್ಯನವರು ನಿಧನವಾಗಿರುವ ಬಗ್ಗೆ ತಾವು ಉಲ್ಲೇಖ ಮಾಡಿದ್ದೀರಿ. ಬಹುತೇಕ ವಿಧಾನ ಪರಿಷತ್ತಿನ ಕಾರ್ಯಕಲಾಪಗಳು ಅತ್ಯಂತ ಸ್ಫುಟವಾದದ್ದು ಮತ್ತು ಆಳುವ ಸರ್ಕಾರಕ್ಕೆ ವಿಧಾನ ಪರಿಷತ್ತಿನ ಮೂಲಕ ಚಾಟಿ ಏಟು ಬೀಸುವಂತಹ ಕೆಲಸಗಳು, ಜನಪರವಾದಂತಹ ಹೋರಾಟ, ನೇರವಾದ ಮಾತು, ಕಠೋರವಾದಂತಹ ನಿಲುವು ಮತ್ತು ಎಲ್ಲದಕ್ಕಿಂತ ಹೆಚ್ಚಾಗಿ ವಿಧಾನ ಪರಿಷತ್ತಿನ ಕಾರ್ಯ ಕಲಾಪಗಳನ್ನು ವಿಧಾನ ಸಭೆಗಿಂತಲೂ ಮೊದಲು ನೋಡುವಂತಹ ಒಂದು ಅವಕಾಶವನ್ನು, ಮಾಧ್ಯಮದವರು ಹಾಕಿರುವಂತಹ ವಿಚಾರಗಳು ಮಾನ್ಯ ಎ.ಕೆ.ಸುಬ್ಬಯ್ಯನವರ ಮೂಲಕ ಇಡೀ ರಾಜ್ಯದಲ್ಲಿ ಅನಾವರಣಗೊಂಡಿತ್ತು ಎಂದು ನನಗನಿಸುತ್ತದೆ. ಇವರು ಭಾರತೀಯ ಜನತಾ ಪಕ್ಷದ ಅದರಲ್ಲೂ ಜನಸಂಘದ ಕಾಲದಲ್ಲೂ ಕೂಡ ನಮ್ಮ ಪಕ್ಷದ ಹಿರಿಯ ಮುಖಂಡರಾಗಿದ್ದರು. ಜನತಾ ಪಕ್ಷ ವಿಲೀನವಾದ ನಂತರ 1980 ರ ದಶಕದಲ್ಲಿ ಮತ್ತೆ ಭಾರತೀಯ ಜನತಾ ಪಕ್ಷವನ್ನು ಹುಟ್ಟು ಹಾಕಿದಾಗ ಅದರ ನೇತೃತ್ವವನ್ನು ವಹಿಸಿಕೊಂಡು ಭಾರತೀಯ ಜನತಾ ಪಕ್ಷದ ಮೊದಲ ರಾಜ್ಯಾಧ್ಯಕ್ಷರಾಗಿ ಕೆಲಸಗಳನ್ನು ಮಾಡಿದ್ದಾರೆ. ಮಾನ್ಯ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಗಳಾಗಿದ್ದಂತಹ ಕಾಲದಲ್ಲಿ ಮೇಲ್ಮನೆಯಲ್ಲಿ ಬಹಳ ಪ್ರಖರವಾಗಿ ತಮ್ಮ ವಿಚಾರವನ್ನು ಮಂಡಿಸುತ್ತಿದ್ದರು. ಅದಕ್ಕಿಂತ ಮೊದಲು ಮಾನ್ಯ ಗುಂಡೂರಾವ್‌ರವರು ಮುಖ್ಯಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿ ಶಾಸಕರಾಗಿ ಬಹಳ ಪರಿಣಾಮಕಾರಿಯಾದಂತಹ ಅನೇಕ ಕೆಲಸಗಳನ್ನು ಮಾಡಿರುವುದನ್ನು ನಾವು ಗಮನಿಸಿದ್ದೇವೆ. ಅಂತಹ ಅನೇಕ ಪ್ರಕರಣಗಳನ್ನು ನಾವು ಮರೆಯಬಹುದು, ಒಪ್ಪಬಹುದು ಅಥವಾ ಬಿಡಬಹುದು. Rolex watch ಕುರಿತಾದ ಚರ್ಚೆಗಳು ಬಂದಾಗ, ಪದ್ಮಾಕರ್‌ನಂತಹ ಪ್ರಕರಣಗಳು ಬಂದಾಗ ಮತ್ತು ನನಗೆ ನೆನಪಿರುವ ಹಾಗೆ ಮಾನ್ಯ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರೇಣುಕಾ ರಾಜೇಂದ್ರನ್‌ರವರು ಮಂತ್ರಿಯಾಗಿರುವಂತಹ ಸಂದರ್ಭದಲ್ಲಿ ಅತ್ಯಂತ ಜನಪರವಾಗಿ, ಬಹಳ ಕಠೋರವಾದ ನಿಲುವನ್ನು ಆಡಳಿತ ಪಕ್ಷಕ್ಕೆ ಚುರುಕು ಮುಟ್ಟಿಸುವಂತಹ ಕೆಲಸವನ್ನು ಮಾಡುತ್ತಿದ್ದರು. ಆವತ್ತಿನ ದಿನಗಳಲ್ಲಿ ಮಾಧ್ಯಮದವರು ಮಾನ್ಯ ಎ.ಕೆ. ಸುಬ್ಬಯ್ಯನವರು ಆಡಳಿತ ಪಕ್ಷಕ್ಕೆ ಸಿಂಹಸ್ವಪ್ನವಾಗಿದ್ದರು ಮತ್ತು ಅದು ಯಾವ ಪಕ್ಷ ಎಂಬ ಪ್ರಶ್ನೆ ಬರುವುದಿಲ್ಲ. ಆಳುವವರ ವಿರುದ್ಧವಾಗಿ ಅಷ್ಟು ಕಠೋರವಾದಂತಹ ನಿಲುವನ್ನು ಹೇಳುತ್ತಿದ್ದರು ಎಂದು ಪತ್ರಿಕೆಯಲ್ಲಿ ಬರೆಯುತ್ತಿದ್ದರು. ಒಬ್ಬ ವಿರೋಧ ಪಕ್ಷದ ಸದಸ್ಯನಾಗಿ, ಪ್ರತಿಪಕ್ಷದ ನಾಯಕನಾಗಿ ಸರ್ಕಾರದ ಲೋಪದೋಷಗಳನ್ನು ಎಳೆಎಳೆಯಾಗಿ ಸದನದ ಮುಂದೆ ಬಿಚ್ಚಿಡುವಂತಹ ವಿಚಾರಗಳು, ಆಡಳಿತ ಪಕ್ಷವನ್ನು ತುದಿಗಾಲಿನಲ್ಲಿ ನಿಲ್ಲಿಸುವಂತಹ ಕೆಲಸಗಳನ್ನು ಮಾಡುತ್ತಿದ್ದರು. ಒಬ್ಬ ಅಪ್ರತಿಮವಾದಂತಹ ಹೋರಾಟಗಾರರು ಎಂದು ನನಗನಿಸುತ್ತದೆ. ಅವರ ಮಾತುಗಳಲ್ಲಿ ತುಂಬಾ ಹಠವಿತ್ತು. ಅವರ ವಿಚಾರಕ್ಕೆ ಬದ್ಧತೆ ಇರುವಂತಹ ಕೆಲಸಗಳಿತ್ತು ಎಂದು ಅನಿಸುತ್ತದೆ. ಆ ಸಂದರ್ಭದಲ್ಲಿ ಮಾನ್ಯ ಎ.ಕೆ.ಸುಬ್ಬಯ್ಯನವರಿಗೆ ಜೀವ ಬೇದರಿಕೆ ಕೂಡ ಬಂದಿದೆ. ಅಂತಹ ಸಂದರ್ಭದಲ್ಲೂ ಕೂಡ ಪ್ರತಿಪಕ್ಷದ ಸದಸ್ಯನಾಗಿ ಕೆಲಸಗಳನ್ನು ಮಾಡುತ್ತಾ, ಆಳುವ ಪಕ್ಷಕ್ಕೆ ಬಹಳ ಎಚ್ಚರಿಕೆಯನ್ನು ಮತ್ತು ಅವರ ಲೋಪದೋಷಗಳನ್ನು ತಿದ್ದಿ ಹೇಳುತ್ತಾ ಸರ್ಕಾರಕ್ಕೆ ಸವಲಾಗುವಂತಹ ಒಂದು ಪ್ರಜಾಪ್ರಭುತ್ವದ ಮಾದರಿಯಲ್ಲಿ ಕೆಲಸ ಮಾಡಿರುವಂತಹ ಮಾನ್ಯ ಎ.ಕೆ.ಸುಬ್ಬಯ್ಯನವರು ನಮ್ಮಿಂದ ದೂರವಾಗಿದ್ದಾರೆ. ಆದರ್ಶ ರಾಜಕಾರಣಕ್ಕೆ ಒಂದು ರೀತಿಯ ಹಿರಿಯ ಕೊಂಡಿಯೊಂದು ಕಳಚಿಕೊಂಡಂತಹ ಅನುಭವಗಳು ನಮಗೆ ಆಗುತ್ತಿದೆ. ಮಾನ್ಯ ಸದಸ್ಯರ ಬಗ್ಗೆ ತಾವು ಸಂತಾಪ ಸೂಚನೆ ಮಂಡನೆ ಮಾಡಿದ್ದೀರಿ. ಅದಕ್ಕೆ ನನ್ನ ಸಹಮತವನ್ನು ವ್ಯಕ್ತಪಡಿಸುತ್ತೇನೆ.

ಹಾಗೆಯೇ, ವಿಧಾನ ಸಭೆಯ ಮಾಜಿ ಸದಸ್ಯರಾಗಿದ್ದ ಉಮೇಶ್ ಭಟ್ ಅವರು ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ತಾಲ್ಲೂಕಿನ ಭಾವಿಕೇರಿಯಲ್ಲಿ ಜನಿಸಿದ್ದು 9ನೇ ವಿಧಾನ ಸಭೆಗೆ ಅಂಕೋಲ ಕ್ಷೇತ್ರದಿಂದ ಸ್ಪರ್ಧಿಸಿ ಆಯ್ಕೆಯಾಗಿದ್ದರು, ಕರ್ನಾಟಕ ರಾಜ್ಯದ ಕಾಂಗ್ರೆಸ್‌ನ ಮುಖಂಡರಾಗಿ ಕೆಲಸಗಳನ್ನು ಮಾಡಿದ್ದಾರೆ. ಅನೇಕ ಸಂಘ–ಸಂಸ್ಥೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವಂತಹ ರೀತಿ, ಶಿರಸಿಯ ಜನಶಕ್ತಿ ವಿಶ್ವಸ್ಥ ಮಂಡಳಿಯ ಅಧ್ಯಕ್ಷರಾಗಿ ಕೆಲಸ ಮಾಡಿರುವಂತಹದ್ದು, ಇನ್ನು ಅನೇಕ ವಿಷಯಗಳ ಬಗ್ಗೆ ತಾವು ಉಲ್ಲೇಖ ಮಾಡಿದ್ದೀರಿ. ಸಾತ್ವಿಕ ಮತ್ತು ಹಿರಿಯ ರಾಜಕಾರಣಿ, ಜನಸೇವಕರನ್ನು ಕಳೆದುಕೊಂಡಂತಹ ನೋವು ಮಾನ್ಯ ಉಮೇಶ್ ಭಟ್ ರವರ ನಿಧನದಿಂದ ಆಗಿದೆ ಎಂದು ನನಗನಿಸುತ್ತದೆ.

ಇನ್ನು, ವಿಧಾನ ಸಭೆಯ ಮಾಜಿ ಸದಸ್ಯರಾಗಿದ್ದ ವೀರಭದ್ರಯ್ಯನವರ ನಿಧನದ ಬಗ್ಗೆ ತಾವು ಉಲ್ಲೇಖವನ್ನು ಮಾಡಿದ್ದೀರಿ. ತುಮಕೂರು ಜಿಲ್ಲಾ ವೀರಶೈವ ಮಹಾಸಭಾ ಅಧ್ಯಕ್ಷರಾಗಿ, ತಾಲ್ಲೂಕಿನ ಸಿದ್ದರಬೆಟ್ಟದ ರಂಭಾಪುರಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶಾಖಾ ಮಠದ ಅಧ್ಯಕ್ಷರಾಗಿ ಕೆಲಸಗಳನ್ನು ಮಾಡಿರುವಂತಹದ್ದು ಮತ್ತು ಮಾನ್ಯ ಶಾಸಕರಾಗಿ ಕೆಲಸಗಳನ್ನು ಮಾಡಿರುವಂತಹದ್ದನ್ನು ತಾವು ಉಲ್ಲೇಖ ಮಾಡಿದ್ದೀರಿ. ಅವರನ್ನು ತಿಳಿದುಕೊಂಡಿರುವವರು ಹೇಳುವ ಪ್ರಕಾರ ಒಬ್ಬ ಪ್ರಾಮಾಣಿಕ, ಅತ್ಯಂತ ಶ್ರೇಷ್ಠ ಕೆಲಸಗಳನ್ನು ಮಾಡಿರುವಂತಹ ಹಿರಿಯ ರಾಜಕಾರಣಿ ಇಹಲೋಕವನ್ನು ತ್ಯಜಿಸಿದ್ದಾರೆ ಎಂದು ನನಗನಿಸುತ್ತದೆ. ಈ ಸಂತಾಪ ಸೂಚನೆಗೆ ಆಡಳಿತ ಪಕ್ಷದ ಕಡೆಯಿಂದ ಮತ್ತು ಸದನದ ಕಡೆಯಿಂದ ಸಂತಾಪವನ್ನು ಸೂಚಿಸುತ್ತೇನೆ.

ಹಾಗೆಯೇ, ವಿಧಾನ ಸಭೆಯ ಮಾಜಿ ಸದಸ್ಯರಾಗಿದ್ದ ಅರ್ಜುನರಾವ್ ಹಿಶೋಬಕರ್‌ರವರ ಬಗ್ಗೆ ತಾವು ಉಲ್ಲೇಖ ಮಾಡಿದ್ದೀರಿ. ಮಾನ್ಯ ಸದಸ್ಯರು 9ನೇ ವಿಧಾನ ಸಭೆಗೆ ಬೆಳಗಾವಿ ಕ್ಷೇತ್ರದಿಂದ ನಡೆದ ಉಪಚುನಾವಣೆಯಲ್ಲಿ ಪಕ್ಷೇತರ ಅಭ್ಯರ್ಥಿಯಾಗಿ ಆಯ್ಕೆಗೊಂಡು ವಿಧಾನ ಸಭಾ ಸದಸ್ಯರಾಗಿ ಸೇವೆಯನ್ನು ಸಲ್ಲಿಸಿರುತ್ತಾರೆ. ಒಬ್ಬ ಹಿರಿಯ ರಾಜಕಾರಣಿಯ ನಿರ್ಗಮನ ಸಹಜವಾಗಿ ರಾಜ್ಯದ ಜನತೆಗೆ ನೋವನ್ನು ತಂದಿದೆ ಎಂಬ ಮಾತನ್ನು ಉಲ್ಲೇಖ ಮಾಡುತ್ತಿದ್ದೇನೆ.

ಇನ್ನು, ಶ್ರೀಮತಿ ಸುಷ್ಮಾ ಸ್ವರಾಜ್‌ರವರ ನಿಧನಕ್ಕೆ ತಾವು ತಂದಿರುವಂತಹ ಸಂತಾಪ ಸೂಚನೆಯ ಮಂಡನೆಯನ್ನು ಗಮನಿಸುತ್ತೇನೆ. ನನಗನಿಸುವ ಪ್ರಕಾರ ಇವರು ಒಬ್ಬ ಆದರ್ಶ ರಾಜಕಾರಣಿ ಮತ್ತು ಆದರ್ಶ ಗೃಹಿಣಿ ಎಂದು ಹೇಳಬಹುದು. ಅವರು 4 ಬಾರಿ ಲೋಕಸಭಾ ಸದಸ್ಯರಾಗಿ, 3 ಬಾರಿ ರಾಜ್ಯಸಭೆ ಸದಸ್ಯರಾಗಿ ಒಟ್ಟಾರೆಯಾಗಿ 7 ಬಾರಿ ಮೇಲ್ಮನೆ ಮತ್ತು ಕೆಳಮನೆಯಲ್ಲಿ ಸಂಸದರಾಗಿ ಕೆಲಸಗಳನ್ನು ಮಾಡಿದ್ದಾರೆ. ದೆಹಲಿಯಂತಹ ರಾಜ್ಯದಲ್ಲಿ ಮುಖ್ಯಮಂತ್ರಿಯಾಗಿ ಕೆಲಸ ಮಾಡಿದ್ದಾರೆ. ಅವರು ದೆಹಲಿಯ ಮುಖ್ಯಮಂತ್ರಿಯಾಗಿ ಅಧಿಕಾರವನ್ನು ಸ್ವೀಕಾರ ಮಾಡಿದಾಗ ಅವರು ಒಂದು ಕರೆಯನ್ನು ಕೊಟ್ಟಿದ್ದರು. ದೆಹಲಿಯ ಎಲ್ಲಾ ಜನರು ನೆಮ್ಮದಿಯಿಂದ ನಿದ್ದೆ ಮಾಡಿ, ನಿಮ್ಮ ಪರವಾಗಿ ಜಾಗೃತ ವ್ಯವಸ್ಥೆಯಲ್ಲಿ ನಾನು ಕೆಲಸವನ್ನು ಮಾಡುತ್ತೇನೆ ಎನ್ನುವಂತಹ ಮಾತುಗಳು ಆ ದಿನಗಳಲ್ಲಿ ನಮ್ಮೆಲ್ಲರಲ್ಲಿ ಒಂದು ರೀತಿಯ ಸಂಚಲನವನ್ನು ಉಂಟು ಮಾಡಿತ್ತು. ಅಂತಹ ಹಿರಿಯ ರಾಜಕಾರಣಿಗಳಾಗಿದ್ದರು. ನಾನು ಮೊದಲೇ ಉಲ್ಲೇಖ ಮಾಡಿದಂತೆ ಇವರು ವಿದೇಶಾಂಗ ವ್ಯವಹಾರಗಳ ಸಚಿವರಾಗಿದ್ದಾಗ, ಯಾರಾದರೂ ಸಾರ್ವಜನಿಕರು ನಮಗೆ ಕಷ್ಟ ಇದೆ ಎಂದು ಟ್ವೀಟ್ ಮಾಡಿದರೆ ತಕ್ಷಣವೇ ಸ್ಪಂದಿಸುತ್ತಿದ್ದರು. ಆ ಟ್ವೀಟ್ ಮಾಡಿದವರಿಗೆ ಅರ್ಥವಾಗುವ ಮೊದಲು ಅವರು ವಿದೇಶಾಂಗ ಸಚಿವರಾಗಿ ಯಾರ‍್ಯಾರು ಸಮಸ್ಯೆಯಲ್ಲಿದ್ದಾರೆ, ವಿದೇಶದಲ್ಲಿ ಯಾರು ಕಷ್ಟದಲ್ಲಿದ್ದಾರೆ, ಅವರನ್ನು ಕರೆಯಿಸಿ ಮಾತನಾಡಿಸುವಂತಹ ರೀತಿ ಮತ್ತು ಅಧಿಕಾರಿಗಳನ್ನು ಕರೆಯಿಸಿ ಅವರ ಸಮಸ್ಯೆಯನ್ನು ಪರಿಹಾರ ಮಾಡುವಂತಹ ರೀತಿ ಬಹಳ ಅದ್ಭುತವಾದದ್ದು ಎಂದು ನನಗನಿಸುತ್ತದೆ. ಇವರಿಗೆ ಕರ್ನಾಟಕದ ಜೊತೆಗೆ ಒಂದು ಭಾವನಾತ್ಮಕವಾದಂತಹ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಸಂಬಂಧವಿತ್ತು. ಕರ್ನಾಟಕದ ಬಳ್ಳಾರಿ ಜಿಲ್ಲೆಯಲ್ಲಿ ಲೋಕಸಭಾ ಚುನಾವಣೆಗೆ ಯಾರನ್ನು ಅಭ್ಯರ್ಥಿಯಾಗಿ ನಿಲ್ಲಿಸಬೇಕೆಂದು ನಾವು ಚರ್ಚೆ ಮಾಡುತ್ತಿರುವಾಗ, ನಮ್ಮ ಪಕ್ಷದವರು ಅವರನ್ನು ಅಭ್ಯರ್ಥಿಯನ್ನಾಗಿ ನಿಲ್ಲಿಸುವುದಕ್ಕೆ ಪ್ರಯತ್ನವನ್ನು ಮಾಡಲಾಯಿತು. ಆ ಚುನಾವಣೆಯಲ್ಲಿ ಇವರು ಭಾಗಿಯಾದರು. ವಿಶೇಷವೆಂದರೆ, ಅವರು ವರಮಹಾಲಕ್ಷ್ಮೀ ಪೂಜೆಯ ಮೂಲಕ ಇಲ್ಲಿ ಕೆಲಸಕಾರ್ಯಗಳನ್ನು ಪ್ರಾರಂಭ ಮಾಡುತ್ತಿದ್ದರು. ಇದರಲ್ಲಿ ಸಾವಿರಾರು ಮಹಿಳೆಯರು ಭಾಗವಹಿಸಿ ಧಾರ್ಮಿಕ ಪ್ರಕ್ರಿಯೆಯನ್ನು ಮಾಡುತ್ತಾ, ಜನರ ಮಧ್ಯೆಯಲ್ಲಿ ಬೆಳೆದು ಅಪ್ಪಟವಾದ ಕನ್ನಡವನ್ನು ಮಾತನಾಡುತ್ತಿದ್ದರು. ಅನೇಕ ಬಾರಿ ಕನ್ನಡದವರಿಗೆ ಬೇರೆ ಬೇರೆ ಭಾಗವಲ್ಲಿ ನಮ್ಮ ಭಾಷೆಯ ಹಿಡಿತ ಸ್ವಲ್ಪ ತಪ್ಪಿ ಹೋಗುತ್ತದೆ. ಆದರೆ ಇಡೀ ಸಾವಿರಾರು ಜನ ನೆರೆದಿದ್ದ ಸಭೆಯಲ್ಲಿ ಅಪ್ಪಟವಾದ ಕನ್ನಡವನ್ನು ಮಾತನಾಡುವಂತಹದ್ದು ನಮಗೆ ಕುತೂಹಲವನ್ನುಂಟು ಮಾಡುತ್ತದೆ. ಅತ್ಯಂತ ಶ್ರೇಷ್ಠ ಸಂಸದೀಯ ಪಟುವಾಗಿದ್ದರು. ಇವರು ವಿದೇಶಾಂಗ ಸಚಿವರಾಗಿ ಮಾಡಿರುವಂತಹ ಸಾಧನೆ ಮತ್ತು ಪಡೆದಿರುವಂತಹ ಗೌರವ ಹಾಗೂ ಸ್ಪೇನ್ ಸರ್ಕಾರ ನೀಡಿರುವಂತಹ “ಗ್ರಾಂಡ್‌ಕ್ರಾಸ್ ಆಫ್ ಆರ್ಡರ್ ಆಫ್ ಸಿವಿಲ್ ಮೆರಿಟ್” ಪ್ರಶಸ್ತಿ ಇವೆಲ್ಲವೂ ಕೂಡ ನೆನಪಿನಲ್ಲಿ ಉಳಿಯುವಂತಹದ್ದು. ಅತ್ಯಂತ ಶ್ರೇಷ್ಠ ಸಂಸದೀಯ ಪಟುವಾಗಿರುವಂತಹ ಹಿರಿಯ ರಾಜಕಾರಣಿ ಮತ್ತು ಸಜ್ಜನ ರಾಜಕಾರಣಿಯಾಗಿರುವಂತಹ ಹಾಗೂ ಒಬ್ಬ ಶ್ರೇಷ್ಠ ವಾಗ್ಮಿಯಾಗಿರುವಂತಹ ಶ್ರೀಮತಿ ಸುಷ್ಮಾ ಸ್ವರಾಜ್‌ರವರ ನಿಧನಕ್ಕೆ ತಾವು ಮಂಡನೆ ಮಾಡಿರುವಂತಹ ಸಂತಾಪ ಸೂಚನೆಗೆ ನಮ್ಮ ಸಹಮತವನ್ನು ವ್ಯಕ್ತಪಡಿಸುತ್ತೇನೆ.

ಇನ್ನು, ಕಾನೂನು ಸಚಿವರಾಗಿ ಮತ್ತು ಕೇಂದ್ರ ಸಚಿವರಾಗಿ ಶ್ರೀ ಅರುಣ್ ಜೇಟ್ಲಿಯವರು ಕೆಲಸ ಮಾಡಿದ್ದಾರೆ. ನಮಗೆ ಅಟಲ್ ಬಿಹಾರಿ ವಾಜಪೇಯಿರವರ ಕಾಲದಿಂದಲೂ ಪ್ರಾರಂಭವಾಗಿ, ಅದಕ್ಕಿಂತ ಮೊದಲು ಪ್ರಾರಂಭವಾಗಿ ಇವತ್ತಿನ ಮಾನ್ಯ ನರೇಂದ್ರ ಮೋದಿ ಮತ್ತು ಅಮಿತ್ ಷಾರವರ ನೇತೃತ್ವದ ಸರ್ಕಾರದಲ್ಲೂ ಕೂಡ ಅವರ ಮಾರ್ಗದರ್ಶನ ಮತ್ತು ಅನುಭವಗಳನ್ನು ಕೇಳುತ್ತಿದ್ದೆವು. ಯಾವುದಾದರೂ ಸಮಸ್ಯೆಗಳು ಸರ್ಕಾರಕ್ಕೆ ಬಂದರೆ ಅಥವಾ ಕೇಂದ್ರ ಸರ್ಕಾರವು ಏನಾದರೂ ಯೋಚನೆ ಮಾಡಬೇಕೆಂದರೆ ನಮ್ಮ ಸರ್ಕಾರ ಪ್ರಥಮವಾಗಿ ಅವರಿಂದ ಅನುಭವಗಳನ್ನು ಪಡೆಯುತ್ತಿತ್ತು ಎಂದು ನಮಗೆ ಅರ್ಥವಾಗುತ್ತದೆ. ಅತ್ಯಂತ ಶ್ರೇಷ್ಠ ಮುತ್ಸದ್ದಿಯಾಗಿದ್ದರು. 4 ಬಾರಿ ರಾಜ್ಯ ಸಭಾ ಸದಸ್ಯರಾಗಿ ಕೆಲಸಗಳನ್ನು ಮಾಡಿದ್ದಾರೆ. ಹಣಕಾಸು, ರಕ್ಷಣಾ, ವಾರ್ತಾ ಮತ್ತು ಪ್ರಚಾರ, ಕಾನೂನು ಮತ್ತು ನ್ಯಾಯ ಹಾಗೂ ಕಾರ್ಪೊರೇಟ್ ವ್ಯವಹಾರಗಳ ಖಾತೆಗಳ ಸಚಿವರಾಗಿ ಸೇವೆಯನ್ನು ಸಲ್ಲಿಸಿದ್ದರು. ಹಣಕಾಸು ಸಚಿವರಾಗಿದ್ದ ಸಂದರ್ಭದಲ್ಲಿ ಅವರು ಜಾರಿಗೆ ತಂದ ಜಿ.ಎಸ್.ಟಿ. ಕಾಯ್ದೆಯನ್ನು ಅತ್ಯಂತ ಪರಿಣಾಮಕಾರಿಯಾಗಿ ಜನರಿಗೆ ಆ ಕಾಯ್ದೆಯ ಬಗ್ಗೆ ಮಾಹಿತಿಯನ್ನು ಒದಗಿಸಿ, ಒಂದೊಂದು ರಾಜ್ಯದಿಂದ ಒಬ್ಬೊಬ್ಬ ಪ್ರತಿನಿಧಿಯನ್ನು ಕರೆದು ಜಿ.ಎಸ್.ಟಿ. ಕಾಯ್ದೆಯನ್ನು ಅತ್ಯಂತ ಪರಿಣಾಮಕಾರಿಯಾಗಿ ಹೇಗೆ

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಮಾಡಬಹುದು ಎಂದು ಹೇಳಿ ಬಹಳ ವಿಚಾರಪೂರ್ಣವಾಗಿ ಮಂಡಿಸಿದರು ಎಂಬುದನ್ನು ನಾನು ಕೇಳಿದ್ದೇನೆ. ನಮ್ಮ ಕಡೆಯಿಂದ ಮಾನ್ಯ ಕೃಷ್ಣಭೈರೇಗೌಡರವರು ಆ ಸಭೆಗೆ ಹೋಗಿದ್ದರು.

ಪ್ರಜಾಪ್ರಭುತ್ವದ ಆಧಾರ ಸ್ತಂಭಗಳಲ್ಲಿ ಒಂದಾಗಿರುವಂತಹ ಶಾಸಕಾಂಗ, ನ್ಯಾಯಾಂಗ, ಕಾರ್ಯಾಂಗ ಮತ್ತು ಮಾಧ್ಯಮಾಂಗ, ಈ ಎಲ್ಲಾ ಕೆಲಸಗಳನ್ನು ಕೂಡ ಅವರು ಅತ್ಯಂತ ಸ್ಫುಟವಾಗಿ ಮಾಡಿದ್ದಾರೆ. ಈ ಎಲ್ಲಾ ವ್ಯವಸ್ಥೆಗಳನ್ನು ಅರ್ಥ ಮಾಡಿಕೊಂಡವರು, ಒಬ್ಬ ಶ್ರೇಷ್ಠ ರಕ್ಷಣಾ ಮಂತ್ರಿಯಾಗಿ ಕೆಲಸವನ್ನು ಮಾಡಿದವರು, ಕೇಂದ್ರ ಸರ್ಕಾರಕ್ಕೆ ಮಾರ್ಗದರ್ಶಕರಾಗಿದ್ದ ಹಿರಿಯ ಮುತ್ಸದ್ದಿಯನ್ನು ನಾವು ಕಳೆದುಕೊಂಡಿದ್ದೇವೆ ಎನ್ನುವಂತಹ ನೋವು ನಮಗೆ ಇದೆ.

(ಮುಂದು)

**(111) 10/10/2019/12:20/ಎಸ್‌ಪಿಆರ್/ಕೆಎಸ್**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಮುಂದು)**

ದಿವಂಗತ ರಾಮ್ ಜೇಠ್ಮಲಾನಿ ರವರ ಹೆಸರನ್ನೂ ಸಹ ಸಂತಾಪ ಸೂಚನೆಯಲ್ಲಿ ಉಲ್ಲೇಖಿಸಲಾಗಿದೆ. ಶ್ರೀಯುತರು ದೇಶದ ಒಬ್ಬ ಅತ್ಯಂತ ಪ್ರಖರ ವಾಗ್ಮಿ ಹಾಗೂ ಪ್ರಸಿದ್ಧ ನ್ಯಾಯವಾದಿಯಾಗಿದ್ದರು. ಈ ಹಿಂದೆ ದೇಶದಲ್ಲಿ ತುರ್ತು ಪರಿಸ್ಥಿತಿ ಇದ್ದಂತಹ ಸಂದರ್ಭದಲ್ಲಿ ವಿದೇಶಗಳಲ್ಲಿದ್ದ ಭಾರತೀಯರನ್ನು ಒಟ್ಟುಗೂಡಿಸಿ, ಅವರುಗಳಲ್ಲಿ ಜಾಗೃತಿಯನ್ನು ಮೂಡಿಸಿ, ಅವರುಗಳೂ ಸಹ ತುರ್ತು ಪರಿಸ್ಥಿತಿಯ ವಿರುದ್ಧ ಸೆಟೆದು ನಿಲ್ಲುವಂತಹ ಯೋಜನೆಗಳನ್ನು ರೂಪಿಸಿ, ಯಶಸ್ವಿಗೊಳಿಸಿದ್ದರು. ಸಂತಾಪ ಸೂಚನೆಯಲ್ಲಿ ತಿಳಿಸಿರುವಂತೆ ದಿವಂಗತರು 1988 ರಲ್ಲಿ ಕರ್ನಾಟಕದಿಂದ ಮೊದಲ ಬಾರಿಗೆ ರಾಜ್ಯಸಭಾ ಸದಸ್ಯರಾಗಿ ಆಯ್ಕೆಯಾದ ಇವರು ಬಹಳ ಶ್ರೇಷ್ಠ ವ್ಯಕ್ತಿಯಾಗಿದ್ದರು. ಅದಲ್ಲದೇ ದೇಶದಲ್ಲಿಯೇ ಇವರು ಬಹಳ ಅತ್ಯಂತ ಶ್ರೇಷ್ಠವಾದ ನ್ಯಾಯವಾದಿಯಾಗಿದ್ದರು ಎಂದೂ ಸಹ ನಾವು ಅವರನ್ನು ಉಲ್ಲೇಖಿಸುತ್ತೇವೆ. ದಿವಂಗತರು ಭಾರತದ ಸರ್ವೋಚ್ಚ ನ್ಯಾಯಾಲಯದಲ್ಲಿ ಯಾವುದೇ ಒಂದು ಪ್ರಕರಣವನ್ನು ವಾದ ಮಾಡುವುದಕ್ಕಾಗಿ ತೆಗೆದುಕೊಂಡರೆ, ಅವರ ವಾದ ಮಂಡನೆಯ ಮೂಲಕ ಸದರಿ ಪ್ರಕರಣವನ್ನು ಗೆಲ್ಲುತ್ತಾರೆ ಎನ್ನುವಂತಹ ಪರಿಸ್ಥಿತಿ ಇತ್ತು. ಸದರಿಯವರು ಯಾವುದೇ ಪ್ರಕರಣವನ್ನು ಕೈಗೆತ್ತಿಕೊಂಡಿದ್ದರೆ, ಪ್ರಕರಣವು ಯಾವ ರೀತಿಯದ್ದಾಗಿದೆ ಎನ್ನುವುದು ಒಂದು ಭಾಗವಾದರೆ, ಶ್ರೀ ರಾಮ್ ಜೇಠ್ಮಲಾನಿಯವರು ಪ್ರಕರಣವನ್ನು ಕೈಗೆತ್ತಿಕೊಂಡಿರುವ ಕಾರಣಕ್ಕಾಗಿ ಸದರಿ ಪ್ರಕರಣವು ಗೆಲ್ಲುತ್ತದೆ ಎನ್ನುವುದು ಮತ್ತೊಂದು ಭಾಗವಾಗಿರುತ್ತಿತ್ತು ಎನ್ನುವಂತಹ ಭಾವನೆಗಳು ಅಂದಿನ ಪರಿಸ್ಥಿತಿಯಲ್ಲಿ ಇತ್ತು. ಅಷ್ಟರ ಮಟ್ಟಿಗೆ ದಿವಂಗತರು ಬಹಳ ಶ್ರೇಷ್ಠವಾದ ನ್ಯಾಯವಾದಿಗಳಾಗಿದ್ದರು. ಇವರಲ್ಲಿ ಬಹಳ ಅತ್ಯಂತ ಮುತ್ಸದ್ದಿತನ ಇತ್ತು. ಅವರ ಮಾತುಗಳಲ್ಲಿ ಎಷ್ಟರ ಮಟ್ಟಿಗೆ ಕಠೋರತೆ ಇತ್ತು ಎಂದರೆ, ಅವರು ಯಾರ ದಾಕ್ಷಿಣ್ಯಕ್ಕೂ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಒಳಗಾಗುತ್ತಿರಲಿಲ್ಲ. ಶ್ರೀಯುತರು ನಮ್ಮ ಪಕ್ಷದಲ್ಲಿಯೇ ಇದ್ದುಕೊಂಡು, ನಮ್ಮ ಪಕ್ಷದ ಸಂಸದರಾಗಿರುವಾಗಲೇ ನಮ್ಮ ಪಕ್ಷಕ್ಕೆ ಸವಾಲುಗಳನ್ನು ಹಾಕುವಂತಹ ಮಾತುಗಳನ್ನಾಡುತ್ತಿದ್ದರು. ನಂತರದಲ್ಲಿ ಅವರು ಯಾವ ಕಾರಣಕ್ಕಾಗಿ ಆ ಮಾತುಗಳನ್ನು ಹೇಳಿದ್ದರು ಎನ್ನುವುದನ್ನೂ ಸಹ ಮನವರಿಕೆ ಮಾಡಿಕೊಡುತ್ತಿದ್ದರು. ಇಂತಹ ಶ್ರೇಷ್ಠ ಮುತ್ಸದ್ದಿಯನ್ನು ನಾವು ಕಳೆದುಕೊಂಡಿದ್ದೇವೆ ಎಂದು ನನಗನ್ನಿಸುತ್ತದೆ. ಇಂದಿನ ಸಂತಾಪ ಸೂಚನೆಯಲ್ಲಿ ಪ್ರಸ್ತಾಪಿಸಿರುವ ಎಲ್ಲಾ ದಿವಂಗತರುಗಳ ಸಂತಾಪ ಸೂಚನೆಗೆ ನಾನು ನನ್ನ ಸಹಮತವನ್ನು ವ್ಯಕ್ತಪಡಿಸಿ, ಅವರುಗಳೆಲ್ಲರ ಆತ್ಮಕ್ಕೆ ಪರಮಾತ್ಮನು ಚಿರಶಾಂತಿಯನ್ನು ಕರುಣಿಸಲಿ ಎಂದು ನಾನು ದೇವರಲ್ಲಿ ಪ್ರಾರ್ಥಿಸುತ್ತೇನೆ. ರಾಜ್ಯದ ಅತ್ಯಂತ ಪ್ರವಾಹ ಪೀಡಿತ ಸಂದರ್ಭದಲ್ಲಿ ನಮ್ಮ ರಾಜ್ಯದ 90 ಕ್ಕಿಂತ ಹೆಚ್ಚು ನಾಗರೀಕರು ಸಾವನ್ನೊಪ್ಪಿದ್ದಾರೆ. ಆ ಪೈಕಿ ಕಾರ್ಮಿಕರು, ರೈತರು ಹಾಗೂ ಇನ್ನಿತರೆ ವರ್ಗದ ಜನರು ಇದ್ದರು. ಅವರುಗಳಿಗೂ ಸಹ ನಾವು ಈ ಬಾರಿ ಸಂತಾಪವನ್ನು ಸೂಚಿಸಬೇಕೆಂಬ ಮಾನ್ಯ ಸದಸ್ಯರ ಮನವಿಯನ್ನು ಮಾನ್ಯ ಸಭಾಪತಿಯವರು ಗಮನಿಸುತ್ತಾರೆಂದು ನಾನು ಭಾವಿಸುತ್ತೇನೆ. ಇದಕ್ಕೆ ನನ್ನ ಸಹಮತಿ ಇದೆ. ಅವರಿಗೂ ಸಹ ನಾವು ಸಂತಾಪವನ್ನು ಸೂಚಿಸುತ್ತೇವೆ.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಇವತ್ತಿನ ದಿವಸ ಪ್ರಸ್ತಾಪಿಸಿರುವ ಸಂತಾಪ ಸೂಚನೆಯಲ್ಲಿ ನಮೂದಿಸಿದ್ದ ಎಲ್ಲಾ ದಿವಂಗತರುಗಳ ಬಗ್ಗೆ ಮಂಡಿಸಿರುವ ಸಂತಾಪ ಸೂಚನೆಯ ನಿರ್ಣಯದ ಮೇಲೆ ತಂದಿರುವ ಗೊತ್ತುವಳಿಯನ್ನು ನಾನು ಅನುಮೋದಿಸುತ್ತೇನೆ ಹಾಗೂ ಮೃತರ ಬಗ್ಗೆ ಒಂದೆರೆಡು ಮಾತುಗಳನ್ನು ಹೇಳಬಯಸುತ್ತೇನೆ.

ವಿಧಾನ ಪರಿಷತ್ತಿನ ಮಾಜಿ ಸದಸ್ಯರಾಗಿದ್ದ ಶ್ರೀ ಪ್ರವೀಣ ಚಂದ್ರ ಕಮಲಾನಿಯವರು ವೃತ್ತಿಯಿಂದ ನ್ಯಾಯವಾದಿಗಳಾಗಿ ಹಾಗೂ ಪ್ರವೃತ್ತಿಯಿಂದ ಸಮಾಜ ಸೇವಕರಾಗಿ ಅನೇಕ ಮಜಲುಗಳಲ್ಲಿ ಕೆಲಸವನ್ನು ನಿರ್ವಹಿಸಿದ್ದರು. ಶ್ರೀಯುತರು 1972–78 ರ ಅವಧಿಗೆ ವಿಧಾನ ಪರಿಷತ್ತಿನ ನಾಮನಿರ್ದೇಶಿತ ಸದಸ್ಯರಾಗಿ ಅತ್ಯುತ್ತಮ ಸೇವೆ ಸಲ್ಲಿಸಿ ಹೆಸರುವಾಸಿಯಾಗಿದ್ದರು. ಅವರ ನಿಧನದಿಂದಾಗಿ ನಿಜವಾಗಿಯೂ ಒಬ್ಬ ಸರಳ ಹಾಗೂ ಶ್ರೇಷ್ಠ ರಾಜಕಾರಣಿಯನ್ನು ಕಳೆದುಕೊಂಡಂತಾಗಿದೆ ಎನ್ನುವಂತಹ ಮಾತಿಗೆ ನಾನು ಧ್ವನಿಗೂಡಿಸುತ್ತೇನೆ.

ದಿವಂಗತ ಎ.ಕೆ.ಸುಬ್ಬಯ್ಯರವರ ಬಗ್ಗೆ ಮಾನ್ಯ ಸಭಾನಾಯಕರು ಈಗಾಗಲೇ ಬಹಳಷ್ಟು ವಿಚಾರಗಳನ್ನು ಹೇಳಿದ್ದಾರೆ. **'ಹರಿತ ನಾಲಿಗೆ ಸುಬ್ಬಯ್ಯ'** ಎಂಬುದಾಗಿ ಅವರನ್ನು ಸಂಬೋಧಿಸುತ್ತಿರುವುದನ್ನು ನಾನು ಕೇಳಿದ್ದೇವು. ಶ್ರೀಯುತರು ಹಾಗೇಯೇ ಖ್ಯಾತಿಯನ್ನೂ ಸಹ ಪಡೆದಿದ್ದರು. ಮಾನ್ಯ ಸುಬ್ಬಯ್ಯನವರು ಎದ್ದುನಿಂತುಕೊಂಡರೆ,

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಂತ್ರಿಗಳಾದ ನಾವುಗಳು ನಮ್ಮ ಜಂಘಾಬಲವನ್ನು ಹೂಡಿ ಹೋಗುತ್ತಿದ್ದೇವು ಎಂಬುದಾಗಿ ನಮ್ಮ ಅನೇಕ ಸ್ನೇಹಿತರು, ಸಚಿವರು ಹೇಳುತ್ತಿದ್ದ ಮಾತುಗಳನ್ನೂ ಸಹ ನಾವು ಕೇಳಿದ್ದೇವೆ. ಅಷ್ಟರ ಮಟ್ಟಿಗೆ ಆಡಳಿತ ಪಕ್ಷದವರು ಅಂಜುತ್ತಿದ್ದರು. ಆಡಳಿತ ಪಕ್ಷದವರು ಏನಾದರೂ ತಪ್ಪುಗಳನ್ನು ಮಾಡಿದ್ದರೆ ಬಹುತರವಾಗಿ ಮಾನ್ಯ ಎ.ಕೆ.ಸುಬ್ಬಯ್ಯನವರ ಕೈಯಿಂದ ಅವರುಗಳು ಪಾರಾಗುವುದು ಬಹಳ ಕಠಿಣ ಎನ್ನುವಷ್ಟರ ಮಟ್ಟಿಗೆ ಅಂದಿನ ಪರಿಸ್ಥಿತಿ ಇತ್ತು. ಶ್ರೀಯುತರು ಜನಸಂಘದಲ್ಲಿ ಮೊದಲು ಗುರ್ತಿಸಿಕೊಂಡು ನಂತರದಲ್ಲಿ ಜನತಾ ಪಕ್ಷ, ಕ್ರಾಂತಿರಂಗ, ಬಿ.ಜೆ.ಪಿ. ಪಕ್ಷದೊಂದಿಗೆ ಜೊತೆಗೂಡಿದರು. ದಿವಂಗತರು ಮೂರು ಅವಧಿಗಳ ಕಾಲ ಮೇಲ್ಮನೆಯ ಸದಸ್ಯರಾಗಿ ಹಾಗೂ ಒಂದು ಬಾರಿ ಕೆಳಮನೆ ಸದಸ್ಯರಾಗಿ ಆಯ್ಕೆಗೊಂಡು, ಅತ್ಯಂತ ಸಮರ್ಥ್ಯವಾಗಿ ಪ್ರತಿಪಕ್ಷದ ನಾಯಕರಾಗಿ ಕೆಲಸವನ್ನು ನಿರ್ವಹಿಸಿದ್ದಾರೆ. ಬಹುತರವಾಗಿ ನಾನು ಎರಡನೇಯ ಬಾರಿಗೆ ಸದಸ್ಯನಾಗಿ ಆಯ್ಕೆಗೊಂಡ ಸಂದರ್ಭದಲ್ಲಿ ಹಾಗೂ ಶ್ರೀಯುತರು ಪ್ರತಿಪಕ್ಷದ ನಾಯಕರಾಗಿದ್ದ ಸಂದರ್ಭದಲ್ಲಿ ಅವರು ಅನುಸರಿಸುತ್ತಿದ್ದ ವಿಚಾರಗಳನ್ನು ನಾವು ಇವತ್ತಿನ ದಿವಸ ಮೆಲುಕು ಹಾಕುವುದು ಬಹಳ ಅವಶ್ಯಕವಾಗಿದೆ. ಶ್ರೀಯುತರು ವಿರೋಧ ಪಕ್ಷದ ನಾಯಕರಾಗಿ ಮಾನ್ಯ ಮುಖ್ಯಮಂತ್ರಿಗಳಿಗಾಗಲೀ ಅಥವಾ ಯಾವುದೇ ಮಂತ್ರಿಗಳಿಗಾಗಲೀ ಒಂದು ಪತ್ರವನ್ನು ಬರೆದು favour ನ್ನು ಪಡೆಯುವಂತಹ ವ್ಯಕ್ತಿಯಾಗಿರಲಿಲ್ಲ. ಸದರಿಯವರು ಅತ್ಯಂತ ಪ್ರಾಮಾಣಿಕವಾಗಿ, ನಿಷ್ಠೆ ಹಾಗೂ ದಕ್ಷತೆಯಿಂದ ಕಾರ್ಯನಿರ್ವಹಿಸಿ ವಿರೋಧ ಪಕ್ಷದ ನಾಯಕರ ಸ್ಥಾನಕ್ಕೆ ನ್ಯಾಯ ತಂದುಕೊಡುವ ಕೆಲಸ ಮಾಡಿದ್ದರು. ಇದು ಬಹಳ ಕಷ್ಟವಾದ ಕೆಲಸವಾಗಿತ್ತು. ಇದನ್ನು ಶ್ರೀಯುತರು ಅರಿತುಕೊಂಡಿದ್ದರು. Hats off to his honesty and integrity. ಶ್ರೀಯುತರ ನಿಧನದಿಂದಾಗಿ ನಿಜವಾಗಿಯೂ ಸಹ ಒಬ್ಬ ಒಳ್ಳೆಯ ಸಂಸದೀಯ ಪಟುವನ್ನು ಕಳೆದುಕೊಂಡಂತಾಗಿದೆ. ಶತಮಾನಗಳ ಇತಿಹಾಸವನ್ನು ಹೊಂದಿರುವ ಈ ಸದನಕ್ಕೆ ಗೌರವವನ್ನು ತಂದುಕೊಡುವುದರ ಜೊತೆಗೆ, ಮಾಧ್ಯಮ ಮಿತ್ರರ ಪ್ರೀತಿ ಹಾಗೂ ವಿಶ್ವಾಸಗಳನ್ನು ಗಳಿಸುವುದರ ಜೊತೆಗೆ ಅನೇಕ ಮಂತ್ರಿಗಳಿಗೆ ಅಪ್ಪಣೆ ಮಾಡಿದ ಕೀರ್ತಿಗೆ ಭಾಜನರಾಗಿದ್ದಂತಹ ಒಬ್ಬ ಶ್ರೇಷ್ಠ ಸಂಸದೀಯ ಪಟುವನ್ನು ನಾವು ಕಳೆದುಕೊಂಡಂತಾಗಿದೆ ಎನ್ನುವಂತಹ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಲಿಚ್ಚಿಸುತ್ತೇನೆ.

ದಿವಂಗತ ಉಮೇಶ್ ಭಟ್‌ರವರು ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ತಾಲ್ಲೂಕಿನಲ್ಲಿ ಜನಿಸಿದ್ದು, ವೃತ್ತಿಯಲ್ಲಿ ವ್ಯಾಪಾರಿಯಾಗಿದ್ದರು. 1989 ರಲ್ಲಿ ಶ್ರೀಯುತರು 9ನೇ ವಿಧಾನ ಸಭೆಗೆ ಅಂಕೋಲ ಕ್ಷೇತ್ರದಿಂದ ಆಯ್ಕೆಯಾಗಿದ್ದರು. ಶ್ರೀಯುತರು ಹುಬ್ಬಳ್ಳಿಯ ಲೋಕಶಿಕ್ಷಣ ಟ್ರಸ್ಟಿನ ಮುಖ್ಯಸ್ಥರಾಗಿ ಅತ್ಯುತ್ತಮವಾದ ಕೆಲಸವನ್ನು ನಿರ್ವಹಿಸಿದ್ದಾರೆ. ಅವರು ರಾಜ್ಯದ ಉತ್ತರ ಕರ್ನಾಟಕ ಭಾಗದ ಚಿರಪರಿಚಿತ ವ್ಯಕ್ತಿಯಾಗಿದ್ದರು ಎಂದು ಹೇಳುವುದಕ್ಕೆ ನಾನು ಇಚ್ಚಿಸುತ್ತೇನೆ. ಶ್ರೀಯುತರು ಸಹ ಅನೇಕ ಮಜಲುಗಳಲ್ಲಿ ಕೆಲಸ ನಿರ್ವಹಿಸಿದ್ದಾರೆ ಅದರ

"ತಿದ್ದುಪಡಿಯಾಗದ ಪ್ರತಿ,ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಜೊತೆಗೆ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಉಪಾಧ್ಯಕ್ಷರಾಗಿಯೂ ಸಹ ಸೇವೆ ಸಲ್ಲಿಸಿರುವುದನ್ನು ನಾನು ಇವತ್ತಿನ ದಿವಸ ನೆನಪಿಸಿಕೊಳ್ಳಲು ಬಯಸುತ್ತೇನೆ. ನನಗೆ ಸ್ನೇಹಿತರೂ ಆಗಿದ್ದಂತಹ ಶ್ರೀಯುತರು ಹಿಂದೆ ಒಂದು ಬಾರಿ ನನ್ನನ್ನು ತಮ್ಮ ಕ್ಷೇತ್ರಕ್ಕೆ ಬಂದು, ಆ ಪ್ರದೇಶ ವ್ಯಾಪ್ತಿಯ ಗಂಟಿ ಗಣಪತಿ ದೇವಸ್ಥಾನಕ್ಕೆ ಭೇಟಿ ನೀಡಿ, ದೇವರ ದರ್ಶನ ಪಡೆದುಕೊಳ್ಳಬೇಕೆಂಬ ಆಮಂತ್ರಣವನ್ನೂ ಸಹ ನೀಡಿದ್ದರು. ನಾನು ನಾಸ್ತಿಕ ಎಂಬ ವಿಚಾರವೇನೂ ಇಲ್ಲ. ಆದರೂ ಸಹ ನಾನು ಶ್ರೀಯುತರ ಒತ್ತಾಯಕ್ಕೆ ಮಣಿದು ಅಲ್ಲಿನ ದೇವಸ್ಥಾನಕ್ಕೆ ಭೇಟಿ ಕೊಟ್ಟೆ. ಆ ಸಂದರ್ಭದಲ್ಲಿ ಶ್ರೀಯುತರ ಮನೆಯಲ್ಲಿ ನನಗೆ ಭೋಜನವನ್ನು ಏರ್ಪಡಿಸಿದ್ದರು. ಶ್ರೀಯುತರು ಬಹಳ ಒಳ್ಳೆಯ ಸ್ನೇಹ ಜೀವಿಯಾಗಿದ್ದರು ಹಾಗೂ ಅವರು ಗೆಳೆತನಕ್ಕೆ ಹೇಳಿ ಮಾಡಿಸಿದ್ದ ವ್ಯಕ್ತಿಯಾಗಿದ್ದರು. ಇಂತಹವರ ನಿಧನದಿಂದಾಗಿ ಒಬ್ಬ ಹಿರಿಯ, ಶ್ರೇಷ್ಠ ರಾಜಕಾರಣಿಯನ್ನು ಹಾಗೂ ಒಳ್ಳೆಯ ಸ್ನೇಹಿತನನ್ನು ಕಳೆದುಕೊಂಡಂತಹ ಅನುಭವ ನನಗೆ ಆಗಿದೆ.

ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಸಿ.ವೀರಭದ್ರಯ್ಯನವರು ತುಮಕೂರು ಜಿಲ್ಲೆಯ ಕೊರಟಗೆರೆ ವಿಧಾನಸಭಾ ಕ್ಷೇತ್ರದಿಂದ ಒಂದು ಬಾರಿ ಕೆಳ ಮನೆಯ ಸದಸ್ಯರಾಗಿ ಆಯ್ಕೆಗೊಂಡಿದ್ದರು. ಇವರ ವಿಶೇಷತೆ ಏನೆಂದರೆ, ಶ್ರೀಯುತರು 15 ವರ್ಷಗಳ ಕಾಲ ತುಮಕೂರು ಜಿಲ್ಲಾ ವೀರಶೈವ ಮಹಾಸಭಾ ಅಧ್ಯಕ್ಷರಾಗಿ, ತಾಲ್ಲೂಕಿನ ಸಿದ್ದರಬೆಟ್ಟದ ರಂಬಾಪುರಿ ಶಾಖಾ ಮಠದ ಅಧ್ಯಕ್ಷರಾಗಿ, ಬೆಂಗಳೂರಿನ ಜಗದ್ಗುರು ರೇಣುಕಾಚಾರ್ಯ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾಗಿ ಹಾಗೂ ಜಿಲ್ಲಾ ಕಾಂಗ್ರೆಸ್ ಸಮಿತಿಯ ಖಜಾಂಚಿಯಾಗಿಯೂ ಸೇವೆಯನ್ನು ಸಲ್ಲಿಸಿರುತ್ತಾರೆ. ಶ್ರೀಯುತರು ನಿಜವಾಗಿಯೂ ಸಹ 900 ವರ್ಷಗಳ ಹಿಂದೆ ಇದ್ದ ಬಸವಾದಿ ಶರಣರ ವಿಚಾರದಲ್ಲಿ ತಮ್ಮದೇ ಆದ ಒಂದು ಛಾಪನ್ನು ಮೂಡಿಸಿದ್ದರು. ಮತ್ತೊಂದು ಬಾರಿ ವಿಶ್ವಗುರು ಬಸವಣ್ಣನವರನ್ನು ನೆನಪಿಸಿಕೊಳ್ಳುವ ದಿಸೆಯಲ್ಲಿ ಶ್ರೀಯುತರು ಅತ್ಯುತ್ತಮ ಕೆಲಸವನ್ನು ಮಾಡುವುದರ ಜೊತೆಗೆ 12 ನೇಯ ಶತಮಾನದಲ್ಲಿ ಬಹು ದೊಡ್ಡ ಸಾಮಾಜಿಕ ಕ್ರಾಂತಿ ಮಾಡಿದ ಬಸವಾದಿ ಶರಣರ ವಿಚಾರವನ್ನು ಅಕ್ಷರಶಃ ಜಾರಿಗೆ ತರುವಲ್ಲಿ ಪ್ರಾಮಾಣಿಕವಾದ ಸೇವೆಯನ್ನು ಸಲ್ಲಿಸಿದ್ದಾರೆ. ಇವರ ಅಗಲಿಕೆಯಿಂದಾಗಿ ಒಬ್ಬ ಶ್ರೇಷ್ಠ ಶರಣರನ್ನು, ರಾಜಕಾರಣಿ ಹಾಗೂ ಸಮಾಜ ಸೇವಕರನ್ನು ಕಳೆದುಕೊಂಡಂತಹ ಅನುಭವವು ನನಗೆ ಆಗುತ್ತಿದೆ.

ವಿಧಾನ ಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಅರ್ಜುನರಾವ್ ಹಿಶೋಬಕರ್ ರವರು ಬೆಳಗಾವಿ ಕ್ಷೇತ್ರದಿಂದ ಪಕ್ಷೇತರ ಅಭ್ಯರ್ಥಿಯಾಗಿ ಆಯ್ಕೆಗೊಂಡಿದ್ದರು. ಇವರೂ ಸಹ ತಮ್ಮ ಅಧಿಕಾರಾವಧಿಯಲ್ಲಿ ಉತ್ತಮ ಕೆಲಸಗಳನ್ನು ಮಾಡಿ, ಜನಮಾನ್ಯವನ್ನು ಗಳಿಸಿದಂತಹ ರಾಜಕಾರಣಿಯಾಗಿದ್ದು, ಅವರ ಅಗಲಿಕೆಯಿಂದಾಗಿ ರಾಜ್ಯವು ಒಬ್ಬ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹಿರಿಯ ರಾಜಕಾರಣಿಯನ್ನು ಕಳೆದುಕೊಂಡಂತಾಗಿದೆ ಹಾಗೂ ಸಾರ್ವಜನಿಕ ಬದುಕು ಬರಡು ಆದಂತಾಗಿದೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಲಿಚ್ಛಿಸುತ್ತೇನೆ.

ಶ್ರೀಮತಿ ಸುಷ್ಮಾ ಸ್ವರಾಜ್ ರವರು ಏಳು ಬಾರಿ ಸಂಸದರಾಗಿ ಹಾಗೂ ಶಾಸಕರಾಗಿ ಬಹಳ ಅತ್ಯುತ್ತಮವಾದ ಸೇವೆಯನ್ನು ಸಲ್ಲಿಸಿದ್ದಾರೆ. ಮಾನ್ಯ ಸಭಾ ನಾಯಕರು ದಿವಂಗತರ ಬಗ್ಗೆ ಸಾಕಷ್ಟು ವಿಚಾರಗಳನ್ನು ಉಲ್ಲೇಖಿಸಿದ್ದಾರೆ. ಅದೇ ವಿಚಾರವನ್ನು ನಾನು ಪುನರಾವರ್ತನೆ ಮಾಡುವುದಕ್ಕೆ ಹೋಗುವುದಿಲ್ಲ. ನಾವೂ ಸಹ ಬಳ್ಳಾರಿ ಜಿಲ್ಲೆಯೊಂದಿಗೆ ಅವಿನಾಭಾವ ಸಂಬಂಧವನ್ನು ಹೊಂದಿದ್ದೇವೆ. ದಿವಂಗತರು ಬಳ್ಳಾರಿ ಕ್ಷೇತ್ರದಿಂದ ಚುನಾವಣೆಗೆ ಸ್ಪರ್ಧೆ ಮಾಡಿದ್ದರು. ಮಾನ್ಯ ಸಭಾ ನಾಯಕರು ಪ್ರಸ್ತಾಪಿಸಿದಂತೆ, ದಿವಂಗತರು ವರಮಹಾಲಕ್ಷ್ಮೀ ಹಬ್ಬದ ಪೂಜೆ ಹಾಗೂ ಉಡಿತುಂಬುವಂತಹ ಬಹಳಷ್ಟು ಧಾರ್ಮಿಕ ಕಾರ್ಯಕ್ರಮಗಳಲ್ಲಿ ಭಾಗಿಯಾಗುತ್ತಿದ್ದರು.

(ಮುಂದು)

(112)/10-10-2019/12-30/ಎಲ್ಎಂ/ಕೆಎಸ್

**ಶ್ರೀ ಎಸ್.ಆರ್.ಪಾಟೀಲ್(ಮುಂದು)**

ಮಾನ್ಯ ಸಭಾನಾಯಕರು ಹೇಳಿದ ಹಾಗೆ ಶ್ರೀಮತಿ ಸುಷ್ಮಾ ಸ್ವರಾಜ್‌ರವರು ಪ್ರತಿ ವರಮಹಾಲಕ್ಷ್ಮಿ ಪೂಜೆಯ ದಿನ ಬಳ್ಳಾರಿಗೆ ಬಂದು ಉಡಿ ತುಂಬುವ ಧಾರ್ಮಿಕ ಕಾರ್ಯಕ್ರಮದಲ್ಲಿ ಭಾಗಿಯಾಗುತ್ತಿದ್ದರು. ಅವರನ್ನು ಬಹಳವಾಗಿ ಮೆಚ್ಚುವ ಇನ್ನೊಂದು ವಿಚಾರ ಎಂದರೆ, ಸ್ವಲ್ಪ ದಿನಗಳಲ್ಲಿಯೇ ಕನ್ನಡವನ್ನು ಕಲಿತು, ಸುಲಲಿತವಾಗಿ ಕನ್ನಡದಲ್ಲಿ ಭಾಷಣ ಮಾಡುವಷ್ಟು ಪಾಂಡಿತ್ಯವನ್ನು ಪಡೆದದ್ದು ಎಲ್ಲರೂ ಹೆಮ್ಮೆಪಡಬೇಕಾದ ಸಂಗತಿಯಾಗಿದೆ. ಮಾನವೀಯ ಮೌಲ್ಯಗಳನ್ನು ಅಳವಡಿಸಿಕೊಂಡಿದ್ದ ಅವರು ಅನೇಕ ಸಂಗತಿಗಳಲ್ಲಿ ಪ್ರಥಮರು ಎನ್ನುವ ಮಾತು ಸತ್ಯ. ಮಾತೃಹೃದಯಕ್ಕೆ ಹೆಸರುವಾಸಿಯಾದ ಅವರು ಯಾರೇ ಕಷ್ಟದಲ್ಲಿರಲಿ ಅವರ ಕಷ್ಟವನ್ನು ಪರಿಹರಿಸಲು, ನಿವಾರಣೆ ಮಾಡಲು ಯಾವತ್ತೂ ಹಿಂದೇಟು ಹಾಕಿದವರಲ್ಲ. ಇವರನ್ನು ಕಳೆದುಕೊಂಡು ದೇಶಕ್ಕೆ ಇವತ್ತು ಅನಾಥಪ್ರಜ್ಞೆ ಕಾಡುತ್ತಿದೆ.

ಮಾನ್ಯ ಅರುಣ ಜೇಟ್ಲಿ ಯವರು ನಮ್ಮನ್ನಗಲಿದ್ದಾರೆ. ಇವರು ನಾಲ್ಕು ಬಾರಿ ರಾಜ್ಯಸಭಾ ಸದಸ್ಯರಾಗಿ ಸೇವೆ ಸಲ್ಲಿಸಿದ್ದರಲ್ಲದೆ ಹಣಕಾಸು, ರಕ್ಷಣಾ, ವಾರ್ತಾ ಮತ್ತು ಪ್ರಚಾರ, ಕಾನೂನು ಮತ್ತು ನ್ಯಾಯ ಹಾಗೂ ಕಾರ್ಪೊರೇಟ್ ವ್ಯವಹಾರಗಳ ಖಾತೆಯ ಸಚಿವರಾಗಿ ಸಮರ್ಥವಾಗಿ ಕಾರ್ಯನಿರ್ವಹಿಸಿದ್ದಾರೆ. ಮಾನ್ಯ ಸ್ನೇಹಿತರು ಹೇಳಿದ ಹಾಗೆ ಇವರು ಹಣಕಾಸು ಸಚಿವರಾಗಿದ್ದ ಸಂದರ್ಭದಲ್ಲಿ ಜಾರಿಗೆ ತಂದ ಜಿ.ಎಸ್.ಟಿ., (Goods and Services

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

Tax) ಕಾಯ್ದೆ ಒಂದು ಕ್ರಾಂತಿಕಾರಿ ನಿರ್ಣಯವಾಗಿದ್ದು, ಅದನ್ನು ಸುಸೂತ್ರವಾಗಿ ಜಾರಿಗೊಳಿಸುವ ಸಂದರ್ಭದಲ್ಲಿ ಬಹಳ ಪ್ರಮುಖ ಪಾತ್ರವನ್ನು ವಹಿಸಿದಲ್ಲದೆ, ಅದನ್ನು ಜಾರಿಗೊಳಿಸಿದ ಕೀರ್ತಿಗೆ ಸಹ ಇವರು ಭಾಜನರಾಗಿದ್ದಾರೆ.

ಇವತ್ತು ದೇಶದಲ್ಲಿ ಉಂಟಾಗಿರುವ economy recession ನ್ನು ಗಮನಿಸಿದರೆ ಮಾನ್ಯ ಅರುಣ ಜೇಟ್ಲಿಯವರು ಇದ್ದಿದ್ದರೆ ಈ ರೀತಿ ಆರ್ಥಿಕ ಸಂಕಷ್ಟ ಉಂಟಾಗುತ್ತಿರಲಿಲ್ಲ ಅನ್ನಿಸುತ್ತದೆ. ಒಬ್ಬ ಶ್ರೇಷ್ಠ ಆರ್ಥಿಕ ತಜ್ಞರಾಗಿ, ಮುತ್ಸದ್ಧಿಯಾಗಿ ದೇಶವನ್ನು ಆರ್ಥಿಕ ಪ್ರಗತಿಯತ್ತ ಮುನ್ನಡೆಸುವ ದಿಕ್ಕಿನಲ್ಲಿ ಅವರು ಕೆಲಸ ಮಾಡಿದ್ದಾರೆ. ಇವರು ಸರ್ವೋಚ್ಚ ನ್ಯಾಯಾಲಯದಲ್ಲಿ ವಕೀಲರಾಗಿ, ರಾಜ್ಯಸಭೆಯ ವಿರೋಧ ಪಕ್ಷದ ನಾಯಕರಾಗಿಯು ಸೇವೆ ಸಲ್ಲಿಸಿದ್ದಾರೆ. ಶ್ರೀ ಅರುಣ ಜೇಟ್ಲಿಯವರು ಭೌತಿಕವಾಗಿ ನಮ್ಮ ಜೊತೆಯಲ್ಲಿ ಇಲ್ಲ, ಆದರೆ ಶಾಶ್ವತವಾಗಿ ನಮ್ಮ ಮನಸ್ಸಿನಲ್ಲಿ, ನಮ್ಮ ಹೃದಯದಲ್ಲಿ ಉಳಿದಿದ್ದಾರೆ. ದೇಶ ಎದುರಿಸುತ್ತಿರುವ ಗಂಭೀರ ಆರ್ಥಿಕ ಪರಿಸ್ಥಿತಿಯಲ್ಲಿ economy slowdown ಆಗಿ ದೇಶದ GDP (Gross Domestic Product) ಕೆಳಹಂತಕ್ಕೆ ಹೋಗಿರುವ ಸಂದರ್ಭದಲ್ಲಿ ಅದನ್ನು ನಿಭಾಯಿಸುವಂತಹ ವ್ಯಕ್ತಿ ಇಂದು ನಮ್ಮ ಮಧ್ಯದಲ್ಲಿ ಇಲ್ಲ. ಇದು ಬಹಳ ನೋವಿನ ಸಂಗತಿಯಾಗಿದೆ. ಶ್ರೀ ಅರುಣ ಜೇಟ್ಲಿಯವರ ನಿಧನದಿಂದ ಇಡೀ ರಾಷ್ಟ್ರದ ಸಾರ್ವಜನಿಕ ಬದುಕಿನಲ್ಲಿ ಒಬ್ಬ ಕಾನೂನು ತಜ್ಞರನ್ನು ಕಳೆದುಕೊಂಡಂತಾಗಿದ್ದು, ಇದರಿಂದ ನಮ್ಮ ದೇಶಕ್ಕೆ ತುಂಬಲಾಗದ ಹಾನಿ ಉಂಟಾಗಿದೆ ಎನ್ನುವ ಮಾತನ್ನು ಹೇಳಬಯಸುತ್ತೇನೆ.

ಶ್ರೀ ರಾಮ್ ಜೇಠ್ಮಲಾನಿ ಯವರು ರಾಜ್ಯಸಭಾ ಸದಸ್ಯರಾಗಿ ಕೆಲಸ ಮಾಡಿದ್ದಾರೆ. He was an unquestioned, undisputed and eminent jurist. ಬಹಳ ಶ್ರೇಷ್ಠವಾದ ನ್ಯಾಯವಾದಿ, ಪ್ರಖರವಾದ ವಾದಗಳನ್ನು ನ್ಯಾಯಾಲಯದಲ್ಲಿ ಮಂಡಿಸುತ್ತಾ ತಮ್ಮ ವಾದವನ್ನು ಗೆಲ್ಲುತ್ತಿದ್ದರು. ತಮ್ಮ ವಾದವನ್ನು ಗೆಲ್ಲಲು ಒಬ್ಬ ನ್ಯಾಯವಾದಿಗೆ ಇರಬೇಕಾದ ಎಲ್ಲ ಚಾಕಚಕ್ಯತೆಯನ್ನು ಅವರು ಹೊಂದಿದ್ದರು. ಸಂವಿಧಾನದಲ್ಲಿ ಅಪಾರವಾದ ಪಾಂಡಿತ್ಯವನ್ನು ಹೊಂದಿದ್ದವರು. ಅವರ ಹತ್ತಿರ ಕಕ್ಷಿದಾರರು ಹೋದರೆ ನಮಗೆ ನಿಶ್ಚಿತವಾಗಿ ನ್ಯಾಯ ದೊರಕುತ್ತದೆ ಎನ್ನುವ ವಿಶ್ವಾಸ ಕಕ್ಷಿದಾರರಲ್ಲಿ ಬರುತ್ತಿತ್ತು. ಇಂತಹ eminent jurist ರನ್ನು ಇಂದು ದೇಶ ಕಳೆದುಕೊಂಡಿರುವುದರಿಂದ ಎಲ್ಲರಿಗೂ ನೋವುಂಟಾಗುತ್ತಿದೆ.

ಮಾನ್ಯ ಸ್ನೇಹಿತರಾದ ಪ್ರಕಾಶ್ ರಾಠೋಡ್‌ರವರು ಹೇಳಿದ ಹಾಗೆ, ಶತಮಾನಗಳಿಂದ ಕಂಡರಿಯದ ರೀತಿಯಲ್ಲಿ ಮಹಾಪೂರ ಬಂದು ಎಲ್ಲ ಪ್ರದೇಶಗಳು ಜಲಾವೃತಗೊಂಡು ಸುಮಾರು 90ಕ್ಕೂ ಹೆಚ್ಚು ಜನರು ಈ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಜಲಪ್ರಳಯದಲ್ಲಿ ತಮ್ಮ ಜೀವವನ್ನು ಕಳೆದುಕೊಂಡಿದ್ದಾರೆ. ಈ ಘಟನೆಯನ್ನು ಸಹ ಸಂತಾಪ ಸೂಚನೆಯಲ್ಲಿ ಸೇರಿಸುವುದು ಸೂಕ್ತ ಎನ್ನುವ ಮಾತನ್ನು ಹೇಳಬಯಸುತ್ತೇನೆ. ಮಧ್ಯರಾತ್ರಿಯಲ್ಲಿ ಪ್ರವಾಹ ಊರಿನಲ್ಲಿ ಬಂದು ಮನೆಯೊಳಗೆ ನೀರು ನುಗ್ಗಿದ್ದರಿಂದ ಜನರು ಹೊರಗೆ ಬರದಂತಹ ಪರಿಸ್ಥಿತಿ ಉಂಟಾಗಿ ಅವರೆಲ್ಲರೂ ಅಸುನೀಗಿದ್ದಾರೆ. ಈ ಎಲ್ಲ ಘಟನೆಗಳ ಬಗ್ಗೆ ಮಾನ್ಯ ಉಪ ಮುಖ್ಯಮಂತ್ರಿಗಳಿಗೆ ಗೊತ್ತಿದೆ. ಇದರಿಂದ ಹೆಚ್ಚು ಅನಾಹುತವನ್ನು ಕಂಡಿರುವುದು ಬೆಳಗಾವಿ ಜಿಲ್ಲೆ. ಈ ಪ್ರವಾಹದಿಂದ 22 ಜಿಲ್ಲೆಗಳು ಮತ್ತು 103 ತಾಲ್ಲೂಕುಗಳಲ್ಲಿ ಜೀವ ಹಾನಿ ಉಂಟಾಗಿರುವುದು ಬಹಳ ನೋವಿನ ಸಂಗತಿಯಾಗಿದೆ. ಈ ಎಲ್ಲ ಘಟನೆಗಳನ್ನು ಸಂತಾಪ ಸೂಚನೆಯಲ್ಲಿ ಸೇರಿಸಬೇಕೆಂದು ಕೇಳಿಕೊಂಡು ತಾವು ತಂದಿರುವ ಈ ಸಂತಾಪ ಸೂಚನೆಗೆ ನನ್ನ ಅಭಿಮತವನ್ನು ಸೂಚಿಸುವ ಪೂರ್ವದಲ್ಲಿ ಒಂದು ಮಾತನ್ನು ಹೇಳಬಯಸುತ್ತೇನೆ. ಈ ಎಲ್ಲ ಮಹಾನ್ ವ್ಯಕ್ತಿಗಳು ಹುಟ್ಟುವಾಗ ಉಸಿರು ಇತ್ತು, ಹೆಸರು ಇರಲಿಲ್ಲ; ಇಂದು ಈ ವ್ಯಕ್ತಿಗಳು ನಾಡಿಗೆ, ದೇಶದಕ್ಕೆ ತಮ್ಮದೇ ಆದ ಕೊಡುಗೆಯನ್ನು ಕೊಟ್ಟು ಹೋಗಿದ್ದಾರೆ. ಇವತ್ತು ಅವರ ಉಸಿರು ಇಲ್ಲ, ಹೆಸರು ಉಳಿದಿದೆ. ಒಬ್ಬ ಮಹಾನುಭಾವರು ಈ ರೀತಿ ಹೇಳಿದ್ದಾರೆ; "ಮಗು ಈ ಪ್ರಪಂಚಕ್ಕೆ ಅಳುತ್ತಾ ಬಂದರೆ, ಎಲ್ಲರೂ ಅದನ್ನು ನಗುನಗುತಾ ಸ್ವೀಕಾರ ಮಾಡುತ್ತಾರೆ; ಆದರೆ ಆ ಮಗು ಮುಂದೆ ಬೆಳೆದು ದೊಡ್ಡ ವ್ಯಕ್ತಿಯಾಗಿ ಅತ್ಯುತ್ತಮ ಕೆಲಸಗಳನ್ನು ಮಾಡಿ ಈ ಸಮಾಜಕ್ಕೆ, ನಾಡಿಗೆ ತಮ್ಮದೇ ಆದ ಕೊಡುಗೆಯನ್ನು ನೀಡಿ ನಗುನಗುತ್ತಾ ಈ ಜಗತ್ತನ್ನು ಬಿಟ್ಟು ಹೊರಟಾಗ ಜನರು ಅವರನ್ನು ಅಳುತ್ತಾ ಬೀಳ್ಕೊಡುತ್ತಾರೆ" ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ನೆನಪಿಸಿಕೊಂಡು, ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತೇನೆ. ನಮಸ್ಕಾರಗಳು.

**ಸಭಾಪತಿಯವರು:–** ಸದನದಲ್ಲಿ ಪ್ರಸ್ತಾಪಿಸಿದ ಸಂತಾಪ ಸೂಚನೆಯೊಂದಿಗೆ ಉತ್ತರ ಕರ್ನಾಟಕದಲ್ಲಿ ಆದ ಜಲಪ್ರಳಯ ಮತ್ತು ಪ್ರವಾಹಕ್ಕೆ ಸಿಲುಕಿ ತಮ್ಮ ಪ್ರಾಣವನ್ನು ಕಳೆದುಕೊಂಡ ಜನಸಾಮಾನ್ಯರಿಗೆ ಈ ಸದನ ಸಂತಾಪ ಸೂಚಿಸುತ್ತದೆ. ಜೊತೆಗೆ ಮೃತರ ಆತ್ಮಕ್ಕೆ ಸದ್ಗತಿಯನ್ನು ಕೋರುತ್ತಾ, ಅವರ ಅಗಲಿಕೆಯ ನೋವನ್ನು ಸಹಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ಪರಮಾತ್ಮನು ಕರುಣಿಸಲೆಂದು ಪ್ರಾರ್ಥಿಸುತ್ತಾ, ಮೃತರುಗಳ ಗೌರವಾರ್ಥ ಮಾನ್ಯ ಸದಸ್ಯರುಗಳು ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

(ಈ ಹಂತದಲ್ಲಿ ಇಡೀ ಸದನ ಎದ್ದು ನಿಂತು ಮೃತರ ಗೌರವಾರ್ಥ
ಒಂದು ನಿಮಿಷ ಮೌನವನ್ನಾಚರಿಸಿತು)

**ಸಭಾಪತಿಯವರು:–** ಸದನದಲ್ಲಿ ಪ್ರಸ್ತಾಪಿಸಿದ ಸಂತಾಪ ಸೂಚನೆಯನ್ನು ಮೃತ ಗಣ್ಯರ ಕುಟುಂಬ ವರ್ಗದವರಿಗೆ ಕಳುಹಿಸಲಾಗುವುದು.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಗಳೆ, ಈ ಸದನದಲ್ಲಿ ಪತ್ರಿಕೆಯವರಿಗೆ ಒಳಗಡೆ ಬರಲು ಅವಕಾಶವಿದೆಯೋ ಇಲ್ಲವೋ? ಏಕೆಂದರೆ ಪತ್ರಿಕೆಯಲ್ಲಿ ವಿಷಯ ಬಂದಿದೆ. ಇದರ ಬಗ್ಗೆ ನನಗೆ clarification ಬೇಕಾಗಿದೆ.

**ಸಭಾಪತಿಯವರು:–** ಪತ್ರಿಕೆಯವರು ಬಂದಿದ್ದಾರೆ. ಮಾನ್ಯ ಸದಸ್ಯರು ನೋಡಿರುವುದಕ್ಕಿಂತ ಹೆಚ್ಚಿನ ಸ್ಪಷ್ಟೀಕರಣ ಕೊಡಲು ನನ್ನಿಂದ ಸಾಧ್ಯವಿಲ್ಲ.

**ಶ್ರೀ ಐವನ್ ಡಿ'ಸೋಜಾ:–** ಪತ್ರಿಕೆಯವರಿಗೆ ಒಳಗಡೆ ಅವಕಾಶವಿಲ್ಲ ಎಂದು ಸರ್ಕಾರ ಹೇಳಿಬಿಡಲಿ.

(ಗೊಂದಲ)

**ಶ್ರೀ ಯು.ಬಿ.ವೆಂಕಟೇಶ್:–** ವಿಧಾನ ಸಭೆಯಲ್ಲಿ ಮಾಧ್ಯಮದವರನ್ನು allow ಮಾಡಿರುವುದಿಲ್ಲ. ಅವರನ್ನು ನಮ್ಮಲ್ಲಿ allow ಮಾಡಿ.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಗಳೆ, ಮಾಧ್ಯಮದವರು, ಪ್ರೆಸ್‌ನವರು ಇಲ್ಲ ಅಂದರೆ ಹೇಗೆ? Freedom of press is a fundamental right. ಅವರ ಮೂಲಭೂತ ಹಕ್ಕನ್ನು ಕಸಿದುಕೊಂಡಂತಾಗುತ್ತದೆ. Some concern has to be given on this matter.

**ಸಭಾಪತಿಯವರು:–** ಸಭೆಯ ಮುಂದೆ ಇಡುವ ಕಾಗದ ಪತ್ರಗಳ ವಿಷಯ ಮುಗಿದ ಮೇಲೆ ಅದರ ಬಗ್ಗೆ ಮಾತನಾಡಲು ಅವಕಾಶ ಕೊಡಲಾಗುತ್ತದೆ. ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

**<u>03. ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು</u>**

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಮಾನ್ಯ ಮುಖ್ಯಮಂತ್ರಿಗಳ ಪರವಾಗಿ):–** ಮಾನ್ಯ ಸಭಾಪತಿಯವರೇ,

ಅ) ಭಾರತ ಸಂವಿಧಾನದ 151(2)ನೇ ಅನುಚ್ಛೇದದ ಮೇರೆಗೆ, ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು 31ನೇ ಮಾರ್ಚ್, 2018ಕ್ಕೆ ಕೊನೆಗೊಂಡ ವರ್ಷಕ್ಕೆ ನೀಡಿರುವ ರಾಜಸ್ವ ವಲಯದ ಮೇಲಿನ ವರದಿಯನ್ನು (ಸಂಖ್ಯೆ–1) ಸಭೆಯ ಮುಂದೆ ಮಂಡಿಸುತ್ತೇನೆ.

ಆ) ಭಾರತ ಸಂವಿಧಾನದ 151(2)ನೇ ಅನುಚ್ಛೇದದ ಮೇರೆಗೆ, ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು 31ನೇ ಮಾರ್ಚ್, 2018ಕ್ಕೆ ಕೊನೆಗೊಂಡ ವರ್ಷಕ್ಕೆ ನೀಡಿರುವ ಆರ್ಥಿಕ ವಲಯದ ಮೇಲಿನ ವರದಿಯನ್ನು (ಸಂಖ್ಯೆ–3) ಸಭೆಯ ಮುಂದೆ ಮಂಡಿಸುತ್ತೇನೆ.

ಇ) ಮಾನ್ಯ ಸದಸ್ಯರುಗಳಿಗೆ ಈಗಾಗಲೇ ಒದಗಿಸಲಾಗಿರುವ ಒಂದನೇ ಹಾಗೂ ಎರಡನೇ ಪಟ್ಟಿಯ ರೀತ್ಯಾ.

(ಮುಂದುವರೆದಿದೆ)

(113) 10-10-2019 (12-40) ಬಿಎಸ್‌ಡಿ–ಜಿಆರ್

4. <u>ನೂತನ ಸಚಿವರ ಪರಿಚಯ</u>

**ಶ್ರೀ ಲಕ್ಷಣ್ ಸಂಗಪ್ಪ ಸವದಿ (ಉಪ ಮುಖ್ಯಮಂತ್ರಿಗಳು):–** ಮಾನ್ಯ ಸಭಾಪತಿಯವರೇ, ನಾನು ಲಕ್ಷಣ್ ಸಂಗಪ್ಪ ಸವದಿಯಾಗಿದ್ದು, ಉಪ ಮುಖ್ಯಮಂತ್ರಿಯಾಗಿ ಕಾರ್ಯನಿರ್ವಹಿಸುತ್ತಿದ್ದೇನೆ. ನಾನು ಸಾರಿಗೆ ಮತ್ತು ಕೃಷಿ ಇಲಾಖೆಯ ಜವಾಬ್ದಾರಿಯನ್ನು ನಿರ್ವಹಿಸುತ್ತಿದ್ದು, ಮೊದಲನೆಯ ಬಾರಿಗೆ ಸದನಕ್ಕೆ ಆಗಮಿಸಿದ್ದು, ಎಲ್ಲರಿಗೂ ಶರಣುಗಳನ್ನು ಹೇಳಬಯಸುತ್ತೇನೆ.

**ಶ್ರೀ ಎಸ್.ಆರ್. ಪಾಟೀಲ್(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಮಂತ್ರಿಗಳ ಪರಿಚಯವನ್ನು ಬೇರೊಬ್ಬರು ಮಾಡಿಕೊಡಬೇಕು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಅವರೇ ಪರಿಚಯವನ್ನು ಮಾಡಿಕೊಳ್ಳಬಹುದು.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಸಭಾಪತಿಯವರು:–** ಮಾನ್ಯ ಸಭಾನಾಯಕರು ಪರಿಚಯವನ್ನು ಮಾಡಿಕೊಡಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಶ್ರೀ ಚಂದ್ರಕಾಂತಗೌಡ ಚನ್ನಪ್ಪಗೌಡ ಪಾಟೀಲರು ಗಣಿ ಮತ್ತು ಭೂ ವಿಜ್ಞಾನ ಹಾಗೂ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರನ್ನು ಸಭೆಗೆ ಪರಿಚಯಿಸುತ್ತಿದ್ದೇನೆ. ಮಾನ್ಯ ಹೆಚ್. ನಾಗೇಶ್ ರವರು ಅಬಕಾರಿ, ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು, ಮತ್ತು ಮಾನ್ಯ ಸುರೇಶ್ ಕುಮಾರ್ ರವರು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಸಕಾಲ ಹಾಗೂ ಕಾರ್ಮಿಕ ಸಚಿವರುಗಳ ಪರಿಚಯವನ್ನು ಸದನಕ್ಕೆ ಮಾಡಿಕೊಡುತ್ತಿದ್ದೇನೆ. ಮಾನ್ಯ ಲಕ್ಷ್ಮಣ ಸವದಿಯವರು ಈಗಾಗಲೇ ಪರಿಚಯವನ್ನು ಮಾಡಿಕೊಂಡಿದ್ದು, ನಾನು ಮತ್ತೊಮ್ಮೆ ಅವರ ಪರಿಚಯವನ್ನು ಮಾಡಿಕೊಡುತ್ತಿದ್ದೇನೆ.

**<u>5. ವಿತ್ತೀಯ ಕಾರ್ಯಕಲಾಪ</u>**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಯವರ ಪರವಾಗಿ ಭಾರತ ಸಂವಿಧಾನದ ೨೦೫(೧)(ಎ) ನೇ ಅನುಚ್ಛೇದದ ಮೇರೆಗೆ ೨೦೧೭–೧೮ನೇ ಸಾಲಿನ ಧನವಿನಿಯೋಗ ಹಾಗೂ ಹಣಕಾಸು ಲೆಕ್ಕಗಳು (ಸಂಪುಟ ೧ ಮತ್ತು ೨ನ್ನು) ಸಭೆಯ ಮುಂದಿಡುತ್ತೇನೆ.

**ಸಭಾಪತಿಯವರು:–** ಮಂಡಿಸಲಾಯಿತು.

**<u>6. ಸಭೆಯ ಮುಂದಿಡಲಾದ ಕಾಗದ ಪತ್ರಗಳು</u>**

**ಕಾರ್ಯದರ್ಶಿ(ಕ.ವಿ.ಪ):–** ಮಾನ್ಯ ಸಭಾಪತಿಯವರೇ, ಕಳೆದ ಅಧಿವೇಶನದಿಂದೀಚೆಗೆ ರಾಷ್ಟ್ರಪತಿ/ರಾಜ್ಯಪಾಲರಿಂದ ಒಪ್ಪಿಗೆ ಪಡೆದ ವಿಧೇಯಕಗಳ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

**ಸಭಾಪತಿಯವರು:–** ಈಗ ನಿಯಮ ೩೩೦ (ಎ) ಅಡಿಯಲ್ಲಿನ ವಿಷಯಗಳನ್ನು ಪ್ರಸ್ತಾಪಿಸಿ.

**ಶ್ರೀ ಎಸ್.ಆರ್. ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ನಾನು ನಿಲುವಳಿ ಸೂಚನೆ ಅಡಿಯಲ್ಲಿ ಪ್ರಸ್ತಾಪಿಸಲು ಅವಕಾಶ ಕೋರಿ ಒಂದು ವಿಷಯವನ್ನು ತಮಗೆ ಕಳುಹಿಸಿಕೊಟ್ಟಿದ್ದೆನು.

**ಶ್ರೀ ಐವನ್ ಡಿ'ಸೋಜಾ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಟಿ.ವಿ. ಮಾಧ್ಯಮಗಳ .....

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಈಗ ವರದಿಗಳನ್ನೊಪ್ಪಿಸುವುದು.

**7. ವರದಿಗಳನ್ನೊಪ್ಪಿಸುವುದು**

**ಶ್ರೀ ಆರ್.ಧರ್ಮಸೇನ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಕರ್ನಾಟಕ ವಿಧಾನ ಮಂಡಲದ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿಯ ೨೦೧೮–೧೯ನೇ ಸಾಲಿನ ೨ನೇ ವರದಿಯನ್ನು ಮಂಡಿಸುತ್ತಿದ್ದೇನೆ.

**ಶ್ರೀ ಎಂ.ಕೆ. ಪ್ರಾಣೇಶ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಕರ್ನಾಟಕ ವಿಧಾನ ಮಂಡಲದ ಸ್ಥಳೀಯ ಸಂಸ್ಥೆಗಳ ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ ಸಮಿತಿಯ ೨೮ (ಅನುಪಾಲನಾ) ವರದಿಯನ್ನು ಮಂಡಿಸುತ್ತಿದ್ದೇನೆ.

**ಸಭಾಪತಿಯವರು:–** ವರದಿಗಳನ್ನೊಪ್ಪಿಸಲಾಯಿತು.

**ಶ್ರೀ ಐವನ್ ಡಿ'ಸೋಜಾ(ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಟಿ.ವಿ. ಮಾಧ್ಯಮಗಳ ನಿಷೇಧದ ಬಗ್ಗೆ ಕ್ಲಾರಿಫಿಕೇಷನ್ ಕೊಡಬೇಕು.

**ಸಭಾಪತಿಯವರು:–** ವಿಶೇಷ ಪ್ರಸ್ತಾವದಲ್ಲಿ ಮಾನ್ಯ ಐವನ್ ಡಿ'ಸೋಜಾರವರ ವಿಷಯವೂ ಇದೆ.

**ಶ್ರೀ ಐವನ್ ಡಿ'ಸೋಜಾ:–** ಹೌದು.

(ಮುಂದು)

(114) 10.10.2019 : 12.50 : ಪಿಕೆ–ಜಿಆರ್

**8. ವಿಶೇಷ ಪ್ರಸ್ತಾವಗಳು**

**ಅ) ಬೀದಿಯಲ್ಲಿ ವಾಸಿಸುತ್ತಿರುವ ಜನರಿಗೆ ತಂಗುದಾಣ ನಿರ್ಮಿಸಿ ಕೊಡುವುದರ ಬಗ್ಗೆ.**

– – – –

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿ (ಪದವೀಧರ ಕ್ಷೇತ್ರ):-**ಮಾನ್ಯ ಸಭಾಪತಿಯವರೇ, ಅಕ್ಟೋಬರ್ ೧೦ನ್ನು ವಿಶ್ವ ಜಾಗತಿಕ ವಸತಿರಹಿತರ ದಿನವನ್ನಾಗಿ ಆಚರಿಸಲಾಗುತ್ತಿದೆ. ಇದು ಕೇವಲ ಆಚರಣೆಗೆ ಸೀಮಿತವಾಗಿದ್ದು, ಕಾರ್ಯರೂಪಕ್ಕೆ ತರುವಂತಹ ಇಚ್ಛಾಶಕ್ತಿಯ ಕೊರತೆ ಕಾಣುತ್ತಿದೆ. ಜನರಿಂದ-ಜನರಿಗಾಗಿ-ಜನರಿಗೋಸ್ಕರ ಅಸ್ತಿತ್ವಕ್ಕೆ ಬಂದ ಪ್ರಜಾಪ್ರಭುತ್ವ ಸರ್ಕಾರವು ಈ ವಿಷಯದಲ್ಲಿ ಜಾಣ ಕುರುಡು ಆಗಿರುವುದು ದುರಾದೃಷ್ಟಕರ.

ಇಂದಿನ ದಿನಪತ್ರಿಕೆ ವಿಜಯವಾಣಿಯ ಪುಟ ಸಂಖ್ಯೆ-೩ರಲ್ಲಿ ವರದಿಯಾಗಿರುವಂತೆ "೫೦೦೦ ಜನರು ಬೀದಿಪಾಲು" ಎಂಬ ಶೀರ್ಷಿಕೆ ಪ್ರಕಟವಾಗಿರುವಂತೆ ಜಗತ್ತಿನ ಅಷ್ಟೂ ಸೌಕರ್ಯಗಳನ್ನು ಹಾಸು-ಹೊದ್ದು ಮಲಗಿರುವ ಸಿಲಿಕಾನ್ ಸಿಟಿ ಬೆಂಗಳೂರಿನಲ್ಲಿ ೫೦೦೦ಕ್ಕಿಂತ ಅಧಿಕ ಜನರು ಬೀದಿಯಲ್ಲಿಯೇ ವಾಸಿಸುತ್ತಿದ್ದಾರೆ. ಸರಿಯಾದ ಊಟವಿಲ್ಲದೆ, ಮಲಗಲು ಜಾಗವಿಲ್ಲದೆ ಅತ್ಯಂತ ದಯನೀಯ ಸ್ಥಿತಿಯಲ್ಲಿ ಜೀವನ ದೂಡುತ್ತಿದ್ದಾರೆ.

ಪಾದಚಾರಿ ಮಾರ್ಗ, ಧಾರ್ಮಿಕ ಕೇಂದ್ರಗಳ ಆವರಣ, ಉದ್ಯಾನಗಳು, ಫ್ಲೈಓವರ್ ಕೆಳ ಭಾಗದಲ್ಲಿ ಕಾಮಗಾರಿಗೆ ಇಟ್ಟ ಪೈಪುಗಳಲ್ಲಿ ಜೀವನ ನಡೆಸುತ್ತಿದ್ದಾರೆ. ಉದ್ಯೋಗ ಅರಸಿ ಬಂದವರು ಭಿಕ್ಷುಕರು ಹಾಗೂ ಅನಾರೋಗ್ಯ ಪೀಡಿತರು, ಕುಟುಂಬದಿಂದ ಹೊರದಬ್ಬಿಸಿಕೊಂಡ ವೃದ್ಧರು, ಮನೆ ಬಿಟ್ಟು ಬಂದವರು ಮಲಗಲು ಜಾಗವಿಲ್ಲದೆ ಚಳಿ, ಮಳೆ, ಗಾಳಿ, ಅರೆ ಹಸಿವಿನಿಂದ ಕಂಗೆಟ್ಟವರು ವಸತಿ ಇಲ್ಲದೇ ಜೀವನ ನಡೆಸುತ್ತಿರುವುದನ್ನು ನೋಡಿದಾಗ ನಿಜಕ್ಕೂ ಮನ ಕಲಕುತ್ತದೆ.

ಮಾನ್ಯ ಸರ್ವೋಚ್ಚ ನ್ಯಾಯಾಲಯವು ೨೦೧೦ರಲ್ಲಿ ೧ ಲಕ್ಷಕ್ಕಿಂತ ಹೆಚ್ಚು ಜನಸಂಖ್ಯೆ ಇರುವ ಎಲ್ಲಾ ನಗರಗಳಲ್ಲೂ ತಂಗುದಾಣ ನಿರ್ಮಿಸಬೇಕೆಂದು ನಿರ್ದೇಶನ ನೀಡಿರುತ್ತದೆ. ಆದರೆ ೧ ಕೋಟಿಗೂ ಹೆಚ್ಚು ಜನಸಂಖ್ಯೆ ಹೊಂದಿರುವ ಬೆಂಗಳೂರಿನಲ್ಲಿ ೧೦೨ ತಂಗುದಾಣ ಇರಬೇಕಾದ ಜಾಗದಲ್ಲಿ ಕೇವಲ ೭ ತಂಗುದಾಣಗಳು ಇರುವುದು ನಮಗೆ ನೋವು ತರಿಸುವ ವಿಷಯವಾಗಿದೆ. ಸರ್ಕಾರವು ಈ ವಿಚಾರದಲ್ಲಿ ತುರ್ತು ಗಮನಹರಿಸಿ, ತಂಗುದಾಣಗಳನ್ನು ನಿರ್ಮಿಸಿ ಇಂತಹ ಜನರಿಗೆ ಆಶ್ರಯವನ್ನು ನೀಡಬೇಕೆಂದು ಈ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-**ಮಾನ್ಯ ಸಭಾಪತಿಯವರೇ, ಮಾನ್ಯ ಚೌಡರೆಡ್ಡಿ ತೂಪಲ್ಲಿಯವರು ಮಂಡಿಸಿರುವ ವಿಶೇಷ ಪ್ರಸ್ತಾವನೆಗೆ ಸಂಬಂಧಪಟ್ಟಂತೆ ಮಾನ್ಯ ಮಂತ್ರಿಗಳಿಂದ ನಾಳೆ ಉತ್ತರ ಕೊಡಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್.ಪಾಟೀಲ್:**-ಇದು ಅಲ್ಪಾವಧಿ ಅಧಿವೇಶನ ಆಗಿರುವುದರಿಂದ ಬೇಗ ಉತ್ತರ ಕೊಡಿಸಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:**-ನಾಳೆ ಉತ್ತರ ಕೊಡಿಸುತ್ತೇನೆ.

**ಆ) ಮಂಗಳೂರು ಮಹಾನಗರ ಪಾಲಿಕೆಗೆ ಚುನಾವಣೆ ಮೂಲಕ ಚುನಾಯಿತ ಆಡಳಿತ ಮಂಡಳಿಯನ್ನು ಅಸ್ತಿತ್ವಕ್ಕೆ ತರುವ ಬಗ್ಗೆ.**

- - - -

**ಶ್ರೀ ಐವನ್ ಡಿ'ಸೋಜಾ (ನಾಮನಿರ್ದೇಶಿತರು):**-ಮಾನ್ಯ ಸಭಾಪತಿಯವರೇ, ಮಂಗಳೂರು ಮಹಾನಗರ ಪಾಲಿಕೆಯ ಚುನಾಯಿತ ಆಡಳಿತ ಮಂಡಳಿಯ ಅವಧಿ ದಿನಾಂಕ ೧೭.೩.೨೦೧೯ಕ್ಕೆ ಮುಕ್ತಾಯಗೊಂಡಿದ್ದು, ಅ ದಿನದಿಂದ ಆಡಳಿತಾಧಿಕಾರಿ ನೇಮಕಗೊಂಡು ೭ ತಿಂಗಳುಗಳು ಕಳೆದಿದ್ದು, ಅಭಿವೃದ್ಧಿ ಕಾಮಗಾರಿಗಳು ಸಂಪೂರ್ಣವಾಗಿ ಸ್ಥಗಿತಗೊಂಡು ಯಾವುದೇ ಹೊಸ ಯೋಜನೆಗಳು ಕಾರ್ಯಗತಗೊಂಡಿರುವುದಿಲ್ಲ. ತೆರಿಗೆ ವಸೂಲಾತಿ ಕುಂಠಿತಗೊಂಡಿದೆ. ಸ್ಮಾರ್ಟ್ ಸಿಟಿ ಅಭಿವೃದ್ಧಿ ಸಂಪೂರ್ಣ ನಿರ್ಲಕ್ಷ್ಯಕ್ಕೊಳಗಾಗಿದ್ದು, ನಗರ ಅಭಿವೃದ್ಧಿಯಾಗದೇ ಸಾರ್ವಜನಿಕ ಹಣ ಪೋಲಾಗುತ್ತಿದೆ.

ಕರ್ನಾಟಕ ಉಚ್ಚನ್ಯಾಯಾಲಯವು ರಿಟ್ ಪಿಟಿಷನ್ ಸಂ.೩೩೦೫೬/೨೦೧೯, ಪಿಐಎಲ್‌ನಲ್ಲಿ ಆದೇಶವನ್ನು ನೀಡಿ, ಚುನಾವಣೆಯನ್ನು ದಿನಾಂಕ ೩೧.೧೦.೨೦೧೯ರೊಳಗೆ ನಡೆಸಿ, ದಿನಾಂಕ ೧೫.೧೧.೨೦೧೯ರೊಳಗೆ ಫಲಿತಾಂಶ ಪ್ರಕಟಿಸಬೇಕು ಹಾಗೂ ಚುನಾಯಿತ ಮಂಡಳಿ ಕೂಡಲೇ ಅಸ್ತಿತ್ವಕ್ಕೆ ಬರಬೇಕೆಂದು ನಿರ್ದೇಶನ ನೀಡಿದ್ದರೂ, ಚುನಾವಣ ಆಯೋಗ ಈವರೆವಿಗೂ ಚುನಾವಣೆ ನಡೆಸದೇ ನ್ಯಾಯಾಲಯದ ಆದೇಶವನ್ನು ಪಾಲಿಸದಿರುವುದರಿಂದ, ಸರ್ಕಾರ ಕೂಡಲೇ ಈ ಬಗ್ಗೆ ಕ್ರಮ ಕೈಗೊಂಡು ಉಚ್ಚನ್ಯಾಯಾಲಯದ ಆದೇಶದಂತೆ ಚುನಾವಣಾ ದಿನಾಂಕ ಘೋಷಿಸಿ, ಚುನಾಯಿತ ಆಡಳಿತ ಮಂಡಳಿಯನ್ನು ಅಸ್ತಿತ್ವಕ್ಕೆ ತಂದು ಅಭಿವೃದ್ಧಿಗೆ ಚಾಲನೆ ನೀಡಬೇಕೆಂದು ವಿಶೇಷ ಪ್ರಸ್ತಾವನೆ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):**-ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ನಿಯಮ ೩೩೦ಎ ಅಡಿ ಮಂಡಿಸಿದಂತಹ ವಿಷಯದ ಬಗ್ಗೆ ನಾಳೆ ನಗರಾಭಿವೃದ್ಧಿ ಸಚಿವರಿಂದ ಉತ್ತರ ಕೊಡಿಸುತ್ತೇನೆ.

**೨. ನಿಯಮ 59ರ ಮೇರೆಗೆ ನಿಲುವಳಿ ಸೂಚನೆ ಮಂಡಿಸಲು ಅನುಮತಿ ಕೋರಿ ಪ್ರಸ್ತಾವ**

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ವಿಷಯ: ರಾಜ್ಯದಲ್ಲಿ ಭಾರಿ ಮಳೆ ಮತ್ತು ಪ್ರವಾಹದಿಂದಾಗಿ ಉಂಟಾಗಿರುವ ಅನಾಹುತದಿಂದ ಸಂಕಷ್ಟಕ್ಕೀಡಾಗಿರುವ ಜನರಿಗೆ ಪರಿಹಾರ ಒದಗಿಸುವಲ್ಲಿ ಸರ್ಕಾರವು ವಿಫಲವಾಗಿರುವ ಬಗ್ಗೆ.**

– – – –

**ಶ್ರೀ ಎಸ್.ಅರ್.ಪಾಟೀಲ್(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಇದು ಬಹಳ ಗಂಭೀರವಾದಂತಹ ಮತ್ತು ಸಾರ್ವಜನಿಕ ಹಿತಾಸಕ್ತಿಯನ್ನು ಹೊಂದಿದಂತಹ ವಿಚಾರವಾಗಿದೆ. „ಎಂದೂ ಕಂಡರಿಯದಂತಹ, ಕೇಳರಿಯಂತಹ, ದೊಡ್ಡ ಪ್ರಮಾಣದಲ್ಲಿ ಮಳೆಯಾಗಿ, ಎಲ್ಲಾ ಜಲಾಶಯಗಳು ತುಂಬಿ, ನಿರೀಕ್ಷೆಗೆ ಮೀರಿ ೧೦ ಪಟ್ಟು, ೧೦೦ ಪಟ್ಟು ಹೆಚ್ಚು ಕ್ಯೂಸೆಕ್ಸ್ ನೀರು ಹರಿದು ಲಕ್ಷಾಂತರ ಮನೆಗಳು ಕೊಚ್ಚಿಕೊಂಡು ಹೋಗಿವೆ: ೯೦ಕ್ಕಿಂತ ಹೆಚ್ಚು ಜನ ಜೀವ ಕಳೆದುಕೊಂಡಿದ್ದಾರೆ. ಆಗಸ್ಟ್ ೩ನೇ ದಿನಾಂಕದಿಂದ ಆಗಸ್ಟ್ ೧೦ನೇ ದಿನಾಂಕದವರೆಗೆ, ೧೧೮ ವರ್ಷಗಳಲ್ಲೇ ಕೇಳರಿಯದಂತಹ, ಕಂಡರಿಯದಂತಹ ಪ್ರಮಾಣದಲ್ಲಿ ಮಳೆಯಾಗಿದೆ. ಎರಡೂವರೆ ಲಕ್ಷ ಮನೆಗಳಿಗೆ ಹಾನಿಯಾಗಿವೆ. ಅವುಗಳಲ್ಲಿ ೧ ಲಕ್ಷ ೮೦ ಸಾವಿರ ಮನೆಗಳು ಸಂಪೂರ್ಣ ನಾಶವಾಗಿವೆ. ಇವು ಸರ್ಕಾರವೇ ಕೊಟ್ಟಿರುವಂತಹ ಅಂಕೆ–ಸಂಖ್ಯೆಗಳಾಗಿವೆ. ೨೨ ಜಿಲ್ಲೆಗಳ ೧೦೩ ತಾಲ್ಲೂಕುಗಳಲ್ಲಿ ಈ ಮಹಾಪೂರದಿಂದ, ನೆರೆ ಹಾವಳಿಯಿಂದ ಜನ–ಜಾನುವಾರುಗಳು ಕಂಗಾಲಾಗಿವೆ. ಲಕ್ಷಾಂತರ ಜನ ಮನೆ–ಮಠ, ಆಸ್ತಿ–ಪಾಸ್ತಿಗಳನ್ನು ಕಳೆದುಕೊಂಡು ನಿರ್ಗತಿಕರಾಗಿ ಗಂಜಿ ಕೇಂದ್ರಗಳಲ್ಲಿ ಅಥವಾ ಕಾಳಜಿ ಕೇಂದ್ರಗಳಲ್ಲಿ ಜನ ಇದ್ದಾರೆ. ಅ ಗಂಜಿ ಕೇಂದ್ರಗಳಲ್ಲಿ ತಮ್ಮ ಮಕ್ಕಳ ಜೊತೆ ಇದ್ದಾರೆ. ೧೯೫ ಗ್ರಾಮಗಳೇನು ಮುಳುಗಿವೆಯೋ ಆ ಜನ ಗಂಜಿ ಕೇಂದ್ರ ಅಥವಾ ಕಾಳಜಿ ಕೇಂದ್ರಗಳಲ್ಲಿ ಇಲ್ಲ; ಅವರು ರಸ್ತೆ ಪಕ್ಕದಲ್ಲಿ ಗುಡಿಸಲುಗಳನ್ನು ಹಾಕಿಕೊಂಡಿದ್ದಾರೆ. ಗುಡಿಸಲುಗಳಿಗೆ ಟಾರ್ಪಾಲ್‌ಗಳು ಸಿಗದೇ ಇರುವುದರಿಂದ ಹೆಣ್ಣು ಮಕ್ಕಳು ತಮ್ಮ ಹಳೆ ಸೀರೆಗಳನ್ನು ಹೊದಿಸಿದ್ದಾರೆ. ಯಾವುದಾದರೂ ಒಂದು ವಾಹನ ಸ್ವಲ್ಪ ಎಡವಿದರೆ ಈ ಗುಡಿಸಲುಗಳ ಮೇಲೆ ಹರಿದು ಹೋಗುವ ಸಾಧ್ಯತೆ ಇರುತ್ತದೆ. ನಿರಾಶ್ರಿತರಿಗೆ ತಾತ್ಕಾಲಿಕ ಶೆಡ್‌ಗಳ ನಿರ್ಮಾಣ ಮಾಡಿಕೊಡಬೇಕೆಂದು ನಾವು ಸಾಕಷ್ಟು ಸಲ ಕೇಳಿಕೊಂಡಿದ್ದೇವೆ. ಮಾನ್ಯ ಪಾಟೀಲ್‌ರವರ ಕ್ಷೇತ್ರವಾದ ಕೊನ್ನೂರಿಗೆ ಹೋಗಿದ್ದಾಗ ಕೆಲವು ಮಹಿಳೆಯರು, ನಾವು ಇಲ್ಲಿರುವುದರ ಬದಲು ನೀರಿನಲ್ಲಿ ಕೊಚ್ಚಿಕೊಂಡು ಹೋಗಿದ್ದರೆ ಚೆನ್ನಾಗಿರುತ್ತಿತ್ತು ಎನ್ನುವ ಮಾತನ್ನು ಹೇಳಿದರು. ಸಂಬಂಧಪಟ್ಟ ಅಧಿಕಾರಿಗಳು ಇದರ ಬಗ್ಗೆ ಕಾಳಜಿ ತೆಗೆದುಕೊಂಡಿಲ್ಲ ಎಂದು ಹೇಳುವುದಕ್ಕೆ ಹೋಗುವುದಿಲ್ಲ. ಮಾನ್ಯ ಸಭಾಪತಿಯವರೇ, ೨೨ ಲಕ್ಷ ೨೦ ಸಾವಿರ ಎಕರೆ ಭೂಮಿಯಲ್ಲಿದ್ದಂತಹ ಕೃಷಿ, ತೋಟಗಾರಿಕೆ, ರೇಷ್ಮೇ ಬೆಳೆಗಳು ಸಂಪೂರ್ಣವಾಗಿ ನೀರಿನಲ್ಲಿ ಕೊಚ್ಚಿಕೊಂಡು ಹೋಗಿವೆ. ವಿಶೇಷವಾಗಿ ಬೆಳಗಾವಿ ಮತ್ತು ಇತರ ಉತ್ತರ ಕರ್ನಾಟಕದ ಭಾಗದ ಹೆಚ್ಚು ಕಬ್ಬು ಬೆಳೆಯುವ ಪ್ರದೇಶಗಳು ಸಂಪೂರ್ಣ ಮುಳುಗಿ ಹೋಗಿವೆ. ಕಬ್ಬಿನ ಬೆಳೆಯ ಮೇಲೆ ಸುಮಾರು ೧೦ ರಿಂದ ೧೫ ಅಡಿ ನೀರು ನಿಂತಿದೆ. ಅದರ ಮೇಲೆ ಬೋಟ್ ತೆಗೆದುಕೊಂಡು ಹೋಗಿ ಅಡ್ಡಾಡುವಂತಹ ಪರಿಸ್ಥಿತಿ ಅಲ್ಲಿ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ನಿರ್ಮಾಣವಾಗಿದೆ. ಬೀಳಗಿ ತಾಲ್ಲೂಕಿನ ಮುನುಗ್ನೂರು ಗ್ರಾಮದ ಸರ್ವೆ ನಂಬರ್ ೧ ರಿಂದ ೧೦೦ರವರೆಗಿನ ಪ್ರದೇಶದಲ್ಲಿ ಬೆಳೆ ಇದ್ದ ಕಬ್ಬಿನ ಮೇಲೆ ೧೦ ರಿಂದ ೧೫ ಅಡಿ ನೀರು ನಿಂತಿದೆ. ಅಲ್ಲಿ ಬೋಟ್ ಮೇಲೆ ಓಡಾಡುವ ಪರಿಸ್ಥಿತಿ ಇದೆ. ಸುಮಾರು ೨೫ ಲಕ್ಷ ಎಕರೆ ಜಾಗದಲ್ಲಿ ಬೆಳೆದಿರುವಂತಹ ಬೆಳೆಗಳು ಸರ್ವನಾಶವಾಗಿದೆ. ಮಾನ್ಯ ಸಭಾಪತಿಯವರೇ, ದಾಳಿಂಬೆ ಗಿಡಗಳ ಮೇಲೆ ೧೦ ಅಡಿ ನೀರು ನಿಂತರೆ ದಾಳಿಂಬೆ ಒಣಗಿ ಹೋಗುತ್ತದೆ. ಎಸ್.ಡಿ.ಆರ್.ಎಫ್., ಎನ್.ಡಿ.ಆರ್.ಎಫ್., ನಾರ್ಮ್ಸ್ ಪ್ರಕಾರ ಆ ವರ್ಷದಲ್ಲಿ ಎಷ್ಟು ಬೆಳೆ ಹಾನಿಯಾಗಿದೆಯೋ ಅಷ್ಟು ಮಾತ್ರ ಹಣ ಕೊಡುತ್ತಾರೆ. ಗಿಡಗಳು ಒಣಗಿ ಹೋದಾಗ ರೈತ uproot ಮಾಡಿ, replant ಮಾಡಬೇಕಾಗುತ್ತದೆ. ನಂತರ ಆತ ೩ ವರ್ಷ ಕಾಯಬೇಕಾಗುತ್ತದೆ. ೧ ಹೆಕ್ಟೇರ್ ಪ್ರದೇಶದಲ್ಲಿ ಹಾಕಿದ ದಾಳಿಂಬೆ ನಾಶವಾದರೆ ಎಸ್.ಡಿ.ಆರ್.ಎಫ್., ಎನ್.ಡಿ.ಆರ್.ಎಫ್., ನಾರ್ಮ್ಸ್ ಪ್ರಕಾರ ಸುಮಾರು ರೂ. ೧೩,೦೦೦ ಕೊಡುತ್ತಾರೆ. ಮಾನ್ಯ ಸಭಾಪತಿಯವರೇ, ಈ ನಾರ್ಮ್ಸ್‌ಗಳನ್ನು ಯಾವುದೋ ಓಬಿರಾಯನ ಕಾಲದಲ್ಲಿ ಮಾಡಿರುವಂಥದ್ದು. ಆ ಹಣ ಯಾವುದಕ್ಕೂ ಸಾಕಾಗುವುದಿಲ್ಲ.

(ಮುಂದು...)

(115) 10-10-2019 1.00 ಡಿಎಸ್-ಎಂಡಿ
**ಶ್ರೀ ಎಸ್.ಆರ್.ಪಾಟೀಲ್(ಮುಂದು)**

ಇವತ್ತು ಆ ಜನರು ಅತ್ಯಂತ ಶೋಚನೀಯ ಸ್ಥಿತಿಯಲ್ಲಿದ್ದಾರೆ. ಎಲ್ಲಾ ತೋಟಗಾರಿಕೆ ಬೆಳೆಗಳನ್ನು uproot ಮಾಡಿ ಮತ್ತೆ re-planting ಮಾಡಬೇಕು. ಇದನ್ನು ಅಧ್ಯಯನ ಮಾಡುವುದಕ್ಕೆ Central Government Team ಬಂದಿತ್ತು. ನಾವು ಅವರ ಜೊತೆ ಬಹಳ ಕೂಲಕುಂಷವಾಗಿ ಚರ್ಚೆ ಮಾಡಿದ್ದೇವೆ. ಅವರು ಇದರ ಬಗ್ಗೆ ಆಳವಾಗಿ ಅಧ್ಯಯನ ಮಾಡಿ ತೋಟಗಾರಿಕೆ ಬೆಳೆ ಏನು ನಾಶವಾಗಿವೆ ಅವುಗಳನ್ನು re-plant ಮಾಡಬೇಕು. re-plant ಮಾಡಿದ ಮೇಲೆಯೂ ಮೂರ್‍ನಾಲ್ಕು ವರ್ಷ ಕಾಯಬೇಕು, ಆಮೇಲೆ ರೈತನ ಸ್ಥಿತಿಗತಿಗಳ ಬಗ್ಗೆ ನಾವು ವಿಚಾರ ಮಾಡಿ ಅವರಿಗೆ ವಿಧಿವತ್ತಾಗಿ ಹೇಳಬೇಕು. 22,000 ಕಿಲೋಮೀಟರ್ ರಸ್ತೆಗಳು ಹಾಳಾಗಿವೆ. ಅವುಗಳು State Highway ಇರಬಹುದು, Major District Road (MDR) or Village Road ಇರಬಹುದು, ಅಷ್ಟೇ ಅಲ್ಲದೆ 10,988 ಕಟ್ಟಡಗಳು ನಾಶವಾಗಿವೆ. ಅದರಲ್ಲಿ PHC (Primary Health Centre) ಇರಬಹುದು, ಅಂಗನವಾಡಿ ಕೇಂದ್ರಗಳಿರಬಹುದು, ಶಾಲಾ ಕಟ್ಟಡಗಳಿರಬಹುದು, ಪಂಚಾಯಿತಿ ಕಟ್ಟಡಗಳಿರಬಹುದು, ಶಾಲಾ ಕಟ್ಟಡ ಇಲ್ಲದೇ ಬಹಳಷ್ಟು ಗ್ರಾಮಗಳಲ್ಲಿ ಶಾಲೆಗಳೇ ಪ್ರಾರಂಭವಾಗಿಲ್ಲ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಸರ್ಕಾರದಲ್ಲಿ ಏನು ಗೊಂದಲಗಳಿಲ್ಲ. ಅವರು ಏನು ಹೇಳುತ್ತಾರೆಯೋ ಅದನ್ನೆಲ್ಲಾ ತಾಳ್ಮೆಯಿಂದ ಕೇಳಿ ಉತ್ತರ ಕೊಡುವುದಕ್ಕೆ ಸರ್ಕಾರಕ್ಕೆ ಜವಾಬ್ದಾರಿ ಇದೆ. ನಿಯಮ 59 ರಡಿಯಲ್ಲಿ ನಿಲುವಳಿ ಸೂಚನೆಯನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಮಂಡಿಸಿದ್ದಾರೆ. ನಾನು ಏಕೆ ಇದನ್ನು ಮಂಡಿಸುತ್ತಿದ್ದೇನೆ, ಏನು ತುರ್ತು ಅವಶ್ಯಕತೆಗಳಿವೆ ಎಂಬುದನ್ನು ಪ್ರಾಥಮಿಕವಾಗಿ ಮನವರಿಕೆ ಮಾಡಿಕೊಡುತ್ತಿದ್ದಾರೆ. ಎಲ್ಲವನ್ನು ವಿಸ್ತೃತವಾಗಿ ಚರ್ಚೆ ಮಾಡುವುದಕ್ಕೆ ತಾವು ಈ ವಿಷಯವನ್ನು ನಿಯಮ 68ಕ್ಕೆ ಪರಿವರ್ತನೆ ಮಾಡಿ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಿ ಎಂದು ಕೇಳಿಕೊಳ್ಳುತ್ತಿದ್ದೇನೆ. ಇದರ ಬಗ್ಗೆ ಸರ್ಕಾರ ಉತ್ತರ ಕೊಡುವುದಕ್ಕೆ ತಯಾರಿದೆ. ಪ್ರಾಥಮಿಕವಾಗಿ ಚರ್ಚೆ ಮಾಡುವುದಕ್ಕೆ ತಾವು ಸಾಮಾನ್ಯವಾಗಿ ಹತ್ತು ನಿಮಿಷ ಕಾಲಾವಕಾಶವನ್ನು ಕೊಟ್ಟಿರುತ್ತೀರಿ. ತಾವು ಅಷ್ಟೇ ಕಾಲಾವಕಾಶವನ್ನು ಸೀಮಿತಗೊಳಿಸಿದರೆ ನಂತರ ನಿಯಮ 68ರ ಅಡಿಯಲ್ಲಿ ವಿಸ್ತೃತವಾಗಿ ಚರ್ಚೆ ಮಾಡುವುದಕ್ಕೆ ಅವಕಾಶಗಳು ಸಿಗುತ್ತದೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ನಾನು ಆ ಸ್ಥಾನದಲ್ಲಿ ಕುಳಿತು ಮೂರು ವರ್ಷ ಕೆಲಸ ಮಾಡಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುವುದನ್ನು ನಾವು ತಾಳ್ಮೆಯಿಂದ ಕೇಳುತ್ತೇವೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, this subject should be taken for discussion on top priority. ಎಲ್ಲಾ ಕಲಾಪಗಳನ್ನು ಬದಿಗೊತ್ತಿ ಏಕೆ ಈ ವಿಷಯವನ್ನು ತೆಗೆದುಕೊಳ್ಳಬೇಕು, ಇದರಲ್ಲಿ ಸಾರ್ವಜನಿಕ ಹಿತಾಸಕ್ತಿ ಏನಿದೆ ಎಂಬುದನ್ನು ಹೇಳಬೇಕಲ್ಲವೇ? ನೆರೆ ಹಾವಳಿಯಿಂದ ಹಾನಿಯಾಗಿದೆ. ಇದನ್ನು ನಿಯಮ 59 ರಡಿಯಲ್ಲಿ ತೆಗೆದುಕೊಳ್ಳಿ ಎಂದು ಕೇಳಿಕೊಳ್ಳುತ್ತಿದ್ದೇವೆ. I am telling the bare minimum things.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಅವರು ಮಾತನಾಡುವುದನ್ನು ನಾನು ಸ್ವಾಗತಿಸುತ್ತೇನೆ. ಇದರಲ್ಲಿ ನನ್ನ ಆಕ್ಷೇಪ ಏನೂ ಇಲ್ಲ. ಅವರು ಪ್ರಾಥಮಿಕವಾಗಿ ಕೊಡುವಂತಹ ಮಾಹಿತಿಯನ್ನು ಮಾತ್ರ ಹೇಳಲಿ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಬಿಜೆಪಿಯವರೇ ಏನೇನು ಮಾತನಾಡಿದ್ದಾರೆ ಎಂಬುದು ಮಾನ್ಯ ಸಭಾನಾಯಕರ ಗಮನಕ್ಕೆ ಬಂದಿದೆಯೋ ಏನೋ ಗೊತ್ತಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದ ನಾಯಕರು ಮಾತನಾಡುವುದನ್ನು ಸರ್ಕಾರ ತಾಳ್ಮೆಯಿಂದ ಕೇಳುತ್ತದೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಇವತ್ತು ಬಿಜೆಪಿಯಲ್ಲಿರುವವರು ಕೇಂದ್ರದ ಮಂತ್ರಿಯಾಗಿದ್ದಂಥವರು, ಇವತ್ತು ಹಾಲಿ ಶಾಸಕರಾಗಿರುವಂಥವರು ಯಾವ ರೀತಿ ಮಾತನಾಡಿದ್ದಾರೆಂಬುದರ ಬಗ್ಗೆ ಅವರು ಗಮನಹರಿಸಲಿ. ಈಗ ನಾವೇನಾದರೂ ಹೇಳಿದರೆ ವಿರೋಧ ಪಕ್ಷದವರು ಹೇಳಿದರು ಎಂದು ಹೇಳುತ್ತಾರೆ, ಆದರೆ ಆಡಳಿತ ಪಕ್ಷದ ಶಾಸಕರೆ ಹೇಳಿರುವ ಅನೇಕ ದೃಷ್ಟಾಂತಗಳು ಅವರ ಕಣ್ಣೆದುರಿಗಿವೆ.

ಮಾನ್ಯ ಸಭಾಪತಿಯವರೇ, ಇವತ್ತು 10,988 ಸರ್ಕಾರಿ ಕಟ್ಟಡಗಳು, PHC (Primary Health Centre) ಇರಬಹುದು, ಅದರಲ್ಲಿ ಅಂಗನವಾಡಿ, ಶಾಲೆಗಳು ಇರಬಹುದು. ಮಕ್ಕಳು ಶಾಲೆಗೆ ಹೋಗುವುದಕ್ಕೆ ಇನ್ನು ತಯಾರಿಲ್ಲ. ಎಲ್ಲಾ ಶಾಲಾ ಕೊಠಡಿಗಳು ನೀರಿನಲ್ಲಿ ಮುಳುಗಿ ಹಾಳಾಗಿದೆ ಮತ್ತು ಕೆಲವು ಬಿದ್ದು ಹೋಗಿವೆ. ಈಗಿರುವ ಸ್ಥಿತಿಯಲ್ಲಿ ಮಕ್ಕಳು ಶಾಲೆಗೆ ಹೋದರೆ ನಾಳೆ ಛಾವಣಿಗಳು ಬಿದ್ದರೆ ಮಕ್ಕಳ ಗತಿ ಏನು? ಅಲ್ಲಿ ಹೃದಯವಿದ್ರಾವಕ ಘಟನೆಗಳು ಜರುಗುತ್ತವೆ. ಬಹಳಷ್ಟು ಕಡೆ ಶಾಲೆಗಳು ಕೂಡ ಪ್ರಾರಂಭವಾಗಿಲ್ಲ. 2913 bridges and culverts ಕಿತ್ತುಕೊಂಡು ಹೋಗಿಬಿಟ್ಟಿವೆ, ಅವುಗಳು ನಾಮಾವಶೇಷಗಳಾಗಿವೆ. ಎಲ್ಲಕ್ಕಿಂತ ಮುಖ್ಯವಾಗಿ ವಿದ್ಯುತ್ ಕಂಬಗಳು ಬಿದ್ದು ಹೋಗಿವೆ. ಕಂಬಗಳು, conductor wires ಹಾಳಾಗಿವೆ, 14,098 ಟ್ರಾನ್ಸ್‌ಫಾರ್ಮರ್‌ಗಳು ನೀರಿನಲ್ಲಿ ಮುಳುಗಿ ಹಾಳಾಗಿವೆ. 59,598 ವಿದ್ಯುತ್ ಕಂಬಗಳು ಮುರಿದು ಬಿದ್ದಿವೆ. 3,619 power supply lines ಇಲ್ಲ. ಇಷ್ಟು ದೊಡ್ಡ ಪ್ರಮಾಣದಲ್ಲಿ ಹಾನಿಯಾಗಿದೆ. ಇವತ್ತು ರೈತರು ಬೆಳೆಗಳನ್ನು ಬೆಳೆಯುವುದಕ್ಕೆ ಇನ್ನು ವಿದ್ಯುತ್ ಸಂಪರ್ಕ ಒದಗಿಸಿಲ್ಲ. ಇವತ್ತು ಹೊಸ ಕಂಬಗಳನ್ನು, conductors, ಹೊಸ ಟ್ರಾನ್ಸ್‌ಫಾರ್ಮರ್‌ಗಳನ್ನು ತಂದು ಹಾಕಬೇಕು, ವಿದ್ಯುತ್ ಇಲ್ಲವೆಂದರೆ ರೈತರ ಗತಿ ಏನು? ಅವರು ಕತ್ತಲೆಯಲ್ಲಿ ಕಳೆಯಬೇಕಾದ ಸ್ಥಿತಿಯಲ್ಲಿದ್ದಾರೆ. 1914 ರಲ್ಲಿ when there was a Colonial Government, ಬ್ರಿಟಿಷರು ನಮ್ಮನ್ನೇನು ಆಳುತ್ತಿದ್ದ ಸಂದರ್ಭದಲ್ಲಿ ದೆವ್ವಳ್ಳಿ ಎಂದು ನಮ್ಮ ಕಡೆ ಜನ ಹೇಳುತ್ತಿದ್ದರು. ‘ದೆವ್ವಳ್ಳಿ’ ಎಂದರೆ ‘devil flood’ ಎಂದು ನಮ್ಮ ಹಿರಿಯರು ಹೇಳುತ್ತಿದ್ದರು. ನಮ್ಮ ಜಮಖಂಡಿ ತಾಲ್ಲೂಕಿನಲ್ಲಿ ದಿನಾಂಕ

“ ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

08/08/1914 ರಂದು ಕಲ್ಲುಗಳನ್ನು ನೆಟ್ಟಿರುವುದನ್ನು ನಾನು ಬಹಳ ಕಡೆ ನೋಡಿದ್ದೇನೆ. Those are marked stones ದಾಟಿ ಬಹಳಷ್ಟು ದೂರ ನೀರು ಬಂದು ಆ ಕಲ್ಲುಗಳು ಮುಳುಗಿ ಹೋಗಿವೆ. ಅಂದರೆ, ಯಾವ ಪ್ರಮಾಣದಲ್ಲಿ ನೀರು ಬಂದಿದೆ ಎನ್ನುವುದು ಗೊತ್ತಾಗುತ್ತದೆ. ನಿರೀಕ್ಷೆಗೂ ಮೀರಿ ದೊಡ್ಡ ಪ್ರಮಾಣದಲ್ಲಿ ಹಾನಿಯಾಗಿದೆ. ಅಷ್ಟೇ ಅಲ್ಲ ಇವತ್ತು ಕೃಷ್ಣ ಬೇಸಿನ್ ನ ಆಲಮಟ್ಟಿ ಮತ್ತು ನಾರಾಯಣಪುರ ಜಲಾಶಯಗಳಲ್ಲಿ ಸಾಮಾನ್ಯವಾಗಿ ಎಷ್ಟು cusecs ನೀರು ಹರಿದು ಬರುತ್ತಿತ್ತೋ ಅದಕ್ಕಿಂತ ನಿರೀಕ್ಷೆಗೂ ಮೀರಿ, ಹೆಚ್ಚಿನ ಪ್ರಮಾಣದಲ್ಲಿ ನೀರು ಹರಿದು ಬಂದಿದೆ. ಅದೇ ರೀತಿ ಕಾವೇರಿ ಬೇಸಿನ್‌ನಲ್ಲಿ ಕೆಆರ್‌ಎಸ್, ಕಬಿನಿ ಹಾಗೂ ಭೀಮಾ ನದಿಯ ಪಾತ್ರದಲ್ಲಿಯೂ ಸಹ ಸಾಕಷ್ಟು ನೀರು ಬಂದಿದೆ. ನಾರಾಯಣಪುರ ಜಲಾಶಯಕ್ಕೆ 6.25 ಲಕ್ಷ cusecs ನೀರು ಹೆಚ್ಚಿಗೆ ಬಂದಿದೆ. ಭೀಮಾ ನದಿಯಲ್ಲಿ ಸುಮಾರು 3 ಲಕ್ಷ cusecs ನೀರು ಹೆಚ್ಚಿಗೆ ಬಂದಿದೆ. ಇಷ್ಟು ದೊಡ್ಡ ಪ್ರಮಾಣದಲ್ಲಿ ಹಾನಿಯಾಗಿ ಇವತ್ತು ಲಕ್ಷಾಂತರ ಜನರು ನಿರ್ಗತಿಕರಾಗಿದ್ದಾರೆ. ತಲೆ ಮೇಲೆ ಮಸಿ ಗಡಿಗೆ ಹೊತ್ತುಕೊಂಡು ಹೋದವರು ಎಲ್ಲಿದ್ದಾರೆಂಬುದು ತಿಳಿಯುತ್ತಿಲ್ಲ. ಏಕೆಂದರೆ ಇವತ್ತು ಕಾಳಜಿ ಕೇಂದ್ರ ಇಲ್ಲದಿರುವುದರಿಂದ ಅವರುಗಳು ಕಾಳಜಿ ಕೇಂದ್ರದಲ್ಲಿಯೂ ಸಹ ಇಲ್ಲ. ಹೀಗಾಗಿ ಅವರುಗಳು ಎಲ್ಲಿಗೆ ಹೋಗಬೇಕು. ನಮ್ಮ ಊರಿನಲ್ಲಿ ಮಣ್ಣಿನ ಮನೆಗಳು ನೀರಿನಲ್ಲಿ ಮುಳುಗಿ ಹೋಗಿದ್ದರಿಂದ ಶಿಥಿಲವಾಗಿ ಆ ಮನೆಗಳ ಒಳಗಡೆಗೆ ಹೋದರೆ ಅವು ಯಾವಾಗ ಬೀಳುತ್ತವೆ ಎನ್ನುವುದು ಗೊತ್ತಿಲ್ಲ. ಇವತ್ತು ನಮ್ಮ ಬಾಗಲಕೋಟೆ ಜಿಲ್ಲೆಯ ಕಿರಸೂರ್ ಗ್ರಾಮದಲ್ಲಿ ಮಣ್ಣಿನ ಮನೆಗಳು collapse ಆಗಿ ಮೂರು ಜನರು ಸತ್ತು ಹೋದರು. ಗ್ರಾಮೀಣ ಭಾಗದಲ್ಲಿದ್ದಂತಹ ಮನೆಗಳು ಕುಸಿದು ಹೋಗಿವೆ. ಇನ್ನು 8, 10, 12 ದಿವಸಗಳ ಕಾಲ ನೀರಿನಲ್ಲಿ ಮುಳುಗಿದ್ದಂತಹ ಮಣ್ಣಿನ ಮನೆಗಳಿದ್ದು, ಸುಮಾರು 50 ರಿಂದ 100 ವರ್ಷಗಳ ಕಾಲ ಅವರು ಅಲ್ಲಿಯೇ ಬಾಳಿ ಬದುಕಿದಂಥ ಹಳೆಯ ಕಾಲದ ಜಂತಿನ ಮನೆಗಳಾಗಿರುತ್ತವೆ. ಹಿರಿಯರ ಕಾಲದಿಂದಲೂ ಇದ್ದಂಥ ಮನೆಗಳು ನೀರಿನಲ್ಲಿ ಮುಳುಗಿ ಹೋಗಿವೆ. ನಾನು ನಂತರ ಮಾತನಾಡುವಾಗ ಸರ್ಕಾರ ಏನೇನು ಆದೇಶ ಮಾಡಿದೆ, ಎಷ್ಟೆಷ್ಟು ಪರಿಹಾರ ಕೊಟ್ಟಿದೆ, ಕೇಂದ್ರ ಸರ್ಕಾರಕ್ಕೆ ಸುಮಾರು 38,000 ಕೋಟಿ ರೂಪಾಯಿ ಕೇಳಿದ್ದರ ಬಗ್ಗೆ ನಂತರ ವಿವರವಾಗಿ ಮಾತನಾಡುತ್ತೇನೆ. ಅಲ್ಲಿ ಅತ್ಯಂತ ಶೋಚನೀಯ ಸ್ಥಿತಿ ಇದೆ. 22 ಜಿಲ್ಲೆಗಳ 103 ತಾಲ್ಲೂಕುಗಳು ಎಂದೂ ಕೇಳರಿಯದಂಥ, ಕಂಡರಿಯದಂಥ ದೊಡ್ಡ ಪ್ರಮಾಣದಲ್ಲಿ ಹಾನಿಯಾಗಿ ಹೃದಯ ವಿದ್ರಾವಕವಾದ ಘಟನೆಗಳು ಜರುಗಿವೆ. ಅವರು ರಸ್ತೆಯ ಅಕ್ಕಪಕ್ಕದಲ್ಲಿದ್ದಾರೆ. ಅನೇಕರು ದೇವರ ಬಿಜ್ಜರಗಿ ಅಂದರೆ ನೀರಿನಿಂದ ಮುಳುಗದೆ ಇರುವಂಥ ಹಳ್ಳಿಗೆ ಹೋಗಿದ್ದಾರೆ. ನಿಮ್ಮ ಹಳ್ಳಿ ಮುಳುಗಿದೆ, ಒಂದಷ್ಟು ದಿವಸ ಕಾಳಜಿ ಕೇಂದ್ರದಲ್ಲಿರಿ ಎಂದು ಹೇಳಿದರೆ, ಜನ ಅಲ್ಲಿಗೆ ಹೋಗದೆ ಬೇರೆ ಹಳ್ಳಿಗಳಿಗೆ ಹೋಗಿದ್ದಾರೆ. ಕಾಳಜಿ ಕೇಂದ್ರದಲ್ಲಾದರೂ ಅವರು ಎಷ್ಟು ದಿವಸ ಇಟ್ಟುಕೊಳ್ಳಲು ಸಾಧ್ಯ? ಕಾಳಜಿ ಕೇಂದ್ರದಲ್ಲಿ ಕಡೆಗೆ ಒಂದು ದಿವಸ ನೀರು ಇಳಿದಿದೆ ನಿಮ್ಮ ಹಳ್ಳಿಗೆ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಾಪಸ್ಸಾಗಿ ಎನ್ನುತ್ತಾರೆ. ಅವರು ತಮ್ಮ ಮನೆಗಳಿಗೆ ಹೋದರೆ ಎಲ್ಲವೂ ಖತಂ ಆಗುತ್ತದೆ. ಇಂತಹ ಒಂದು ಭಯಾನಕವಾದಂಥ ವಾತಾವರಣ ಇವತ್ತು ಸೃಷ್ಟಿಯಾಗಿದೆ. ಇದನ್ನು ಸರ್ಕಾರ ಮಾಡಿದೆ ಎಂದು ನಾನು ಹೇಳುವುದಿಲ್ಲ. ಅದು ಪ್ರಕೃತಿ ವಿಕೋಪದಿಂದ ಆಗಿದೆ. ಈ ವಿಚಾರದಲ್ಲಿ ನಾವು ರಾಜಕಾರಣ ಮಾಡುವ ಗೊಡವೆಗೆ ಹೋಗುವುದಿಲ್ಲ. ನಾವೆಲ್ಲರೂ ಜೊತೆಯಾಗಿದ್ದುಕೊಂಡು ಯಾರು ಸಂತ್ರಸ್ತರಿದ್ದಾರೆ, ಯಾರು ಮನೆ, ಜಮೀನು ಮತ್ತು ಬೆಳೆಯನ್ನು ಕಳೆದುಕೊಂಡಿದ್ದಾರೆ ಅವರಿಗೆ ನ್ಯಾಯವನ್ನೊದಗಿಸಬೇಕಾಗಿದೆ. ಅಷ್ಟೇ ಅಲ್ಲ, ಸುಮಾರು ಒಂದು ಲಕ್ಷ ಎಕರೆ ಪ್ರದೇಶದಲ್ಲಿ ಒಂದರಿಂದ ಎರಡು ಅಡಿಯಷ್ಟು ಫಲವತ್ತಾದ ಮಣ್ಣು ಕೊಚ್ಚಕೊಂಡು ಹೋಗಿದೆ. ಸೃಷ್ಟಿಯಲ್ಲಿ ಒಂದು ಇಂಚಿನಷ್ಟು ಫಲವತ್ತಾದ ಮಣ್ಣು ತನ್ನಿಂತಾನೆ ತಯಾರಾಗಬೇಕಾದರೆ ಸುಮಾರು ಒಂದು ಮಿಲಿಯನ್ ವರ್ಷಗಳು ಬೇಕಾಗುತ್ತದೆ. ಅಂತಹ ಫಲವತ್ತಾದ ಮಣ್ಣು ಇವತ್ತು ನದಿಯಲ್ಲಿ ಕೊಚ್ಚಿಕೊಂಡು ಹೋಗಿದೆ. ಇಷ್ಟು ಭಯಾನಕವಾದಂಥ ವಾತಾವರಣ ನಿರ್ಮಾಣವಾಗಿದ್ದರಿಂದ ಲಕ್ಷಾಂತರ ಜನರು ಇವತ್ತು ಬೀದಿಗೆ ಬಂದಿದ್ದಾರೆ. ಅವರುಗಳಿಗೆ ಸರಿಯಾದಂಥ ವ್ಯವಸ್ಥೆ ಸಿಗದೇ ನಮಗೆ ಯಾವ ಶಾಪ ತಟ್ಟಿದೆ ಎಂದು ಜನ ಪರಿತಪಿಸುವಂಥ ಪರಿಸ್ಥಿತಿ ಬಂದಿದೆ. ಹಾಗಾಗಿ ಈ ವಿಚಾರವನ್ನು ನಿಯಮ 59ರ ಅಡಿಯಲ್ಲಿ ವಿಸ್ತೃತವಾಗಿ ಚರ್ಚೆ ಮಾಡಲು ತಾವು ಈ ಸದನದ ಅನೇಕ ಸದಸ್ಯರಿಗೆ ಅವಕಾಶವನ್ನು ಮಾಡಿಕೊಡಬೇಕು. ಅಷ್ಟೇ ಅಲ್ಲ ಆಡಳಿತ ಪಕ್ಷದ ಸದಸ್ಯರು ಸಹ ಈ ಚರ್ಚೆಯಲ್ಲಿ ಪಾಲ್ಗೊಳ್ಳುತ್ತಾರೆ. ಈ ಸರ್ಕಾರದ ಪರಾಕ್ರಮದ ಬಗ್ಗೆ ಅವರ ಪಕ್ಷದವರೇ ಅನೇಕ ಜನ ಹೇಳಿದ್ದಾರೆ. ಅತ್ಯಂತ ಪ್ರಮುಖರು ಮತ್ತು ಜವಾಬ್ದಾರಿ ಸ್ಥಾನದಲ್ಲಿರುವವರು ಏನೇನೋ ಮಾತನಾಡಿದ್ದಾರೆ ಎನ್ನುವ ವಿವರಗಳಿಗೆ ನಾನು ಹೋಗುವುದಿಲ್ಲ. ಶ್ರೀ ಡಿ.ಬಿ.ಚಂದ್ರೇಗೌಡರು ಈ ಬಗ್ಗೆ ಮಾತನಾಡಿದ್ದಾರೆ. ಡಿ.ಜಿ.ಪಿ.ಯಾಗಿ ಕೆಲಸ ನಿರ್ವಹಿಸಿರುವಂಥ ಶ್ರೀ ಶಂಕರ್ ಬಿದರಿಯವರು ಉತ್ತರ ಕರ್ನಾಟಕದ 37 ಸಂಘಟನೆಗಳ Federation ಮುಖಾಂತರ ಹೋಗಿ ಮಾತನಾಡಿ, ಅವರು 'ನಮ್ಮ ಚಪ್ಪಲಿಯನ್ನು ತೆಗೆದುಕೊಂಡು ನಾವೇ ಬಡಿದುಕೊಳ್ಳಬೇಕು' ಎನ್ನುವಂಥ ಪರಿಸ್ಥಿತಿ ಬಂದಿದೆ ಎನ್ನುವ ಮಾತನ್ನು ಹೇಳಿದ್ದಾರೆ. ಅತ್ಯಂತ ಶೋಚನೀಯ ಸ್ಥಿತಿಯಲ್ಲಿ, ಬಹಳಷ್ಟು ನೋವಿನಲ್ಲಿ, ಕಷ್ಟದಲ್ಲಿ, ತಿನ್ನುವುದಕ್ಕೆ ಒಂದು ತುತ್ತು ಕೂಳು ಇಲ್ಲದಿರುವಂಥ ದುಃಸ್ಥಿತಿ ಬಂದಿದ್ದರಿಂದ ಇದರ ಬಗ್ಗೆ ಚರ್ಚೆ ಮಾಡಲು ಅವಕಾಶ ಮಾಡಿಕೊಡಬೇಕು.

(ಮುಂದು)

116/10-10-2019/1-10/bkp-md

**ಶ್ರೀ ಎಸ್.ಆರ್.ಪಾಟೀಲ್(ಮುಂದು )**

ಈ ನಿಲುವಳಿ ಸೂಚನೆ ಬಹಳ ಮಹತ್ವದ್ದಾಗಿದ್ದು, ಇದರ ಮೇಲೆ ಬೆಳಕು ಚೆಲ್ಲಬೇಕು. ಈ ವಿಚಾರವಾಗಿ ಸದನದ ಎಲ್ಲಾ ಸದಸ್ಯರುಗಳು ಚರ್ಚೆ ಮಾಡಬೇಕು. ಆ ಮೂಲಕ ಇದಕ್ಕೆ ಒಂದು ಪರಿಹಾರವನ್ನು ಕಂಡುಕೊಳ್ಳಬೇಕು ಹಾಗೂ ಅವರುಗಳಿಗೆ ನ್ಯಾಯ ಒದಗಿಸಬೇಕು. ಇವತ್ತು ಏನು ಅಲ್ಲಿ ಸಂತ್ರಸ್ತರು ತಮ್ಮ ಮನೆ–ಮಠ ಎಲ್ಲವನ್ನೂ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಳೆದುಕೊಂಡು ಬೀದಿಗೆ ಬಂದಿದ್ದಾರೆ, ಅವರಿಗೆ ನ್ಯಾಯ ಒದಗಿಸುವುದು ಬಹಳ ಮಹತ್ವದ ವಿಚಾರವಾಗಿದೆ. ಈ ಚರ್ಚೆಯ ಮುಖಾಂತರ ಆ ಸಂತ್ರಸ್ತರ ಬದುಕಿಗೆ ಒಂದು ಅರ್ಥ ಕಲ್ಪಿಸುವ ದೃಷ್ಟಿಯಿಂದ ನಿಯಮ 59 ರಡಿಯಲ್ಲಿ ಈ ವಿಚಾರವನ್ನು ಕೈಗೆತ್ತಿಕೊಳ್ಳುವುದರ ಮೂಲಕ ಈ ಒಂದು ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ತಮ್ಮಲ್ಲಿ ಭಿನ್ನವಿಸಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಉಪ ಮುಖ್ಯಮಂತ್ರಿಗಳಾದಂತಹ ಮಾನ್ಯ ಶ್ರೀ ಗೋವಿಂದ ಎಂ. ಕಾರಜೋಳ್ ರವರು, ಮಾನ್ಯ ಕಂದಾಯ ಮಂತ್ರಿಗಳಾದ ಶ್ರೀ ಆರ್.ಅಶೋಕ್ ಅವರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಾದ ಶ್ರೀ ಕೆ.ಎಸ್.ಈಶ್ವರಪ್ಪನವರು ಮತ್ತು ಆರೋಗ್ಯ ಸಚಿವರಾದ ಶ್ರೀ ಶ್ರೀರಾಮುಲು ಅವರು ಈ ಸದನಕ್ಕೆ ಆಗಮಿಸಿದ್ದು, ಅವರುಗಳನ್ನು ಈ ಸದನಕ್ಕೆ ಪರಿಚಯ ಮಾಡಿಕೊಡುತ್ತಿದ್ದೇನೆ.

ಮಾನ್ಯ ಪ್ರತಿಪಕ್ಷದ ನಾಯಕರು ಉಲ್ಲೇಖಿಸಬೇಕಾದಂತಹ ವಿಚಾರಗಳನ್ನು ನಿಲುವಳಿ ಸೂಚನೆಯ ಮೂಲಕ ತಮ್ಮ ಗಮನಕ್ಕೆ ತಂದಿದ್ದಾರೆ. ಅವರ ನಿಲುವಳಿ ಸೂಚನೆಯನ್ನು ಗೌರವದಿಂದ ಸ್ವೀಕಾರ ಮಾಡುತ್ತೇವೆ. ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿರುವಂತಹ ಪ್ರತಿಯೊಂದು ವಿಚಾರಗಳಿಗೂ ಸಹ ಸರ್ಕಾರದ ವತಿಯಿಂದ ಉತ್ತರವನ್ನು ಕೊಡುತ್ತೇವೆ. ಮಾನ್ಯ ವಿರೋಧ ಪಕ್ಷದ ನಾಯಕರು ಈ ವಿಚಾರವನ್ನು ನಿಯಮ 59 ರಡಿಯಲ್ಲಿ ಚರ್ಚೆಗೆ ತೆಗೆದುಕೊಳ್ಳಬೇಕೆಂದು ಹಾಗೂ ಈ ಚರ್ಚೆಯಲ್ಲಿ ಎಲ್ಲರೂ ಪಾಲ್ಗೊಳ್ಳಬೇಕೆಂದು ಹೇಳಿದ್ದಾರೆ. ನಮ್ಮಲ್ಲಿರುವ ಸದಸ್ಯರೂ ಸಹ ಈ ವಿಚಾರವಾಗಿ ಚರ್ಚೆಯಲ್ಲಿ ಪಾಲ್ಗೊಂಡು ತಮ್ಮ ಅಭಿಪ್ರಾಯಗಳನ್ನು ಕೊಡಲಿಕ್ಕೆ ಸಿದ್ದರಿದ್ದಾರೆ. ಏಕೆಂದರೆ, ಈ ಮಟ್ಟದಲ್ಲಿ ಆಗಿರುವಂತಹ ನೆರೆ ಹಾವಳಿಯಲ್ಲಿ ನಾವೆಲ್ಲರೂ ಒಟ್ಟಾಗಿ, ನೊಂದವರು ಹಾಗೂ ಸಂಕಟ ಪಟ್ಟವರಾಗಿದ್ದೇವೆ. ರಾಜ್ಯದಲ್ಲಿ 1,20,406 ಕ್ಕೂ ಹೆಚ್ಚು ಮನೆಗಳು ಉರುಳಿ ಹೋಗಿವೆ. ಅದರಲ್ಲಿ 11,687 ಮನೆಗಳು ಸಂಪೂರ್ಣವಾಗಿ ಬಿದ್ದು ಹೋಗಿವೆ. ಸುಮಾರು ಶೇಕಡಾ 25 ರಿಂದ 75 ರಷ್ಟು ತೀವ್ರವಾಗಿ ಹಾನಿಗೊಳಗಾದ ಮನೆಗಳ ಸಂಖ್ಯೆ 31,206 ಆಗಿದೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸಭಾನಾಯಕರು ಉತ್ತರ ಹೇಳುತ್ತಿದ್ದಾರೆಯೇ?

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ನಾನು ಉತ್ತರ ಹೇಳುತ್ತಿಲ್ಲ. ಈ ವಿಚಾರವನ್ನು ಮಾನ್ಯ ವಿರೋಧ ಪಕ್ಷದ ನಾಯಕರ ಗಮನಕ್ಕೆ ತಂದಿದ್ದೇನೆ ಅಷ್ಟೆ. ಮಾನ್ಯ ವಿರೋಧ ಪಕ್ಷದ ನಾಯಕರು ಏನು ನಿಯಮ 59 ರಡಿಯಲ್ಲಿ ನಿಲುವಳಿ ಸೂಚನೆಯನ್ನು ತಂದಿದ್ದಾರೆ, ಅದನ್ನು ತಾವು ನಿಯಮ 68ಕ್ಕೆ ಕನ್ವರ್ಟ್ ಮಾಡಬೇಕು.

(ಗೊಂದಲ)

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಸರ್ಕಾರದ ವತಿಯಿಂದ ಉತ್ತರ ಕೊಡಲಿಕ್ಕೆ ಸಭಾನಾಯಕರು ಸಮರ್ಥರಿದ್ದಾರೆ. ಸಭಾನಾಯಕರ ಸ್ಥಾನಕ್ಕೂ ಸಮರ್ಥರಿದ್ದಾರೆ.

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ನಮ್ಮಲ್ಲಿ ಏನೂ ತೊಂದರೆಯಿಲ್ಲ.

**ಶ್ರೀ ಮಾನೆ ಶ್ರೀನಿವಾಸ್:–** ಮಾನ್ಯ ಸಭಾಪತಿಯವರೇ, ಇಲ್ಲಿ ನಿಯಮ ಮುಖ್ಯವಲ್ಲ. ಈ ವಿಚಾರವಾಗಿ ಚರ್ಚೆ ಮಾಡುವುದು ಮುಖ್ಯ.

**ಶ್ರೀ ಕೆ.ಸಿ. ಕೊಂಡಯ್ಯ:–** ಮಾನ್ಯ ಸಭಾಪತಿಯವರೇ, ನಮ್ಮ ಹತ್ತಿರ ಎಲ್ಲಾ ದಾಖಲೆಗಳಿವೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದ ವತಿಯಿಂದ ನಿಯಮ 59 ರಡಿಯಲ್ಲಿ ನಿಲುವಳಿ ಸೂಚನೆಯನ್ನು ಮಂಡನೆ ಮಾಡಿದ್ದಾರೆಂದರೆ ಸರ್ಕಾರದ ಕಣ್ಣು ತೆರೆಸಿ, ಸರ್ಕಾರ ಸಮರ್ಪಕವಾಗಿ ಕೆಲಸ ಮಾಡಿ, ಸಂತ್ರಸ್ತರಿಗೆ ಸಹಾಯ ಮಾಡಬೇಕೆನ್ನುವ ಉದ್ದೇಶ ವಿರೋಧ ಪಕ್ಷದ್ದಾಗಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ವಿರೋಧ ಪಕ್ಷದ ವತಿಯಿಂದ ಈ ವಿಚಾರವಾಗಿ ಏನು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಾರೆ, ಅದಕ್ಕೆ ನಮ್ಮ ಸಂಪೂರ್ಣ ಸಹಕಾರವಿದೆ. ಆದರೆ, ಈ ವಿಚಾರವನ್ನು ನಿಯಮ 59 ರ ಬದಲಿಗೆ ನಿಯಮ 68 ರಡಿಯಲ್ಲಿ ತೆಗೆದುಕೊಳ್ಳಿ ಎಂದು ನಾನು ಏತಕ್ಕೆ ಹೇಳಿದ್ದೇನೆಂದರೆ ಕರ್ನಾಟಕ ರಾಜ್ಯದಲ್ಲಿ ಯಾರ್ಯಾರು ಸಂತ್ರಸ್ತರು ಇದ್ದು, ಅವರೆಲ್ಲರ ಜೊತೆ ಅತ್ಯಂತ ಪರಿಣಾಮಕಾರಿಯಾಗಿ ನಿಂತುಕೊಂಡು ಸರ್ಕಾರ ಕೆಲಸ ಮಾಡಿದೆ. ಆ ಸಂತ್ರಸ್ತರು, ನೊಂದವರು, ಯಾರ್ಯಾರು ಮನೆಗಳನ್ನು ಕಳೆದುಕೊಂಡವರು ಇದ್ದಾರೆ, ಅವರುಗಳಿಗೆ ಮನೆಗಳನ್ನು ಕಟ್ಟಿಕೊಡುವುದು ಸರ್ಕಾರದ ಜವಾಬ್ದಾರಿಯಾಗಿದೆ ಎನ್ನುವ ಮಾತನ್ನು ಹೇಳಲಿಕ್ಕೆ ಬಯಸುತ್ತೇನೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಮಾನ್ಯ ಸಭಾಪತಿಯವರೇ, ರಾಜ್ಯದ 22 ಜಿಲ್ಲೆಗಳ 103 ತಾಲ್ಲೂಕುಗಳಲ್ಲಿನ ಪ್ರವಾಹ ಪೀಡಿತ ಪ್ರದೇಶಕ್ಕೆ ರಾಜ್ಯ ಸರ್ಕಾರದ ವತಿಯಿಂದ 2,949 ಕೋಟಿ ರೂಪಾಯಿಗಳಷ್ಟು ಅನುದಾನವನ್ನು ಬಿಡುಗಡೆ ಮಾಡಲಾಗಿದೆ. ಮತ್ತೆ ಕೇಂದ್ರ ಸರ್ಕಾರದಿಂದ 1200 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ.

(ಗೊಂದಲ)

**ಶ್ರೀ ಕೆ.ಸಿ.ಕೊಂಡಯ್ಯ:–** ಮಾನ್ಯ ಸಭಾಪತಿಯವರೇ, ಈ ವಿಚಾರದಲ್ಲಿ ತಿಪ್ಪೇ ಸಾರಿಸುವುದು ಬೇಡ. ಸರ್ಕಾರದ ಕಡೆಯಿಂದ ಸರಿಯಾದ ಉತ್ತರ ನೀಡಬೇಕು.

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದ ವತಿಯಿಂದ ನಿಯಮ 59 ರಡಿಯಲ್ಲಿ ಈ ವಿಚಾರವನ್ನು ಚರ್ಚೆಗೆ ತೆಗೆದುಕೊಳ್ಳಬೇಕೆಂದು ಹೇಳಿದ್ದಾರೆ. ಆದರೆ, ನಾವು ಇದನ್ನು ನಿಯಮ 68ಕ್ಕೆ convert ಮಾಡಬೇಕೆಂದು ಏಕೆ ಹೇಳಿದ್ದೇವೆ ಎಂದರೆ, ...

(ಗೊಂದಲ)

ನಿಯಮ 68ಕ್ಕೆ convert ಮಾಡಿದರೆ ಎಲ್ಲರೂ ಸಹ ಇದರ ಬಗ್ಗೆ ಚರ್ಚೆ ಮಾಡಲಿಕ್ಕೆ ಅವಕಾಶವಿದೆ. ಈ ವಿಚಾರದಲ್ಲಿ ನನ್ನ ಅಭ್ಯಂತರ ಏನೂ ಇಲ್ಲ. ಈ ವಿಚಾರವಾಗಿ ಎಷ್ಟೇ ಸಮಯ ಚರ್ಚೆ ಮಾಡಿದರೂ ಸಹ ಸರ್ಕಾರ ಅದಕ್ಕೆ ಸಿದ್ಧವಿದೆ. ಸರ್ಕಾರ ರಾಜ್ಯದ ಜನರ ಪರವಾಗಿ ನಿಂತಿದೆ. ನಿಮ್ಮ ಭಾವನೆಗಳನ್ನು ಅರ್ಥ ಮಾಡಿಕೊಂಡು ಸರ್ಕಾರ ಕೆಲಸ ಮಾಡುತ್ತದೆ. ಕಟ್ಟಕಡೆಯ ಸಂತ್ರಸ್ತರ ವಿಚಾರದಲ್ಲಿಯೂ ಸಹ ಸರ್ಕಾರ ಗಟ್ಟಿ ನಿಲುವನ್ನು ತೆಗೆದುಕೊಳ್ಳುತ್ತದೆ. ಎಲ್ಲರೂ ಚರ್ಚೆ ಮಾಡಲು ಅವಕಾಶವನ್ನು ಕಲ್ಪಿಸಬೇಕಾಗಿರುವುದರಿಂದ ಈ ವಿಚಾರವನ್ನು ನಿಯಮ 68ರ ಅಡಿಯಲ್ಲಿ ಚರ್ಚೆ ಮಾಡಲು ಅವಕಾಶ ಕೊಡಬಹುದು ಮತ್ತು ಸಮಯವನ್ನು ನಿಗದಿಗೊಳಿಸಬಹುದು ಎಂದು ವಿನಂತಿಸುತ್ತೇನೆ. ತಾವು ಏನೇ ತೀರ್ಮಾನ ತೆಗೆದುಕೊಂಡರೂ ಸರ್ಕಾರ ಅದಕ್ಕೆ ಬದ್ಧವಾಗಿದೆ ಹಾಗೂ ಎಷ್ಟೇ ಹೊತ್ತಾದರೂ ಸರ್ಕಾರ ಚರ್ಚೆ ಮಾಡಲು ಸಿದ್ಧವಿದೆ. ಸರ್ಕಾರ ಈ ರಾಜ್ಯದ ಜನರ ಪರವಾಗಿ ನಿಂತಿದೆ. ಅದರಲ್ಲಿ ಯಾವುದೇ ಗೊಂದಲವಿಲ್ಲ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಸಭಾಪತಿಯವರು:–** ನಿಯಮ 59 ರಡಿಯಲ್ಲಿ ನೀಡಿರುವ ಸೂಚನೆಯು ವಿಶೇಷ ಸಾರ್ವಜನಿಕ ಮಹತ್ವದ ವಿಷಯವಾಗಿದ್ದು, ಈ ವಿಷಯದ ಬಗ್ಗೆ ಎರಡು ಕಡೆಗಳಿಂದ ಚರ್ಚೆಯಾಗಬೇಕಾಗಿದೆ. ಇಲ್ಲಿ ನಿಯಮ 59 ಅಥವಾ 68 ರಡಿಯಲ್ಲಿ ಚರ್ಚೆ ಮಾಡಬೇಕೆನ್ನುವುದು ಪ್ರಶ್ನೆಯಲ್ಲ. ಒಟ್ಟಾರೆ, ಈ ವಿಚಾರವಾಗಿ ಎರಡು ಕಡೆಯಿಂದ ಚರ್ಚೆಯಾಗಬೇಕು. ಆದ್ದರಿಂದ, ಈ ಚರ್ಚೆಯನ್ನು ಈಗ ಪ್ರಾರಂಭ ಮಾಡಬೇಕೇ ಅಥವಾ ಗಮನ ಸೆಳೆಯುವ ಸೂಚನೆಗೆ ಸಂಬಂಧಪಟ್ಟಂತೆ ಚರ್ಚೆಯಾದ ನಂತರ ತೆಗೆದುಕೊಳ್ಳಬೇಕೇ ಎನ್ನುವುದು ಮುಖ್ಯವಾಗಿದೆ. ಈಗ ಇದನ್ನು ಚರ್ಚೆ ಮಾಡಲಿಕ್ಕೆ ಎರಡು ಕಡೆಯಿಂದ ಒಪ್ಪಿದ ಮೇಲೆ ಇದನ್ನು ನಿಯಮ 68 ಅಡಿಯಲ್ಲಿ ಚರ್ಚೆ ಮಾಡಲು ಅವಕಾಶ ಕಲ್ಪಿಸಲಾಗುತ್ತದೆ. ಈಗ ಈ ಚರ್ಚೆಯನ್ನು ಪ್ರಾರಂಭ ಮಾಡಬಹುದಾಗಿದೆ. ಇದನ್ನು 10 ಜನ ಸಹಿ ಮಾಡಿ ಕೊಟ್ಟಿದ್ದಾರೆ. ಯಾರಾದರೂ ಪ್ರಸ್ತಾಪ ಮಾಡದೇ ಇರುವ ವಿಚಾರಕ್ಕೆ ಇಲ್ಲಿ ಉತ್ತರ ಕೊಡಲಿಕ್ಕೆ ಆಗುವುದಿಲ್ಲ. ಈಗ ಈ ವಿಚಾರವಾಗಿ ಚರ್ಚೆಯನ್ನು ಪ್ರಾರಂಭ ಮಾಡಬೇಕು. ಇದು ಗಂಭೀರವಾದ ವಿಚಾರವೆಂದು ಸಭಾನಾಯಕರು ಒಪ್ಪಿಕೊಳ್ಳುತ್ತಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಸರ್ಕಾರದ ಕಡೆಯಿಂದ ನಮ್ಮ ವಿನಂತಿ ಏನೆಂದರೆ ಈ ವಿಚಾರವನ್ನು ನಿಯಮ 68ಕ್ಕೆ convert ಮಾಡಿದ್ದೀರಿ. ಅದಕ್ಕೆ ಎಷ್ಟು ಸಮಯ ಬೇಕಾದರೂ ಚರ್ಚೆ ಮಾಡಲಿಕ್ಕೆ ಸರ್ಕಾರ ಸಿದ್ಧವಿದೆ. ಆದರೆ, ಇದಕ್ಕೆ ಮೊದಲು ಗಮನಸೆಳೆಯುವ ಸೂಚನೆಗೆ ಉತ್ತರಿಸುವ ಸಂಬಂಧ ಮಂತ್ರಿಗಳು ಆಗಮಿಸಿದ್ದಾರೆ. ಆದ್ದರಿಂದ, ಈ ವಿಚಾರವಾಗಿ ತಾವು ಏನು ತೀರ್ಮಾನ ತೆಗೆದುಕೊಳ್ಳುತ್ತೀರೋ ತೆಗೆದುಕೊಳ್ಳಿ. ನಾವು ಚರ್ಚೆ ಮಾಡಲು ಸಿದ್ದರಿದ್ದೇವೆ.

(ಗೊಂದಲ)

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಉಪ ಮುಖ್ಯಮಂತ್ರಿಗಳಾದ ಶ್ರೀ ಗೋವಿಂದ ಎಂ. ಕಾರಜೋಳ್ ರವರು ಸೇರಿದಂತೆ ನಾವೆಲ್ಲರೂ ಆ ಪ್ರವಾಹದಿಂದ ಮುಳಗಡೆಯಾದ ಪ್ರದೇಶದಿಂದ ಎದ್ದು ಬಂದಿದ್ದೇವೆ.

**ಸಭಾಪತಿಯವರು:–** ಈ ವಿಚಾರವಾಗಿ 10–15 ಜನ ಮಾತನಾಡಲಿಕ್ಕೆ ಬಯಸಿದ್ದಾರೆ. ಅದಕ್ಕೆ ನೀವು ಉತ್ತರ ಕೊಡಬೇಕಾಗುತ್ತದೆ. ಆದ್ದರಿಂದ, ಅವರುಗಳು ಮಾತನಾಡಲಿಕ್ಕೆ ಈಗ ಅವಕಾಶವನ್ನು ಕೊಡುತ್ತಿದ್ದೇನೆ. ಈಗ ಈ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಿಚಾರವನ್ನು ನಿಯಮ 59 ರ ಬದಲಿಗೆ ನಿಯಮ 68 ಕ್ಕೆ convert ಮಾಡಲಾಗಿದ್ದು, ಈಗ ಚರ್ಚೆ ಪ್ರಾರಂಭ ಮಾಡೋಣ.

**10 ನಿಯಮ 68 ರ ಮೇರೆಗೆ ಚರ್ಚೆ.**

**ವಿಷಯ:- ರಾಜ್ಯದಲ್ಲಿ ಭಾರಿ ಮಳೆ ಮತ್ತು ಪ್ರವಾಹದಿಂದಾಗಿ ಆಗಿರುವ ಅನಾಹುತದಿಂದ ಸಂಕಷ್ಟಕ್ಕೀಡಾಗಿರುವ ಜನರಿಗೆ ಪರಿಹಾರ ಒದಗಿಸುವಲ್ಲಿ ಸರ್ಕಾರ ವಿಫಲವಾಗಿರುವ ಬಗ್ಗೆ**

– – – – –

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಈ ವಿಚಾರವಾಗಿ ವಿಸ್ತೃತವಾಗಿ ಚರ್ಚೆ ಮಾಡಲಿಕ್ಕೆ ನಿಯಮ 68 ರಡಿಯಲ್ಲಿ ಅವಕಾಶ ಕಲ್ಪಿಸಿರುವುದಕ್ಕೆ ತಮಗೆ ನಮ್ಮ ತುಂಬು ಹೃದಯದ ಕೃತಜ್ಞತೆಗಳನ್ನು ಸಲ್ಲಿಸುವುದಕ್ಕೆ ಬಯಸುತ್ತೇನೆ. ನಾನು ಈಗಾಗಲೇ ಹೇಳಿದಂತೆ ಆಗಸ್ಟ್ 3 ರಿಂದ ಆಗಸ್ಟ್ 10 ರವರೆಗೆ 118 ವರ್ಷಗಳಲ್ಲಿ ಆಗಲಾರದಂತಹ ದೊಡ್ಡ ಪ್ರಮಾಣದಲ್ಲಿ ಮಳೆ ಆಗಿದೆ. ಬಹಳ ಕಡೆ ವಿಸ್ತೃತವಾಗಿ ಮಳೆಯಾಗಿದೆ. ಅದರಲ್ಲೂ ಉತ್ತರ ಕರ್ನಾಟಕದಲ್ಲಿ ಹೆಚ್ಚು ಮಳೆಯಾಗಿದೆ.

**(ಮುಂದು...**

(117) 10.10.2019 01.20 ಎಸ್‌ವಿ-ಎಕೆ
ಶ್ರೀ ಎಸ್.ಆರ್.ಪಾಟೀಲ್ (ಮುಂದು)

ಕಲ್ಯಾಣ ಕರ್ನಾಟಕದ ಆರು ಜಿಲ್ಲೆಗಳಲ್ಲಿ ಬೀದರ್ ಜಿಲ್ಲೆಯನ್ನು ಹೊರತುಪಡಿಸಿ ಉಳಿದ ಎಲ್ಲಾ ಜಿಲ್ಲೆಗಳೂ ಮುಳುಗಿವೆ. ಮುಂಬೈ ಕರ್ನಾಟಕದ ಏಳು ಜಿಲ್ಲೆಗಳಲ್ಲಿ ಏಳು ಜಿಲ್ಲೆಗಳೂ ಸಹ ಮುಳುಗಿವೆ. ಒಟ್ಟಾರೆ ಹದಿನಾಲ್ಕು ಜಿಲ್ಲೆಗಳಲ್ಲಿ ಹದಿಮೂರು ಜಿಲ್ಲೆಗಳು ಮುಳುಗಿವೆ. ಉದಾಹರಣೆಗೆ ಬಾಗಲಕೋಟೆ ಜಿಲ್ಲೆಯನ್ನು ತೆಗೆದುಕೊಳ್ಳೋಣ. ನಮ್ಮ ಜಿಲ್ಲೆಯ ಉಸ್ತುವಾರಿ ಮಂತ್ರಿಗಳು ಇಲ್ಲಿಯೇ ಎದುರಿನಲ್ಲಿ ಕುಳಿತಿದ್ದರು. ಬಹುಶಃ ಹೊರಟು ಹೋದರೇನೋ?

**ಶ್ರೀ ಗೋವಿಂದ ಕಾರಜೋಳ (ಉಪ ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೇ, ನಾನು ಇಲ್ಲಿಯೇ ಕುಳಿತಿದ್ದೇನೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ನಾನು ನೋಡಲಿಲ್ಲ. ಹೋಗಿಯೇ ಬಿಟ್ಟರೇನೋ ಎಂದು ಭಾವಿಸಿದ್ದೆನು.

**ಶ್ರೀ ಲಕ್ಷ್ಮಣ ಎಸ್. ಸವದಿ (ಉಪ ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಉತ್ತರ ಕರ್ನಾಟಕದವರಾಗಿದ್ದು, ನಾವು ಉತ್ತರ ಕರ್ನಾಟಕದಿಂದ ಬಂದವರಾಗಿದ್ದೇವೆ. ಆದರೆ ಹೋಗಿಯೇ ಬಿಟ್ಟರೇನೋ ಎನ್ನುವ ಶಬ್ದ ನಮಗೆ ಯಾಕೋ ಸರಿಯೆನಿಸುತ್ತಿಲ್ಲ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ನಾನು ಮತ್ತು ಮಾನ್ಯ ಕಾರಜೋಳ ಅವರು ಒಂದೇ ಜಿಲ್ಲೆಯವರಾಗಿದ್ದೇವೆ. ಹಾಗಾಗಿ ನಾನು ಹೇಳಿದ್ದರಲ್ಲಿ ತಪ್ಪೇನಾದರೂ ಇದೆಯೇ ಎಂದು ಕೇಳಬಯಸುತ್ತೇನೆ.

ಈಗ ಬೆಳಗಾವಿ ಜಿಲ್ಲೆಯಲ್ಲಿ 872 ಗ್ರಾಮ ಮುಳುಗಡೆಯಾಗಿದ್ದು, ಬಹಳ ದೊಡ್ಡ ಪ್ರಮಾಣದಲ್ಲಿ ಹಾನಿಯಾಗಿದೆ. ಇದು ಮಾನ್ಯ ಉಪ ಮುಖ್ಯಮಂತ್ರಿಯವರಾದ ಶ್ರೀ ಲಕ್ಷ್ಮಣ ಸವದಿಯವರು ಪ್ರತಿನಿಧಿಸುವ ಕ್ಷೇತ್ರವಾಗಿದೆ. ಇಷ್ಟು ದೊಡ್ಡ ಪ್ರಮಾಣದಲ್ಲಿ ಮಳೆಯಾದ ಕಾರಣ ಉತ್ತರ ಕರ್ನಾಟಕದ 13 ಜಿಲ್ಲೆಗಳಲ್ಲಿ 12 ಜಿಲ್ಲೆಗಳ ಸಾವಿರಾರು ಗ್ರಾಮಗಳು ಮುಳುಗಡೆಯಾಗಿವೆ. ಕರ್ನಾಟಕದ ಉಳಿದ ಭಾಗದ 17 ಜಿಲ್ಲೆಗಳಲ್ಲಿ 10 ಜಿಲ್ಲೆಗಳು ಬಾಧಿತವಾಗಿದೆ. ಜಿಲ್ಲೆಗಳನ್ನು ಹೇಳುವುದಾದರೆ ಬಳ್ಳಾರಿ, ವಿಜಯಪುರ, ರಾಯಚೂರು, ದಾವಣಗೆರೆ, ಕಲಬುರಗಿ, ಮಂಡ್ಯ, ದಕ್ಷಿಣ ಕನ್ನಡ, ಚಾಮರಾಜನಗರ, ಹಾವೇರಿ, ಬೆಳಗಾವಿ, ಬಾಗಲಕೋಟೆ, ಚಿಕ್ಕಮಗಳೂರು, ಉತ್ತರ ಕನ್ನಡ, ಉಡುಪಿ, ಧಾರವಾಡ, ಕೊಡಗು, ಮೈಸೂರು, ಹಾಸನ, ಶಿವಮೊಗ್ಗ, ಕೊಪ್ಪಳ ಮತ್ತು ಗದಗ.

ಮಾನ್ಯ ಸಭಾಪತಿಯವರೇ, ಒಟ್ಟು 22 ಜಿಲ್ಲೆಗಳಲ್ಲಿ 103 ತಾಲ್ಲೂಕುಗಳು, 2177 ಗ್ರಾಮಗಳು ಮುಳುಗಡೆಯಾಗಿದೆ. ನಾನು ಈಗಾಗಲೇ ಹೇಳಿದಂತೆ 1914ನೇ ಇಸ್ವಿಯಲ್ಲಿ ಬ್ರಿಟಿಷರ ಆಳ್ವಿಕೆಯಿದ್ದಾಗ ಈ ರೀತಿಯ ಪ್ರವಾಹವುಂಟಾಗಿತ್ತು. ನಮ್ಮ ಉತ್ತರ ಕರ್ನಾಟಕದ ಭಾಷೆಯಲ್ಲಿ ದೆವ್ವಹೊಳಿ ಬಂದೈತಿ ಎಂದು ಹೇಳುತ್ತಾರೆ. ಜಮಖಂಡಿ ತಾಲ್ಲೂಕು ಅಥಣಿ ಕ್ಷೇತ್ರಕ್ಕೆ ಸಮೀಪವಿರುವ ಭಾಗ. ಅಲ್ಲೆಲ್ಲಾ Marking Stones ಇದ್ದು, ಅದನ್ನು ದಾಟಿ ಸಾಕಷ್ಟು ಮುಂದೆ ನೀರು ಬಂದಿದೆ. 2.5 ಲಕ್ಷ ಮನೆಗಳು ಹಾನಿಗೊಂಡಿವೆ. ಅದರಲ್ಲಿ 1.8 ಲಕ್ಷ ಮನೆಗಳು ಶೇ.75ಕ್ಕಿಂತ ಹೆಚ್ಚು ಹಾನಿಗೊಂಡಿದ್ದು, ಸಂಪೂರ್ಣ ಹಾಳಾಗಿದೆ. ಸರ್ಕಾರದ ಒಂದು ಆದೇಶವಿದ್ದು, ಶೇ.15 ರಿಂದ 25ರಷ್ಟು ಮನೆ ಹಾನಿಗೊಂಡಿದ್ದರೆ ಅದಕ್ಕೆ ರೂ.25,000/- ಕೊಡುವುದು. ಶೇ.25-75ರವರೆಗೆ ಮನೆ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಹಾನಿಯಾಗಿದ್ದರೆ ಅದಕ್ಕೆ ರೂ.1 ಲಕ್ಷ ಕೊಡುವುದು. ಶೇ.75ಕ್ಕಿಂತ ಹೆಚ್ಚು ಹಾನಿಯಾಗಿದ್ದರೆ ರೂ.5 ಲಕ್ಷ ಕೊಡುವುದು ಎಂದು ಆದೇಶವಿದೆ.

**ಶ್ರೀ ಆರ್.ಅಶೋಕ್(ಕಂದಾಯ ಸಚಿವರು):–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಅನುಮತಿಯನ್ನು ನೀಡಿದರೆ ಅದರ ಬಗ್ಗೆ ಸ್ವಲ್ಪ ಸ್ಪಷ್ಟೀಕರಣ ನೀಡಬಯಸುತ್ತೇನೆ. ಅದರಿಂದ ಅವರಿಗೆ ಮಾತನಾಡುವುದಕ್ಕೆ ವಿಷಯವೂ ದೊರೆಯುತ್ತದೆ ಹಾಗೂ ಸರ್ಕಾರ ಏನೇನು ಮಾಡಿಲ್ಲವೆಂಬ ವೈಫಲ್ಯವನ್ನು ಹೇಳುವುದಕ್ಕೂ ಅನುಕೂಲವಾಗುತ್ತದೆ.

ಮಾನ್ಯ ಸಭಾಪತಿಯವರೇ, ಮಾನ್ಯ ಪಾಟೀಲರು ಹೇಳಿದಂತೆ ಸುಮಾರು 118 ವರ್ಷದ ನಂತರ ಈ ರೀತಿಯ ಪ್ರವಾಹ ಬಂದು ಇಷ್ಟೊಂದು ದೊಡ್ಡ ಮಟ್ಟದಲ್ಲಿ ಹಾನಿಯಾಗಿದೆ. ಅದಕ್ಕಿಂತ ಹೆಚ್ಚಾಗಿ ನಮಗೆ ಮಹಾರಾಷ್ಟ್ರದಿಂದ ಸುಮಾರು ಆರು ಲಕ್ಷ ಕ್ಯುಸೆಕ್ಸ್‌ಗಿಂತಲೂ ಹೆಚ್ಚು ನೀರು ಆಲಮಟ್ಟಿ ಜಲಾಶಯಕ್ಕೆ ಬಂದಿದೆ. ಮೂರು ಲಕ್ಷ ಕ್ಯುಸೆಕ್ಸ್ ನೀರು ಭೀಮಾ ನದಿಗೆ ಹರಿದಿದೆ. ಮಳೆ ಬಂದಿರುವುದರ ಜೊತೆಯಲ್ಲಿ ನೀರನ್ನು ಹೊರಬಿಟ್ಟಿರುವುದರಿಂದ ಪ್ರವಾಹದ ಪರಿಣಾಮ ಹತ್ತು ಪಟ್ಟು ಹೆಚ್ಚಾಯಿತು. ಕೇವಲ ಮಳೆ ಬಂದಿದ್ದರೆ ಇಷ್ಟು ತೊಂದರೆಯಾಗುತ್ತಿರಲಿಲ್ಲ. ಅದರ ಜೊತೆಯಲ್ಲಿ ಮಹಾರಾಷ್ಟ್ರದ ನೀರು ಬಂದದ್ದರಿಂದ ಇಷ್ಟು ತೊಂದರೆಯುಂಟಾಯಿತು. 22 ಜಿಲ್ಲೆಯ 103 ತಾಲ್ಲೂಕುಗಳನ್ನು ರಾಜ್ಯ ಸರ್ಕಾರ ಪ್ರವಾಹ ಪೀಡಿತ ಎಂದು ಘೋಷಿಸಿದೆ. ಮೊದಲ ಬಾರಿಗೆ ಇಷ್ಟು ಪ್ರದೇಶಗಳ ರಕ್ಷಣೆಗಾಗಿ ನಾವು ಕೇಂದ್ರ ಸರ್ಕಾರವನ್ನು ವಿನಂತಿ ಮಾಡಿದೆವು. ಮಾನ್ಯ ಮುಖ್ಯಮಂತ್ರಿಯವರ ನೇತೃತ್ವದಲ್ಲಿ ಮೊದಲ ಬಾರಿಗೆ ಇಷ್ಟು ದೊಡ್ಡ rescue operation ಅನ್ನು ನಾವು ಮಾಡಿದ್ದೇವೆ. ಏಳು ಲಕ್ಷ ಜನರನ್ನು ಸ್ಥಳಾಂತರಿಸಿದ್ದೇವೆ. ಅಗ್ನಿಶಾಮಕ ಮತ್ತು ತುರ್ತು ಸೇವೆಗಳ 43 ತಂಡಗಳನ್ನು ಇದಕ್ಕೋಸ್ಕರ ನಿಯೋಜನೆ ಮಾಡಿದೆವು. ಎಸ್.ಡಿ.ಆರ್.ಎಫ್, ಸಿವಿಲ್ ಡಿಫೆನ್ಸ್, ಕೆ.ಎಸ್.ಆರ್.ಪಿ, ಎನ್.ಡಿ.ಆರ್.ಎಫ್‌ನ 19 ತಂಡಗಳು ವಾಯುಪಡೆಯ ನಾಲ್ಕು ಹೆಲಿಕಾಪ್ಟರ್‌ಗಳು, ರಕ್ಷಣಾ ಪಡೆಯ ಭೂಸೇನೆ ಮತ್ತು ನೌಕಾಸೇನೆಯ 17 ತಂಡಗಳು ರಕ್ಷಣಾ ಕಾರ್ಯಕ್ಕಾಗಿ ನಿಯೋಜನೆಯಾಗಿತ್ತು. ಅದರಿಂದ ಏಳು ಲಕ್ಷ ಜನರನ್ನು ಸ್ಥಳಾಂತರಗೊಳಿಸಲಾಯಿತು. ತಮಗೆಲ್ಲಾ ತಿಳಿದಿರುವಂತೆ ಉತ್ತರ ಕರ್ನಾಟಕದ ಜನತೆ rescue operation ಮುಗಿಸಿ ಹೋಗಬೇಕಾದ ಸಂದರ್ಭದಲ್ಲಿ ಈ ತಂಡಗಳಿಗೆ ಕೃತಜ್ಞತೆಯನ್ನು ಸಲ್ಲಿಸಿ ಹಾರ ಹಾಕಿ ಕಳುಹಿಸಿದ್ದಾರೆ. ಇದರ ಉಸ್ತುವಾರಿಯನ್ನು ಜಿಲ್ಲಾ ಕಾರ್ಯದರ್ಶಿಗಳು ವಹಿಸಿಕೊಂಡಿದ್ದರು. ತಾವು ಕೇಳಿದ ಮಾಹಿತಿಯನ್ನು ಹೇಳಬೇಕೆಂದರೆ ಶೇ.25ರವರೆಗೆ ಹಾನಿಯಾಗಿರುವವರಿಗೆ ರೂ. 25,000/–, ಶೇ. 25–75ರವರೆಗೆ ಹಾನಿಯಾಗಿರುವವರಿಗೆ ರೂ. 1 ಲಕ್ಷ, ಶೇ. 75ಕ್ಕೂ ಮೇಲ್ಪಟ್ಟು ಹಾನಿಯಾಗಿರುವವರಿಗೆ ರೂ. 5

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಲಕ್ಷ ಎಂದು ಇತ್ತು. ಮಾನ್ಯ ಮುಖ್ಯಮಂತ್ರಿಯವರಲ್ಲಿ ವಿನಂತಿ ಮಾಡಿ ಬದಲಾಯಿಸಲಾಗಿದೆ. ಒಟ್ಟು ಹಾನಿಯಾಗಿರುವ ಮನೆಗಳು 1,20,406. ಅವುಗಳನ್ನು ಎ, ಬಿ ಮತ್ತು ಸಿ ಗ್ರೇಡ್ ಎಂದು ವಿಂಗಡಿಸಲಾಗಿತ್ತು. ಈಗ ಎ ಮತ್ತು ಬಿ ಗ್ರೇಡ್ ಎರಡನ್ನೂ ಕ್ಲಬ್ ಮಾಡಿ 42,293 ಮನೆಗಳಿಗೆ ರೂ.5 ಲಕ್ಷ ಕೊಡಲು ತೀರ್ಮಾನಿಸಲಾಗಿದೆ. ಯಾವುದಕ್ಕೆ ಶೇ.25–75 ರಷ್ಟು ಹಾನಿಯಾಗಿತ್ತೋ, ಅದಕ್ಕೆ ಮೊದಲು ರೂ. 1 ಲಕ್ಷ ಕೊಡಲಾಗುತ್ತಿತ್ತು. ಈಗ ಹೆಚ್ಚುವರಿಯಾಗಿ ರೂ.4 ಲಕ್ಷಗಳನ್ನು ನೀಡಲಾಗುತ್ತದೆ. ಸಿ ಗ್ರೇಡ್ ಅವರಿಗೆ ರೂ.25,000/–ದಿಂದ ರೂ.50,000/–ಕ್ಕೆ ಹೆಚ್ಚಿಸಿ, ನಿನ್ನೆ ನಡೆದಂತಹ ಮಾನ್ಯ ಮುಖ್ಯಮಂತ್ರಿಯವರ ಸಭೆಯಲ್ಲಿ ತೀರ್ಮಾನವನ್ನು ಕೈಗೊಳ್ಳಲಾಗಿದೆ. 77513 ಮನೆಗಳಿಗೆ ರೂ.50,000/– ಹಾಗೂ ಉಳಿದ 42,293 ಮನೆಗಳಿಗೆ ರೂ.5 ಲಕ್ಷ ಪರಿಹಾರ ನೀಡಲಾಗುತ್ತದೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ರೂ.5 ಲಕ್ಷವನ್ನು ರೂ.10 ಲಕ್ಷಕ್ಕೆ ಏರಿಸುವ ಯೋಚನೆ ಸರ್ಕಾರದ ಮುಂದಿದೆಯೇ?

**ಶ್ರೀ ಬಸವರಾಜ ಪಾಟೀಲ್ ಇಟಗಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನನಗೆ ಒಂದು ಸ್ಪಷ್ಟೀಕರಣ ಬೇಕು. ಪ್ರವಾಹ ಬಂದು ಎಲ್ಲಾ ಹಳ್ಳಕೊಳ್ಳಗಳು ತುಂಬಿಕೊಂಡು ತೊಂದರೆಯಾದಾಗ ವೀಕ್ಷಣೆಯನ್ನು ನಡೆಸಿ ಕಂದಾಯ ಇಲಾಖೆಯವರು ಸರ್ಕಾರಕ್ಕೆ ಒಂದು ವರದಿಯನ್ನು ಕೊಟ್ಟರು. ಕೆಲವು ಕಡೆಗಳಲ್ಲಿ ಸಂಪೂರ್ಣ ಜಖಂ ಆಗಿಲ್ಲ. ಕೇವಲ ಶೇ.25 ರಷ್ಟು ಹಾನಿಯಾಗಿದೆ. ಪುನಃ 54–55 ದಿನಗಳಲ್ಲಿ ಮಳೆ ಬಂದು ನೀರು ನಿಂತಿದೆ. ಈಗ ಸಚಿವರು ಹೇಳುತ್ತಿರುವ ಅಂಕಿ ಸಂಖ್ಯೆ ಮೊದಲ ಎರಡು ಮೂರು ದಿನಗಳ ಸರ್ವೆ ವರದಿಯಾಗಿದೆ.

**(ಮುಂದು)**

(118) 10.10.2019 KG.AK 1.30

**ಶ್ರೀ ಬಸವರಾಜ ಪಾಟೀಲ್ ಇಟಗಿ (ಮುಂದು)**

ಈಗ ಬಿದ್ದಿರುವಂತಹ ಮನೆಗಳ ಜನರ ಗತಿ ಏನು? ಅವರಿಗೂ ಸಹ ಬಹಳ ತೊಂದರೆಯಾಗುತ್ತದೆ. ಇದು ನನ್ನ ಗಮನಕ್ಕೆ ಬಂದಿದೆ. ಇದಕ್ಕೆ ಸರ್ಕಾರ ಏನು ಮಾಡುತ್ತದೆ ಎಂದು ಸಹೇಳಬೇಕು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಆರ್.ಅಶೋಕ (ಕಂದಾಯ ಸಚಿವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳಿರುವಂತಹ ವಿಷಯವನ್ನು ಗಮನಕ್ಕೆ ತೆಗೆದುಕೊಂಡಿದ್ದೇವೆ. ಉತ್ತರ ಕರ್ನಾಟಕದ ಕಡೆ ಕೆಲವರು ಮಣ್ಣಿನ ಮನೆಗಳನ್ನು ಕಟ್ಟುತ್ತಾರೆ. ಆ ಮನೆಗಳು ಸ್ವಲ್ಪ ಬಿರುಕು ಬಂದಿರುತ್ತವೆ. ಅಂತಹ ಮನೆಗಳು ಒಂದು ತಿಂಗಳ ನಂತರ ಬೀಳುವಂತಹ ಸಂದರ್ಭಗಳು ಇರುತ್ತವೆ. ನಾವು ಅಂತಹ ಮನೆಗಳನ್ನು ಸಹ consider ಮಾಡುತ್ತೇವೆ. ಅಲ್ಲಿ ಇವತ್ತಿನವರೆಗೂ ಮಳೆ ಆಗುತ್ತಿದೆ. ನಾವು ಮಾನ್ಯ ಸದಸ್ಯರು ಹೇಳಿರುವಂಥದ್ದನ್ನು consider ಮಾಡುತ್ತೇವೆ.

**ಶ್ರೀ ಬಸವರಾಜ ಪಾಟೀಲ್ ಇಟಗಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಈ ವಿಷಯವನ್ನು ತಮ್ಮ ಗಮನಕ್ಕೆ ಏಕೆ ತರುತ್ತಿದ್ದೇನೆಂದರೆ, ಈಗ ಮಳೆ ಬಂದ ತಕ್ಷಣ ಒಂದು ಮನೆ ಬಿದ್ದು ಹೋಗಿತ್ತು. ನಾವು ತಕ್ಷಣ ಗ್ರಾಮ ಲೆಕ್ಕಾಧಿಕಾರಿಯವರನ್ನು ಕರೆದು ಆ ಮನೆ ಬಿದ್ದಿದೆ, ಅದನ್ನು ಬರೆದುಕೊಂಡು ಸರ್ಕಾರದ ಗಮನಕ್ಕೆ ತನ್ನಿ ಎಂದು ಹೇಳಿದೆವು. ಅದಕ್ಕೆ ಗ್ರಾಮ ಲೆಕ್ಕಾಧಿಕಾರಿ ಪರಿಹಾರದ ಪಟ್ಟಿ ಎಲ್ಲಾ close ಆಗಿದೆ ಎಂದು ಉತ್ತರ ಕೊಟ್ಟರು. ಬೆಳಗಾವಿ ಜಿಲ್ಲೆಯಲ್ಲಿ ಈಗಲೂ ಸಹ ಮಳೆ ಬರುತ್ತಿದೆ. ಮೊನ್ನೆ ದಿವಸ ಕೊಪ್ಪಳ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಸಿಕ್ಕಾಪಟ್ಟೆ ಮಳೆ ಬಂದಿದೆ. ಅದಕ್ಕೆ ನಮ್ಮ request ಏನೆಂದರೆ, ನೆರೆಹಾವಳಿ ಪ್ರದೇಶದಲ್ಲಿ ಆಕಸ್ಮಿಕವಾಗಿ ಮನೆ ಬಿದ್ದರೆ ಅವರಿಗೂ ಸಹ ಈಗ ಪರಿಹಾರ ಕೊಡಬೇಕು, ಹಾಗೆಯೇ ಸರ್ಕಾರ 'ಸೊರಬ'ವನ್ನು ಸಹ ಗಮನಕ್ಕೆ ತೆಗೆದುಕೊಳ್ಳಬೇಕು ಎನ್ನುವುದು ನಮ್ಮ ಉದ್ದೇಶ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಈ ವಿಚಾರದಲ್ಲಿ ಒಂದು ಸಣ್ಣ clarification ಇದೆ. ಮಾನ್ಯ ಸಚಿವರು 77 ಸಾವಿರ ಮನೆಗಳು ಡ್ಯಾಮೇಜ್ ಆಗಿದ್ದವು, ಅದಕ್ಕೆ ಪರಿಹಾರ ಕೊಟ್ಟಿದ್ದೇವೆಂದು ಹೇಳಿದ್ದಾರೆ. ನಮ್ಮ ರಾಜ್ಯ ಸರ್ಕಾರ ಕೇಂದ್ರ ಸರ್ಕಾರಕ್ಕೆ ಕಳುಹಿಸಿರುವಂತಹ ವರದಿಯಲ್ಲಿ ಎರಡು ಲಕ್ಷ ಮನೆಗಳಿಗೆ ಡ್ಯಾಮೇಜ್ ಆಗಿದೆ ಎಂದು ತಿಳಿಸಿದ್ದಾರೆ. ಕೇಂದ್ರದಿಂದ ನಮ್ಮ ರಾಜ್ಯಕ್ಕೆ ಬಂದ ತಂಡದವರು ಕೊಟ್ಟಂತಹ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ವರದಿಯಲ್ಲಿ 1,15,000 ಮನೆಗಳಿಗೆ ಡ್ಯಾಮೇಜ್ ಆಗಿದೆ ಎಂದು ಇದೆ. ನಮಗೆ ಇನ್ನೂ ಹೆಚ್ಚಿನ ಮನೆಗಳಿಗೆ ಡ್ಯಾಮೇಜ್ ಆಗಿದೆ ಎಂಬ ಬಗ್ಗೆ ಮಾಹಿತಿ ಇದೆ. ಸರ್ಕಾರ ಕೇವಲ ಒಂದು ಲಕ್ಷ ಮನೆಗಳಿಗೆ ಸೀಮಿತ ಮಾಡುವುದಾದರೆ, ಡ್ಯಾಮೇಜ್ ಆಗಿರುವ ಎರಡು ಲಕ್ಷ ಮನೆಗಳ ಜನರ ಗತಿ ಏನು? ಹಾಗಾದರೆ, ನಮ್ಮ ರಾಜ್ಯ ಸರ್ಕಾರ ಕೇಂದ್ರ ಸರ್ಕಾರಕ್ಕೆ ಕೊಟ್ಟಿರುವಂತಹ ವರದಿ ತಪ್ಪೇ? ಸುಮಾರು ಎರಡು ಸಾವಿರ ಹಳ್ಳಿಗಳಿಗೆ ಡ್ಯಾಮೇಜ್ ಆಗಿದೆ. ಆದರೆ, ವಾಸ್ತವವಾಗಿ ಎರಡು ಲಕ್ಷಕ್ಕೂ ಅಧಿಕ ಮನೆಗಳಿಗೆ ಡ್ಯಾಮೇಜ್ ಆಗಿದೆ ಎನ್ನುವಂತಹ ಮಾಹಿತಿ ಇದೆ. ಹಾಗಾದರೆ, ಅವರ ಗತಿ ಏನಾಗಬೇಕು? ದಯವಿಟ್ಟು ಇದಕ್ಕೆ ಮಾನ್ಯ ಸಚಿವರು ಉತ್ತರ ಕೊಡಬೇಕು.

**ಶ್ರೀ ಆರ್.ಅಶೋಕ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳುವಂತಹ ವಿಚಾರ ಸರಿ ಇದೆ. ನಾವು ಕೇಂದ್ರ ಸರ್ಕಾರಕ್ಕೆ ಎರಡು ಲಕ್ಷ ಮನೆಗಳಿಗೆ ಡ್ಯಾಮೇಜ್ ಆಗಿದೆ ಎಂದು ಮಾಹಿತಿ ಕೊಟ್ಟಿದ್ದೇವೆ. ನಾವು ಕೇಂದ್ರ ಸರ್ಕಾರಕ್ಕೆ ಕೊಟ್ಟಿರುವಂತಹ ಮಾಹಿತಿ ಏನೆಂದರೆ, ಯಾರ್‍ಯಾರ ಮನೆಗಳಿಗೆ ನೀರು ನುಗ್ಗಿದೆ, ಅಂದರೆ ಮನೆಗೆ ಹಾನಿಯಾಗಿಲ್ಲ, ನೀರು ನುಗ್ಗಿ ಮನೆಯಲ್ಲಿದ್ದಂತಹ ಆಹಾರ ಪದಾರ್ಥಗಳು, ಪೀಠೋಪಕರಣಗಳು ಮತ್ತು ಹಾಸಿಗೆಗಳು ಹಾಳಾಗಿರುತ್ತವೆ. ನಾವು ಅಂಥದ್ದರ ಬಗ್ಗೆ ಪಟ್ಟಿ ಕೊಟ್ಟಿರುತ್ತೇವೆ. ಅಂತಹ ಮನೆಗಳಿಗೆ ರಾಜ್ಯ ಸರ್ಕಾರದಿಂದ ಏಳು ಸಾವಿರ ರೂಪಾಯಿ ಮತ್ತು ಕೇಂದ್ರ ಸರ್ಕಾರದಿಂದ ಮೂರು ಸಾವಿರ ರೂಪಾಯಿ ಸೇರಿ ಒಟ್ಟು ಹತ್ತು ಸಾವಿರ ರೂಪಾಯಿಗಳ ಪರಿಹಾರ ಕೊಟ್ಟಿದ್ದೇವೆ. ಅದು ಹತ್ತು ಸಾವಿರ ರೂಪಾಯಿಗಳ ಪರಿಹಾರ ಕೊಟ್ಟಿರುವಂತಹ ಎರಡು ಲಕ್ಷ ಮನೆಗಳ ಪಟ್ಟಿ. ಈಗ ಮನೆಗಳು ಬಿದ್ದಿರುವಂಥದ್ದು ಅಥವಾ ಬಿರುಕು ಬಂದಿರುವಂಥದ್ದು 15%, 20%, 50% ಏನಿವೆ, ಈ ತರಹದ 1,20,406 ಮನೆಗಳು ಎಂದು ಹೇಳಿದ್ದೇವೆ.

**ಶ್ರೀ ಪ್ರಕಾಶ್ ಕೆ. ರಾಥೋಡ್ (ನಾಮ ನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಪರಿಹಾರ ಕೊಟ್ಟಿದ್ದೇವೆಂದು ಹೇಳಿದ್ದಾರೆ. ಕೆಲವು ಮನೆಗಳು ಸರ್ವೆ ಮಾಡಿದ



"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಂತರವು ಸಹ ಬಿದ್ದಿವೆ, ಅದರ ಜೊತೆಗೆ ಈಗಲೂ ಅಲ್ಲಿ ಮಳೆ ಬರುತ್ತಿದೆ. ಹಾಗಾಗಿ, ಈಗಲೂ ಸಹ ಅಲ್ಲಿ ಮನೆಗಳು ಬೀಳುತ್ತಿವೆ. ಈ ಮನೆಗಳಿಗೂ ಸಹ ಪರಿಹಾರ ಕೊಡಬೇಕು. ಈ ರೀತಿ ಪರಿಹಾರ ಕೊಡುವಂತಹ ಸಂದರ್ಭದಲ್ಲಿ ಒಂದು ಕುಟುಂಬಕ್ಕೆ ಎಂದು ಕೊಡುತ್ತಿದ್ದಾರೆ. ಆದರೆ, ಆ ಒಂದು ಮನೆಯಲ್ಲಿ ಹಲವಾರು ಕುಟುಂಬಗಳು ವಾಸವಾಗಿರುತ್ತಾರೆ. ತಾವು ಅದಕ್ಕೆ ಪರಿಹಾರ ಕೊಡುತ್ತಿಲ್ಲ. ಮನೆಗಳಿಗೆ ನೀರು ನುಗ್ಗಿದ್ದಕ್ಕೆ ಪರಿಹಾರ ಕೊಡುತ್ತಿದ್ದಾರೆ. ಒಂದು ಕುಟುಂಬಕ್ಕೆ ಒಂದು ಪರಿಹಾರವನ್ನು ಮಾತ್ರ ಕೊಡುತ್ತಿದ್ದಾರೆ.

(ಗೊಂದಲ)

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಗ್ರಾಮೀಣ ಪ್ರದೇಶದಲ್ಲಿ ಒಂದೇ ಮನೆ ಇರುತ್ತದೆ. ಆ ಮನೆಯಲ್ಲಿ ಸುಮಾರು 3 ರಿಂದ 4 ಜನ ಅಣ್ಣ ತಮ್ಮಂದಿರು ಇರುತ್ತಾರೆ. ಆದರೆ, ಅವರು ವಿಭಾಗ ಮಾಡಿಕೊಂಡಿರುತ್ತಾರೆ. ಅವರಿಗೆ ಮನೆ ಕಟ್ಟಿಸಿಕೊಳ್ಳುವುದಕ್ಕೆ ಆಗಿರುವುದಿಲ್ಲ. ಅಂತಹ ಒಂದೇ ಮನೆಯಲ್ಲಿ ನಾಲ್ಕು ಒಲೆಗಳು ಇರುತ್ತವೆ. ಅದರಲ್ಲಿ ಒಬ್ಬರು ಅಡಿಗೆ ಮನೆ, ಒಬ್ಬರು ಮಲಗುವ ಕೊಠಡಿ, ಇನ್ನೊಬ್ಬರು ಪಡಸಾಲೆ ತೆಗೆದುಕೊಂಡಿರುತ್ತಾರೆ. ಇದು ತಮಗೆ ಹೊಸ ವಿಷಯ ಅಲ್ಲ. ಆ ಮನೆಗೆ ಒಂದೇ ಬಾಗಿಲು ಇರುತ್ತದೆ. ಎಲ್ಲರೂ ಆ ಬಾಗಿಲಿನಲ್ಲಿಯೇ ಓಡಾಡುತ್ತಿರುತ್ತಾರೆ. ಹಿಂದೂ ಅವಿಭಕ್ತ ಕುಟುಂಬದ ವ್ಯಾಖ್ಯಾನ ಇಲ್ಲಿ ಸರಿ ಹೊಂದುವುದಿಲ್ಲ. joint living and joint food cannot be treated as an undivided family. ಎಲ್ಲರೂ ಒಂದೇ ಮನೆಯಲ್ಲಿ ಇರುತ್ತಾರೆ. ಇಂತಹದ್ದನ್ನು ಒಂದೇ ಕುಟುಂಬ ಎನ್ನಲು ಹೇಗೆ ಸಾಧ್ಯ?

(ಗೊಂದಲ)

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಸಭಾಪತಿಯವರೇ, ಗ್ರಾಮ ಪಂಚಾಯಿತಿಯಲ್ಲಿ ಮನೆಗಳನ್ನು ನೋಂದಣಿ ಮಾಡಿಸಿರಬೇಕು ಎಂಬುದು ಇಲ್ಲಿ ಮುಖ್ಯವಾದಂತಹ ವಿಷಯವಾಗಿದೆ.

(ಗೊಂದಲ)

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಬಸವರಾಜ ಪಾಟೀಲ್ ಇಟಗಿಯವರು ಏನು ಹೇಳುತ್ತಿದ್ದಾರೆಂದರೆ, ಅದು ಪಂಚಾಯಿತಿಯಲ್ಲಿ division ಆಗಿರುವುದಿಲ್ಲ. They are living separately in the same house.

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಸಭಾಪತಿಯವರೇ, ಇನ್ನೊಂದು ಮುಖ್ಯವಾದಂತಹ ವಿಷಯ ಇದೆ. ಮೊನ್ನೆ ದಿವಸ ದಿನ ಪತ್ರಿಕೆಯಲ್ಲಿ ಯಾರು ಫಲಾನುಭವಿಗಳಿದ್ದಾರೆ, ಅವರು ಗ್ರಾಮ ಪಂಚಾಯಿತಿಯಲ್ಲಿ ಕಡ್ಡಾಯವಾಗಿ ನೋಂದಣಿ ಮಾಡಿಸಿರಬೇಕೆಂದು ಪ್ರಕಟಣೆಯಾಗಿತ್ತು. ಒಂದು ವೇಳೆ, ಆ ರೀತಿಯಾದರೆ, ಯಾರಿಗೂ ಸಹ ಪರಿಹಾರ ಸಿಗುವುದಿಲ್ಲ. ಏಕೆಂದರೆ, ಅಲ್ಲಿ ಬಡವರು ಅವರ ತೋಟದಲ್ಲಿ ಮನೆ ಕಟ್ಟಿಕೊಂಡು ಜೀವನ ಮಾಡುತ್ತಿರುತ್ತಾರೆ. ಈಗ ಈ ರೀತಿಯ ಕಾನೂನನ್ನು ತಂದರೆ, ಮಾನ್ಯ ಸಚಿವರು ಹೇಳಿದಂತಹ ಅಂಕಿ ಸಂಖ್ಯೆಗಳು ಇರಲಿ, ಎರಡು ಸಾವಿರ ಅಥವಾ ಮೂರು ಸಾವಿರ ಫಲಾನುಭವಿಗಳ ಸಂಖ್ಯೆ ದಾಟುವುದಿಲ್ಲ ಎನ್ನುವುದು ನನ್ನ ಅನಿಸಿಕೆ. ಮಾನ್ಯ ಸಭಾಪತಿಯವರೇ, ತಮಗೂ ಸಹ ಗೊತ್ತಿರಬಹುದು, ಮಾನ್ಯ ಸಿದ್ದರಾಮಯ್ಯನವರ ಸರ್ಕಾರ ಇದ್ದಾಗ, ನಮ್ಮ ರಾಯಚೂರು ಜಿಲ್ಲೆಯಲ್ಲಿ ಆಲಿಕಲ್ಲು ಮಳೆ ಆಗಿತ್ತು. ಆಗ ಸರ್ಕಾರ ಒಂದು ಎಕರೆಗೆ ರೂ.25,000/- ಗಳ ಪರಿಹಾರ ಕೊಟ್ಟರು. ಇವತ್ತು ಅವರು NDRF norms ಎಂದು ಏನು ಹೇಳುತ್ತಿದ್ದಾರೆ, ಅದು ಯಾವುದಕ್ಕೂ ಸಹ ಆಗುವುದಿಲ್ಲ. ಅದಕ್ಕೆ ಸರ್ಕಾರ ಇದರ ಬಗ್ಗೆ ಒಂದು ನಿರ್ಣಯ ತೆಗೆದುಕೊಳ್ಳಬೇಕು. ಮಾನ್ಯ ಸಚಿವರು ಯಾರು ಗ್ರಾಮ ಪಂಚಾಯಿತಿಗಳಲ್ಲಿ ಮನೆಗಳನ್ನು ನೋಂದಣಿ ಮಾಡಿಸಿದ್ದಾರೆ ಅಂತಹವರಿಗೆ ಮಾತ್ರ ಪರಿಹಾರ ಕೊಡುವಂತಹ ಕಾನೂನು ಬರುತ್ತಿದೆ ಎಂದು ಹೇಳಿದ್ದಾರೆ, ಅಂತಹ ಕಾನೂನನ್ನು ತರಬಾರದು ಎಂಬುದು ನಮ್ಮ ಅಭಿಪ್ರಾಯ.

(ಗೊಂದಲ)

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಐವನ್ ಡಿ'ಸೋಜಾ (ನಾಮ ನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, in support of what the Hon'ble Member told, ಮಾನ್ಯ ಸಚಿವರು ಮೊನ್ನೆ ದಿವಸ ಪರಿಹಾರವನ್ನು ತೆಗೆದುಕೊಳ್ಳುವುದಕ್ಕೆ ಯಾರೂ ಮುಂದೆ ಬರುತ್ತಿಲ್ಲವೆಂದು ಹೇಳಿಕೆ ಕೊಟ್ಟರು. ಇದು ಅದಕ್ಕೆ ಕಾರಣ. ಮಾನ್ಯ ಸದಸ್ಯರಾದ ಬಸವರಾಜ ಪಾಟೀಲ್ ಇಟಗಿಯವರು ಹೇಳಿದಂತೆ, ಅವರ ಹೆಸರಿನಲ್ಲಿ ಜಾಗ ಇರುವುದಿಲ್ಲ. ಹಾಗಾಗಿ ಅವರಿಗೆ, ...

(ಗೊಂದಲ)

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ಈ ಸಚಿವರು ಹೇಳಿಕೆ ಕೊಟ್ಟಿಲ್ಲ. ಬೇರೆಯವರು ಕೊಟ್ಟಿದ್ದಾರೆ.,

(ಗೊಂದಲ)

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಐವನ್ ಡಿ'ಸೋಜಾರವರು ಹೇಳಿದಂತೆ, ಆ ಬಗ್ಗೆ ಮಾತುಗಳು ಬಹಳ ಇವೆ. ಪರಿಹಾರ ಕೇಳಲು ಯಾರೂ ಮುಂದೆ ಬರುತ್ತಿಲ್ಲ, ಯಾರೂ ಅರ್ಜಿ ಕೊಟ್ಟಿಲ್ಲ, ಅಷ್ಟೇ ಅಲ್ಲ ಕೇಂದ್ರ ಸರ್ಕಾರದ ಹಣದ ಅವಶ್ಯಕತೆ ಇಲ್ಲ. ಈ ರೀತಿ ಏನೇನೋ ಮಾತನಾಡಿದ್ದಾರೆ. ಈಗ ಅದರ ಬಗ್ಗೆ ಚರ್ಚೆ ಬೇಡ. You can straightaway come to the subject.

**ಶ್ರೀ ಆರ್.ಅಶೋಕ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಬಸವರಾಜ ಪಾಟೀಲ್ ಇಟಗಿಯವರು ದಾಖಲೆಗಳಿಲ್ಲದೆ ಪರಿಹಾರ ಸಿಗುತ್ತಿಲ್ಲವೆಂಬ ಒಂದು ಪ್ರಶ್ನೆಯನ್ನು ಎತ್ತಿದ್ದಾರೆ. ಅದಕ್ಕೆ ಉತ್ತರ ಹೇಳುತ್ತೇನೆ. Unauthorized construction ಆಗಿದ್ದರೂ ಸಹ, ಯಾವುದೇ ದಾಖಲೆಗಳು ಇಲ್ಲದೇ ಪೂರ್ತಿ ಬಿದ್ದು ಹೋಗಿರುವಂತಹ ಮನೆ identify ಆದರೂ ಸಹ, ಅಂತಹ ಮನೆಗೂ ಐದು ಲಕ್ಷ ರೂಪಾಯಿಗಳು ಮತ್ತು ನೀರು ನುಗ್ಗಿರುವಂತಹ ಮನೆಗೆ 10 ಸಾವಿರ ರೂಪಾಯಿಗಳ ಪರಿಹಾರ ಕೊಡುತ್ತೇವೆ. ನಾನು ಈ ಮಾತನ್ನು ಸದನದಲ್ಲಿ ಹೇಳುತ್ತಿದ್ದೇನೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಸದಸ್ಯರಾದ ಬಸವರಾಜ ಪಾಟೀಲ್ ಇಟಗಿಯವರು ಹೇಳಿದ್ದನ್ನು clarify ಮಾಡುತ್ತೇನೆ. ಸರ್ಕಾರ unauthorized structure ಗಳಿಗೂ ಪರಿಹಾರ ಕೊಡಬೇಕೆಂದು ನಿರ್ಣಯ ಕೈಗೊಂಡಿದೆ. ನಾವು ಅದನ್ನು ಸ್ವಾಗತ ಮಾಡುತ್ತೇವೆ. ಅದರಲ್ಲಿ ಎರಡು ಮಾತಿಲ್ಲ. ಆದರೆ, ಒಂದೇ ಮನೆಯಲ್ಲಿ 4 ಕುಟುಂಬಗಳು ವಾಸ ಮಾಡುತ್ತಿದ್ದಾರೆ. They are living separately.

**ಶ್ರೀ ಆರ್.ಅಶೋಕ:–** ಮಾನ್ಯ ಸಭಾಪತಿಯವರೇ, ಅವರೇ ಸರ್ಕಾರ ನಡೆಸಿದ್ದಾರೆ. ನಾವು ಈಗ ಸರ್ಕಾರವನ್ನು ನಡೆಸುತ್ತಿದ್ದೇವೆ. ಅವರು ಸುಮಾರು 60 ವರ್ಷಗಳ ಕಾಲ ಸರ್ಕಾರ ನಡೆಸಿದ್ದಾರೆ. ನಾವು ಏನಾದರೊಂದು ದಾಖಲೆ, ಒಂದು ನಿಮಿಷ...

(ಗೊಂದಲ)

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ನಾವು ಈ ರೀತಿ ಮಾಡಿಲ್ಲ. ನಾವು ಸರ್ಕಾರವನ್ನು ಸರಿಯಾಗಿ ನಡೆಸಿದ್ದೇವೆ. ಇಲ್ಲವೆಂದರೆ, ನಮಗೆ ಕೇಳುವುದಕ್ಕೆ ಎಲ್ಲಿ ನೈತಿಕತೆ ಇರುತ್ತಿತ್ತು? One who seeks equity must do equity. ‘ನೀತಿ ಹೇಳುವಂತಹವರು ನೀತಿವಂತರಾಗಿರಬೇಕು’. ನಾವು ಸುಮಾರು ವರ್ಷಗಳ ಕಾಲ ಸರ್ಕಾರ ನಡೆಸಿದ್ದೇವೆ. ನಾವು ನೆರೆ ಹಾವಳಿ ವಿಷಯದಲ್ಲಿ ರಾಜಕಾರಣ ಮಾಡುವುದಿಲ್ಲವೆಂಬ ಮಾತನ್ನು ಹೇಳಿದ್ದೇವೆ. ನಾವು ಅವರಿಗೆ ಸಹಕಾರ ನೀಡುತ್ತೇವೆಂದು ಹೇಳಿದ್ದೇವೆ. ರಾಜ್ಯದಲ್ಲಿ ವಾಸ್ತವಿಕವಾಗಿ ಏನಾಗಿದೆ ಎಂಬುದನ್ನು ಕೇಳುತ್ತಿದ್ದೇವೆ ಅಷ್ಟೇ;

(ಗೊಂದಲ)

**ಶ್ರೀ ಆರ್.ಅಶೋಕ:–** ಮಾನ್ಯ ಸಭಾಪತಿಯವರೇ, ಹಳೇ ಮೈಸೂರು ಭಾಗದಲ್ಲಿಯೂ ಸಹ ಈ ಸಮಸ್ಯೆ ಇದೆ.

“ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

(ಗೊಂದಲ)

**ಡಾ|| ಜಯಮಾಲ(ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಸಚಿವರಲ್ಲಿ ಒಂದು request ಮಾಡಿಕೊಳ್ಳುತ್ತೇನೆ. ನೀವು 60 ವರ್ಷ, 70 ವರ್ಷ ಸರ್ಕಾರ ಮಾಡಿದ್ದೀರಿ, ಆದ್ದರಿಂದ, ನೀವು ಅಲ್ಲಿ ಮಾತನಾಡಬೇಕು, ಇಲ್ಲಿ ಮಾತನಾಡಬೇಕು ಎನ್ನುವಂತಹ ವಿಷಯವನ್ನು ಈ ಪರಿಹಾರದ ವಿಷಯದಲ್ಲಿ ಅಥವಾ ಇಂತಹ ಗಂಭೀರವಾದಂತಹ ವಿಷಯದಲ್ಲಿ ದಯವಿಟ್ಟು ಯಾರು ತರಬಾರದು. ದಯವಿಟ್ಟು ಇದರಲ್ಲಿ ರಾಜಕೀಯವನ್ನು ಬೆರಸಬಾರದು ಎಂದು ನಾನು ಎಲ್ಲರನ್ನು ಕೇಳಿಕೊಳ್ಳುತ್ತೇನೆ. ಇದು ಜನರ ಪರವಾಗಿ ಅಲ್ಲ. ಇದು ನಮ್ಮ ಆಯ್ಕೆ.

**ಶ್ರೀ ಆರ್.ಅಶೋಕ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ನಾನು ಏನು ಹೇಳಿದ್ದೇನೆಂದು ಕಡತದಲ್ಲಿ ಇನ್ನೊಂದು ಬಾರಿ ಕೇಳಲಿ. ನೀವು ಸರ್ಕಾರ ನಡೆಸಿದ್ದೀರಿ ಎಂದು ಹೇಳಿದ್ದೇನೆ. ನಾನು ಅದನ್ನು ಅಪಾದನೆ ಮಾಡಿಲ್ಲ. ಅವರು ಅನುಭವ ಇರುವವರು ಎಂದು ನಾನು ನನ್ನ ಭಾವನೆಯಲ್ಲಿ ಹೇಳಿದ್ದೇನೆ. ನಾನು ಯಾವುದೇ ಚುಚ್ಚು ಮಾತುಗಳಿಂದ ಹೇಳಿಲ್ಲ. ಆ ರೀತಿ ಹೇಳುವಂತಹ ಅಭ್ಯಾಸವು ಸಹ ನನಗೆ ಇಲ್ಲ.

(ಗೊಂದಲ)

**ಡಾ|| ಜಯಮಾಲ:–** ಮಾನ್ಯ ಸಭಾಪತಿಯವರೇ, ಇಲ್ಲ ...

**ಶ್ರೀ ಆರ್.ಅಶೋಕ:–** ಮಾನ್ಯ ಸಭಾಪತಿಯವರೇ, ಸರ್ಕಾರದ ದಾಖಲೆಗಳು ಯಾವ ರೀತಿ ನಡೆಯುತ್ತವೆ. ನಾವು ಕೇಂದ್ರ ಸರ್ಕಾರಕ್ಕೆ ಯಾವ ರೀತಿ ವರದಿ ಕೊಡುತ್ತೇವೆ. ಕೇಂದ್ರ ಸರ್ಕಾರ ಯಾವ ರೀತಿ ದಾಖಲೆಗಳನ್ನು consider ಮಾಡುತ್ತದೆ ಎನ್ನುವುದಕ್ಕೆ ಅವರು ನನಗಿಂತ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅನುಭವ ಇದ್ದಾರೆ ಎನ್ನುವಂತಹ ಮಾತಿನಲ್ಲಿ ಹೇಳಿದ್ದೇನೆಯೇ ಹೊರತು ಇದರಲ್ಲಿ ಯಾವುದೇ ರೀತಿಯ ಚುಚ್ಚು ಮಾತುಗಳನ್ನು ಹೇಳಿಲ್ಲ.

**(ಮುಂದು...)**

(119)10-10-2019(1-40)ಎಂವಿ-ಆರ್‌ಎನ್

**ಶ್ರೀ ಪ್ರಕಾಶ್ ಕೆ. ರಾಥೋಡ್ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ನನ್ನ ಅನುಭವದಲ್ಲಿ ಕೇಂದ್ರದಲ್ಲಿ ನಮ್ಮ ಸರ್ಕಾರವಿದ್ದಾಗ ಕೂಡಲೇ ಸ್ಪಂದನೆ ಮಾಡಿತ್ತು.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಪ್ರಕಾಶ್ ಕೆ. ರಾಥೋಡ್‌ರವರು ಅವರ ಸರದಿ ಬಂದಾಗ ಮಾತನಾಡಲಿ. ಮಾನ್ಯ ಸಭಾನಾಯಕರು ಕಾಂಗ್ರೆಸ್ ಪಕ್ಷದವರು ಸುಮಾರು 60 ವರ್ಷ ರಾಜ್ಯಭಾರ ಮಾಡಿದ್ದಾರೆಂದು ಹೇಳಿದ್ದಾರೆ.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ ನೀವು yield ಆದರೆ ಮೂರು ದಿವಸಗಳಾದರೂ ಸಮಯ ಸಾಕಾಗುವುದಿಲ್ಲ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಬ್ರಿಟಿಷರು ನಮಗೆ ಸ್ವಾತಂತ್ರ್ಯ ಕೊಟ್ಟು ನಮ್ಮ ದೇಶವನ್ನು ಬಿಟ್ಟು ಹೋದಾಗ. ಆಗಿನ ಪರಿಸ್ಥಿತಿ ಏನಿತ್ತು ಎಂದರೆ, ಈ ದೇಶದಲ್ಲಿ ಶೇಕಡಾ 100ಕ್ಕೆ-85ರಷ್ಟು ಜನರು ಅಶಿಕ್ಷಿತರು ಇದ್ದರು. ಶೇಕಡಾ 100ಕ್ಕೆ-75ರಷ್ಟು ಜನರು ತಲೆಯ ಮೇಲೆ ಸೂರು ಇಲ್ಲದವರು ಇದ್ದರು. ಶೇಕಡಾ 100ಕ್ಕೆ-65ರಷ್ಟು ಜನರು ಒಂದು ಹೊತ್ತು ಊಟ ಮಾಡುತ್ತಿದ್ದರು. ಮಧ್ಯಾಹ್ನ ಊಟ ಮಾಡುವುದು, ರಾತ್ರಿ ಬಂದು ಚೆನ್ನಾಗಿ ನೀರು ಕುಡಿದು ಹೊಟ್ಟೆಯನ್ನು ತುಂಬಿಸಿಕೊಳ್ಳುವಂತಹ ಸ್ಥಿತಿ ಇತ್ತು. ಆದರೆ, ಇವತ್ತು ಇಡೀ ವಿಶ್ವದಲ್ಲೇ ಶಕ್ತಿಶಾಲಿ ರಾಷ್ಟ್ರವನ್ನಾಗಿ ನಿರ್ಮಾಣ ಮಾಡಿದಂತಹ ಕೀರ್ತಿ ಅಂದರೆ ನಾವು 60 ವರ್ಷ ಆಳಿದಂತಹ ಸಂದರ್ಭದಲ್ಲಿ ಮಾಡಿದ್ದೇವೆ. ಆ ಸಮಯದಲ್ಲಿ ಬ್ರಿಟಿಷರು ನಮ್ಮನ್ನು ಬಿಟ್ಟು ಹೋದಾಗ ಮೂರ್ನಾಲ್ಕು ಹಳೆ ವಿಮಾನ ಮತ್ತು ಮುರಿದಂತಹ ಟ್ಯಾಂಕ್‌ಗಳು ಇದ್ದವು. ಆದರೆ, ಇವತ್ತು ಮಿಲಿಟರಿಯಲ್ಲಿ ಪ್ರಪಂಚದಲ್ಲೇ ನಾಲ್ಕನೇ ಶಕ್ತಿಶಾಲಿ ರಾಷ್ಟ್ರವಾಗಿದೆ. ಇವತ್ತು ಶೇಕಡಾ 85ರಷ್ಟು ಅಶಿಕ್ಷಿತರನ್ನು ಸುಶಿಕ್ಷಿತರನ್ನಾಗಿ ಮಾಡಿದ್ದೇವೆ. ಶೇಕಡಾ 75ರಷ್ಟು ತಲೆಯ ಮೇಲೆ ಸೂರು ಇಲ್ಲದವರಿಗೆ ಗುಡಿಸಲು ಮುಕ್ತ ರಾಷ್ಟ್ರವನ್ನಾಗಿ ಮಾಡಿದ್ದೇವೆ. ಒಂದು ಹೊತ್ತಿನ ಊಟಕ್ಕೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಗತಿಯಿಲ್ಲದಂತಹ ಪರಿಸ್ಥಿತಿಯಲ್ಲಿ, ಇವತ್ತು ನಾವು ಎರಡು ಹೊತ್ತಿನ ಊಟ ಮಾಡುತ್ತಿದ್ದೇವೆ. ಈಗ ಯಾರು ಕ್ರಾಂತಿಕಾರಿ ಕಾನೂನು ತಂದಿದ್ದಾರೆ.

ಮಾನ್ಯ ಸಚಿವರಾದ ಶ್ರೀ ಲಕ್ಷ್ಮಣ ಸವದಿಯವರು ಕುಳಿತುಕೊಳ್ಳಿ, ಮೊದಲು ನಾನು ಹೇಳುವುದನ್ನು ಕೇಳಿ. ಇವತ್ತು ಈ ದೇಶ ಇಡೀ ಜಗತ್ತಿನಲ್ಲಿ ದೊಡ್ಡದಾದಂತಹ ಪ್ರಜಾಸತ್ತಾತ್ಮಕ ರಾಷ್ಟ್ರ ಮತ್ತು ಶಕ್ತಿಶಾಲಿಯಾದಂತಹ ರಾಷ್ಟ್ರವಾಗಿದೆ. ಪ್ರತಿಯೊಬ್ಬ ಭಾರತೀಯನು ಹೆಮ್ಮೆಯಿಂದ ಮತ್ತು ಗರ್ವದಿಂದ ನಾನು ಭಾರತೀಯ ಎಂದು ಹೇಳುವಂತಹ ಶಕ್ತಿ ಸಾಮರ್ಥ್ಯ ತಂದವರು ನಾವು. ಅಂದರೆ, 60 ವರ್ಷ ಆಳಿದವರು. ಈಗ ವಿಶ್ರಾಂತರಾಗುವುದು ಬೇಡ.

**(ಗೊಂದಲ)**

**ಶ್ರೀ ಲಕ್ಷ್ಮಣ ಎಸ್. ಸವದಿ (ಸಾರಿಗೆ ಸಚಿವರು):–** ಮಾನ್ಯ ಸಭಾಪತಿಯವರೇ, ಅವರು ವಿಶ್ರಾಂತರಾಗುವುದು ಬೇಡ. ನಾವು ಹೇಳುವುದು ಹಳೆ ವಿಮಾನದಲ್ಲಿ ಓಡಾಡುವುದು ಬೇಡ, ಹೊಸ ವಿಮಾನಕ್ಕೆ ಬನ್ನಿ ಎಂದು ಹೇಳುತ್ತಿದ್ದೇವೆ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಅಂದರೆ ಹೊಸ ವಿಮಾನಕ್ಕೆ. ಈಗ ನೋಡಿ ನಿಮ್ಮ ರಫೇಲ್ ಓಡಿದರೆ ಮಾತ್ರ ದಾರಿ. ಅದು ದಾರಿ ಬಿಟ್ಟರೆ ನಮಗೆಲ್ಲರಿಗೂ ಜಾಗವಾಗುತ್ತದೆ.

**ಶ್ರೀ ಎನ್.ರವಿ ಕುಮಾರ್ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರೇ, ನೀವು ಶೇಕಡಾ 75ರಷ್ಟು ಮತ್ತು 85ರಷ್ಟು ಕೆಲಸವನ್ನು ಮಾಡಿದ್ದರೆ, ಕಾಂಗ್ರೆಸ್ ಪಕ್ಷಕ್ಕೆ ಈ ರೀತಿಯ ಪರಿಸ್ಥಿತಿ ಏಕೆ ಬಂತು? ನೀವು ಏನು ಮಾಡಿದ್ದೀರಿ ಎಂದು ಜನ ನಿಮಗೆ ಸರಿಯಾದ ಉತ್ತರವನ್ನು ಕೊಟ್ಟಿದ್ದಾರೆ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ನಾನು ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಿ.

**ಸಭಾಪತಿಯವರು:–** ಈಗ ತಾವು yield ಆಗುವುದು ಬೇಡ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎನ್.ರವಿ ಕುಮಾರ್:–** ಮಾನ್ಯ ಸಭಾಪತಿಯವರೇ, ಅವರು ಏನು ಕೆಲಸ ಮಾಡಿದ್ದಾರೆಂದು ತಿಳಿದುಕೊಂಡು ಜನರು ಅವರಿಗೆ ಸರಿಯಾದ ಉತ್ತರವನ್ನು ಕೊಟ್ಟಿದ್ದಾರೆ.

**ಶ್ರೀ ಐವನ್ ಡಿ'ಸೋಜಾ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಅವರ ಪರಿಸ್ಥಿತಿ ಏನಿತ್ತು?

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, I have not yielded.

**(ಗೊಂದಲ)**

**ಶ್ರೀ ಎನ್.ರವಿ ಕುಮಾರ್:–** ಮಾನ್ಯ ಸಭಾಪತಿಯವರೇ, ಪಾರ್ಲಿಮೆಂಟ್‌ನಲ್ಲಿ opposition party leader ಆಗಿ ...

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರನ್ನು ಕುಳಿತುಕೊಳ್ಳುವುದಕ್ಕೆ ಹೇಳಿ.

**(ಗೊಂದಲ)**

**ಸಭಾಪತಿಯವರು:–** ಈಗ ಚರ್ಚೆ ಮಾಡುವ ಅವಶ್ಯಕತೆ ಇಲ್ಲದಿದ್ದರೆ ಹೇಳಿ ಇಲ್ಲಿಗೆ ಮುಗಿಸೋಣ. ಮಾನ್ಯ ವಿರೋಧ ಪಕ್ಷದ ನಾಯಕರೇ ತಾವು yield ಆಗುವುದು ಬೇಡ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ನಾನು yield ಆಗುವುದಿಲ್ಲ. ಏನೋ ಒಂದು ಮಾಹಿತಿಯನ್ನು ಕೊಡುತ್ತಿದ್ದೇನೆ. ಎಲ್ಲರೂ ಎದ್ದು ಮಾತನಾಡುತ್ತಿದ್ದಾರೆ. ಈ ರೀತಿಯಾದರೆ ನಾನು ಯಾವ ರೀತಿಯಾಗಿ ಮಾತನಾಡುವುದು? It will not go on record.

**(ಗೊಂದಲ)**

**ಡಾ॥ ವೈ.ಎ.ನಾರಾಯಣ ಸ್ವಾಮಿ:–** ಮಾನ್ಯ ಸಭಾಪತಿಯವರೇ, ಇದನ್ನು ರೆಕಾರ್ಡ್‌ಗೆ ಕಳುಹಿಸುವವರು ಯಾರು? ಇದನ್ನು ರೆಕಾರ್ಡ್‌ಗೆ ಕಳುಹಿಸುವುದು ಮಾನ್ಯ ಸಭಾಪತಿಯವರು.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ನಾನು ಹೇಳಿದ ಹಾಗೆ, ಹಿಂದೂ ಅವಿಭಕ್ತ ಕುಟುಂಬ ಏನಿದೆ, ಈಗ ಇದು ಅಗ್ನಿ ಸಮಯ ಅದರ ಕಡೆಗೆ ನಾವು ಹೋಗಬೇಕಾಗುತ್ತದೆ. ಈಗ ಏನಾಗಿದೆ ಎಂದರೆ, ಗ್ರಾಮೀಣ ಭಾಗದಲ್ಲಿ ಒಂದು ಮನೆಯಲ್ಲಿ ನಾಲ್ಕು ಜನ ಅಣ್ಣ–ತಮ್ಮಂದಿರು ಭಾಗವಾಗಿರುತ್ತಾರೆ. ಒಂದೊಂದು ಕೊಠಡಿಯಲ್ಲಿ ಅವರ ಹೆಂಡತಿ ಮಕ್ಕಳು ಇರುತ್ತಾರೆ, ಆದರೆ ಅವರ ಮುಖ್ಯದ್ವಾರ ಮಾತ್ರ ಒಂದೇ ಇರುತ್ತದೆ ಅದರಲ್ಲೇ ಎಲ್ಲರೂ ಸಹ ಓಡಾಡುತ್ತಿರುತ್ತಾರೆ. ಮಾನ್ಯ ಸದಸ್ಯರಾದ ಶ್ರೀ ಬಸವರಾಜ ಪಾಟೀಲ ಇಟಗಿಯವರು ಏನು ಹೇಳಿದರು ಅಂದರೆ. ಪಂಚಾಯಿತಿಯಲ್ಲಿ ಫಾರ್ಮ್ ನಂಬರ್–9 ಎಂದು ರಿಜಿಸ್ಟರ್ ಇದೆ, ಅಲ್ಲಿ ರಿಜಿಸ್ಟರ್ ಆಗಬೇಕು. ಅದರಲ್ಲಿ ನಮೂದಾಗಿಲ್ಲವೆಂದರೆ ಜಂಟಿ ಎಂದು ಪರಿಗಣನೆ ಆಗಬಾರದು. ಈಗ ಫಾರ್ಮ್ ನಂಬರ್–9 ಅದು ಡಿವಿಜನ್ ಆಗಿರುವುದಿಲ್ಲವೆಂದು. ಮಾನ್ಯ ಸಭಾನಾಯಕರಿಗೆ ಗೊತ್ತಿದೆ. ಅವರು ಅದನ್ನು ಡಿವಿಜನ್ ಮಾಡಿಕೊಂಡಿರುವುದಿಲ್ಲ. ಅವರುಗಳು ತಮ್ಮ ತಮ್ಮ ಪಾಲನ್ನು ಹಂಚಿಕೊಂಡು ಅವರು ತಮ್ಮ ಜೀವನವನ್ನು ನಡೆಸಿಕೊಂಡು ಹೋಗುತ್ತಿರುತ್ತಾರೆ. ಈಗ ನಾಲ್ಕು ಮಂದಿ ಇದ್ದರೆ 10,000/– ರೂಪಾಯಿಗಳನ್ನು ಹಂಚಿಕೊಂಡರೆ 2,500/– ರೂಪಾಯಿಗಳು ಬರುತ್ತದೆ. ಅಲ್ಲಿ ಹತ್ತು ಮಂದಿ ಹತ್ತು ಕೊಠಡಿಗಳಿದ್ದರೆ ಒಂದೊಂದು ಸಾವಿರ ರೂಪಾಯಿಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಇದರಿಂದ ಅನ್ಯಾಯವಾಗುತ್ತದೆ ಎನ್ನುವಂತಹ ಭಾವನೆಯಿಂದ ಆ ವಿಚಾರಗಳನ್ನು ನಮ್ಮ ಸದಸ್ಯರು ಹೇಳಿದ್ದಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ...

**ಶ್ರೀ ಎಸ್.ಆರ್.ಪಾಟೀಲ್** ಮಾನ್ಯ ಸಭಾನಾಯಕರೇ, ನಾನು yield ಆದರೆ ಮಾತನಾಡುವುದಕ್ಕೆ ಆಗುವುದಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳುವುದೇನೆಂದರೆ, ಅವಿಭಕ್ತ ಕುಟುಂಬಗಳು ಎರಡು–ಮೂರು ಕುಟುಂಬಗಳು ಒಂದೇ ಮನೆಯಲ್ಲಿ ಇರುತ್ತಾರೆ. ಒಬ್ಬೊಬ್ಬರ ಬಳಿ ಒಂದೊಂದು ರೇಷನ್ ಕಾರ್ಡ್ ಇರುತ್ತದೆ. ಈಗ ಒಬ್ಬರಿಗೆ ಕೊಟ್ಟರೆ ಒಂದೇ ಮನೆಯಲ್ಲಿರುವಂತಹ ಮೂರು ಕುಟುಂಬಗಳು ಹೇಗೆ ಹಂಚಿಕೊಳ್ಳಬೇಕು ಎನ್ನುವುದು ಅಲ್ಲವೇ?

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, I have come to that point. ಮಾನ್ಯ ಸಭಾನಾಯಕರೆ ತಾವು ಏನು ಹೇಳುತ್ತಿದ್ದೀರಿ ಎಂದು ನನಗೆ ಮೊದಲೇ ಗೊತ್ತಾಗಿದೆ. ಅವರ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕುಟುಂಬಗಳಿಗೆ ಪ್ರತ್ಯೇಕವಾಗಿ ರೇಷನ್ ಕಾರ್ಡ್ ಇರುತ್ತದೆ ಎಂದು ಹೇಳುತ್ತಿದ್ದಾರೆ. ಅದು ಎಲ್ಲವೂ ಸಹ ಪೂರ್ತಿಯಾಗಿ ಆಗಿರುವುದಿಲ್ಲ. ಈಗ ಅವರ ಪ್ರಶ್ನೆ ಏನು ಬಂದಿದೆ ಎಂದರೆ, ಪಂಚಾಯಿತಿಯಲ್ಲಿ ಇರುವಂತಹ ರಿಜಿಸ್ಟರ್ ನಂ–9ರಲ್ಲಿ ನಮೂದಾಗಿರಬೇಕು. ಆ ರೀತಿ ನಮೂದಾಗಿದ್ದರೆ ಅದಕ್ಕೆ ಚಕ್ಕುಬಂಧಿ ಇರುತ್ತದೆ. ಪೂರ್ವ–ಪಶ್ಚಿಮಕ್ಕೆ ಯಾವುದು ಮತ್ತು ಉತ್ತರ ದಕ್ಷಿಣಕ್ಕೆ ಯಾವುದು ಎಂದು ಡಿವಿಜನ್ ಇರುತ್ತದೆ. ಅದರ ಬಗ್ಗೆ ಬಹಳ ಆಳಕ್ಕೆ ಹೋಗುವುದು ಬೇಡ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಈಗ ಮನೆ ಬಿದ್ದರೆ, ಅದರ ಗೃಹ ನಿರ್ಮಾಣಕ್ಕೆ ಸುಮಾರು ಐದು ಲಕ್ಷ ರೂಪಾಯಿಗಳನ್ನು ಕೊಡುತ್ತಿದ್ದೇವೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸಭಾನಾಯಕರು ಹೇಳಿದಂತೆ ಅದರ ಪ್ರಶ್ನೆ ಬಂದಿಲ್ಲ. ಈಗ ಒಂದು ಕುಟುಂಬಕ್ಕೆ ಏನು ಹತ್ತು ಸಾವಿರ ರೂಪಾಯಿಗಳನ್ನು ಕೊಡುತ್ತಿದ್ದೀರಿ ಅದರ ಪ್ರಶ್ನೆ ಬಂದಿರುವುದು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ರೇಷನ್ ಕಾರ್ಡ್ ಹೊಂದಿರುವವರು ಕೂಡ...

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸರ್ಕಾರಿ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ಅದರ ಬಗ್ಗೆ ಮಾನ್ಯ ಮಂತ್ರಿಗಳು ಸ್ಪಷ್ಟನೆ ನೀಡಿದ್ದಾರೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಹೌದು ಮಾನ್ಯ ಮಂತ್ರಿಗಳು ಸ್ಪಷ್ಟನೆ ನೀಡಿದ್ದಾರೆ.

**ಶ್ರೀ ಪ್ರಕಾಶ್ ಕೆ. ರಾಥೋಡ್:–** ಮಾನ್ಯ ಸಭಾಪತಿಯವರೇ, ಅವರು ಕೊಟ್ಟಿದಂತಹ ಚೆಕ್ ಅನ್ನು ವಾಪಸ್ಸು ತೆಗೆದುಕೊಂಡಿದ್ದಾರೆ.

**ಸಭಾಪತಿಯವರು:–** ನೀವು ಮಾತನಾಡುವುದು ಬಾಕಿ ಇದೆ. ನೀವು ಮಾತನಾಡುವಾಗ ಆ ವಿಷಯನ್ನು ಹೇಳಿ.

**ಶ್ರೀ ಪ್ರಕಾಶ್ ಕೆ. ರಾಥೋಡ್:–** ಮಾನ್ಯ ಸಭಾಪತಿಯವರೇ, ಬಿಜಾಪುರದಲ್ಲಿ ಒಂದೇ ಕುಟುಂಬವೆಂದು ಹೇಳಿ ಕೊಟ್ಟಿದ್ದಂತಹ ಚೆಕ್ ಅನ್ನು ವಾಪಸ್ಸು ತೆಗೆದುಕೊಂಡಿದ್ದಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಮಾತನಾಡುವುದಕ್ಕೆ ಮುಂಚೆ ಹೆಚ್ಚಿಗೆ ಕೊಟ್ಟಿದ್ದೇವೆ ಅದು ತಪ್ಪಾಗಿದೆ ಎಂದು ಚೆಕ್ ಅನ್ನು ವಾಪಸ್ಸು ತೆಗೆದುಕೊಂಡಿದ್ದಾರೆ. It will be discussed during his speech.

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಮಾನ್ಯ ಸಭಾಪತಿಯವರೇ, ಕೊಟ್ಟಿದ್ದಂತಹ ಒಂದು ಚೆಕ್ ಅನ್ನು ವಾಪಸ್ಸು ತೆಗೆದುಕೊಂಡಿದ್ದಾರೆ ಮತ್ತೊಂದು ಚೆಕ್ ಬೌನ್ಸ್ ಆಗಿದೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ಪ್ರಕಾಶ್ ಕೆ. ರಾಥೋಡ್‌ರವರೇ ನಿಮ್ಮ ಸರದಿ ಬಂದಾಗ ನೀವು ಮಾತನಾಡಿ.

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಮಾನ್ಯ ಸಭಾಪತಿಯವರೇ, ನನ್ನ ಸರದಿ ಬಂದಾಗ ಹೇಳುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಆ ದೃಷ್ಟಿಯಿಂದ ಈಗ 'ಎ' ಮತ್ತು 'ಬಿ' ಅನ್ನು combine ಮಾಡಿ ಐದು ಲಕ್ಷ ರೂಪಾಯಿಗಳನ್ನು ಕೊಡುವಂಥದ್ದು. ಈಗ ಶೇಕಡಾ 25ರಷ್ಟು ಮತ್ತು ಶೇಕಡಾ 50ರಷ್ಟು ಹಾನಿಯಾಗಿದ್ದರೆ, ಒಂದು ಲಕ್ಷದಿಂದ ಐದು ಲಕ್ಷದವರೆಗೆ ಕೊಡುವುದು. ಅಂದರೆ, ಸಂಪೂರ್ಣವಾಗಿ ನಾಶವಾಗಿದೆ ಎಂದು treat ಮಾಡುವುದು. It is welcoming decision.

**ಶ್ರೀ ಆರ್.ಅಶೋಕ್ (ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೇ, ಏಕೆಂದರೆ, ಸದಸ್ಯರು ಗೋಡೆಗಳು ಅರ್ಧ crack ಬಿಟ್ಟರೆ, ಹದಿನೈದು ದಿನ ಅಥವಾ ಒಂದು ತಿಂಗಳ ನಂತರ ಅವುಗಳು ಬಿದ್ದು ಹೋಗುತ್ತವೆ. ಆದುದರಿಂದ ಅಂತಹವುಗಳನ್ನು ಪರಿಗಣನೆ ಮಾಡಿ ಎಂದು ಹೇಳಿದರು. ಅವುಗಳನ್ನು ಸಹ 'ಎ' ಗ್ರೇಡ್‌ಗೆ ಸೇರಿಸಿದ್ದೇವೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ನೀವುಗಳು ಬೆಂಗಳೂರಿನ ಜನ. ನಾವುಗಳೆಲ್ಲರೂ ಸಹ ಹಳ್ಳಿಯಲ್ಲಿ ಬೆಳೆದವರು. ನಾವು ಎಂತಹ ಮನೆಗಳಲ್ಲಿ ಇರುತ್ತೇವೆಂದರೆ, ನಮಗೆ ಒಂದೇ ರೂಮ್ ಇರುತ್ತದೆ. ಅದೇ ಬೆಡ್ ರೂಮ್, ಅದೇ ಲಿವಿಂಗ್ ರೂಮ್ ಮತ್ತು ಅದೇ ಕಿಚನ್ ರೂಮ್ ಸಹ ಆಗಿರುತ್ತದೆ.

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಆರ್.ಅಶೋಕ್:–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಕುಳಿತುಕೊಂಡರೆ ನಾನು ಒಂದು ವಿಷಯವನ್ನು ಹೇಳುತ್ತೇನೆ.

ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದಂತೆ ನಾವೆಲ್ಲರೂ ಬೆಂಗಳೂರಿನವರು ಎಂದರೆ, ನಾವುಗಳು ಸಹ ರೈತರ ಹಿನ್ನೆಲೆಯಲ್ಲಿ ಬಂದಿದ್ದೇವೆ. ಮೊದಲು ಬೆಂಗಳೂರು ಬಹಳ ಕಡಿಮೆ ಇತ್ತು. ಬೆಂಗಳೂರು ಎಂದರೆ, ಹಲಸೂರು, ಚಿಕ್ಕಪೇಟೆ ಮತ್ತು ಚಾಮರಾಜಪೇಟೆ ಇಷ್ಟನ್ನು ಬಿಟ್ಟರೆ ಬೇರೆ ಇರಲಿಲ್ಲ. ಮಲ್ಲೇಶ್ವರಂ ಬಾರ್ಡರ್ ಸ್ಯಾಂಕಿಟ್ಯಾಂಕ್‌ವರೆಗೂ ಕಷ್ಟವಿತ್ತು. ನಾನು ಇದ್ದದ್ದು ಜಾಲಹಳ್ಳಿಯಲ್ಲಿ ಅದು ಬೆಂಗಳೂರಿನಿಂದ ಹದಿನಾಲ್ಕು ಕಿಲೋಮೀಟರ್ ದೂರದಲ್ಲಿತ್ತು. ಮಾನ್ಯ ವಿರೋಧ ಪಕ್ಷದ ನಾಯಕರೇ, ನಮ್ಮನ್ನು ಬೆಂಗಳೂರಿನವರು ಎಂದು ತಿಳಿದುಕೊಳ್ಳಬೇಡಿ. ಅದು ಈಗ ಬೆಂಗಳೂರು ಆಗಿದೆ.

ನಾನು ಬೆಳಿಗ್ಗೆ ಆರು ಗಂಟೆಗೆ ಎದ್ದು ಈಗಿನ ಯಶವಂತಪುರ ರೈಲ್ವೆ ನಿಲ್ದಾಣದ ಹತ್ತಿರ ನಮ್ಮ ಹೊಲ ಇತ್ತು ಅಲ್ಲಿಗೆ ನಾನು ಜೋಳ ಕಾಯುವುದಕ್ಕೆ ಹೋಗಿ ಮತ್ತೆ ಹತ್ತು ಗಂಟೆಗೆ ಸ್ಕೂಲ್‌ಗೆ ಹೋಗಬೇಕಾಗಿತ್ತು. ಮಾನ್ಯ ವಿರೋಧ ಪಕ್ಷದ ನಾಯಕರು ಏನು ಕೆಲಸ ಮಾಡಿದ್ದಾರೆ ಆ ಎಲ್ಲಾ ಕೆಲಸವನ್ನು ನಾನು ಸಹ ಮಾಡಿದ್ದೇನೆ. ನನಗೂ ಸಹ ರೈತರ ಸಮಸ್ಯೆಗಳು ಏನಿದೆ ಎಂದು ಗೊತ್ತಿದೆ. ಆದುದರಿಂದ ಈ ಸಂದರ್ಭದಲ್ಲಿ ಏಕೆಂದರೆ, flood ಆಗಿರುವಂತಹ ಸಂದರ್ಭದಲ್ಲಿ ಇದು ಕಾಂಗ್ರೆಸ್, ಬಿಜೆಪಿ ಮತ್ತು ಜೆಡಿಎಸ್ ಎನ್ನುವಂತಹ ಮನೆಗಳನ್ನು ನೋಡಿ ಅದು flood ಆಗಿರುವುದಿಲ್ಲ. ಇದು ಎಲ್ಲಾ ಕಡೆ ಆಗಿರುವಂಥದ್ದು. ಈ ಸಂದರ್ಭದಲ್ಲಿ ನಾವು ಮತ್ತು ನೀವುಗಳು ಒಟ್ಟಾಗಿ ಸರ್ಕಾರ ಎಲ್ಲೆಲ್ಲಿ ಏನೇನು ಮಾಡಬೇಕಾಗಿತ್ತು ಮತ್ತು ಎಲ್ಲೆಲ್ಲಿ ಸರ್ಕಾರ ತಪ್ಪು ಮಾಡಿದೆ ಎಂದು ಅದನ್ನು ಹೇಳಿದರೆ, ನಾವು ಅದನ್ನು ಬದಲಾವಣೆ ಮಾಡಿಕೊಳ್ಳುತ್ತೇವೆ. ಈಗ ಮಾನ್ಯ ಸದಸ್ಯರು unauthorized ಎಂದು ಹೇಳಿದರು. ಅದಕ್ಕೆ ನಾನು ಇಲ್ಲೇ open ಆಗಿ ಉತ್ತರ ಹೇಳಿದ್ದೇನೆ. ಈ ರೀತಿಯ ತಪ್ಪುಗಳು ಏನಾಗಿದೆ ಎಂದು ಹೇಳಿದರೆ ಅವುಗಳನ್ನು ತಿದ್ದಿಕೊಂಡು ಸರಿಪಡಿಸುತ್ತೇವೆ. ಈಗ flood ಆಗಿರುವಂತಹವರಿಗೆ ಏನು ಅವಶ್ಯಕತೆಯಿದೆ ಅದು ಅವರಿಗೆ ಸಿಗಬೇಕು ಅಷ್ಟೇ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ನಾನು ಕಂದಾಯ ಸಚಿವರಿಗೆ ಏಕೆ ಅವರು ಬೆಂಗಳೂರಿನವರು ಎಂದು ಹೇಳಿದೆ ಎಂದರೆ, ಈಗ ಅವರು ಬೆಂಗಳೂರಿನಲ್ಲಿ ಇದ್ದಾರೆ ಅದಕ್ಕೆ. ಅವರು ಸಹ

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬಾಲ್ಯಾವಸ್ಥೆಯಲ್ಲಿ ಹೊಲ ಕಾಯ್ದಿರುವುದರಿಂದ ಕೃಷಿಕರ ಕಷ್ಟ ಮತ್ತು ನೋವುಗಳು ಗೊತ್ತಿದೆ ಎಂದು ಒಪ್ಪಿಕೊಳ್ಳುತ್ತೇನೆ.

**(ಮುಂದು...)**

(120) 10.10.2019-01.50-LL-RN

ಶ್ರೀ ಎಸ್.ಆರ್. ಪಾಟೀಲ್(ಮುಂದುವರೆದುದು...)

ಮಾನ್ಯ ಸಚಿವರು ಈಗ ಬೆಂಗಳೂರಿನಲ್ಲಿದ್ದಾರೆ. ಅವರನ್ನು ಬೆಂಗಳೂರಿನವರು ಎಂದು ಹೇಳುವುದಷ್ಟೇ ಅಲ್ಲದೇ, 'ಅಶೋಕ ಸಾಮ್ರಾಟ' ಎಂದು ಕರೆಯುತ್ತಾರೆ. ಅಷ್ಟು ಎತ್ತರಕ್ಕೆ ಅವರು ಇವೊತ್ತಿನ ದಿವಸ ಹೋಗಿದ್ದಾರೆ.

**ಶ್ರೀ ಆರ್. ಅಶೋಕ್:-** ಮಾನ್ಯ ಸಭಾಪತಿಯವರೇ, ಇಲ್ಲಿ ಸಮಸ್ಯೆ ಏನಾಗಿದೆ ಎಂದರೆ, ...

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರ ಮೇಲಿನ ಅಭಿಮಾನದಿಂದ ಈ ಮಾತನ್ನು ಹೇಳುತ್ತಿದ್ದೇವೆ.

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೇ, ಬೆಂಗಳೂರಿನಲ್ಲಿ ಇರುವುದು ಶೇಕಡ 25ರಷ್ಟು ಮಾತ್ರ ಒರಿಜನಲ್ ಬೆಂಗಳೂರಿನವರು. ಇನ್ನುಳಿದಂತಹವರು ಉದಾಹರಣೆಗೆ, ಬೆಂಗಳೂರಿನ ಪಶ್ಚಿಮ ಭಾಗಕ್ಕೆ ಹೋದರೆ ಮಂಡ್ಯ, ಮೈಸೂರು ಭಾಗದ ಜನರು ಬೆಂಗಳೂರಿನ ಕಡೆಗೆ ಬಂದಿದ್ದಾರೆ.

**ಡಾ॥ ತೇಜಸ್ವಿನಿ ಗೌಡ:-** ಮಾನ್ಯ ಸಭಾಪತಿಯವರೇ, ಅವರೆಲ್ಲರೂ ವಲಸೆ ಬಂದಿರುತ್ತಾರೆ.

**ಶ್ರೀ ಆರ್. ಅಶೋಕ್ (ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೇ, ಅವರು ವಲಸೆ ಬಂದಿರುವುದಿಲ್ಲ. ನಮ್ಮದೇ ಬೆಂಗಳೂರಿನವರು ಅವರು. ಈ ಕಡೆ ಉತ್ತರ ಕರ್ನಾಟಕ ಭಾಗದವರು ಬಹಳಷ್ಟು ಜನ ಇದ್ದಾರೆ. ಮೂಲ ಬೆಂಗಳೂರಿನವರು ಶೇಕಡ 25ರಷ್ಟು ಮಾತ್ರ ಇದ್ದಾರೆ. ಉಳಿದವರೆಲ್ಲಾ ಇಡೀ ರಾಜ್ಯದ ಮೂಲೆ-ಮೂಲೆಗಳಿಂದ ಬಂದಿದ್ದಾರೆ.

**(ಗೊಂದಲ)**

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಆದುದರಿಂದ, ಬೆಂಗಳೂರು ಈಗ ಬೆಂಗಳೂರು ಆಗಿ ಉಳಿದಿರುವುದಿಲ್ಲ. ಬೆಂಗಳೂರು ಇಡೀ ರಾಜ್ಯದ ಜನಗಳನ್ನು; ಉತ್ತರ ಕರ್ನಾಟಕ ಇರಬಹುದು, ಕರಾವಳಿ ಇರಬಹುದು, ಮಲೆನಾಡು ಇರಬಹುದು ಹಳೇ ಮೈಸೂರು ಹಾಗೂ ಇತರೆ ಎಲ್ಲಾ ಕಡೆಯಿಂದಲೂ ಕೂಡ ಬಂದು ವಾಸವಾಗಿರುವಂತಹವರು.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಹೇಳಿದಷ್ಟೇ ಅಲ್ಲದೇ, ದೇಶದ ಮೂಲೆ-ಮೂಲೆಗಳಿಂದ ಅನೇಕ ಜನ ಬೆಂಗಳೂರಿಗೆ ಬಂದಿದ್ದಾರೆ. ನೆರೆಯ ರಾಜ್ಯಗಳಿಂದ ತೆಲುಗು, ತಮಿಳು, ಮಲೆಯಾಳಿ ಇನ್ನೂ ಅನೇಕ ಭಾಷೆಯ ಜನ ಬಂದಿದ್ದಾರೆ. ಬೆಂಗಳೂರು ಎಂದರೆ, cosmopolitan city ಇದು. ಕೇವಲ ಉತ್ತರ ಕರ್ನಾಟಕ, ಕರಾವಳಿ ಎಂದು ಮಾನ್ಯ ಸಚಿವರು ಏತಕ್ಕೆ ಹೇಳುತ್ತಾರೆ? ಬೆಂಗಳೂರಿಗೆ ದೇಶದ ಎಲ್ಲಾ ಮೂಲೆ-ಮೂಲೆಗಳಿಂದ ಜನ ಬಂದಿದ್ದಾರೆ.

**(ಗೊಂದಲ)**

ಬೆಂಗಳೂರಿನ ಆಕರ್ಷಣೆ ಆ ರೀತಿ ಇದೆ. It is an 'air-conditioned city' ಎಂದು ಒಂದು ಕಾಲಕ್ಕೆ ಹೇಳುತ್ತಿದ್ದರು. ಅಲ್ಲದೇ ಅದು 'ಗ್ರೀನ್ ಸಿಟಿ' ಎಂದು ಇತ್ತು. ಅದಕ್ಕಾಗಿ ದೇಶದ ನಾನಾ ಭಾಗಗಳಿಂದ ಜನರು ಬೆಂಗಳೂರಿಗೆ ಬಂದಿದ್ದಾರೆ. ಇದರ ಜೊತೆಗೆ, ಐಟಿ ಕ್ಷೇತ್ರದಲ್ಲಿಯೂ ಸಹ ಬೆಂಗಳೂರು ಬಹಳಷ್ಟು ದೊಡ್ಡ ಪ್ರಮಾಣದಲ್ಲಿ ಬೆಳವಣಿಗೆಯಾಗಿದೆ. ಅದು ಇರಲಿ, ಅದರ ಬಗ್ಗೆ ನಂತರ ಮಾತನಾಡೋಣ.

ನಾನು ಈಗಾಗಲೇ ಹೇಳಿದ ರೀತಿ, ಉತ್ತರ ಕರ್ನಾಟಕದ ಪ್ರವಾಹದಿಂದಾಗಿ 90 ಕ್ಕಿಂತಲೂ ಹೆಚ್ಚು ಜನ ಪ್ರಾಣವನ್ನು ಕಳೆದುಕೊಂಡಿದ್ದಾರೆ ಮತ್ತು 8.8 ಲಕ್ಷ ಹೆಕ್ಟೇರ್‌ನಷ್ಟು ಭೂಮಿಯಲ್ಲಿರತಕ್ಕಂತಹ ಬೆಳೆಗಳು ನಾಶವಾಗಿವೆ. ಅಂದಾಜು ಅದು 22 ಲಕ್ಷ 20 ಸಾವಿರ ಎಕರೆಯಾಗಿದೆ. ನನ್ನ ದೃಷ್ಟಿಯಲ್ಲಿ ಕನಿಷ್ಠ 25 ಲಕ್ಷ ಎಕರೆ ಜಮೀನಲ್ಲಿದ್ದ ಬೆಳೆ ಸರ್ವನಾಶವಾಗಿದೆ. ಅಂದರೆ, ಕೇವಲ ನೀರು ಬಂದು ಹೋದರೆ ಆಯಿತು. ಆದರೆ, ಬೆಳೆ ಮೇಲೆ 5, 10, 15 ಅಡಿಯಷ್ಟು, ಇನ್ನೂ ಕೆಲವು ಕಡೆ ಎಲೆಕ್ಟ್ರಿಕಲ್ ಪೋಲ್‌ನ ಮೇಲೆ ನೀರು ನಿಂತಿದೆ. ಅದರಿಂದಾಗಿ, ಕಸ-ಕಡ್ಡಿಗಳು ನೀರಿನಲ್ಲಿ ತೇಲಿಕೊಂಡು ಬಂದು ಕಂಡಕ್ಟರ್‌ಗಳ ವೈರ್‌ಗಳಿಗೆ ಬೆಂಕಿ ಹತ್ತಿಕೊಂಡಿದೆ. ಅಷ್ಟು ದೊಡ್ಡ ಪ್ರಮಾಣದಲ್ಲಿ ಇವೊತ್ತಿನ ದಿವಸ ಬೆಳೆ ಹಾನಿಯಾಗಿದೆ. ಅದರ ಬಗ್ಗೆ ಎನ್.ಡಿ.ಆರ್.ಎಫ್., ಅಥವಾ ಎಸ್.ಡಿ.ಆರ್.ಎಫ್., ನಾರ್ಮ್ಸ್ ಪ್ರಕಾರ 13 ಸಾವಿರ ಎಂದರೆ, 5 ಸಾವಿರ ಒಂದು ಎಕರೆಗೆ ಪರಿಹಾರ ಕೊಟ್ಟರೆ ಆಗುವುದಿಲ್ಲ. ಒಂದು ಎಕರೆ ಕಬ್ಬು ಬೆಳೆಯಬೇಕಾದರೆ ರೈತನಿಗೆ cost of cultivation ಕನಿಷ್ಠ ಒಂದು ಲಕ್ಷ ರೂಪಾಯಿ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಖರ್ಚಾಗುತ್ತದೆ. ಕಬ್ಬು ತುಳಿದು, ಗೊಬ್ಬರ ಹಾಕಿ, ಅದನ್ನು cultivation ಮಾಡಿ, ಅದಕ್ಕೆ ನೀರು ಹಾಯಿಸಿ, ಔಷದೋಪಚಾರ ಮಾಡಿ, ಕಬ್ಬು ಬೆಳೆಸಬೇಕಾದರೆ ಒಂದು ಲಕ್ಷ ರೂಪಾಯಿ cost of cultivation ಬರುತ್ತದೆ. ಅಂತಹ ಸಂದರ್ಭದಲ್ಲಿ ನಾವು ಎನ್.ಡಿ.ಆರ್.ಎಫ್., ಅಥವಾ ಎಸ್.ಡಿ.ಆರ್.ಎಫ್., ನಾರ್ಮ್ಸ್ ಪ್ರಕಾರ 5 ಸಾವಿರ ರೂಪಾಯಿ ಪರಿಹಾರ ಕೊಟ್ಟರೆ ಸಾಕಾಗುವುದಿಲ್ಲ. ಪ್ರವಾಹದಿಂದಾಗಿ ಕಬ್ಬು ಬೆಳೆ ಏನು ನೀರಿನಲ್ಲಿ ಮುಳುಗಿ ಹೋಗಿತ್ತು ಅದೆಲ್ಲಾ ಇವೊತ್ತಿನ ದಿವಸ ಒಣಗಿ ಹೋಗಿದ್ದು, ಜಾನುವಾರುಗಳು ಸಹ ಅದನ್ನು ತಿನ್ನಲಾರದ ಸ್ಥಿತಿ ಬಂದಿದೆ. ಏಕೆಂದರೆ, ನೀರು ಇಳಿದ ಕೂಡಲೇ ಸಿಲ್ಟ್ (ರೇವೆ ಮಣ್ಣು) ಆ ಕಬ್ಬಿನ ಸುಳಿಯೊಳಗೆ ಹೋಗಿ, ಕಬ್ಬಿನ ಎಲೆಯನ್ನು ಆವರಿಸಿದೆ. ಇದರಿಂದಾಗಿ, ಜಾನುವಾರುಗಳು ಸಹ ಅದನ್ನು ತಿನ್ನಲಾರದಂತಹ ಸ್ಥಿತಿ ಬಂದಿದೆ.

ಅದರಿಂದಾಗಿ, ಆ ಕಬ್ಬು ಬೆಳೆಯನ್ನು ಕಟಾವು ಮಾಡಿ ಬದಿಗೆ(ಬೌಂಡರಿ)ಗೆ ಹಾಕಬೇಕಾಗಿದೆ. ಆ ಕೆಲಸಕ್ಕೆ ಸುಮಾರು 10 ಸಾವಿರ ರೂಪಾಯಿ ಖರ್ಚು ಬರುತ್ತದೆ. ಅಲ್ಲದೇ, ಈಗ ಅದು ನಿರುಪಯುಕ್ತ ವಸ್ತುವಾಗಿದೆ. ಏಕೆಂದರೆ, ಜಾನುವಾರುಗಳು ತಿನ್ನುವುದಿಲ್ಲ ಮತ್ತು ಯಾವುದಕ್ಕೂ ಉಪಯೋಗಕ್ಕೆ ಬರುವುದಿಲ್ಲವಾದ್ದರಿಂದ ಅದನ್ನು ಕಟಾವು ಮಾಡಿ ಬದಿಗೆ(ಬೌಂಡರಿ)ಗೆ ಅಥವಾ ಎಲ್ಲಿಯಾದರೂ ಹೊರಗಡೆ ಹಾಕಬೇಕು. ಆ ಕೆಲಸಕ್ಕೆ ಸುಮಾರು 10 ಸಾವಿರ ರೂಪಾಯಿ ಖರ್ಚು ಬರುತ್ತದೆ. ಆದರೆ, ಸರ್ಕಾರ ಕೊಡುವಂತಹ 5 ಸಾವಿರ ರೂಪಾಯಿ ಪರಿಹಾರ ತೆಗೆದುಕೊಂಡು ರೈತ ಏನು ಮಾಡಬೇಕು? ಇದು commercial crop. ಈ ಒಂದು ಬೆಳೆ ಬಗ್ಗೆ ಮಾತ್ರ ನಾನು ಹೇಳುತ್ತಿದ್ದೇನೆ. ಇದರ ಜೊತೆಗೆ, ಈರುಳ್ಳಿ ಬೆಳೆ ಮೇಲೆ ಒಂದು ಗಂಟೆ ನೀರು ನಿಂತರೆ ಸಾಕು, ಆ ಬೆಳೆ ಒಣಗಿ ಹೋಗುತ್ತದೆ. Melt ಆಗುತ್ತದೆ ಸಿಡಿ ಹಾಯೋದು ಎಂದು ನಮ್ಮ ಕಡೆ ಹೇಳುತ್ತಾರೆ. ಯಾವುದೇ ಬೆಳೆಗಳು ಆಗಬಹುದು; ತೋಟಗಾರಿಕೆ ಬೆಳೆಗಳಾಗಲಿ, ಕೃಷಿ ಬೆಳೆಗಳಾಗಲಿ ಮತ್ತು ರೇಷ್ಮೆ ಬೆಳೆಗಳಾಗಲಿ ಇವೆಲ್ಲವೂ ಕೂಡ ಇವೊತ್ತಿನ ದಿವಸ ಸರ್ವನಾಶವಾಗಿವೆ. ಅದಕ್ಕಾಗಿ, ಸರ್ಕಾರ ಎನ್.ಡಿ.ಆರ್.ಎಫ್., ಅಥವಾ ಎಸ್.ಡಿ.ಆರ್.ಎಫ್., ನಾರ್ಮ್ಸ್ ಪ್ರಕಾರ ಪರಿಹಾರ ಕೊಡಬಾರದು. ಈ ಬಗ್ಗೆ ನಾನು ಕೊನೆಯದಾಗಿ, ಬೇಡಿಕೆ ಮಾಡುವಂತಹ ಸಂದರ್ಭದಲ್ಲಿ ಹೇಳುತ್ತೇನೆ.

ಮುಂದುವರೆದು, ಪ್ರವಾಹದಿಂದಾಗಿ ಸುಮಾರು 22ಸಾವಿರ ಕಿಲೋಮೀಟರ್ ರಸ್ತೆ ಹಾಳಾಗಿದೆ. 10,988 ಸರ್ಕಾರಿ ಕಟ್ಟಡಗಳು ಮುಳುಗಿವೆ. ಅದರಲ್ಲಿ ಪಿ.ಹೆಚ್.ಸಿ.(ಪ್ರಾಥಮಿಕ ಆರೋಗ್ಯ ಕೇಂದ್ರಗಳು) ಇರಬಹುದು, ಅಂಗನವಾಡಿಗಳು ಇರಬಹುದು, ಶಾಲೆಗಳು ಇರಬಹುದು, ಪಂಚಾಯತಿ ಕಟ್ಟಡಗಳು ಇರಬಹುದು ಈ ರೀತಿ ಅನೇಕ ಸಾರ್ವಜನಿಕ ಕಟ್ಟಡಗಳು ಸೇರಿ ಒಟ್ಟಾರೆಯಾಗಿ ಸುಮಾರು 10,988 ಕಟ್ಟಡಗಳು ನೀರಿನಲ್ಲಿ ಮುಳುಗಿವೆ. 2,913 ಬ್ರಿಡ್ಜ್‌ಗಳು, ಕಲ್ವರ್ಟ್‌ಗಳು ಕಿತ್ತುಕೊಂಡು ಹೋಗಿವೆ. ಅವುಗಳು ಈ ಹಿಂದೆ ಎಲ್ಲಿ ಇದ್ದವು ಎಂಬ ಗುರುತು

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಹ ಸಿಗಲಾರದಷ್ಟು ಹಾನಿಯಾಗಿದೆ. ಇವೆಲ್ಲಕ್ಕಿಂತಲೂ ಮಿಗಿಲಾಗಿ ವಿದ್ಯುತ್ fully disrupt ಆಗಿದೆ. 59,598 ವಿದ್ಯುತ್ ಕಂಬಗಳು ಮುರಿದು ಹೋಗಿವೆ. ಅಂದರೆ, ಪ್ರವಾಹದ ರಭಸಕ್ಕೆ ಆರ್.ಸಿ.ಸಿ. ಕಂಬಗಳು ಮುರಿದು ಹೋಗಿವೆ. ಎಲೆಕ್ಟ್ರಿಕಲ್ ವೈರ್‌ಗಳು ಏನಿವೆ, ಅವುಗಳನ್ನು 'ಕಂಡಕ್ಟ್ಸ್' ಎಂದು ಕರೆಯುತ್ತಾರೆ. ಆ ಕಂಡಕ್ಟ್ಸ್ ಎಲ್ಲಿ ಇವೆ ಅವು ಸಿಗುತ್ತಿಲ್ಲ. ಇವೆಲ್ಲಕ್ಕಿಂತಲೂ ಮಿಗಿಲಾಗಿ 14,098 ಟ್ರಾನ್ಸ್‌ಫಾರ್ಮರ್‌ಗಳು ನೀರಿನಲ್ಲಿ ಮುಳುಗಿ ಹೋಗಿವೆ. ಅವುಗಳು ನೀರಿನಲ್ಲಿ ಮುಳುಗಿದರೆ ಅವುಗಳ ಕಥೆ ಮುಗಿದೇ ಹೋಗುತ್ತದೆ. ಆ ನಂತರ ಅವುಗಳನ್ನು ತೆಗೆದು ಹೊಸ ಟ್ರಾನ್ಸ್‌ಫಾರ್ಮರ್‌ಗಳನ್ನು ಹಾಕಬೇಕಾಗುತ್ತದೆ. ಈ ಬಗ್ಗೆ ತಮಗೆ ಚೆನ್ನಾಗಿ ಅನುಭವ ಇದೆ. ಇವೊತ್ತಿನ ದಿವಸ ರೈತರಿಗೆ ವಿದ್ಯುತ್ ಸೌಲಭ್ಯ ಇರಲಾರದಂತಹ ಪರಿಸ್ಥಿತಿ ಇದೆ. Power should be re-resumed. ಕಂಬಗಳನ್ನು ನಿಲ್ಲಿಸಬೇಕು, ಕಂಡಕ್ಟರ್‌ಗಳನ್ನು ಹಾಕಬೇಕು, ಟ್ರಾನ್ಸ್‌ಫಾರ್ಮರ್‌ಗಳನ್ನು ತಂದು ಅವುಗಳನ್ನು ಮೊದಲಿನ ಸ್ಥಿತಿಗೆ ತರುವಂತಹ ಕೆಲಸ ಕೂಡ ಆಗಬೇಕಾಗಿದೆ. ಈಗ ನನಗೆ ಒಂದು....

**ಸಭಾಪತಿಯವರು:–** ಸದನವನ್ನು ಭೋಜನ ವಿರಾಮಕ್ಕಾಗಿ ಮಧ್ಯಾಹ್ನ 3 ಗಂಟೆ 30 ನಿಮಿಷಗಳವರೆಗೆ ಮುಂದೂಡಲಾಗಿದೆ.

**(ಮಧ್ಯಾಹ್ನ 1 ಗಂಟೆ 56 ನಿಮಿಷಕ್ಕೆ ಭೋಜನಕ್ಕಾಗಿ ಮುಂದೂಡಲ್ಪಟ್ಟ ಸದನವು**
**ಪುನಃ ಮಧ್ಯಾಹ್ನ 3 ಗಂಟೆ 44 ನಿಮಿಷಕ್ಕೆ ಸಮಾವೇಶಗೊಂಡಿತು)**
**(ಮಾನ್ಯ ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ನಾನು ಈಗಾಗಲೇ ಹೇಳಿದಂತೆ, 22 ಜಿಲ್ಲೆಗಳಲ್ಲಿರುವ 103 ತಾಲ್ಲೂಕುಗಳ ಪೈಕಿ ಸುಮಾರು 2,177 ಗ್ರಾಮಗಳು ನೀರಿನಲ್ಲಿ ಮುಳುಗಿ ಹೋಗಿವೆ. ಸುಮಾರು 2177 ಗ್ರಾಮಗಳಲ್ಲಿರುವ ಕೃಷಿಕರ ಮನೆಗಳಲ್ಲಿರುವಂತಹ ಪಾತ್ರೆ, ಪಗಡಿಗಳು ನೀರಿನಲ್ಲಿ ಮುಳುಗಿ ಹೋಗಿವೆ. ರಾತ್ರಿ ಸುಮಾರು 12.00 ಗಂಟೆಗೆ ಕೃಷಿಕರ ಮನೆಗೆ ನೀರು ನುಗ್ಗಿದ್ದರಿಂದ, ಅವರೆಲ್ಲರೂ ಮನೆಯಿಂದ ಓಡಿ ಹೋಗಿ ಜೀವವನ್ನು ಉಳಿಸಿಕೊಳ್ಳುವುದೇ ಸಂಕಷ್ಟವಾಗಿತ್ತು. ಅವರು ರಾತ್ರೋರಾತ್ರಿ ಮನೆಯನ್ನು ಖಾಲಿ ಮಾಡಿದ್ದರಿಂದ, ಮನೆಯಲ್ಲಿರುವಂತಹ ಬೆಲೆ ಬಾಳುವಂತಹ ವಸ್ತುಗಳನ್ನು ಕೈಗೆ ಸಿಕ್ಕಿದಷ್ಟು ತೆಗೆದುಕೊಂಡು ಹೊರಗೆ ಬಂದಿದ್ದಾರೆ. ಅದರ ಜೊತೆಗೆ ನಮ್ಮ ಜಿಲ್ಲೆಯಲ್ಲಿರುವ ಕಮಟಗಿಯಲ್ಲಿ ನೇಕಾರರ ಕುಟುಂಬಗಳಿವೆ. ದೊಡ್ಡ ಪ್ರಮಾಣದಲ್ಲಿರುವ ಮಗ್ಗಗಳು ಸಹಿತ ನೀರಿನಲ್ಲಿ ಮುಳುಗಿ ಹೋಗಿವೆ. ಮನೆಗಳಲ್ಲಿರುವಂತಹ ದವಸ–ಧಾನ್ಯಗಳು ಮತ್ತು ಇನ್ನಿತರ ವಸ್ತುಗಳು ಸಮೇತ ನೀರಿನಲ್ಲಿ ಮುಳುಗಿ ಹೋಗಿವೆ. ಕೃಷಿಕರ ಉಪಕರಣಗಳಾದ ಕುಂಟೆ, ಕೂರಗಿ, ಮಡಿಕಿಗಳನ್ನು ಕಟ್ಟಿಗೆಯಲ್ಲಿ ಮಾಡಿದ್ದರಿಂದ, ನೀರಿನಲ್ಲಿ ತೇಲಿಕೊಂಡು ಹೋಗಿವೆ. ಜಾನುವಾರುಗಳಿಗೆ ಸಂಗ್ರಹಿಸಿದಂತಹ ಮೇವಿನ ಬಣವೆಗಳು ಸಮೇತ ನೀರಿನಲ್ಲಿ ತೇಲಿಕೊಂಡು

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೋಗಿವೆ. ನದಿಯ ದಂಡೆಯಲ್ಲಿ ನಿಲ್ಲಿಸಿರುವಂತಹ ಸಾವಿರಾರು ಪಂಪುಸೆಟ್ಟುಗಳು ಸಮೇತ ನೀರಿನಲ್ಲಿ ತೇಲಿಕೊಂಡು ಹೋಗಿವೆ. ವಿದ್ಯುತ್ ಸಮೇತವು disrupt ಆಗಿದೆ ಎಂದು ನಾನು ಮತ್ತೋಮ್ಮೆ ಹೇಳುವುದಕ್ಕೆ ಹೋಗುವುದಿಲ್ಲ. ಜೀವ ಉಳಿಸಿಕೊಳ್ಳಲು ಮನೆ ಬಿಟ್ಟು ಹೋದವರು ಪುನಃ ಮನೆಗೆ ವಾಪಸ್ಸು ಬಂದು ನೋಡಿದರೆ, ಮನೆಯಲ್ಲಿ ಕೆಸರು ತುಂಬಿಕೊಂಡಿದೆ. ಅವರು ಮನೆಗಳನ್ನು ಸ್ವಚ್ಛ ಮಾಡುವುದಕ್ಕೆ ಸುಮಾರು 8–10 ದಿವಸಗಳನ್ನು ತೆಗೆದುಕೊಂಡಿದ್ದಾರೆ. ಮನೆಯಲ್ಲಿರುವಂತಹ ವಸ್ತುಗಳು ಸಹಿತ ನೀರಿನಲ್ಲಿ ನಾಶವಾಗಿ ಹೋಗಿದೆ.

ಮಾನ್ಯ ಸಭಾಪತಿಯವರೇ, ಉದಾಹರಣೆಗೆ ಹೇಳಬೇಕೆಂದರೆ, ಸುಮಾರು 22 ಜಿಲ್ಲೆಗಳ ಪೈಕಿ ಎರಡು ಜಿಲ್ಲೆಗಳು ಯಾವ ರೀತಿ ಹಾನಿಯಾಗಿದೆ ಎಂಬುದರ ಬಗ್ಗೆ ಹೇಳುವುದಕ್ಕೆ ಬಯಸುತ್ತೇನೆ. ನಾನು ಬಾಗಲಕೋಟೆ ಜಿಲ್ಲೆಯವನಾಗಿದ್ದರಿಂದ, ಬಾಗಲಕೋಟೆ ಜಿಲ್ಲೆಯಲ್ಲಿ ಕೃಷ್ಣಾ ನದಿಯಲ್ಲಿ ಹಿಂದಿನ ವರ್ಷಗಳಲ್ಲಿ 4,13,000 ಕ್ಯೂಸೆಕ್ಸ್ ಕನಿಷ್ಠ ನೀರು ಬರುತ್ತಿತ್ತು. ಈ ಸಾರಿ 5,79,000 ಕ್ಯೂಸೆಕ್ಸ್ ನೀರು ಬಂದಿದೆ. ಘಟಪ್ರಭಾ ನದಿಗೆ 65,000 ಕ್ಯೂಸೆಕ್ಸ್ ನೀರು ಬಂದರೆ, ಅದೇ ಪುಣ್ಯ. ಆದರೆ ಈ ಸಲ 2,29,000 ಕ್ಯೂಸೆಕ್ಸ್ ನೀರು ಬಂದಿದೆ. ಮಲಪ್ರಭಾ ನದಿಯ ಹತ್ತಿರ ನವಿಲು ತೀರ್ಥ ಡ್ಯಾಂ ಕಟ್ಟಿದ್ದಾರೆ. ಈ ಡ್ಯಾಂ ಕಟ್ಟಿದಾಗಿನಿಂದ ಇಲ್ಲಿಯವರೆಗೂ ಮೂರು ಅಥವಾ ನಾಲ್ಕು ಬಾರಿ ನೀರು ಬಂದು ಭರ್ತಿಯಾಗಿದೆ. ಪ್ರತಿ ವರ್ಷ 22,000 ಕ್ಯೂಸೆಕ್ಸ್ ನೀರು ಬಂದರೆ ಅದೇ ಪುಣ್ಯ. ಆದರೆ ಈ ಸಲ 93.092 ಕ್ಯೂಸೆಕ್ಸ್ ನೀರು ಹೆಚ್ಚಾಗಿ ಬಂದಿದೆ. ಆದರ ಅಂದಾಜು ಹಿಂದಿನ ವರ್ಷ ಐದು ಲಕ್ಷಕ್ಕೂ ಹೆಚ್ಚಿಗೆ ನೀರು ಬಂದಿದ್ದರೆ, ಈ ಸಲ ಸುಮಾರು ಒಂಭತ್ತು ಲಕ್ಷ ಕ್ಯೂಸೆಕ್ಸ್ ನೀರು ಬಂದಿದೆ. ಮಹಾರಾಷ್ಟ್ರದಿಂದ ಸಾಕಷ್ಟು ನೀರು ಬರುತ್ತದೆ. ಮಲಪ್ರಭಾ, ಕೃಷ್ಣಾ, ಘಟಪ್ರಭಾ ಮುಖಾಂತರ ನಮ್ಮ ಆಲಮಟ್ಟಿ ಡ್ಯಾಂಗೆ ನೀರು ಬರುತ್ತದೆ. ಆಲಮಟ್ಟಿ ಜಲಾಶಯದಲ್ಲಿರುವ ನೀರನ್ನು ಹೇಗೆ ಸಂಗ್ರಹಿಸುವುದು? ಆದ್ದರಿಂದ ಆ ನೀರನ್ನು ನಾರಾಯಣಪುರ ಜಲಾಶಯಕ್ಕೆ ಕಳುಹಿಸುತ್ತೇವೆ. ಆಲಮಟ್ಟಿ ಜಲಾಶಯವು ಸ್ಟೋರೇಜ್ ಡ್ಯಾಂ ಆದರೆ ನಾರಾಯಣಪುರ ನೀರಾವರಿ ಡ್ಯಾಂ ಆಗಿದೆ. ನಾರಾಯಣ ಜಲಾಶಯದಲ್ಲಿ ನೀರು ತುಂಬಿದ ಕೂಡಲೇ ಕೆಳಗಡೆ ನೀರನ್ನು ಹರಿಸಬೇಕಾಗುತ್ತದೆ. ಆ ನೀರು ಆಂಧ್ರಪ್ರದೇಶಕ್ಕೆ ಹೋಗುತ್ತದೆ. ಒಂದು ವೇಳೆ ಆಲಮಟ್ಟಿ ಜಲಾಶಯವು ಪೂರ್ತಿಯಾಗಿದ್ದರೆ, ಮಾನ್ಯ ಸಭಾನಾಯಕರೇ ತಮ್ಮದೇ ಆದ ಸರ್ಕಾರ ಕೇಂದ್ರದಲ್ಲಿ ಇರುವುದರಿಂದ, ಇದಕ್ಕೆ ಸ್ವಲ್ಪ ಪ್ರಭಾವ ಬೀರಬೇಕು. 519.6 ರಿಂದ 524.256 ಮೀಟರ್‌ವರೆಗೆ ಆಲಮಟ್ಟಿ ಜಲಾಶಯದ ಎತ್ತರ ಎತ್ತರಿಸಿದ್ದರೆ, 131 ಟಿಎಂಸಿ ನೀರನ್ನು ಸಂಗ್ರಹ ಮಾಡಲು ಸಾಧ್ಯವಾಗುತ್ತಿತ್ತು. ಈಗಾಗಲೇ ಸಾವಿರಾರು ಟಿ.ಎಂ.ಸಿ. ನೀರು ಆಂಧ್ರಪ್ರದೇಶಕ್ಕೆ ಹೋಗಿದೆ. ಆ 131 ಟಿ.ಎಂ.ಸಿ. ನೀರನ್ನು ಇಟ್ಟುಕೊಳ್ಳುವುದಕ್ಕೆ ಆಗುತ್ತಿತ್ತು. ಸುಮಾರು 14 ಲಕ್ಷ ಎಕರೆಗಳು ನೀರಾವರಿಯಾಗುವಷ್ಟು, ಇವತ್ತು ನೀರನ್ನು storage ಮಾಡಬೇಕು. ಅದನ್ನು storage ಮಾಡಲು ಸುಮಾರು ಇಪ್ಪತ್ತು ಸಾವಿರ, ಮೂವತ್ತು ಸಾವಿರ, ಒಂದು ಲಕ್ಷ ಮೂವತ್ತು ಸಾವಿರ ಎಕರೆಗಳಷ್ಟು ಭೂಮಿ ಮುಳುಗುತ್ತದೆ. ಅದನ್ನು

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಸ್ವಾಧೀನಪಡಿಸಿಕೊಳ್ಳುವ ಕೆಲಸ ಆಗಬೇಕಾಗಿದೆ. ಆ ಕೆಲಸವಾದರೆ, ಈ ತರಹ ಸಮಸ್ಯೆಯಾಗುತ್ತಿರಲಿಲ್ಲ. ಆಲಮಟ್ಟಿ ಜಲಾಶಯ ಎತ್ತರ ಹೆಚ್ಚಾಗುತ್ತಿತ್ತು. ಕರ್ನಾಟಕ ರಾಜ್ಯಕ್ಕೆ 130.9 ಟಿ.ಎಂ.ಸಿ. ನೀರು ಹಂಚಿಕೆಯಾಗಿದೆ. ಅದು ನಮ್ಮ ನೀರು. ಉತ್ತರ ಕರ್ನಾಟಕದ ಜೀವನಾಡಿ ಕೃಷ್ಣಾ ನದಿ. ಆ ಕೃಷ್ಣ ನದಿಗೆ ಅನ್ಯಾಯವಾಯಿತು ಎಂದರೆ, ನಾವೆಲ್ಲಾ ಭಿಕ್ಷೆ ಬೇಡುವಂತಹ ಪರಿಸ್ಥಿತಿ ಉಂಟಾಗುತ್ತದೆ. ಇವತ್ತಿನ ದಿವಸ ಆಲಮಟ್ಟಿ ಜಲಾಶಯವನ್ನು ಎತ್ತರ ಮಾಡಿ, 130.9 ಟಿ.ಎಂ.ಸಿ. ನೀರನ್ನು ಸಂಗ್ರಹ ಮಾಡಬಹುದಾಗಿತ್ತು. ಆದ್ದರಿಂದ ತಮ್ಮ ಮೂಲಕ ಸರ್ಕಾರಕ್ಕೆ ವಿನಂತಿಸುವುದೇನೆಂದರೆ, ಆಲಮಟ್ಟಿ ಜಲಾಶಯವನ್ನು 519 ರಿಂದ 524 ಮೀಟರ್‌ವರೆಗೂ ಎತ್ತರಿಸುವಂತಹ ಕೆಲಸವಾಗಬೇಕಾಗಿತ್ತು. ಆ ಕೆಲಸವಾಗಬೇಕೆಂದರೆ, ಈಗಾಗಲೇ ಪ್ರವಾಹದಿಂದ ಮುಳುಗಿರುವಂತಹ 20 ಹಳ್ಳಿಗಳನ್ನು ಸ್ವಾಧೀನಪಡಿಸಬೇಕು ಹಾಗೂ ಆ ಹಳ್ಳಿಗಳಿಗೆ ಪುನರ್ವಸತಿ ಸೌಲಭ್ಯಗಳನ್ನು ಕಲ್ಪಿಸುವಂತಹ ಕೆಲಸವಾಗಬೇಕಾಗಿದೆ. ಅದರ ಜೊತೆಗೆ 1.30 ಸಾವಿರ ಎಕರೆ ಭೂಮಿಯನ್ನು ಸ್ವಾಧೀನಪಡಿಸಿಕೊಂಡರೆ ಜಲಾಶಯವನ್ನು ಎತ್ತರ ಮಾಡಬಹುದು. ಅದರ ಮೂಲಕ ಉತ್ತರ ಕರ್ನಾಟಕದ ಅನೇಕ ಜಿಲ್ಲೆಗಳಿಗೆ 14 ಲಕ್ಷ ಎಕರೆ ನೀರಾವರಿ ಮಾಡುವಂತಹ ಯೋಜನೆ ಫಲಪ್ರದವಾಗುತ್ತದೆ ಎನ್ನುವಂತಹ ಮಾತನ್ನು ತಮ್ಮ ಮೂಲಕ ಸರ್ಕಾರಕ್ಕೆ ಹೇಳಬಯಸುತ್ತೇನೆ. ಈ ಸದನದಲ್ಲಿ ಸಚಿವರುಗಳು ಯಾರು ಇಲ್ಲ ...

**ಶ್ರೀ ಐವನ್ ಡಿ'ಸೋಜಾ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಹೌದು ಕನಿಷ್ಠ ಪಕ್ಷ ಮೂರು ಮಂದಿ ಸಚಿವರಾದರೂ ಸದನದಲ್ಲಿರಬೇಕಾಗಿತ್ತು. ಅವರು ಸಹ ಈ ಸಂದರ್ಭದಲ್ಲಿ ಸದನದಲ್ಲಿ ಇಲ್ಲ. Treasury bench ಸದಸ್ಯರು ಇಲ್ಲ. ಹಾಗೆಯೇ ಗ್ಯಾಲರಿಯಲ್ಲಿ ಕೂಡಾ ಅವಶ್ಯಕತೆ ಇರುವ ಅಧಿಕಾರಿಗಳು ಯಾರು ಇರಬೇಕಾಗಿತ್ತು, ಅವರು ಸಹ ಬಂದಿರುವುದಿಲ್ಲ. ಇದೊಂದು ತುಂಬಾ ಗಂಭೀರವಾದ ವಿಚಾರ. ಅವರಿಗೆ ಎಷ್ಟು interest ಇದೆ ನೋಡಿ. ಇದೊಂದು ಗಂಭೀರವಾದ ವಿಚಾರಕ್ಕೆ ಇವರುಗಳು ಬಂದಿಲ್ಲವೆಂದರೆ, ...

**(ಗೊಂದಲ)**

ಮತ್ತೆ ಯಾವ ವಿಚಾರದ ಬಗ್ಗೆ ಚರ್ಚೆ ಮಾಡುವಾಗ ಇರುತ್ತಾರೆ? ಸದನದ ಪ್ರಾರಂಭದ ದಿನವಾದ ಇಂದು ಬರದ ವಿಚಾರವಾಗಿ ಚರ್ಚೆ ಮಾಡುತ್ತಿದ್ದೇವೆ. ನೆರೆ ವಿಚಾರದ ಬಗ್ಗೆ ಚರ್ಚೆ ಮಾಡುತ್ತಿದ್ದೇವೆ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಕಂದಾಯ ಸಚಿವರು ಸಭೆಗೆ ತೆರಳಿದ್ದಾರೆ.

(ಗೊಂದಲ)

(ಮುಂದು...)

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

(122)10.10.2019 3.50 ಟಿಸಿಹೆಚ್-ಬಿಎನ್‌ಎಸ್

**ಶ್ರೀ ಐವನ್ ಡಿ'ಸೋಜಾ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಸದನದಲ್ಲಿ ಕನಿಷ್ಠ ಮೂರು ಜನ ಸಚಿವರಾದರೂ ಹಾಜರಿರಬೇಕು. Treasury Bench ನ ಸದಸ್ಯರು ಕೂಡ ಇಲ್ಲ. ಅಧಿಕಾರಿಗಳ ಗ್ಯಾಲರಿಯಲ್ಲಿ ಯಾರು ಇರಬೇಕಿತ್ತೋ ಅವರು ಇಲ್ಲ. (ಗೊಂದಲ) ಕೇವಲ ಇಬ್ಬರು ಸಚಿವರು ಮಾತ್ರ ಇದ್ದಾರೆ. ಅವರಿಗೆ ಆಸಕ್ತಿ ಎಷ್ಟಿದೆ ನೋಡಿ. ಇದು ಬಹಳ ಗಂಭೀರವಾದ ವಿಚಾರವಾಗಿದೆ. ಇದಕ್ಕೇ, ಅವರು ಇರಲಿಲ್ಲವೆಂದರೆ, ಇನ್ಯಾವುದಕ್ಕೆ ಇರುತ್ತಾರೆ. ಇವತ್ತು ಪ್ರಾರಂಭದ ದಿನ. ಇವತ್ತು ಬರದ ಬಗ್ಗೆ, ನೆರೆ ವಿಚಾರದ ಬಗ್ಗೆ ಚರ್ಚೆ ಮಾಡುತ್ತಿದ್ದೇವೆ.

(ಗೊಂದಲ)

**ಶ್ರೀ ಎನ್.ರವಿಕುಮಾರ್(ವಿಧಾನ ಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದ ಸದಸ್ಯರ ಸಂಖ್ಯೆ ಎಷ್ಟಿದೆ ಎಂದು ನೋಡಿ.

(ಗೊಂದಲ)

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಅವರು ಏಕೆ ಇಷ್ಟು ಡಿಫೆಂಡ್ ಮಾಡುತ್ತಿದ್ದಾರೆ.

(ಗೊಂದಲ)

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ಮೂರು ಜನ ಸಚಿವರು ಎಲ್ಲಿದ್ದಾರೆ ನೋಡಿ. ಮಾನ್ಯ ಕಂದಾಯ ಸಚಿವರು ಎಲ್ಲಿದ್ದಾರೆ, ಅವರನ್ನು ಈ ಸದನಕ್ಕೆ ಕರೆಸಿ. ನಾವು ನೆರೆ ಪರಿಹಾರದ ಬಗ್ಗೆ ಚರ್ಚೆ ಮಾಡುತ್ತಿದ್ದೇವೆ. ಒಬ್ಬರೂ ಬರುವುದಿಲ್ಲವೆಂದರೆ ಹೇಗೆ?

(ಗೊಂದಲ)

**(ಈ ಹಂತದಲ್ಲಿ ಶ್ರೀ ಸಿ.ಸಿ.ಪಾಟೀಲ್, ಮಾನ್ಯ ಗಣಿ ಮತ್ತು ಭೂವಿಜ್ಞಾನ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ಸಚಿವರು ಸದನಕ್ಕೆ ಹಾಜರಾದರು)**

**ಶ್ರೀ ಸಿ.ಸಿ.ಪಾಟೀಲ್ (ಗಣಿ ಮತ್ತು ಭೂವಿಜ್ಞಾನ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ಸಚಿವರು):-** ಮಾನ್ಯ ಸಭಾಪತಿಯವರೇ, ನಾನು ಊಟ ಮಾಡುವುದಕ್ಕೆ ಹೋಗಿದ್ದೆನು. ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ ನಾನು ವಿನಂತಿ ಮಾಡಿಕೊಂಡಿದ್ದೇನೆ.

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

(ಗೊಂದಲ)

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, he is exempted. ಇವತ್ತು ಸದನಕ್ಕೆ ಯಾರ್ಯಾರು ಅಧಿಕಾರಿಗಳನ್ನು allot ಮಾಡಲಾಗಿದೆ, ಅದನ್ನು ಯಾರಾದರೂ ಒಬ್ಬರು ಓದುತ್ತೀರಾ? ಅಧಿಕಾರಿಗಳ ಗ್ಯಾಲರಿಯಲ್ಲಿ ಅಧಿಕಾರಿಗಳು ಹೆಚ್ಚಿನ ಸಂಖ್ಯೆಯಲ್ಲಿ ಇಲ್ಲ, ಮಾನ್ಯ ಸಚಿವರು ಕೂಡ ಇಲ್ಲ. ಏಕೆಂದರೆ, ದಯ್ಯಮಾಡಿ ನೆರೆ ಪರಿಸ್ಥಿತಿಯನ್ನು ಅಷ್ಟು ಲಘುವಾಗಿ ತೆಗೆದುಕೊಳ್ಳಬೇಡಿ. ನಮಗೆ ಇದರಲ್ಲಿ ನಿಮ್ಮನ್ನು ಚುಚ್ಚಿ ಮಾತನಾಡುವುದು, ವ್ಯಂಗ್ಯವಾಗಿ ಮಾತನಾಡುವುದು ಏನೂ ಇಲ್ಲ. They should be serious. It will give a message to the flood affected people and people of Karnataka.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾ ನಾಯಕರು) :-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರ ಮಾತನ್ನು ನಾವು ಲಘುವಾಗಿ ತೆಗೆದುಕೊಂಡಿಲ್ಲ. ಮಾನ್ಯ ಸಚಿವರು ಬರುವುದು ಎರಡು ನಿಮಿಷ ತಡವಾಗಿದೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಸರ್ಕಾರದ ಮುಖ್ಯ ಸಚೇತಕರ ಕೆಲಸವೇನೆಂದರೆ, ಮಾನ್ಯ ಸಚಿವರುಗಳನ್ನು ಹಾಗೂ ಸದಸ್ಯರುಗಳನ್ನು ಕರೆದುಕೊಂಡು ಬಂದು ಕೂರಿಸುವುದು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ತಾವು ತಮ್ಮ ವಿಷಯವನ್ನು ಮಂಡನೆ ಮಾಡಿ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, who are the designated Officers to be present today in the House? ಅವರು ಇಲ್ಲವೆಂದರೆ ಮತ್ತೆ ಇಲ್ಲಿ ಏಕೆ ಅಧಿವೇಶನ ನಡೆಸುತ್ತೀರಿ. ಇವತ್ತು ಗ್ಯಾಲರಿಯಲ್ಲಿ ಯಾವ್ಯಾವ ಅಧಿಕಾರಿಗಳು ಹಾಜರಿರಬೇಕಿತ್ತು, ಯಾರು ಇರಬೇಕಿತ್ತು?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಇವತ್ತು ಪ್ರಥಮ ದಿವಸ. ಹಾಗಾಗಿ ಅವರು ತಮ್ಮ ಮಾತನ್ನು ಮುಂದುವರೆಸಲಿ. ಅಧಿಕಾರಿಗಳನ್ನು ಕರೆಯಲು ಕಳುಹಿಸುತ್ತೇನೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ನಾನು ಇದನ್ನು point out ಮಾಡಿ, ಯಾರಿಗೂ ಇರಿಸು ಮುರಿಸು ಮಾಡಬೇಕೆಂದೇನೂ ಇಲ್ಲ. ಹಾಗಾದರೆ ನಾವು ಚರ್ಚೆ ಮಾಡುವುದು ಏತಕ್ಕೆ?

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ಕೃಷಿ ಸಚಿವರು ಅಥವಾ ಕಂದಾಯ ಸಚಿವರು ಅಥವಾ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಇವರ್‍ಯಾರಾದರೂ ಒಬ್ಬರು ಇದ್ದರೆ ಕರೆಯಿರಿ.

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಈಗ ಮೂರು ಜನ ಸಚಿವರು ಇದ್ದೇವೆ, ನಾವು ಅವರು ಹೇಳಿದ್ದನ್ನು ನೋಟ್ ಮಾಡಿಕೊಳ್ಳುತ್ತೇವೆ. ಮಾನ್ಯ ಕಂದಾಯ ಸಚಿವರು ಬಂದು ನಿಮಗೆ ಉತ್ತರ ತೃಪ್ತಿಯಾಗುವಂತೆ ಕೊಡುತ್ತಾರೆ. ಅದರಲ್ಲಿ ನಿಮಗೇನು ಅನುಮಾನ ಬೇಡ.

(ಗೊಂದಲ)

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ನಾನು ಅವರ ಅನುಕೂಲಕ್ಕೆ ಹೇಳುತ್ತಿದ್ದೇನೆ. ಅವರ ಸರ್ಕಾರಕ್ಕೆ ಒಳ್ಳೆಯ ಹೆಸರು ಬರಲೆಂದು ಹೇಳುತ್ತಿದ್ದೇನೆ.

**ಶ್ರೀ ಸಿ.ಸಿ.ಪಾಟೀಲ್:–** ಮಾನ್ಯ ಎಸ್.ಆರ್.ಪಾಟೀಲ್‌ರವರೇ, ಒಂದು ನಿಮಿಷ ತಾವು yield ಆಗಿ. ನಾವು ಈ ಪ್ರವಾಹದ ಪರಿಸ್ಥಿತಿಯನ್ನು ಲಘುವಾಗಿ ತೆಗೆದುಕೊಂಡಿಲ್ಲ. ತಾವು ಕೊಡುವಂತಹ ಸಕಾರಾತ್ಮಕ ಸೂಚನೆಗಳನ್ನು ನಮ್ಮ ಸರ್ಕಾರ ನೋಟ್ ಮಾಡಿಕೊಳ್ಳುತ್ತಿದೆ. ಅದನ್ನು ಅನುಷ್ಠಾನಗೊಳಿಸಲು ಪ್ರಾಮಾಣಿಕವಾದಂತಹ ಪ್ರಯತ್ನ ಮಾಡುತ್ತೇವೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಇಲ್ಲಿಗೆ ಬರುವುದಕ್ಕಿಂತ ಪೂರ್ವದಲ್ಲಿ ನೋಟ್ ಮಾಡಿಕೊಳ್ಳತಕ್ಕಂಥವರು ಯಾರೂ ಇಲ್ಲಿ ಇರಲಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ನಾನು ಎಲ್ಲವನ್ನು ನೋಟ್ ಮಾಡಿಕೊಳ್ಳುತ್ತಿದ್ದೇನೆ.

" ತಿದ್ದುಪಡಿಯಾಗದ ಪ್ರತಿ,ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

(ಗೊಂದಲ)

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಹಾಗಾದರೆ, ಡಾ॥ ತೇಜಸ್ವಿನಿ ಗೌಡರವರನ್ನು ಬೇಗ ಸಚಿವರಾಗಿ ಮಾಡಿ. ಅವರು ಮುಂದಿನ ಸಾಲಿಗೆ ಬರಲಿ. ಪಾಪ, ಅವರು ಮಹಿಳೆ ಇದ್ದಾರೆ.

(ಗೊಂದಲ)

**ಶ್ರೀ ಸಿ.ಸಿ.ಪಾಟೀಲ್:-** ಮಾನ್ಯ ಸಭಾಪತಿಯವರೇ, ಶ್ರೀ ಎಸ್.ಆರ್.ಪಾಟೀಲ್‌ರವರು ವಿರೋಧ ಪಕ್ಷದ ನಾಯಕರಾಗಿರುವುದಕ್ಕೆ ನಮಗೆಲ್ಲಾ ಸಂತೋಷ ಆಗಿದೆ. ನೀವು ಕೊಡುವಂತಹ ಸಲಹೆಗಳನ್ನು ನಾವು ಸ್ವೀಕಾರ ಮಾಡುತ್ತೇವೆ. ನಮ್ಮ ಸರ್ಕಾರ ಯಾವ ಕ್ಷಣದಲ್ಲಿಯೂ ಕೂಡ ಪ್ರವಾಹವನ್ನು ಅಲಕ್ಷ್ಯ ಮಾಡಿಲ್ಲ. ಬಹುತೇಕ ನಮ್ಮ ಮುಖ್ಯಮಂತ್ರಿಗಳು ತೆಗೆದುಕೊಂಡಂಥ ನಿರ್ಧಾರ ...

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಬೆಳಗಾವಿಯಲ್ಲಿ ಮಾಡತಕ್ಕಂಥ ಅಧಿವೇಶನವನ್ನು ಇಲ್ಲಿ ಏಕೆ ಮಾಡುತ್ತಿದ್ದಾರೆ? ಅಲ್ಲಿ ಅಧಿವೇಶನ ನಡೆಸಲು ಧೈರ್ಯ ಇದ್ದರೆ ಅಲ್ಲಿ ಏಕೆ ಅಧಿವೇಶನ ನಡೆಸಲಿಲ್ಲ.

**ಶ್ರೀ ಸಿ.ಸಿ.ಪಾಟೀಲ್:-** ಮಾನ್ಯ ಸಭಾಪತಿಯವರೇ, ಅಧಿವೇಶನ ನಡೆಸುವುದಕ್ಕೆ ಧೈರ್ಯ ಮಾಡುವ ಪ್ರಶ್ನೆ ಬೇರೆ ಇರುತ್ತದೆ.

**ಶ್ರೀ ಆರ್.ಧರ್ಮಸೇನ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಕೆ.ಟಿ.ಶ್ರೀಕಂಠೇಗೌಡರವರೇ, ಬೆಳಗಾವಿಯಲ್ಲಿ ಅಧಿವೇಶನ ನಡೆಸುವುದಕ್ಕೆ ಅವರ ಹತ್ತಿರ ದುಡ್ಡು ಇರಲಿಲ್ಲ, ಅದಕ್ಕೆ ಇಲ್ಲಿ ಅಧಿವೇಶನ ನಡೆಸುತ್ತಿದ್ದಾರೆ.

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ರೈತರಿಗೆ ಅನಾಹುತ ಆದಂತಹ ಸಂದರ್ಭದಲ್ಲಿ ಅವರು ಇಲ್ಲಿ ಅಧಿವೇಶನ ನಡೆಸಲಿಲ್ಲವೆ?

(ಗೊಂದಲ)

**ಶ್ರೀ ಆರ್.ಧರ್ಮಸೇನ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವರು ಬೆಳಗಾವಿಯಲ್ಲಿ ಅಧಿವೇಶನ ನಡೆಸಿದ್ದಿದ್ದರೆ ಮುಖಕ್ಕೆ ಮಂಗಳಾರತಿ ಮಾಡುತ್ತಿದ್ದರು.

**ಶ್ರೀ ಸಿ.ಸಿ.ಪಾಟೀಲ್:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ ಅವರು ನಮ್ಮ ಮಾತನ್ನು ಕೇಳಲಿ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಗೊಂದಲ)

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಾನ್ಯ ಆರ್.ಧರ್ಮಸೇನರವರೇ, ನಾನು ಮಾತನಾಡುತ್ತೇನೆ. ನಾನೇನು yield ಆಗಿಲ್ಲ. (ಗೊಂದಲ) I will come to that point next.

(ಗೊಂದಲ)

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೇ, ತಾವು yield ಆಗುವುದು ಬೇಡ.

**ಶ್ರೀ ಸಿ.ಸಿ.ಪಾಟೀಲ್:–** ನಿಮ್ಮವರು ಏನೋ ಬಹಳ ಪೌರುಷದಿಂದ ಮಾತನಾಡುತ್ತಿದ್ದಾರೆ.

**ಸಭಾಪತಿಯವರು:–** ಇರಲಿ ಬಿಡಿ.

**ಶ್ರೀ ಆರ್.ಧರ್ಮಸೇನ:–** ಅದು ಇರುವ ವಾಸ್ತವ ಸಂಗತಿ.

**ಶ್ರೀ ಸಿ.ಸಿ.ಪಾಟೀಲ್:–** ಏನು ವಾಸ್ತವ ರೀ?

(ಗೊಂದಲ)

**ಡಾ॥ತೇಜಸ್ವಿನಿ ಗೌಡ(ವಿಧಾನಸಭಾ ಕ್ಷೇತ್ರ):–** ಬೆಳಗಾವಿಯ ಜಿಲ್ಲಾಡಳಿತ ...

**ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಅವರು ಬರೀ ಬಾಯಿ ಮಾಡಿದರೆ ಆಗುವುದಿಲ್ಲ. ಏನು ಮಾಡಿದ್ದಾರೆಂದು ಕೇಳುವಂಥ ಕಿವಿಯೂ ಇರಬೇಕು.

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೇ, ತಾವು ಮಾತನಾಡಿ, yield ಆಗುತ್ತಿದ್ದೀರಲ್ಲ, ನೀವು ಮತ್ತೆ ಮಾತನಾಡುವುದಕ್ಕೆ ಅವಕಾಶ ಸಿಗಬೇಕಲ್ಲವೇ?

(ಗೊಂದಲ)

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಈ ರಾಜ್ಯದ ಮುಖ್ಯಮಂತ್ರಿಗಳು ಘೋಷಣೆ ಮಾಡಿದರು...

**ಶ್ರೀ ಸಿ.ಸಿ.ಪಾಟೀಲ್:** ಮಾನ್ಯ ಸಭಾಪತಿಯವರೇ, ಮಾನ್ಯ ಶ್ರೀ ಕೆ.ಟಿ.ಶ್ರೀಕಂಠೇಗೌಡರವರೇ, ಒಂದು ನಿಮಿಷ.

**ಸಭಾಪತಿಯವರು:–** ಅವರು yield ಆದರೆ ಮಾತನಾಡಿ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಮತ್ತೆ ಅವರಿಗೆ ಉತ್ತರ ಕೊಡುತ್ತಾರೆ, ನನ್ನ ಪರಿಸ್ಥಿತಿ ಏನು?

**ಶ್ರೀ ಸಿ.ಸಿ.ಪಾಟೀಲ್:–** ಮಾನ್ಯ ಸಭಾಪತಿಯವರೇ, ನಾವು ನಿನ್ನೆಯ ದಿವಸ ಏನು ನಿರ್ಣಯ ಮಾಡಿದ್ದೇವೆ ಎಂದು ಪತ್ರಿಕೆಗಳಲ್ಲಿ ತೆಗೆದು ನೋಡಲಿ. 'ಎ' ಮತ್ತು 'ಬಿ' ಸೇರಿಸಿ 5 ಲಕ್ಷ ರೂಪಾಯಿಗಳ ಪರಿಹಾರ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಕೊಡುವಂತಹ ನಿರ್ಣಯವನ್ನು ಮಾನ್ಯ ಮುಖ್ಯಮಂತ್ರಿಗಳು ತೆಗೆದುಕೊಂಡಿದ್ದಾರೆ. ಕರ್ನಾಟಕದಲ್ಲಿ ಪ್ರವಾಹ ಬಂದಿದ್ದು ಇದೇ ಮೊದಲ ಸಲ ಅಲ್ಲ. ಈ ಬಾರಿ ಪ್ರವಾಹ ಹೆಚ್ಚಿಗೆ ಬಂದಿದೆ. ನಮಗೆ ಎಷ್ಟು ಪರಿಹಾರ ಕೊಡಲು ಸಾಧ್ಯವಿದೆಯೋ ಅಷ್ಟು ಮಾಡಿದ್ದೇವೆ.

**ಶ್ರೀ ಆರ್.ಧರ್ಮಸೇನ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಎಲ್ಲಾ ಹೇಳಿದ್ದಾರೆ. ಆದರೆ ಯಾವುದೂ ಆಗುತ್ತಿಲ್ಲ ಎನ್ನತಕ್ಕಂಥದ್ದು ನಮ್ಮ ಕೊರಗು.

(ಗೊಂದಲ)

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ನಾಲ್ಕು ತಿಂಗಳ ಹಿಂದೆ ಪ್ರವಾಹ ಬಂದಿರುತ್ತದೆ.

**ಡಾ॥ ತೇಜಸ್ವಿನಿ ಗೌಡ:-** ಮಾನ್ಯ ಸಭಾಪತಿಯವರೇ, ಸರ್ಕಾರ ಇದೆ, ಇದರ ಬಗ್ಗೆ ಚರ್ಚೆ ಆದ ನಂತರ ಸರ್ಕಾರ ಉತ್ತರ ಕೊಡುತ್ತದೆ.

(ಗೊಂದಲ)

**ಶ್ರೀ ಆರ್.ಧರ್ಮಸೇನ:-** ಈಗ ರಾಜ್ಯದಲ್ಲಿ ಮೂರನೆಯ ಬಾರಿಗೆ ಪ್ರವಾಹ ಬಂದಿರುವುದು.

(ಗೊಂದಲ)

**ಡಾ॥ತೇಜಸ್ವಿನಿ ಗೌಡ:-** ಮಾನ್ಯ ಸಭಾಪತಿಯವರೇ, ನಮ್ಮ ಸಚಿವರುಗಳು ಸಮರ್ಥರಿದ್ದಾರೆ, ಉತ್ತರ ಕೊಡುತ್ತಾರೆ. ಸಮಾಧಾನ ಆಗುವತನಕ ಚರ್ಚೆ ಮಾಡೋಣ.

(ಗೊಂದಲ)

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ನಮ್ಮ ಬಾಗಲಕೋಟೆ ಜಿಲ್ಲೆ ಒಂದರಲ್ಲೇ ...

(ಗೊಂದಲ)

**ಶ್ರೀ ಪ್ರಾಣೇಶ್ ಎಂ.ಕೆ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಮ್ಮ ಸರ್ಕಾರ ಒಳ್ಳೆಯ ಕೆಲಸ ಮಾಡಿದೆ, ಅದು ಅವರಿಗೂ ಕೂಡ ಗೊತ್ತಿದೆ. ಇದು ವಿರೋಧ ಪಕ್ಷದವರಿಗೆ ಗೊತ್ತಿಲ್ಲವೇ?

(ಗೊಂದಲ)

**ಶ್ರೀ ಆರ್.ಧರ್ಮಸೇನ:-** ಮಾನ್ಯ ಸಭಾಪತಿಯವರೇ, ಅವರಿಗೆ ಹೇಳಿದರೆ, ಗೊತ್ತಾಗುವುದಿಲ್ಲ ಎಂದು ವರದಿಯನ್ನು ಸಿದ್ದಪಡಿಸಿದ್ದೇವೆ. (ಗೊಂದಲ) ನೋಡಿ, ಕಾಂಗ್ರೆಸ್ ಪಕ್ಷದಿಂದ ರಿಪೋರ್ಟ್ ಮಾಡಿದ್ದೇವೆ. ನಿಮಗೆ ಸರ್ಕಾರದಲ್ಲಿ ಹಣ ಇಲ್ಲ. ನಿಮ್ಮ ಸರ್ಕಾರಕ್ಕೆ ಕಿವಿ ಇಲ್ಲ. ನಿಮ್ಮ ಸರ್ಕಾರಕ್ಕೆ ಮಾತನಾಡುವುದಕ್ಕೆ ಬಾಯಿ ಇಲ್ಲ.

(ಗೊಂದಲ)

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಸಿ.ಸಿ.ಪಾಟೀಲ್:–** ಮಾನ್ಯ ಸಭಾಪತಿಯವರೇ, ಅವರಿಗೆ ಇರುವುದು ಬಾಯಿ ಒಂದೇ. ಅದು ಬಿಟ್ಟರೆ ಬೇರೆ ಏನೂ ಇಲ್ಲ.

(ಗೊಂದಲ)

**ಶ್ರೀ ಆರ್.ಧರ್ಮಸೇನ:–** ಮಾನ್ಯ ಸಭಾಪತಿಯವರೇ, ಇಷ್ಟು ದೊಡ್ಡ ವರದಿಯನ್ನು ಅನುಷ್ಠಾನಗೊಳಿಸುವುದು ಯಾವಾಗ? ನಿಮ್ಮ ಕೇಂದ್ರ ಸರ್ಕಾರವೇ ನೀವು ಮಾಡಿರತಕ್ಕಂಥ ವರದಿ ಮತ್ತು ನೀವು ಕೊಟ್ಟಿರತಕ್ಕಂಥ ವರದಿ ಸುಳ್ಳು ಎಂದು ಹೇಳಿದೆ.

(ಗೊಂದಲ)

**ಡಾ॥ ತೇಜಸ್ವಿನಿಗೌಡ:–** ಮಾನ್ಯ ಸಭಾಪತಿಯವರೇ, ನಮ್ಮ ಪಕ್ಷದ ಆಂತರಿಕ ವಿಚಾರ ಇವರಿಗೆ ಏಕೆ ಬೇಕು?

(ಗೊಂದಲ)

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ನಾವು ಮಾತನಾಡಬೇಕೋ ಬೇಡವೋ ನೀವೇ ಹೇಳಿಬಿಡಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಸರ್ಕಾರದಿಂದ ಉತ್ತರ ಕೊಡುತ್ತೇವೆ.

**(ಈ ಹಂತದಲ್ಲಿ ವೈಸ್ ಛೇರ್ಮನ್‌ರವರಾದ ಶ್ರೀ ಕೆ.ಸಿ.ಕೊಂಡಯ್ಯನವರು ಪೀಠಾಸೀನರಾದರು)**

(ಗೊಂದಲ)

**ವೈಸ್ ಛೇರ್ಮನ್:–** ದಯವಿಟ್ಟು ಮಾನ್ಯ ಸದಸ್ಯರೆಲ್ಲಾ ತಿಳಿದುಕೊಳ್ಳಬೇಕು. ಇಲ್ಲಿ ನೆರೆ ಹಾವಳಿ ಮತ್ತು ಬರಕ್ಕೆ ಸಂಬಂಧಪಟ್ಟಂತೆ ಚರ್ಚೆ ನಡೆಯುತ್ತಿದೆ. ಮಾನ್ಯ ವಿರೋಧ ಪಕ್ಷದವರಿಗೆ ಮಾತನಾಡಲು ಅವಕಾಶ ಕೊಡಲಾಗಿದೆ. ಆಡಳಿತ ಪಕ್ಷದವರು ಪ್ರತ್ಯುತ್ತರ ಕೊಡುವಾಗ ಎಲ್ಲಾ ವಿಷಯಕ್ಕೂ ಉತ್ತರ ಕೊಡಿ. ಎಲ್ಲರೂ ಒಟ್ಟಾಗಿ ಎದ್ದು ಮಾತನಾಡಬೇಡಿ. ಎಲ್ಲರಿಗೂ ಮಾತನಾಡಲು ಅವಕಾಶ ಸಿಗುತ್ತದೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಧನ್ಯವಾದಗಳು. ಬಾಗಲಕೋಟೆ ಜಿಲ್ಲೆ ಒಂದರಲ್ಲೇ 195 ಹಳ್ಳಿಗಳು ಸಂಪೂರ್ಣವಾಗಿ ಜಲಾವೃತವಾಗಿವೆ. ಸುಮಾರು 43,136 ಕುಟುಂಬಗಳನ್ನು ಸ್ಥಳಾಂತರಿಸಲಾಗಿದೆ. ಈ ಪ್ರವಾಹಕ್ಕೆ ಬಾಧಿತರಾದಂತಹ ಜನಸಂಖ್ಯೆ ಒಂದೂವರೆ ಲಕ್ಷ ಇದೆ. ಇವತ್ತು ಈ ಒಂದೂವರೆ ಲಕ್ಷ ಜನಸಂಖ್ಯೆ ತಮ್ಮ ಮನೆಯನ್ನು ತೊರೆದು ಕಾಳಜಿ ಕೇಂದ್ರದಲ್ಲಿ, ರಸ್ತೆ ಪಕ್ಕದಲ್ಲಿ ಗುಡಿಸಲುಗಳನ್ನು ನಿರ್ಮಿಸಿಕೊಂಡಿದ್ದಾರೆ, ಅವರ ಸಂಬಂಧಿಕರು, ಗೆಳೆಯರ ಮನೆ, ಅಣ್ಣ ತಮ್ಮಂದಿರ ಮನೆಗಳಿಗೆ ಹೋಗಿದ್ದಾರೆ.

**(ಮುಂದು...)**

**(123)10.10.2019/4.00/ಎಂ.ಎಂ–ಬಿ.ಎನ್.ಎಸ್**



" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಎಸ್.ಆರ್. ಪಾಟೀಲ್ (ಮುಂದು)**

ಪ್ರವಾಹದಿಂದ ಒಟ್ಟು ಹಾನಿಗೊಂಡ ಬೆಳೆಗಳ ಬಗ್ಗೆ ಹೇಳುವುದಾದರೆ ಕೃಷಿ ಬೆಳೆ ಇರಬಹುದು, ತೋಟಗಾರಿಕೆ, ರೇಷ್ಮೆ ಬೆಳೆ ಇರಬಹುದು, ಒಟ್ಟು 1,80,000 ಎಕರೆ ಭೂಮಿಯಲ್ಲಿ ಬೆಳೆದ ಕೃಷಿ ಬೆಳೆ ಸರ್ವನಾಶವಾಗಿದೆ. ತೋಟಗಾರಿಕೆ ಬೆಳೆ, ರೇಷ್ಮೆ ಬೆಳೆಯಾದ ಮಲಬರಿ ಪೂರ್ತಿ ಹೋಗಿದೆ. 22 ಜಿಲ್ಲೆಗಳ ಪೈಕಿ ಒಂದು ಜಿಲ್ಲೆಯ ಬಗ್ಗೆ ಹೇಳುವುದಾದರೆ, ನಮ್ಮ ಜಿಲ್ಲೆಯಲ್ಲಿ 195 ಗ್ರಾಮಗಳು ನಾಶವಾದರೆ, ನಮ್ಮ ನೆರೆಯ ಜಿಲ್ಲೆಯಾದ ಬೆಳಗಾವಿಯಲ್ಲಿ ಬಾಧಿತ ಗ್ರಾಮಗಳ ಸಂಖ್ಯೆ ಸುಮಾರು 872 ಇದೆ. ಬಾಧಿತ ಕುಟುಂಬಗಳು ಸುಮಾರು 1,12,000 ಇದೆ. ಒಟ್ಟು ಬಾಧಿತ ಜನಸಂಖ್ಯೆ 4,15,000 ಜನ. ಸುಮಾರು 70,000 ಮನೆಗಳು ಸಂಪೂರ್ಣವಾಗಿ ಜಲಾವೃತವಾಗಿವೆ. ಸಂತ್ರಸ್ತರು ಕಾಳಜಿ ಕೇಂದ್ರಗಳಲ್ಲಿ ಸುಮಾರು 1,72,000 ಜನರು ಇದ್ದಾರೆ. ಇದರ 3–4 ಪಟ್ಟು ಜನರು ಅವರ ಸಂಬಂಧಿಕರ ಮನೆಗಳಿಗೆ ಹೋಗಿದ್ದಾರೆ. ಎಲ್ಲರೂ ಕಾಳಜಿ ಕೇಂದ್ರಗಳಿಗೆ ಹೋಗುವುದಿಲ್ಲ. ಮಧ್ಯಮ ವರ್ಗದವರು ಗಂಜಿ ಕೇಂದ್ರದಲ್ಲಿ ಬೌಲ್ ಹಿಡಿದುಕೊಂಡು ಆಹಾರ ಸ್ವೀಕರಿಸುವುದಕ್ಕೆ ಮುಜುಗರ ಪಡುತ್ತಾರೆ. ದನಕರುಗಳನ್ನೆಲ್ಲಾ ಕಟ್ಟಿಕೊಂಡು ತಮ್ಮ ಬೀಗರ ಮನೆಗಳಿಗೆ, ಸಂಬಂಧಿಕರ, ಗೆಳೆಯರ ಮನೆಗಳಿಗೆ ಹೋಗಿದ್ದಾರೆ. ಬೆಳಗಾವಿ ಜಿಲ್ಲೆಯಲ್ಲಿ ಕೃಷಿ, ತೋಟಗಾರಿಕೆ ಮತ್ತು ರೇಷ್ಮೆ ಬೆಳೆಗಳಲ್ಲಿ ಒಟ್ಟು 8,80,000 ಎಕರೆ ಭೂಮಿಯಲ್ಲಿ ಬೆಳೆದ ಪೀಕು ಸಂಪೂರ್ಣವಾಗಿ ಮುಳುಗಿ ಹೋಗಿದೆ. ಅವರು ಕೃಷಿಯನ್ನೇ ಅವಲಂಬಿಸಿರುವವರು, ಸಾಗುವಳಿಗಾಗಿ ಸಾಕಷ್ಟು ಹಣವನ್ನು ವ್ಯಯ ಮಾಡಿರುತ್ತಾರೆ. ಕಬ್ಬು ಬೆಳೆಯುವುದಕ್ಕೆ, cost of cultivation ಎಷ್ಟು ಆಗಿರುತ್ತದೆ. ಇಲ್ಲಿಯವರೆಗೆ ಬೆಳೆಸಿ ಈಗಾಗಲೇ ಕಾರ್ಖಾನೆಗಳು ಪ್ರಾರಂಭವಾಗುವ ಸಮಯ ಬಂದಿದೆ. ಪ್ರವಾಹ ಬಂದು ಬೆಳೆಗಳೆಲ್ಲಾ ನೀರಿನಲ್ಲಿ ಮುಳುಗಿದೆ, ಕೈಗೆ ಬಂದ ತುತ್ತು ಬಾಯಿಗೆ ಬರಲಾರದಂತಾಗಿದೆ. ಇವತ್ತಿನ FRP (Fair and Remunerative Price) ಪ್ರಕಾರ ಕನಿಷ್ಠ ಎಂದರೂ ಒಂದು ಎಕರೆಗೆ ಒಂದೂವರೆ ಲಕ್ಷ ರೂಪಾಯಿಗಳಷ್ಟು ಕಬ್ಬು ಬೆಳೆಯಿಂದ ಆದಾಯ ಬರುತ್ತಿತ್ತು. ರೈತರು ಅದರಿಂದ ವಂಚಿತರಾಗಿದ್ದಾರೆ. ಬೆಳಗಾವಿ ಜಿಲ್ಲೆ ಮತ್ತು ಬಾಗಲಕೋಟೆ ಜಿಲ್ಲೆಯಲ್ಲಿರುವ ಸಕ್ಕರೆ ಕಾರ್ಖಾನೆಗಳು ಪ್ರಾರಂಭವಾಗದ ಸ್ಥಿತಿಗೆ ಬಂದಿದೆ. ಕಚ್ಚಾ ವಸ್ತುವಾದ ಕಬ್ಬು ನೀರಿನಲ್ಲಿ ಮುಳುಗಿ ಹೋಗಿದೆ. ಇಷ್ಟು ಇವೆರಡು ಜಿಲ್ಲೆಗಳ ಬಗ್ಗೆ ಹೇಳುತ್ತೇನೆ. ಇಷ್ಟೆಲ್ಲಾ ಹಾನಿಯಾಗಿರುವಾಗ, ಸರ್ಕಾರ ಕೇಂದ್ರ ಸರ್ಕಾರಕ್ಕೆ 38,451 ಕೋಟಿ ರೂಪಾಯಿ ಹಾನಿಯಾಗಿದೆ ಎಂದು ತಿಳಿಸಿದೆ. ಇವರು ಕ್ಲೇಮ್ ಮಾಡಿದ್ದು 38,451 ಕೋಟಿ. ಅದರಲ್ಲಿ, SDRF (State Disaster Response Fund) Norms ಎಂದು ಬರೆದಿದ್ದಾರೆ. ಅದರ ಪ್ರಕಾರ 3,818 ಕೋಟಿ ರೂಪಾಯಿಗಳು ಬರುತ್ತದೆ. ಕನಿಷ್ಠ ಎಂದರೆ ಒಂದು ಎಕರೆಗೆ ಒಂದೂವರೆ ಲಕ್ಷ ರೂಪಾಯಿ ಆದಾಯ ಬರುವ ಬೆಳೆಗೆ ಹೆಕ್ಟೇರಿಗೆ 13,000 ರೂಪಾಯಿ ಪರಿಹಾರ ಕೊಡುತ್ತೇವೆಂದು ಹೇಳುತ್ತಾರೆ. ಅಂದರೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎಕರೆಗೆ 5,000 ರೂಪಾಯಿ ಎಂದಾಯಿತು. ಕಬ್ಬು ಬೆಳೆ ಮುಳುಗಿ ಹೋಗಿ ಕೊಳೆತು ಹೋಗಿದೆ, ಜಾನುವಾರುಗಳು ತಿನ್ನುವುದಕ್ಕೂ ಬರದಂತಹ ಸ್ಥಿತಿ ಆಗಿದೆ. ಅದನ್ನು ಕಟ್ ಮಾಡಿ ದಂಡೆಗೆ ಹಾಕಬೇಕಾದರೆ ಸುಮಾರು 10,000 ರೂಪಾಯಿ ಬೇಕು. ಹೀಗಾದರೆ ಈ ದೇಶದ ರೈತರು ಉಳಿಯುತ್ತಾರೆಯೇ? ಅವರು pro-farmer Government ಎಂದು ಹೇಳುತ್ತಾರೆ. ರೈತರ ಪರ ಸರ್ಕಾರ, ಮಾನ್ಯ ಮುಖ್ಯಮಂತ್ರಿಗಳು ಪ್ರತಿಜ್ಞಾ ವಿಧಿ ಸ್ವೀಕಾರ ಮಾಡುವಾಗ ಹೆಗಲ ಮೇಲೆ ಹಸಿರು ಶಾಲನ್ನು ಧರಿಸಿದ್ದನ್ನು ನೋಡಿದ್ದೆವು. ಅದ್ದರ ಬಗ್ಗೆ ವ್ಯಕ್ತಿಗತವಾಗಿ ಮಾತನಾಡುವುದಕ್ಕೆ ಹೋಗುವುದಿಲ್ಲ. 3,818 ಕೋಟಿ ಎಂದರೆ ನಮಗೆ ಯಾವ ರೀತಿ ಸಹಾಯವಾಗುತ್ತದೆ? ಇಷ್ಟೆಲ್ಲಾ ಆಗಿದೆ, ಪ್ರಧಾನ ಮಂತ್ರಿಗಳಾದ ಗೌರವಾನ್ವಿತ ಶ್ರೀ ನರೇಂದ್ರ ಮೋದಿಯವರು; ಇಷ್ಟು ದೊಡ್ಡ ಪ್ರಮಾಣದಲ್ಲಿ ಇಡೀ ರಾಜ್ಯದಲ್ಲಿ 30 ಜಿಲ್ಲೆಗಳಲ್ಲಿ 22 ಜಿಲ್ಲೆಗಳು, ಅಂದರೆ, 2/3 ಭಾಗದಷ್ಟು ಭೂಮಿ ಮುಳುಗಿದೆ, ಸಾವಿರಾರು ಗ್ರಾಮಗಳು ಮುಳುಗಿವೆ, ಲಕ್ಷಾಂತರ ಜನರು ನಿರ್ಗತಿಕರಾಗಿದ್ದಾರೆ, ಲಕ್ಷಾಂತರ ಎಕರೆ ಭೂಮಿಯಲ್ಲಿ ಬೆಳೆ ನಾಶವಾಗಿದೆ. ಶ್ರೀ ನರೇಂದ್ರ ಮೋದಿಯವರು ಸೆಪ್ಟೆಂಬರ್ 7ರಂದು ಬಂದರು, ಇಲ್ಲಿ ಮುಖ್ಯ ಮಂತ್ರಿಗಳು, ಸಚಿವರು ಹೋಗಿ ನಮ್ಮ ರಾಜ್ಯದಲ್ಲಿ ಇಷ್ಟು ದೊಡ್ಡ ಪ್ರಮಾಣದಲ್ಲಿ ಹಾನಿಯಾಗಿದೆ, ರೈತರಿಗೆ ಹಾಹಾಕಾರವಾಗಿದೆ, ಇಡೀ ರಾಜ್ಯದೊಳಗೆ ಅದರಲ್ಲೂ ವಿಶೇಷವಾಗಿ, ಉತ್ತರ ಕರ್ನಾಟಕದ 13 ಜಿಲ್ಲೆಗಳಲ್ಲಿ 12 ಜಿಲ್ಲೆಗಳು ನೀರಿನಲ್ಲಿ ಮುಳುಗಿದೆ. ಇಡೀ ಉತ್ತರ ಕರ್ನಾಟಕ ನೀರಿನಲ್ಲಿದೆ. ತಾವು ಬಳ್ಳಾರಿಯವರಾಗಿದ್ದು, ತಮ್ಮ ಜಿಲ್ಲೆಯಲ್ಲಿಯೂ ತುಂಗಭದ್ರಾ ನದಿಯಿಂದ ಬಹಳ ದೊಡ್ಡ ಪ್ರಮಾಣದಲ್ಲಿ ಬಾಧಿತವಾಗಿದೆ. ಕೊನೆ ಪಕ್ಷ ಒಂದು ಸಭೆ ಕರೆದು ಪ್ರತಿಪಕ್ಷದವರಾಗಲೀ ಆಡಳಿತ ಪಕ್ಷದವರಾಗಲೀ ಒಂದು aerial survey ಮಾಡಿದ್ದರೆ ಆಗುತ್ತಿತ್ತು. Aerial survey ಯನ್ನು ಹಣಕಾಸು ಸಚಿವರು ಮತ್ತು ಭಾರೀ ಪವರ್‌ಫುಲ್ ಸಚಿವರಾದ ಗೃಹ ಸಚಿವರು ಮಾಡಿದರು. ಆದರೂ ಅವರು ಏನನ್ನೂ ಪರಿಹಾರ ಘೋಷಣೆ ಮಾಡಲಿಲ್ಲ. ಇಂದು ನಮ್ಮ ಪ್ರಧಾನಮಂತ್ರಿಯವರು ಪಾಕಿಸ್ತಾನದ ಹಿಂದಿನ ಪ್ರಧಾನ ಮಂತ್ರಿಯವರಾದ ನವಾಜ್ ಷರೀಫ್‌ರವರ ತಾಯಿಯ ಜನ್ಮದಿನಕ್ಕೆ ಸೀರೆಯೊಂದನ್ನು ಉಡುಗೊರೆಯಾಗಿ ಕಳುಹಿಸಿದರು. It is a good gesture. I appreciate it. ಅದಕ್ಕೆ ನನ್ನ ಆಕ್ಷೇಪಣೆ ಇಲ್ಲ. I have no objection for it. ಆದರೆ, ನಮ್ಮ ರಾಜ್ಯ ನೀರಿನಲ್ಲಿ ಮುಳುಗಿದ್ದರೂ, ಕೊನೆ ಪಕ್ಷ ಅಲ್ಲಿನ ಜನರು ಬದುಕಿದ್ದಾರೋ ಇಲ್ಲವೋ, ಅವರ ಸ್ಥಿತಿ ಗತಿ ಏನು ಅದನ್ನು ಕೇಳಬೇಕಲ್ಲವೇ? ಅದೇ 2009ರಲ್ಲಿ ಶ್ರೀ ಯಡಿಯೂರಪ್ಪನವರು ಮುಖ್ಯಮಂತ್ರಿಯಾಗಿದ್ದಾಗ ಇದೇ ರೀತಿ ನೆರೆ ಹಾವಳಿ ಆಗಿತ್ತು. ಇದೇ ರೀತಿ ಅಲ್ಲ, ಇದಕ್ಕಿಂತ ಬಹಳ ಕಡಿಮೆ ಆಗಿತ್ತು. ಅದರ ನಾಲ್ಕು ಪಟ್ಟು ಈ ಬಾರಿ ನೆರೆ ಹಾವಳಿಯಾಗಿದೆ. ಆಗ ಈ ದೇಶದ ಹಿಂದಿನ ಪ್ರಧಾನ ಮಂತ್ರಿಯವರಾಗಿದ್ದ, ಇಡೀ ಜಗತ್ಪ್ರಸಿದ್ಧ ಆರ್ಥಿಕ ತಜ್ಞರಾದಂತಹ ಶ್ರೀ ಮನಮೋಹನ್‌ಸಿಂಗ್‌ರವರು ಹೇಳಿದ ತಕ್ಷಣವೇ; ಆಗ ಕೇಂದ್ರದಲ್ಲಿ ಕಾಂಗ್ರೆಸ್ ಪಕ್ಷದ ಸರ್ಕಾರ

ಇತ್ತು. ಈಗ ರಾಜ್ಯದಲ್ಲಿಯೂ ಬಿ.ಜೆ.ಪಿ. ಸರ್ಕಾರ, ಕೇಂದ್ರದಲ್ಲಿಯೂ ಬಿ.ಜೆ.ಪಿ. ಸರ್ಕಾರವಿದೆ. ಒಂದು ಮತ, ಎರಡು ಸರ್ಕಾರ ಅಂದರೆ, ಒಂದು ಮತ ಹಾಕಿದರೆ, ರಾಜ್ಯದಲ್ಲೂ ನಿಮ್ಮ ಸರ್ಕಾರ, ಕೇಂದ್ರದಲ್ಲಿಯೂ ನಿಮ್ಮ ಸರ್ಕಾರ ಎಂದು ಹೇಳಿದ್ದಿರಿ, ಅಂತೆಯೇ ಆಯಿತು. ನಾನು ರಾಜಕಾರಣದ ಬಗ್ಗೆ ಮಾತನಾಡುವುದಕ್ಕೆ ಹೋಗುವುದಿಲ್ಲ, ಆಗ ಬೇರೆ ಬೇರೆ ಚರ್ಚೆಯಾಗುತ್ತದೆ. ಈ ವಿಷಯ dilute ಆಗುತ್ತದೆ. ಅದರ ಬಗ್ಗೆ ಹೇಳುವುದಕ್ಕೆ ಹೋಗುವುದಿಲ್ಲ. ಡಾ: ಮನಮೋಹನ್ ಸಿಂಗ್‌ರವರು ತಕ್ಷಣವೇ ಬಂದು aerial survey ಮಾಡಿ ಸುಮಾರು 16 ನೂರು ಕೋಟಿ ರೂಪಾಯಿಗಳನ್ನು ಘೋಷಣೆ ಮಾಡಿ ಹೋದರು.

(ಗೊಂದಲ)

**ಶ್ರೀ ಎಸ್.ಆರ್. ಪಾಟೀಲ್ (ವಿರೋಧಪಕ್ಷದ ನಾಯಕರು):-** ತಾವು ಉತ್ತರ ಕೊಡುವಾಗ ಹೇಳಿ.

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಸಭಾಪತಿಯವರೇ, ರಾಯಚೂರಿನ ಶಕ್ತಿನಗರದ Guest House ನಲ್ಲೇ announce ಮಾಡಿ ಹೋದರು.

(ಗೊಂದಲ)

**Sri S.R. PATIL (LEADER OF OPPOSITION)**:- It shows the concern.

(ಗೊಂದಲ)

**ಡಾ: ವೈ.ಎ.ನಾರಾಯಣಸ್ವಾಮಿ:-** ಬಾಡಿಗೆ ಮನೆ ಕೊಟ್ಟಿದ್ದು ...

**ಶ್ರೀ ಎಸ್.ಆರ್. ಪಾಟೀಲ್ (ವಿರೋಧಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ನಾನೇಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಈ ದೇಶದ ಆಡಳಿತ ಸೂತ್ರವನ್ನು ಹಿಡಿದಿರುವ; ಅಂದು ಕರ್ನಾಟಕ ಕಷ್ಟದಲ್ಲಿದೆ, ನೆರೆ ಹಾವಳಿಯಿಂದ ಜನರಿಗೆ ಬಾಧಿತಗೊಂಡಿದ್ದಾರೆಂದು, aerial survey ಮಾಡಿ ಸುಮಾರು 16 ನೂರು ಕೋಟಿ ರೂಪಾಯಿಯನ್ನು ಘೋಷಣೆ ಮಾಡಿದಂತಹವರು ಮಾನ್ಯ ಮನಮೋಹನ್ ಸಿಂಗ್‌ರವರು. ಇವತ್ತು ನಮ್ಮ ದೇಶದ ಪ್ರಧಾನ ಮಂತ್ರಿಯವರಾದ ಶ್ರೀ ನರೇಂದ್ರ ಮೋದಿಯವರು ಚಂದ್ರಯಾನ-2 ಅನ್ನು ವೀಕ್ಷಣೆ ಮಾಡಲು ಬೆಂಗಳೂರಿಗೆ ಬಂದಿದ್ದರು. ನಮಗೂ ಬಹಳ ಖುಷಿಯಾಗುತ್ತದೆ. ಬಾಹ್ಯಾಕಾಶದಲ್ಲಿ ನಮ್ಮ ದೇಶಕ್ಕೆ



ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

4ನೇ ಸ್ಥಾನವಿದೆ. ಅಮೆರಿಕಾ, ರಷ್ಯಾ, ಚೈನಾದ ನಂತರದ ಸ್ಥಾನವಿದೆ. ನಮಗೆ ಅಭಿಮಾನವಿದೆ, ನಮ್ಮ ಪ್ರಧಾನ ಮಂತ್ರಿಯವರು ಬಂದರೆ ನಮಗೆ ಇನ್ನೂ ಖುಷಿಯಾಗುತ್ತದೆ. ಅವರು double work ಇಟ್ಟುಕೊಂಡು ಬಂದಿದ್ದಾರೆಂದು ನಾವು ಅಂದುಕೊಂಡಿದ್ದೆವು. ಚಂದ್ರಯಾನದ ವೀಕ್ಷಣೆ ಜೊತೆಗೆ ವಿಜ್ಞಾನಿಗಳನ್ನು ಭೇಟಿ ಮಾಡಿ ಅವರಿಗೆ ಶಹಬ್ಬಾಸ್‌ಗಿರಿ ನೀಡಿ, ಅವರ ಬೆನ್ನು ತಟ್ಟುವುದರ ಜೊತೆಗೆ ಪ್ರೋತ್ಸಾಹಿಸಿದರು. ಆದರೆ ಈ ರಾಜ್ಯದಲ್ಲಿ ಕಷ್ಟದಲ್ಲಿ, ನೋವಿನಲ್ಲಿ, ಶೋಚನೀಯ ಸ್ಥಿತಿ, ದಯನೀಯ ಸ್ಥಿತಿಯಲ್ಲಿರುವಂತಹ ಜನರಿಗೆ ಸಾಂತ್ವನ ಹೇಳುವಂಥದ್ದಕ್ಕೆ ಹೋಗಲೇ ಇಲ್ಲ. ಅವರು ಬಂದರು, ಹೋದರು ಅಷ್ಟೇ. ಸತ್ತವರ ಮನೆಗೆ ಮಾತನಾಡಿಸುವುದಕ್ಕೆ ಹೋಗಿದ್ದರೆ ಅವರೇನು ಸತ್ತವರ ಜೀವ ತಂದು ಕೊಡುವುದಕ್ಕೆ ಆಗುತ್ತದೆಯೇ?

(ಮುಂದು...

(124) 10-10-2019 /4-10/ಕೆಹೆಚ್-ಕೆಎಸ್

**ಶ್ರೀ ಎಸ್.ಆರ್.ಪಾಟೀಲ್(ಮುಂದು)**

ಅವರ ಜೀವವನ್ನು ತಂದು ಕೊಡುವುದಕ್ಕಾಗುತ್ತದೆಯೇ? ಅವರ ಸಹಾನುಭೂತಿಯಿಂದ ಆ ಕುಟುಂಬದ ಆತ್ಮಸ್ಥೈರ್ಯ ಹೆಚ್ಚಾಗುತ್ತದೆ. ಆ ದಿವಸ ಪ್ರಧಾನ ಮಂತ್ರಿಗಳು ಬಂದು ನೀವು ಭಯ ಪಡಬೇಡಿ, ನಾನು ನಿಮ್ಮ ಜೊತೆಯಲ್ಲಿದ್ದೇವೆ ಎನ್ನುವಷ್ಟಾದರೂ ನೈತಿಕ ಸ್ಥೈರ್ಯ ಕೊಟ್ಟಿದ್ದರೆ ನಾವು ಬಹಳ ಖುಷಿ ಪಡುತ್ತಿದ್ದೆವು. ಹಣ ಕೊಡುವುದು ನಂತರ ಇವರು ಯಾರಿಗೆ appointment ಕೊಟ್ಟಿದ್ದಾರೋ, ಇಲ್ಲವೋ ನನಗೆ ಗೊತ್ತಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಇಸ್ರೋ ಗೆಸ್ಟ್ ಹೌಸ್‌ನಲ್ಲಿ ಇದ್ದರಂತೆ.

**ಡಾ॥ ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಅವರು ರಾಜಕೀಯ ಮಾಡುತ್ತಿದ್ದಾರೆ.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ನಾನು ರಾಜಕೀಯ ಮಾಡುವುದಕ್ಕೆ ಹೋಗುವುದಿಲ್ಲ. Please don't mistake me. I will not do politics. I'm above politics and party. ನಾನು ಎಲ್ಲಿದ್ದರೂ ನಮ್ಮಲ್ಲಿರುವ ತಪ್ಪಿನ ಬಗ್ಗೆ ಮಾತನಾಡುತ್ತೇವೆ. I don't care. I am dare enough.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ರಕ್ಷಣಾ ಮಂತ್ರಿಗಳು ಮತ್ತು ಗೃಹ ಮಂತ್ರಿಗಳು ಖುದ್ದಾಗಿ ಬಂದು ಅಧ್ಯಯನ ಮಾಡಿ ಹೋಗಿದ್ದಾರೆ. ಅದನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಸ್ವಲ್ಪ ನೆನಪು ಮಾಡಿಕೊಳ್ಳಬೇಕು.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ನಾನು ರಕ್ಷಣಾ ಮಂತ್ರಿಗಳು ಬಂದು ಹೋಗಿದ್ದಾರೆ ಎಂದು ಹೇಳಿದ್ದೇನೆ. ಆದರೆ ಮಾನ್ಯ ಸಭಾನಾಯಕರು ಲಕ್ಷ್ಯ ಕೊಡುತ್ತಿಲ್ಲ. ಅವರು ಏಕೋ ಬೇರೆ ವಿಚಾರದ ಬಗ್ಗೆ ಚಿಂತನೆ ಮಾಡುತ್ತಿದ್ದಾರೆ ಎಂದು ಕಾಣುತ್ತಿದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಗೃಹ ಮಂತ್ರಿಗಳು ಸಹ ಬಂದಿದ್ದರು.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಭಾನಾಯಕರು ಸರ್ಕಾರದ ಭವಿಷ್ಯತ್ತಿನ ಬಗ್ಗೆ ವಿಚಾರ ಮಾಡುತ್ತಿದ್ದಾರೆ ಎಂದು ಕಾಣುತ್ತಿದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಸರ್ಕಾರಕ್ಕೆ ಉಪದ್ರವವಿದೆ, ಏನು ಮಾಡುವುದು?

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಇನ್ನು ಪೂರ್ಣ ಅವಧಿವರೆಗೆ ಇವರು ಆಡಳಿತವನ್ನು ನಡೆಸಲಿ, ನಮ್ಮಿಂದ ಅವರಿಗೆ ಏನೂ ತೊಂದರೆಯಾಗುವುದಿಲ್ಲ. ತೊಂದರೆ ಮಾಡುವವರು ಅವರೊಳಗೆ ಗುದ್ದಾಡಿ, ಬಡಿದಾಡಿ ಅಲ್ಲಲ್ಲೇ ರೆಸಾರ್ಟ್‌ಗಳಿಗೋ ಮತ್ತೆಲ್ಲಿಗೋ ಹೋಗಿ ಏನೇನೋ ಮಾಡುತ್ತಾರೆ. ನಾವು ಇವರ ಉಸಾಬರಿಗೆ ಬರುವುದಿಲ್ಲ. ಇವರು ಆಡಳಿತವನ್ನು ನಡೆಸಲಿ, ದಕ್ಷ, ಪಾರದರ್ಶಕ, ಪ್ರಾಮಾಣಿಕ ಆಡಳಿತವನ್ನು ಈ ರಾಜ್ಯದ ಜನರ ವಿಶ್ವಾಸವನ್ನು ಗಳಿಸುವಂತಹ ಆಡಳಿತವನ್ನು ನಡೆಸಲಿ. ಆ ದೃಷ್ಟಿಯಿಂದ ಕೊನೆಯ ಪಕ್ಷ ಮಾನ್ಯ ಪ್ರಧಾನ ಮಂತ್ರಿಗಳು ಒಂದು ಮಾತನ್ನು ಹೇಳಬೇಕಾಗಿತ್ತು. ಇದರ ಬಗ್ಗೆ ಒಂದು ಸಭೆಯನ್ನು ಕರೆಯಬೇಕಾಗಿತ್ತು. ಆದರೆ ಅವರು ಸಭೆ ಕರೆಯಲಿಲ್ಲ. ಇದರ ಬಗ್ಗೆ ನಾನು ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ಮಾನ್ಯ ಸಚಿವರಾದ ಸಿ.ಸಿ.ಪಾಟೀಲ್‌ರವರು 'ತಾವು ಪೇಪರ್‌ನ್ನು ಓದುತ್ತೀರೋ, ಇಲ್ಲವೋ' ಎಂದು ಕೇಳಿದರು. ನಾವು ಸಹ ಪತ್ರಿಕೆಗಳನ್ನು ಓದುತ್ತೇವೆ. "ಇಳಿಗಾಲದಲ್ಲಿ ಸಿಕ್ಕಿದ್ದು ಪವಿತ್ರ ಸರ್ಕಾರದ ಉತ್ಸವ ಮೂರ್ತಿ ಎಂಬ ಪಟ್ಟವಷ್ಟೇ, ವರಿಷ್ಠರಿಗೆ ಒಲ್ಲದ ಶಿಶು ಯಡಿಯೂರಪ್ಪ" ಎಂಬ ಶೀರ್ಷಿಕೆ ಅಡಿಯಲ್ಲಿ ಒಂದು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಲೇಖನ ಪ್ರಜಾವಾಣಿ ಪತ್ರಿಕೆಯಲ್ಲಿ ಬಂದಿದೆ. ಓದಿದರೆ ಬಹಳ ಅದ್ಭುತ ಲೇಖನ ಇದು. ಇದು impartial paper.

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ...

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ವಿರೋಧ ಪಕ್ಷದ ನಾಯಕರೇ, ತಾವು ಬಹಳ ಹಿರಿಯರಿದ್ದೀರಿ. ಒಟ್ಟಿನಲ್ಲಿ ನಾವು ಎಲ್ಲಿ ತಪ್ಪಿದ್ದೇವೆಂದು ಹೇಳಿ. ರಾಜಕಾರಣದ ಅಭಿಪ್ರಾಯಗಳನ್ನು ಮತ್ತು ರಾಜಕಾರಣದ ವಿಮರ್ಶೆಗಳ ಬಗ್ಗೆಯೇ ಚರ್ಚೆ ಮಾಡೋಣ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾನಾಯಕರೇ, ಒಂದು ನಿಮಿಷ ನಾನು ಹೇಳುವುದನ್ನು ಕೇಳಿ. First listen to me. ನಾನು yield ಆಗಿಲ್ಲ. ನೀವು ಕೇಳಿ, ಒಂದು ಹಂತಕ್ಕೆ ನೀವು ಕುಳಿತುಕೊಳ್ಳಿ ಎಂದರೆ ನಾನು ಕುಳಿತುಕೊಳ್ಳುತ್ತೇನೆ. ಇದರಲ್ಲಿ ಬಹಳಷ್ಟು ರಾಜಕೀಯ ವಿಷಯಗಳು ಇವೆ. ನಾನು ಅದರ ಬಗ್ಗೆ ಹೇಳುವುದಕ್ಕೆ ಹೋಗುವುದಿಲ್ಲ. "ವರಿಷ್ಠರಿಗೆ ಒಲ್ಲದ ಶಿಶು ಯಡಿಯೂರಪ್ಪ" ಎಂದು ಹೆಡ್‌ಲೈನ್‌ನಲ್ಲಿ ಇರುವುದಷ್ಟೇ ನಾನು ಹೇಳಿದೆ, ಒಳಗಿರುವ ವಿಷಯವನ್ನು ನಾವು ಓದುವುದಕ್ಕೆ ಹೋಗಿಲ್ಲ. ಈ ಪತ್ರಿಕೆಯನ್ನು ಕೊಡುತ್ತೇನೆ, ನೀವೇ ಓದಿ. ತಾವು ದಕ್ಷಿಣ ಕನ್ನಡ ಜಿಲ್ಲೆಯವರು ಬಹಳ ಜಾಣರು ಮನೆಯಲ್ಲಿ ಪತ್ರಿಕೆಯನ್ನು ಓದಿರುತ್ತೀರಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ವಿರೋಧ ಪಕ್ಷದ ನಾಯಕರೇ, ತಾವು ಹೆಡ್ಡಿಂಗ್ ಮೂಲಕ ಚುಚ್ಚುವುದಕ್ಕೆ ಹೊರಟಿದ್ದೀರಿ. ಆದರೆ ತಾವು ಏನು ಬೇಕಾದರೂ ಹೇಳಿ, ನೆರೆ ಪರಿಹಾರಕ್ಕೆ ಸಂಬಂಧಪಟ್ಟಂತೆ ಸರ್ಕಾರ ಎಲ್ಲಿ ತಪ್ಪಿದೆ ಎಂಬುದನ್ನು ಹೇಳಿ. 'ಒಲ್ಲದ ಶಿಶು' ಗಳೆಲ್ಲಾ ನಿಮ್ಮ ರಕ್ತದಲ್ಲಿ ಬರುವುದಿಲ್ಲ. ಅಂದಾಜಿನಲ್ಲಿ ನಾನು ತಮಗೆ ಹೇಳಿದ್ದೇನೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾನಾಯಕರೇ, ನಾನು ಅದರ ಆಳಕ್ಕೆ ಇಳಿದೆ ಎಂದರೆ, ಈ ಸದನದ ಶಾಂತತೆ ಕದಡುತ್ತದೆ. But, I am here to talk about a major issue. Flood effected ಜನರಿಗೆ ನ್ಯಾಯ ಕೊಡಿಸುವ ಸಲುವಾಗಿ ಇವತ್ತಿನ ದಿವಸ ಈ ಸದನದಲ್ಲಿ ನಿಂತುಕೊಂಡು ಮಾತನಾಡುತ್ತಿದ್ದೇನೆ. I will not do any politics. ಮಾನ್ಯ ಸಚಿವರಾದ ಸಿ.ಸಿ. ಪಾಟೀಲ್‌ರವರು ಪತ್ರಿಕೆಯಲ್ಲಿ ಬಂದಿದೆ ಎಂದು ಹೇಳಿದರು. ಪತ್ರಿಕೆಯಲ್ಲಿ ಬಹಳಷ್ಟು ಬಂದಿದೆ. ಅದನ್ನೆಲ್ಲಾ ಉಲ್ಲೇಖಿಸಿದರೆ ತಮಗೆ ಸಿಟ್ಟು ಬರುತ್ತದೆ, ಕೋಪ ಬರುತ್ತದೆ. ತಮಗೆ ಸಿಟ್ಟು ಬರಬಾರದು.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ನಮಗೆ ಸಿಟ್ಟು ಬರಲಿಲ್ಲ. ಆದರೆ ಎಂದೂ ಕೂಡ ಮಾನ್ಯ ಎಸ್.ಆರ್.ಪಾಟೀಲ್‌ರವರು ದಾರಿ ತಪ್ಪುವವರು ಅಲ್ಲ. ಆದರೆ ಇವತ್ತು ಏಕೋ ದಾರಿ ತಪ್ಪಿ ಮಾತನಾಡುತ್ತಿದ್ದಾರೆ ಎಂದು ನಾನು ಅವರಿಗೆ ನೆನಪು ಮಾಡಿದೆ ಅಷ್ಟೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾನಾಯಕರೇ, ನಾನು ಏಕೆ ಹೇಳಿದೆನೆಂದರೆ, ಇವತ್ತು ನಮ್ಮ ಮಾನ್ಯ ಸದಸ್ಯರಾದ ಬಸನಗೌಡ ಪಾಟೀಲ್ (ಯತ್ನಾಳ್)ರವರು ವಿಜಯಪುರ ನಗರದ ಶಾಸಕರು, ಕೇಂದ್ರದ ಹಿಂದಿನ ಸಚಿವರು, ನಮ್ಮ ಅಖಂಡ ಜಿಲ್ಲೆಯ ಒಬ್ಬ ಒಳ್ಳೆಯ ನಾಯಕರಾಗಿದ್ದು, ಅವರು ಏನು ಹೇಳಿದ್ದಾರೆ ಎಂದು ಹೇಳುವುದಕ್ಕೆ ಹೋಗುವುದಿಲ್ಲ. ಕೇಂದ್ರದಲ್ಲಿ ಇಬ್ಬರೂ ಮಂತ್ರಿಗಳು ಏನು ಮಾಡಿದ್ದಾರೆ ಎಂದು ನೋಡಿದೆ. ಅವರೇನಾದರೂ ಟೀಕೆ ಮಾಡಿದ್ದಾರೆಯೇ, ಸರ್ಕಾರಕ್ಕೆ ಸಲಹೆ ಕೊಟ್ಟಿದ್ದಾರೆಯೇ ಎಂಬುದನ್ನೆಲ್ಲಾ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಅದನ್ನೆಲ್ಲಾ ಈಗ ಹೇಳುವ ಇಚ್ಛೆ ನನಗಿಲ್ಲ.

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಬಸನಗೌಡ ಪಾಟೀಲ್ (ಯತ್ನಾಳ್)ರವರಿಗೆ ನಾವು ಉತ್ತರವನ್ನು ಕೊಡುತ್ತೇವೆ. ನಾವೆಲ್ಲಾ ಒಂದೇ ರಾಜಕೀಯ ಪಕ್ಷದವರು.

(ಗೊಂದಲ)

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ...

**ಶ್ರೀ ಆರ್.ಧರ್ಮಸೇನ:–** ಮಾನ್ಯ ಸಭಾಪತಿಯವರೇ, ಮುಖ್ಯಮಂತ್ರಿಗಳು ಎಲ್ಲಾ ಪವರ್ ಇಟ್ಟುಕೊಂಡು ಕುಳಿತುಕೊಂಡಿದ್ದಾರೆ. ನಮಗೆ ಮಾಹಿತಿ ಸಹ ಕೊಡುವುದಿಲ್ಲ ಎಂದು ಅವರೆಲ್ಲಾ ಹೇಳುತ್ತಿದ್ದಾರೆ.

(ಗೊಂದಲ)

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾನಾಯಕರೇ, ನಿಮ್ಮ ಸರ್ಕಾರ ನೀವು ಹೇಗೆ ಬೇಕಾದರೂ ಬಡಿದಾಡಿ. ಕೈಯಲ್ಲಿ ಬಡಿಗೆಗಳನ್ನು ಹಿಡಿದು ಬಡಿದಾಡಿ, ಆಯುಧಗಳನ್ನು ತೆಗೆದುಕೊಂಡು ಬಡಿದಾಡಿ. ಇದನ್ನು ಕೇಳುವುದಕ್ಕೆ ನಾನು ಯಾರು?

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಗೊಂದಲ)

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ...

ಶ್ರೀ **ಎಸ್.ಆರ್.ಪಾಟೀಲ್:–** ಮಾನ್ಯ ಸದಸ್ಯರಾದ ಬಸನಗೌಡ ಪಾಟೀಲ್ (ಯತ್ನಾಳ್)ರವರು ಏನು ಹೇಳಿದ್ದಾರೆ ಎಂದರೆ, ಇಡೀ ರಾಜ್ಯದ ...

**ವೈಸ್ ಛೇರ್ಮನ್:–** ಮಾನ್ಯ ರವಿಕುಮಾರ್‌ರವರೇ, ತಮಗೆ ಅವಕಾಶ ಸಿಕ್ಕಾಗ ಮಾತನಾಡಿ. ಈಗ ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಆರ್.ಧರ್ಮಸೇನ:–** ಮಾನ್ಯ ಸಭಾಪತಿಯವರೇ, ಕ್ಯಾಬಿನೇಟ್‌ನಲ್ಲಿ ಮುಖ್ಯಮಂತ್ರಿಗಳು ಒಬ್ಬರೇ ಇದ್ದಾರೆಯೇ?

**ಶ್ರೀ ಪ್ರಕಾಶ್ ಕೆ. ರಾಥೋಡ್:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ.

**ವೈಸ್ ಛೇರ್ಮನ್‌ರವರು:–** ಮಾನ್ಯ ಸದಸ್ಯರೇ, ನಿಮ್ಮ ಸರದಿ ಬಂದಾಗ ಮಾತನಾಡಿ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯಾದವರು ಎದ್ದು ನಿಂತಾಗ ದಯಮಾಡಿ ಸದಸ್ಯರು ಕುಳಿತುಕೊಳ್ಳಬೇಕು.

**ವೈಸ್ ಛೇರ್ಮನ್‌ರವರು:–** ಮಾನ್ಯ ಸದಸ್ಯರಾದ ಪ್ರಕಾಶ್ ಕೆ. ರಾಥೋಡ್‌ರವರೇ ನಿಮ್ಮ ಸರದಿ ಬಂದಾಗ ಮಾತನಾಡಿ.

**ಶ್ರೀ ಪ್ರಕಾಶ್ ಕೆ. ರಾಥೋಡ್:–** ಮಾನ್ಯ ಸಭಾಪತಿಯವರೇ, ನಾವು ರಾಜಕೀಯ ಎಲ್ಲಿ ಮಾಡುತ್ತಿದ್ದೇವೆ? ನಮ್ಮ ಸಭಾನಾಯಕರು ಏನು ಹೇಳಿದ್ದಾರೆಂದರೆ, ಶಾಸಕರಾದ ಬಸನಗೌಡ ಪಾಟೀಲ್ (ಯತ್ನಾಳ್)ರವರು ತಮ್ಮ ಸರ್ಕಾರ ನೆರೆ ಪರಿಹಾರಕ್ಕೆ ದುಡ್ಡು ಕೊಟ್ಟಿಲ್ಲ ಎಂಬ ಕಾರಣಕ್ಕೆ show cause ನೋಟಿಸ್ ಕೊಡಲಾಗಿದೆ ಎಂದಾಗ ಅದಕ್ಕೆ ಅವರು ಏನು ಉತ್ತರವನ್ನು ಕೊಡುತ್ತಾರೆ ಎಂದರೆ, ಇಬ್ಬರು ಕೇಂದ್ರ ಸಚಿವರು ಈ ರೀತಿ ದಾರಿ ತಪ್ಪಿಸುತ್ತಿದ್ದಾರೆ ಎಂದು ಅವರು ಹೇಳುತ್ತಿದ್ದಾರೆ. ಇದರಲ್ಲಿ ರಾಜಕೀಯ ಏನಿದೆ, ರಾಜಕೀಯ ನಾವು ಮಾಡಿದ್ದೇವೆಯೇ?

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಸಭಾಪತಿಯವರು:–** ಮಾನ್ಯ ಪ್ರಕಾಶ್ ಕೆ. ರಾಥೋಡ್‌ರವರೇ, ...

**(ಗೊಂದಲ)**

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ...

**ವೈಸ್ ಛೇರ್ಮನ್‌ರವರು:–** ಮಾನ್ಯ ಪ್ರಕಾಶ್ ಕೆ. ರಾಥೋಡ್‌ರವರೇ ನಿಮ್ಮ ಸರದಿ ಬಂದಾಗ ಮಾತನಾಡಿ, ನಿಮ್ಮ ನಾಯಕರು ಮಾತನಾಡುತ್ತಿದ್ದಾರೆ. ಈಗ ಸ್ವಲ್ಪ ಹೊತ್ತು ಕುಳಿತುಕೊಳ್ಳಿ.

**ಶ್ರೀ ಪ್ರಾಣೇಶ್ ಎಂ.ಕೆ:–** ಮಾನ್ಯ ಸಭಾಪತಿಯವರೇ, ...

**ವೈಸ್ ಛೇರ್ಮನ್‌ರವರು:–** ಮಾನ್ಯ ಸದಸ್ಯರಾದ ಪ್ರಾಣೇಶ್‌ರವರೇ ನಿಮ್ಮ ಸರದಿ ಬಂದಾಗ ಮಾತನಾಡಿ.

**(ಗೊಂದಲ)**

**ಶ್ರೀ ಎನ್.ರವಿಕುಮಾರ್ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಇವರು ಬಿಜೆಪಿ ಪಕ್ಷದ ಬಗ್ಗೆ ಮಾತನಾಡುತ್ತಿದ್ದಾರೆಯೇ ಅಥವಾ ನೆರೆ ಹಾವಳಿ ವಿಷಯದ ಬಗ್ಗೆ ಮಾತನಾಡುತ್ತಿದ್ದಾರೆಯೇ? ನಿಲುವಳಿ ಸೂಚನೆ ಮಂಡಿಸಲು ಅನುಮತಿ ಕೋರುತ್ತಿರುವ ಪ್ರಸ್ತಾವ ಯಾವ ವಿಷಯ ಕುರಿತಂತೆ ಇದೆ?

**ಸಭಾಪತಿಯವರು:–** ಮಾನ್ಯ ಸದಸ್ಯರಾದ ರವಿಕುಮಾರ್‌ರವರೇ, ದಯಮಾಡಿ ಕುಳಿತುಕೊಳ್ಳಿ. ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಲಿ. ನಂತರ ಸರ್ಕಾರ ಜವಾಬು ಕೊಡುತ್ತದೆ.

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ರೈತರ ಪರವಾಗಿ ಮಾತನಾಡಿದರೆ ಅವರಿಗೆ show cause notice ಕೊಡುತ್ತಾರೆ. ಬಡವರ ಪರವಾಗಿ ಮಾತನಾಡಿದರೆ show cause notice ಕೊಡುತ್ತಾರೆ. ನೆರೆ ಪರಿಹಾರದ ಬಗ್ಗೆ ಮಾತನಾಡಿದರೂ ಸಹ show cause notice ಕೊಡುತ್ತಾರೆ.

**(ಗೊಂದಲ)**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಡಾ|| ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನೀವು ರಾಜಕೀಯ ಮಾಡಿದರೆ, ನಾವು ಉತ್ತರ ಕೊಡುತ್ತೇವೆ. ಕಷ್ಟದಲ್ಲಿ ಯಾರಿದ್ದಾರೆ, ಯಾರು ಕಣ್ಣೀರು ಹಾಕಿದ್ದಾರೆ?

**(ಈ ಹಂತದಲ್ಲಿ ಮಾನ್ಯ ವೈಸ್ ಛೇರ್ಮನ್‌ರವರು ತಮ್ಮ ಪೀಠದಿಂದ ಎದ್ದು ನಿಂತರು)**

**ವೈಸ್ ಛೇರ್ಮನ್‌ರವರು:–** ಮಾನ್ಯ ಸದಸ್ಯರಾದ ನಾರಾಯಣಸ್ವಾಮಿಯವರೇ, ದಯವಿಟ್ಟು ಕುಳಿತುಕೊಳ್ಳಿ. ತಾವು ಕುಳಿತುಕೊಂಡರೆ ನಾನು ಮಾತನಾಡುತ್ತೇನೆ. ಮಾನ್ಯ ಸದಸ್ಯರು ದಯವಿಟ್ಟು ಸ್ವಲ್ಪ ಅರ್ಥ ಮಾಡಿಕೊಳ್ಳಬೇಕು. ಪ್ರತಿಪಕ್ಷ ನಾಯಕರು ಗಂಭೀರವಾಗಿ ಚರ್ಚೆ ಮಾಡುತ್ತಿದ್ದಾರೆ. ಅವರು ಮಾತನಾಡಿರುವುದು ತಮಗೆ ಸರಿಯೆನಿಸಿಲ್ಲವೆಂದರೆ ತಮ್ಮ ತಮ್ಮ ಸರದಿಗಳು ಬಂದಾಗ ಅದರ ಬಗ್ಗೆ ಮಾತನಾಡಿ.

**ಶ್ರೀ ಪ್ರಾಣೇಶ್ ಎಂ.ಕೆ:–** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದವರಿಗೂ ಸಹ ಆ ಮಾತನ್ನು ಹೇಳಿ.

**ವೈಸ್ ಛೇರ್ಮನ್‌ರವರು:–** ಪೀಠದ ಈ ಮಾತನ್ನು ತಪ್ಪಿಸಿ ತಾವು ಮಧ್ಯದಲ್ಲಿ ಮಾತನಾಡಿದರೆ ಅದು ರೆಕಾರ್ಡ್‌ಗೆ ಹೋಗುವುದಿಲ್ಲ. ತಮ್ಮ ಸರದಿ ಬಂದಾಗ ತಮ್ಮ ಅನಿಸಿಕೆಗಳನ್ನು ಹೇಳಿ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ನೆರೆಗೆ ಸಂಬಂಧಿಸಿದ ವಿಚಾರಗಳನ್ನು ಮಾತ್ರ ನಾನು ಹೇಳುತ್ತೇನೆ.

**ಶ್ರೀ ಪ್ರಕಾಶ್ ಕೆ. ರಾಥೋಡ್ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ನಾನು ತಮ್ಮ ಅನುಮತಿಯನ್ನು ಪಡೆದುಕೊಂಡು ಮಾತನಾಡಿದ್ದೇನೆ. ನಾನು ರಾಜಕೀಯ ಮಾಡಿಲ್ಲ. ಮಾನ್ಯ ಸದಸ್ಯರಾದ ನಾರಾಯಣಸ್ವಾಮಿಯವರು 'ನೀವು ರಾಜಕೀಯ ಮಾಡಿದರೆ, ನಾವು ಉತ್ತರ ಕೊಡುತ್ತೇವೆ' ಎಂದು ಹೇಳುತ್ತಾರೆ. ಅವರು ರಾಜಕೀಯ ಮಾಡಲಿ, ನಾವು ಸಹ ಉತ್ತರವನ್ನು ಕೊಡುತ್ತೇವೆ. ಬೇಕಾದರೆ ಅವರು ಚಾಲೆಂಜ್ ಮಾಡುತ್ತಾರೆಯೇ?

**(ಗೊಂದಲ)**

**ಡಾ|| ವೈ.ಎ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಅವರು ಮಾತನಾಡಲಿ, ನಾವು ಜಗ್ಗುವುದಿಲ್ಲ. ಅವರು ನಮ್ಮನ್ನು ಹೆದರಿಸುತ್ತಾರೆಯೇ? ಅವರ ಹೆದರಿಕೆಗೆ ನಾವೂ ಬಗ್ಗುವುದಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ವೈಸ್ ಛೇರ್ಮನ್‌ರವರು:–** ಮಾನ್ಯ ಸದಸ್ಯರಾದ ನಾರಾಯಣಸ್ವಾಮಿಯವರೇ ಮತ್ತು ಪ್ರಕಾಶ್ ಕೆ. ರಾಥೋಡ್‌ರವರೇ ದಯಮಾಡಿ ಕುಳಿತುಕೊಳ್ಳಿ.

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ):–** ಮಾನ್ಯ ಪ್ರಕಾಶ್ ಕೆ. ರಾಥೋಡ್‌ರವರೇ, ಒಳ್ಳೆಯ ವಿಷಯದ ಬಗ್ಗೆ ಚರ್ಚೆ ನಡೆಯುತ್ತಿದೆ, ಅದಕ್ಕೆ ದಯಮಾಡಿ ತಾವು ಅವಕಾಶ ಮಾಡಿಕೊಡಿ. ಸುಮ್ಮನೆ ರಾಜಕೀಯ ಮಾತನಾಡುತ್ತಾ ಕುಳಿತುಕೊಂಡರೆ ಹೇಗೆ?

**ವೈಸ್ ಛೇರ್ಮನ್‌ರವರು:–** ಮಾನ್ಯ ಸದಸ್ಯರಾದ ಪ್ರಕಾಶ್ ಕೆ. ರಾಥೋಡ್‌ರವರೇ ದಯಮಾಡಿ ಕೇಳಿ. ಗಂಭೀರವಾಗಿ ಚರ್ಚೆ ನಡೆಯುತ್ತಿದೆ. ತಮ್ಮ ತಮ್ಮ ಸರದಿಗಳು ಬಂದಾಗ ತಾವು ಏನಾದರೂ ಮಾತನಾಡಿ. ಅವರ ಸರದಿ ಬಂದಿರುವಾಗ ಅವರು ಮಾತನಾಡುತ್ತಿದ್ದಾರೆ. ದಯವಿಟ್ಟು ಪ್ರತಿಪಕ್ಷದ ನಾಯಕರು ಮಾತನಾಡುವುದನ್ನು ಮುಂದುವರೆಸಲಿ.

**(ಗೊಂದಲ)**

**ಶ್ರೀ ಪ್ರಕಾಶ್ ಕೆ. ರಾಥೋಡ್:–** ಮಾನ್ಯ ಸಭಾಪತಿಯವರೇ, ...

**ವೈಸ್ ಛೇರ್ಮನ್‌ರವರು:–** ಮಾನ್ಯ ಸದಸ್ಯರಾದ ಪ್ರಕಾಶ್ ಕೆ. ರಾಥೋಡ್‌ರವರೇ ಅವರಿಗೂ ಮಾತನಾಡುವುದಕ್ಕೆ ಅವಕಾಶ ಇದೆ. ದಯಮಾಡಿ ಕುಳಿತುಕೊಳ್ಳಿ.

**(ಗೊಂದಲ)**

(ಮುಂದು)

**(125) 10/10/2019/4:20/ಎಸ್‌ಪಿಆರ್/ಕೆಎಸ್**

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ನಾನು ಯಾವ ಕಾರಣಕ್ಕಾಗಿ ಈ ಮಾತನ್ನು ಹೇಳಿದ್ದೇನೆ ಎಂದರೆ, ಇಡೀ ಭಾರತ ದೇಶದಲ್ಲಿ ಕರ್ನಾಟಕ ರಾಜ್ಯದ ಬಗ್ಗೆ ಅತೀಯಾದ ಗೌರವವಿದೆ. ಇದು ಬಹಳ ಸಂಪದ್ಭರಿತವಾದ ರಾಜ್ಯ. ನಾವು ಯಾವುದೇ ರೀತಿಯಾದ ಭಿಕ್ಷೆಯನ್ನು ಕೇಳುತ್ತಿಲ್ಲ. ಈ ವಿಚಾರದಲ್ಲಿ ಉದಾಹರಣೆಯೊಂದನ್ನು ಹೇಳಬೇಕು ಎನ್ನುವುದಾದರೆ, ಇಡೀ ದೇಶದಲ್ಲಿ

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

ಡಾಲರ್‌ನ್ನು ಕೊಡತಕ್ಕ ಯಾವುದಾದರೂ ರಾಜ್ಯವಿದ್ದರೆ ಅದು ನಮ್ಮ ಕರ್ನಾಟಕ ರಾಜ್ಯವಾಗಿದೆ. ಮಾಹಿತಿ ಹಾಗೂ ಜೈವಿಕ ತಂತ್ರಜ್ಞಾನಗಳ ಮುಖಾಂತರ ಇವತ್ತಿನ ದಿವಸ ಶೇಕಡಾ 38 ರಷ್ಟು ರಫ್ತು ನಮ್ಮ ರಾಜ್ಯದಿಂದಾಗುತ್ತಿದೆ. Our State contributes about 38% of IT (Information Technology) exports in the Country. ಇಡೀ ದೇಶದ ಒಟ್ಟು ರಫ್ತಿನಲ್ಲಿ ಶೇಕಡಾ 38 ರಷ್ಟು ಪಾಲು ನಮ್ಮ ರಾಜ್ಯದಿಂದಾಗುತ್ತಿದೆ. ಜೈವಿಕ ತಂತ್ರಜ್ಞಾನದ ಒಟ್ಟಾರೆಯ ಲಾಭದಲ್ಲಿ ನಮ್ಮ ರಾಜ್ಯದ ಶೇಕಡಾ 30 ರಷ್ಟು ಪಾಲು ಇದೆ. ಇಡೀ ದೇಶದಲ್ಲಿರುವ ಮೂರನೇಯ ಒಂದು ಭಾಗದಷ್ಟು ಐ.ಟಿ. ಕಂಪೆನಿಗಳು ನಮ್ಮ ರಾಜ್ಯದ ಬೆಂಗಳೂರು ನಗರ ಪ್ರದೇಶದಲ್ಲಿವೆ. ನಮ್ಮ ರಾಜ್ಯದಲ್ಲಿರುವ ಐ.ಟಿ. ಕಂಪೆನಿಗಳು ಲಕ್ಷಾಂತರ ಜನರಿಗೆ ಉದ್ಯೋಗವನ್ನು ನೀಡಿವೆ. ದೇಶದ ಬೇರೆ ರಾಜ್ಯಗಳಿಂದಲೂ ಸಹ ಜನರು ಇಲ್ಲಿಗೆ ಉದ್ಯೋಗವನ್ನರಸಿಕೊಂಡು ಬಂದು ನೆಲೆಸುತ್ತಿದ್ದಾರೆ. 5 ಲಕ್ಷ 70 ಸಾವಿರ ಕೋಟಿ ರೂಪಾಯಿಗಳಷ್ಟು ಪ್ರಮಾಣದ ಐ.ಟಿ. ವಹಿವಾಟು ನಮ್ಮ ರಾಜ್ಯದ್ದಾಗಿದೆ. ಅಂದರೆ ನಮ್ಮ ರಾಜ್ಯದ ಒಟ್ಟಾರೆ ಆಯವ್ಯಯದ ಮೂರು ಪಟ್ಟು ಹೆಚ್ಚಾಗಿದೆ. ಭಿಕ್ಷೆಯನ್ನು ಕೇಳುವಂತಹ ರಾಜ್ಯ ನಮ್ಮದಲ್ಲ. ಪ್ರಪಂಚದ ಯಾವುದೇ ಮೂಲೆಗೆ ಹೋದರೂ, ಬಲಿಷ್ಠ ಪ್ರಪಂಚದ ಹಿರಿಯಣ್ಣ ಹಾಗೂ ದೊಡ್ಡ ರಾಷ್ಟ್ರ ಎಂದು ಕರೆಸಿಕೊಳ್ಳುವ ಅಮೇರಿಕಾ, ರಷ್ಯಾಗಳಂತಹ ದೊಡ್ಡ ದೊಡ್ಡ ರಾಷ್ಟ್ರಗಳಿಗೆ ಹೋಗಿ ಭಾರತ ದೇಶ ಎಂದು ಹೇಳಿದರೆ, ಯಾರೂ ಸಹ ದೆಹಲಿ ಎಂಬುದಾಗಿ ಪ್ರತಿಕ್ರಿಯಿಸುವುದಿಲ್ಲ ಅದರ ಬದಲಾಗಿ ಭಾರತ ದೇಶ ಎಂದರೆ ಬೆಂಗಳೂರು ಎಂಬುದಾಗಿ ಹೇಳುತ್ತಾರೆ. ಇಷ್ಟೊಂದು ಖ್ಯಾತಿಯನ್ನು ನಮ್ಮ ರಾಜ್ಯವು ಪಡೆದುಕೊಂಡಿದೆ. Bengaluru is referred to as IT capital of India and knowledge capital of India. ಇಷ್ಟೆಲ್ಲಾ ಪ್ರತೀತಿ ಹಾಗೂ ಗೌರವಗಳು ನಮ್ಮ ರಾಜ್ಯಕ್ಕೆ ಇರುವುದರಿಂದ ಹಾಗೂ ಇಷ್ಟೊಂದು ದೊಡ್ಡ ಪ್ರಮಾಣದ ಆದಾಯವು ನಮ್ಮ ರಾಜ್ಯದಿಂದ ಇರುವುದರಿಂದ ಈ ವಿಚಾರದಲ್ಲಿ ನಮ್ಮ ರಾಜ್ಯದ ಬಗ್ಗೆ ಸ್ವಲ್ಪ ಯೋಚನೆಯನ್ನು ಮಾಡಬೇಕಾಗುತ್ತದೆ. ಅಮೇರಿಕಾ ದೇಶದ ಅಧ್ಯಕ್ಷರಾದ ಶ್ರೀ ಡೋನಾಲ್ಡ್ ಟ್ರಂಪ್ ರವರು ಭಾರತ ದೇಶ ಎಂದ ಕೂಡಲೇ ದೆಹಲಿ ಎನ್ನುವುದರ ಬದಲಾಗಿ ಬೆಂಗಳೂರು ಎನ್ನುತ್ತಾರೆ. ಅವರಿಗೆ ಬೆಂಗಳೂರು ನಗರವು ಅಷ್ಟರ ಮಟ್ಟಕ್ಕೆ ಗುರುತು ಇದೆ. Bengaluru is synonymous with India's identity.

**ಶ್ರೀ ಲಹರ್ ಸಿಂಗ್ ಸಿರೋಯಾ(ವಿಧಾನ ಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ...

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ದಯಮಾಡಿ ನಂತರದಲ್ಲಿ ಮಾತನಾಡಲಿ.

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ಸದಸ್ಯರೇ, ತಾವು ಯಾವುದೇ ಕಾರಣಕ್ಕೆ yield ಆಗುವುದು ಬೇಡ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ನಾನು yield ಆದರೆ ಪರಿಸ್ಥಿತಿ ಹೀಗಿರುವುದಿಲ್ಲ. ಏಕೆಂದರೆ ಆಡಳಿತ ಪಕ್ಷದ ಮಾನ್ಯ ಸದಸ್ಯರುಗಳು ಒಂದು ಮಾತನ್ನು ಹೇಳುತ್ತಾರೆ. ಅದಕ್ಕೆ ಪ್ರತ್ಯುತ್ತರವಾಗಿ ನಮ್ಮ ಪಕ್ಷದ ಸದಸ್ಯರುಗಳು ಮತ್ತೊಂದು ಮಾತನ್ನು ಹೇಳುತ್ತಾರೆ. Please, I request all of you.

**ಸಭಾಪತಿಯವರು:–** ಆ ರೀತಿಯಾಗಿ ಆಗುವುದು ಬೇಡ.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಸದಸ್ಯರುಗಳಿಗೆ ಮಾತನಾಡಲು ಅವಕಾಶ ನೀಡಿದಾಗ, ಅವರುಗಳು ಮಾತನಾಡುತ್ತಾರೆ. ಹೀಗಾಗಿ ವಿರೋಧ ಪಕ್ಷದ ನಾಯಕರು ತಾವು ತಮ್ಮ ಮಾತುಗಳನ್ನು ಮುಂದುವರೆಸಿ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ನಾವು ಮಾತನಾಡುವಾಗ ಆಡಳಿತ ಪಕ್ಷದ ಸದಸ್ಯರುಗಳು ಮಧ್ಯದಲ್ಲಿ ಮಾತನಾಡಿದಾಗ, ವಿಷಯದ ದಿಕ್ಕು ಬದಲಾಗುತ್ತದೆ. ನಾನು ನನ್ನ ಮಾತುಗಳನ್ನು ಬೇಗನೇ ಮುಗಿಸುತ್ತೇನೆ. ಶಾಸಕರಾದ ಮಾನ್ಯ ಬಸವರಾಜ ಪಾಟೀಲ್ ಯತ್ನಾಳ್ ರವರ ವಿಷಯ ಬಂದ ತಕ್ಷಣವೇ ಆಡಳಿತ ಪಕ್ಷದ ಎಲ್ಲಾ ಸದಸ್ಯರುಗಳು ಎದ್ದು ನಿಂತು ಮಾತನಾಡಲು ಪ್ರಾರಂಭಿಸುತ್ತಾರೆ. ಮಾನ್ಯ ಯತ್ನಾಳ್ ಹಾಗೂ ಯಾವುದೇ ಮಂತ್ರಿಗಳ ಯಾವುದೇ ವಿಚಾರವನ್ನು ನಾನು ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಬಯಸುವುದಿಲ್ಲ. ನೆರೆ ಸಂತ್ರಸ್ತರಿಗೆ ರಾಜ್ಯ ಸರ್ಕಾರವು ಕೂಡಲೇ ಹಣವನ್ನು ಬಿಡುಗಡೆ ಮಾಡಬೇಕು. ಯಾವುದೇ ರೀತಿಯಾಗಿ ಅವರುಗಳನ್ನು ಸತಾಯಿಸಬಾರದು. ಈ ರೀತಿಯಾಗಿ ಯಾರು ಮಾತನಾಡಿದ್ದಾರೆ ಅವರುಗಳಿಗೆ ಉತ್ತರವನ್ನು ನೀಡಿದ್ದಾರೆ. ಆಡಳಿತ ಪಕ್ಷದ ಕಡೆಯವರೇ ಈ ರೀತಿಯಾಗಿ ಮಾತನಾಡಿದ್ದಾರೆ. ಆಡಳಿತ ಪಕ್ಷದ ಕಡೆಯವರೇ ಆ ರೀತಿಯಾಗಿ ಮಾತನಾಡಿರುವವರಿಗೆ ಉತ್ತರವನ್ನೂ ಸಹ ನೀಡಿದ್ದಾರೆ. ಯಾರ್‍ಯಾರು ಏನೇನು ಮಾತನಾಡಿದ್ದಾರೆ ಎನ್ನುವುದನ್ನು ನಾನು ಇಲ್ಲಿ ಹೇಳಲಿಚ್ಛಿಸುವುದಿಲ್ಲ. ಪಕ್ಷದ ಹಿಂದಿನ ಸಂಸದರಾದ ಶ್ರೀ ಚಂದ್ರೇಗೌಡರವರು ಅಧಿಕಾರದ ಅಮಲಿನಲ್ಲಿದ್ದಾರೆ ಎನ್ನುವಂತಹ ಮಾತನ್ನೂ ಸಹ ಹೇಳಿದ್ದಾರೆ. ನೆರೆ ಸಂತ್ರಸ್ತರ ಕಷ್ಟಕ್ಕೆ ಧಾವಿಸಿ ಬಂದಿಲ್ಲ ಎನ್ನುವ ಕಾರಣಕ್ಕಾಗಿ ಶ್ರೀ ಚಂದ್ರೇಗೌಡರು ಮಾತನಾಡಿದ್ದಾರೆ. ಆದರೆ ನಮ್ಮ ಪಕ್ಷದವರು ಯಾರಾದರೂ ಈ ಮಾತನ್ನು ಹೇಳಿದ್ದರೆ, ಆಡಳಿತ ಪಕ್ಷದವರು ಎದ್ದು ನಿಂತುಕೊಂಡು ದೊಡ್ಡ ಗಲಾಟೆ ಮಾಡುತ್ತಿದ್ದರು. ಮುಂದುವರೆದು ಚಕ್ರವರ್ತಿ ಸೂಲಿಬೆಲೆಯವರೂ ಸಹ ಏನೇನು ವಿಷಯಗಳನ್ನು

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಹೇಳಿದ್ದಾರೆ, ಅವುಗಳನ್ನು ಯಾವುದೂ ಸಹ ನಾನು ಹೇಳಲಿಚ್ಛಿಸುವುದಿಲ್ಲ. ಅವರುಗಳು ಯಾರೂ ಸಹ ನಮ್ಮ ವಿರೋಧ ಪಕ್ಷದವರನ್ನು ಉದ್ದೇಶಿಸಿ ಹೇಳಿಕೆ ನೀಡಿಲ್ಲ ಆದರೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳನ್ನು ಉದ್ದೇಶಿಸಿ ಮಾತನಾಡಿದ್ದಾರೆ. ಅದಕ್ಕೆ ಪ್ರತಿಯಾಗಿ ಅವರಿಗೆ ಯಾರು ಯಾವ ರೀತಿಯ ಉತ್ತರ ಕೊಟ್ಟಿದ್ದಾರೆ ಎನ್ನುವ ವಿಷಯದ ಬಗ್ಗೆ ಹೇಳದೇ, ಚರ್ಚೆಯ ಹಾದಿಯನ್ನು ತಪ್ಪಿಸುವುದಕ್ಕೆ ಹೋಗುವುದಿಲ್ಲ. ಈ ರೀತಿಯಾಗಿ ಹೇಳಿಕೆ ನೀಡಿದವರು ಯಾರೂ ಸಹ ನಮ್ಮ ಪಕ್ಷಕ್ಕೆ ಸೇರಿದವರಲ್ಲ. ಅವರುಗಳು ಆಡಳಿತ ಪಕ್ಷವನ್ನು ಅಧಿಕಾರಕ್ಕೆ ತಂದವರು. ಅದಷ್ಟೇ ಅಲ್ಲದೇ ಮಾನ್ಯ ಶಂಕರ ಬಿದರಿಯವರೂ ಸಹ ಈ ವಿಚಾರಕ್ಕೆ ಸಂಬಂಧಪಟ್ಟಂತೆ ಮಾತನಾಡಿದ್ದಾರೆ. ಉತ್ತರ ಕರ್ನಾಟಕ ಭಾಗದಲ್ಲಿ ಒಟ್ಟಾರೆಯಾಗಿ 37 ಒಕ್ಕೂಟಗಳು ಇವೆ. ಅವುಗಳ ಪರವಾಗಿ ಶಂಕರ ಬಿದರಿಯವರು ಸತ್ಯಾಗ್ರಹ ಮಾಡಿದ್ದಾರೆ. ಅವರು ಉಪಯೋಗಿಸಿದ ಶಬ್ದವನ್ನು ನಾನು ಈ ಸಂದರ್ಭದಲ್ಲಿ ಪ್ರಸ್ತಾಪ ಮಾಡಲೇ?

**ಶ್ರೀ ಎಂ.ಕೆ.ಪ್ರಾಣೇಶ್:–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಆ ಶಬ್ದವನ್ನು ಇಲ್ಲಿ ಪ್ರಸ್ತಾಪ ಮಾಡಲಿ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಈ ಬಗ್ಗೆ ನಾನು ಬೆಳಗ್ಗೆ ಮಾತನಾಡಿದಂತಹ ಸಂದರ್ಭದಲ್ಲಿ ತಿಳಿಸಿದ್ದೇನೆ.

**ಶ್ರೀ ಎಂ.ಕೆ.ಪ್ರಾಣೇಶ್:–** ಮಾನ್ಯ ಸಭಾಪತಿಯವರೇ, ಆದರೂ ಸಹ ಇನ್ನು ಒಂದು ಬಾರಿ ಹೇಳಲಿ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಪೂರ್ವಾಹ್ನ ಹಾಜರಿದ್ದ ಕೆಲವೊಂದು ಸದಸ್ಯರು ಈಗ ಸದನದಲ್ಲಿ ಹಾಜರಿಲ್ಲ. ನಮ್ಮದನ್ನು ತೆಗೆದುಕೊಂಡು ನಾವು ಹೊಡೆದುಕೊಂಡ ಹಾಗೆ ಆಗುತ್ತದೆ. ಶ್ರೀ ಶಂಕರ ಬಿದರಿಯವರೂ ಸಹ ಒಬ್ಬ ಹಿರಿಯ ಅಧಿಕಾರಿಯಾಗಿದ್ದರು. ಮಠಾಧಿಪತಿಗಳೂ ಸಹ ಈ ವಿಚಾರದಲ್ಲಿ ಸಂತ್ರಸ್ತರ ಪರವಾಗಿ ಮಾತನಾಡಿ ತಮ್ಮ ಧ್ವನಿಯನ್ನು ಎತ್ತಿದ್ದಾರೆ. ಅದರಲ್ಲಿಯೂ ಸಹ ವಿಶೇಷವಾಗಿ ಕೂಡಲ ಸಂಗಮದ ಶ್ರೀ ಮೃತ್ಯುಂಜಯ ಸ್ವಾಮಿಗಳು ಬಹಳ ಖಾರವಾಗಿ ಮಾತನಾಡಿದ್ದಾರೆ. ಮಾನ್ಯ ಗೌಡರಿಗೆ ಎಲ್ಲಾ ವಿಚಾರಗಳು ತಿಳಿದಿವೆ. ಹೀಗಾಗಿ ನಾನು ಅದನ್ನು ಪುನಃ ಹೇಳುವುದಿಲ್ಲ. ರಾಜ್ಯ ಸರ್ಕಾರವು ಇವತ್ತಿನ ದಿವಸ ತನ್ನ ಅಂಕಿ ಅಂಶಗಳ ಪ್ರಕಾರ ನೆರೆ ಪರಿಹಾರಕ್ಕಾಗಿ 38 ಸಾವಿರ ಕೋಟಿ ರೂಪಾಯಿಗಳ ನೆರವನ್ನು ಕೇಳಿದೆ. ಆದರೆ, ನನ್ನ ದೃಷ್ಟಿಯಲ್ಲಿ ರಾಜ್ಯದಲ್ಲಿನ ಒಟ್ಟು ಹಾನಿ ಒಂದು ಲಕ್ಷ ಕೋಟಿ ರೂಪಾಯಿಗಳಿಗಿಂತ ಹೆಚ್ಚು ಆಗಿದೆ. ಈ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾತನ್ನು ನಾನು ಸರ್ಕಾರಕ್ಕೆ ನಂಬಿಸಲು ಹೋಗುವುದಿಲ್ಲ. ಈಗಾಗಲೇ ಸಾಕಷ್ಟು ಸಮಯ ಆಗಿದೆ. ಉತ್ತರ ಕರ್ನಾಟಕ ಭಾಗದ ಅನೇಕ ಮಾನ್ಯ ಸದಸ್ಯರುಗಳು ಈ ವಿಚಾರದಲ್ಲಿ ಮಾತನಾಡುವವರಿದ್ದಾರೆ. ರಾಜ್ಯದಲ್ಲಿ ಇಷ್ಟು ದೊಡ್ಡ ಪ್ರಮಾಣದಲ್ಲಿ ಹಾನಿಯುಂಟಾಗಿದೆ. ಅತ್ಯಂತ ಶೋಚನೀಯ ಪರಿಸ್ಥಿತಿಯಲ್ಲಿ ನಮ್ಮ ಜನರು, ಸಹೋದರಿಯರು ಇದ್ದಾರೆ. ಅಲ್ಲಿ ತಾತ್ಕಾಲಿಕವಾಗಿ ನಿರ್ಮಿಸಿರುವ ಶೆಡ್‌ಗಳಲ್ಲಿ ನಮ್ಮ ತಾಯಂದಿರು, ಅಕ್ಕ-ತಂಗಿಯರು ವಾಸಿಸುತ್ತಿದ್ದಾರೆ. ಆದರೆ ಅವರುಗಳಿಗೆ ಅಲ್ಲಿ ಶೌಚಾಲಯದ ವ್ಯವಸ್ಥೆ ಇಲ್ಲ. ಆದರೆ ನೆರೆ ಹಾವಳಿಯ ಎಲ್ಲಾ ಪ್ರದೇಶಗಳಲ್ಲಿ ಶೆಡ್‌ಗಳನ್ನು ನಿರ್ಮಿಸಿಲ್ಲ. ಆದರೆ ಕೆಲವೊಂದು ಕಡೆಗಳಲ್ಲಿ ಕಾಮನ್ ಶೆಡ್‌ಗಳನ್ನು ನಿರ್ಮಿಸಿದ್ದಾರೆ. ಅಲ್ಲಿ ಮಹಿಳೆಯರಿಗೆ ಶೌಚಾಲಯ ಹಾಗೂ ಸ್ನಾನದ ವ್ಯವಸ್ಥೆಗಳನ್ನೊಳಗೊಂಡಂತೆ ಯಾವುದೇ ರೀತಿಯಾದ ವ್ಯವಸ್ಥೆಗಳಿಲ್ಲ. ಅಲ್ಲಿಯೇ ಪಕ್ಕದಲ್ಲಿ ಪುರುಷರು ಇರುವುದರಿಂದ ಮಹಿಳೆಯರಿಗೆ ಬರ್ಹಿದೆಸೆಗೆ ಅವಕಾಶವಿಲ್ಲ. ಬಹಳಷ್ಟು ನಾಯಕರ ಮನೆಗಳಲ್ಲಿ ಹಲವಾರು ಕೊಠಡಿಗಳಿರುತ್ತವೆ, such as Kitchen, living room, T.V. room, Gym room and so on. ಆದರೆ ಒಂದು ಊರಿನ ಎಲ್ಲಾ ಜನರಿಗೆ ಒಂದು ಕಾಮನ್ ಶೆಡ್‌ನ ವ್ಯವಸ್ಥೆ ಮಾಡಿದ್ದಾರೆ. 300-400 ಕುಟುಂಬಗಳು ಅಂದರೆ ಹಲವಾರು ಪುರುಷರು ಹಾಗೂ ಮಹಿಳೆಯರು ಒಂದೇ ಶೆಡ್‌ನಲ್ಲಿ ವಾಸಿಸುತ್ತಿದ್ದಾರೆ. ಅವರುಗಳೆಲ್ಲಾ ಅಲ್ಲಿ ಹೇಗೆ ನಿದ್ದೆ ಮಾಡಬೇಕು? ಅಲ್ಲಿನ ಮಹಿಳೆಯರೆಲ್ಲಾ ನಮ್ಮ ತಾಯಂದಿರು ಹಾಗೂ ಅಕ್ಕ-ತಂಗಿಯರುಗಳಾಗಿದ್ದಾರೆ. ಅಲ್ಲಿನ ಪರಿಸ್ಥಿತಿಯನ್ನು ನೋಡಿದರೆ, ನನಗೆ ಬಹಳ ನೋವಾಗುತ್ತದೆ. ಅಲ್ಲಿನ ಪರಿಸ್ಥಿತಿ ಬಗ್ಗೆ ನಾನು ಮಾತನಾಡಿದರೆ, ನಾನು ಭಾವೋದ್ವೇಗಕ್ಕೆ ಒಳಗಾಗುತ್ತೇನೆ. ಅಲ್ಲಿನ ಪರಿಸ್ಥಿತಿಯನ್ನು ನಾನು ಸ್ವತಃ ಕಣ್ಣಾರೆಯಾಗಿ ಕಂಡಿದ್ದೇನೆ. ನೆರೆ ಹಾವಳಿಗೊಳಗಾದ ಬಹುತೇಕ ಗ್ರಾಮಗಳಿಗೆ ನಾನು ಭೇಟಿ ನೀಡಿದ್ದೇನೆ. ಆ ಸಂದರ್ಭದಲ್ಲಿ ಅಲ್ಲಿನ ತಾಯಂದಿರು ಅವರುಗಳು ಎಲ್ಲಿ ಬರ್ಹಿದೆಸೆಗೆ ಹಾಗೂ ಸ್ನಾನಕ್ಕೆ ಹೋಗಬೇಕು, ಅಲ್ಲಿನ ಅಷ್ಟು ಜನರ ಮಧ್ಯೆ ಅವರುಗಳು ಹೇಗೆ ಬದುಕಬೇಕು ಎಂಬುದಾಗಿ ನನ್ನನ್ನು ಕೇಳಿದರು. ಒಂದು ಗ್ರಾಮದ 300-400 ಕುಟುಂಬಗಳು ಒಂದೇ ಕಡೆಯಲ್ಲಿ ವಾಸ ಇವೆ. ಬಹಳ ನೋವಿನಿಂದ ನಾನು ಈ ಮಾತನ್ನು ಹೇಳಲಿಚ್ಛಿಸುತ್ತೇನೆ. ನೆರೆ ಪೀಡಿತ ಪ್ರದೇಶದ ಜನರು ಇಂತಹ ಶೋಚನೀಯ ಪರಿಸ್ಥಿತಿಯಲ್ಲಿ ಇರುವಂತಹ ಸಂದರ್ಭದಲ್ಲಿ ಅವರುಗಳ ಬಗ್ಗೆ ಸರ್ಕಾರಕ್ಕೆ ಕಿಂಚಿತ್ತಾದರೂ ಕಾಳಜಿ ಇರಬೇಕು. ಒಂದೊಂದು ಕುಟುಂಬಕ್ಕೆ ಒಂದೊಂದು ಶೆಡ್‌ನ್ನು ಸರ್ಕಾರವು ಮಾಡಿಕೊಡಬೇಕು. ಇವತ್ತಿನ ದಿವಸ ಮನೆ ಹಾನಿಗೆ ರಾಜ್ಯ ಸರ್ಕಾರವು ಐದು ಲಕ್ಷ ರೂಪಾಯಿಗಳನ್ನು ನೀಡುವುದಾಗಿ ಹೇಳುತ್ತಿದೆ. ಪ್ರತ್ಯೇಕವಾದ ಶೆಡ್‌ಗಳನ್ನು ನಿರ್ಮಿಸಿದ್ದಲ್ಲಿ ಗ್ರಾಮಸ್ಥರು ಕುಟುಂಬ ಸಮೇತರಾಗಿ ಇರುತ್ತಾರೆ.

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೇ, ಸರ್ಕಾರವು ಶಾಶ್ವತವಾದ ಮನೆಗಳನ್ನು ನಿರ್ಮಿಸಿ ಕೊಡುವ ಯೋಜನೆಯನ್ನು ಹಾಕಿಕೊಂಡಿದೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಶಾಶ್ವತವಾದ ಮನೆಗಳನ್ನು ನಿರ್ಮಾಣ ಮಾಡುವವರೆಗೆ ಅಲ್ಲಿನ ಜನರು ಏನು ಮಾಡಬೇಕು? ಮಾನ್ಯ ಸಂಕನೂರರವರನ್ನೇ ಮಂತ್ರಿ ಮಾಡಬೇಕು.

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರು ತಮ್ಮ ಮಾತುಗಳನ್ನು ಮುಗಿಸುವವರಿದ್ದಾರೆ. ಹೀಗಾಗಿ ಅವರಿಗೆ ಅಡ್ಡಿ ಪಡಿಸದೇ ಅವಕಾಶ ಮಾಡಿಕೊಡಿ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಸರ್ಕಾರವು ಉತ್ತರ ನೀಡುವ ಸಮಯದಲ್ಲಿ ಎಲ್ಲಾ ಅಂಶಗಳ ಬಗ್ಗೆ ಉತ್ತರ ನೀಡಲಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾ ನಾಯಕರು):–** ಮಾನ್ಯ ಸಭಾಪತಿಯವರೇ, ನೆರೆ ಸಂತ್ರಸ್ತರಿಗೆ ಸರ್ಕಾರವು ಎರಡು ರೀತಿಯ ಪರಿಹಾರಗಳನ್ನು ನೀಡುತ್ತದೆ. ಪರಿಹಾರ ನೀಡುವ ಕಾರ್ಯದಲ್ಲಿ ಸರ್ಕಾರವು ಎಲ್ಲಿ ಎಡವಿದೆ ಎಂಬುದನ್ನು ವಿರೋಧ ಪಕ್ಷದವರು ಹೇಳಲಿ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, 300–400 ಕುಟುಂಬಗಳನ್ನು ಒಂದೇ ಶೆಡ್‌ನಲ್ಲಿ ಇರುವ ವ್ಯವಸ್ಥೆಯನ್ನು ಸರ್ಕಾರವು ಮಾಡಿದೆ. ಇಲ್ಲಿ ಸರ್ಕಾರವು ಎಡವಿರುವುದಲ್ಲವೇ? ಇದು ಸಂತೋಷದ ವಿಷಯವೇ? ಇದಕ್ಕೆ ಶಹಭಾಷಗಿರಿಯನ್ನು ನೀಡಬೇಕೇ? ಸರ್ಕಾರವು ಸಂತ್ರಸ್ತ ತಾಯಿ ಹಾಗೂ ಮಹಿಳೆಯರ ಸ್ಥಾನದಲ್ಲಿ ನಿಂತುಕೊಂಡು ಮಾತನಾಡಬೇಕು. This issue has risen very seriously. It will spark throughout the State.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಈ ವಿಚಾರದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ತುರ್ತು ಕ್ರಮಗಳನ್ನು ತೆಗೆದುಕೊಂಡಿದ್ದಾರೆ. ವಿರೋಧ ಪಕ್ಷದ ನಾಯಕರು ಸುಮ್ಮನೆ ನಿಂತುಕೊಂಡು ಮಾತನಾಡಬಾರದು. ರಾಜ್ಯದ ಏಳು ಲಕ್ಷ ನಾಗರೀಕರು ನೆರೆ ಹಾವಳಿಯಲ್ಲಿ ಸಿಲುಕಿ ಸಂತ್ರಸ್ತರಾಗಿದ್ದಾರೆ. ಮಾನ್ಯ ವಿರೋಧ ಪಕ್ಷದ ನಾಯಕರು ಸರ್ಕಾರ ಹೇಳುವ ಮಾತುಗಳನ್ನು ಕೇಳಬೇಕು. ಮಾನ್ಯ ಮುಖ್ಯಮಂತ್ರಿಗಳು ಎಲ್ಲಾ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಮಂತ್ರಿಗಳ ಸಭೆ ನಡೆಸಿದ್ದಾರೆ. ವಿರೋಧ ಪಕ್ಷದ ನಾಯಕರು ವಿಷಯದ ಗಂಭೀರತೆಯನ್ನು ಅರ್ಥ ಮಾಡಿಕೊಳ್ಳಬೇಕು.

**(ಗೊಂದಲ)**

ಯಾವ ಮಂತ್ರಿಯೂ ಅವರ ಜಿಲ್ಲೆಯನ್ನು ಬಿಟ್ಟು ಕದಲುವಂತಿಲ್ಲ ಎಂಬುದಾಗಿ ಹೇಳಿದ್ದಾರೆ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಸಂತ್ರಸ್ತ ನಾಗರೀಕರು ಸರ್ಕಾರವನ್ನು ಛೀ ಥೂ ಎಂಬುದಾಗಿ ನಿಂದಿಸುತ್ತಿದ್ದಾರೆ.

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುತ್ತಿದ್ದಾರೆ. ಹೀಗಾಗಿ ಅವರಿಗೆ ಮಾತನಾಡಲು ಅವಕಾಶ ನೀಡಿ. ಅಡ್ಡಿ ಪಡಿಸಬೇಡಿ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಸರ್ಕಾರವು ಯಾವುದೇ ರೀತಿಯ ಪರಿಹಾರ ಕ್ರಮಗಳನ್ನು ತೆಗೆದುಕೊಂಡಿಲ್ಲ ಎಂಬುದಾಗಿ ವಿರೋಧ ಪಕ್ಷದವರು ಆರೋಪಿಸುತ್ತಿದ್ದಾರೆ.

**ಶ್ರೀ ಬಸವರಾಜ್ ಪಾಟೀಲ್ ಇಟಗಿ:–** ಮಾನ್ಯ ಸಭಾಪತಿಯವರೇ, ಸರ್ಕಾರವು ಈ ವಿಷಯದ ಬಗ್ಗೆ ಉತ್ತರವನ್ನು ನೀಡುವ ಸಂದರ್ಭದಲ್ಲಿ ಎಲ್ಲಾ ಅಂಶಗಳಿಗೆ ಪೂರಕವಾಗಿ ಉತ್ತರವನ್ನು ನೀಡಲಿ.

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೇ ನೀವು ಸಭಾಪತಿ ಪೀಠವನ್ನು ನೋಡಿ ಮಾತನಾಡಿ.

**(ಗೊಂದಲ)**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಸಭಾನಾಯಕರು ನನ್ನೊಂದಿಗೆ ವಾದ ಮಾಡುತ್ತಿದ್ದಾರೆ. ನಾನು ಬಹಳ ನೋವಿನಿಂದ ಮಾತನಾಡುತ್ತಿದ್ದೇನೆ. ಪ್ರವಾಹದಲ್ಲಿ ತಾವು ತೇಲಿಕೊಂಡು ಹೋಗಿದ್ದರೆ ಬಹಳ ಚೆನ್ನಾಗಿರುತ್ತಿತ್ತು, ಅದಕ್ಕಿಂತಲೂ ಕೆಟ್ಟ ಪರಿಸ್ಥಿತಿ ಇಲ್ಲಿದೆ ಎಂಬುದಾಗಿ ಬಹಳಷ್ಟು ಸಂತ್ರಸ್ತ ಮಹಿಳೆಯರು ನನ್ನ ಬಳಿ ಅಳಿಲು ತೋಡಿಕೊಂಡು ಕಣ್ಣೀರಿಟ್ಟಿದ್ದಾರೆ.

(ಮುಂದು)

(126)/10-10-2019/4-30/ಎಲ್ಎಂ/ಜಿಆರ್

**ಶ್ರೀ ಎಸ್.ಆರ್.ಪಾಟೀಲ್(ಮುಂದು)**

ಈ ಪವಿತ್ರವಾದ ಸದನದ ಮುಖಾಂತರ ಒಂದು ವಿಚಾರವನ್ನು ನಾನು ಹೇಳಬಯಸುತ್ತೇನೆ, ಈ ಸಾರಿ ನೆರೆ ಹಾವಳಿ ಬಂದ ಸಂದರ್ಭದಲ್ಲಿ ಜನರು ಯಾವುದೇ ಜಾತಿ, ಮತ, ಪೂರ್ವ, ಪಶ್ಚಿಮ, ದಕ್ಷಿಣ, ಉತ್ತರ ಎನ್ನದೇ ದೊಡ್ಡ ಪ್ರಮಾಣದಲ್ಲಿ ದಾನಿಗಳು ಬಂದು ನಮಗೆ ಸಹಾಯ ಮಾಡಿದ್ದಾರೆ. ಅವರಿಗೆ ಇಡೀ ಸದನದ ಪರವಾಗಿ, ಇಡೀ ಸಂತ್ರಸ್ಥರ ಪರವಾಗಿ ಕೃತಜ್ಞತೆಗಳನ್ನು ಸಲ್ಲಿಸಲು ಬಯಸುತ್ತೇನೆ. ಮಕ್ಕಳಿಗೆ ಕೊಡುವ ಮಧ್ಯಾಹ್ನದ ಊಟವನ್ನು ಬಂದ್ ಮಾಡಿ ಗಂಜಿ ಕೇಂದ್ರದಲ್ಲಿರುವ ಸಂತ್ರಸ್ಥರಿಗೆ ಊಟ ಕೊಟ್ಟಿದ್ದಾರೆ. ಎಲ್ಲವನ್ನು ನಿವಾರಿಸುವುದು ಕಷ್ಟವಿದೆ, ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಈ ರಾಜ್ಯದ ಎಲ್ಲ ಕಡೆಗಳಿಂದ, ಬೆಂಗಳೂರು ನಗರದಿಂದ ನೂರಾರು ಲಾರಿಗಳಲ್ಲಿ food grains and essential commodities ತೆಗೆದುಕೊಂಡು ಬಂದು ಸಂತ್ರಸ್ಥರಿಗೆ ಹಂಚಿದ್ದಾರೆ. ದಾನಿಗಳು ಯಾವುದೇ ಜಾತಿ-ಮತವನ್ನು, region ನೋಡಲಿಲ್ಲ. Hats off to those donors. Really I am very much grateful to them. People of flood affected areas are grateful to those people. ನಿಜವಾಗಿಯೂ ಇಷ್ಟು ಜನರ ಹೃದಯ ಶ್ರೀಮಂತಿಕೆಯನ್ನು ಮೆಚ್ಚಿಕೊಳ್ಳಬೇಕು. ಈ ಜನರ ಹೃದಯ ಶ್ರೀಮಂತಿಕೆಯಂತೆ ಸರ್ಕಾರದ ಹೃದಯದಲ್ಲಿಯೂ ಬರಲಿ ಎಂದು ನಾನು ಈ ಮಾತನ್ನು ಹೇಳುತ್ತಿದ್ದೇನೆ. ನಾನು ಹೇಳುವುದರಿಂದ ಸರ್ಕಾರ ಸುಧಾರಣೆಯಾಗುತ್ತದೆ ಎಂದು ನಾನೇನು ಹೇಳುವುದಿಲ್ಲ. ಆದರೆ ವಿರೋಧ ಪಕ್ಷದ ನಾಯಕನಾಗಿ ನಾನು ಹೇಳುವ ಕೆಲಸವನ್ನು ಮಾಡಬೇಕಾಗುತ್ತದೆ.

**ಡಾ॥ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಗಳೆ, ...

**ಉಪಸಭಾಪತಿಯವರು:-** ನಾರಾಯಣಸ್ವಾಮಿಯವರೆ, cross talking ಬೇಡ. ವಿರೋಧ ಪಕ್ಷದ ನಾಯಕರು ಅವರ ಮಾತನ್ನು ಮುಕ್ತಾಯಗೊಳಿಸಲಿ. ತಾವು ನಂತರ ಮಾತನಾಡಿ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಎಂ.ನಾರಾಯಣಸ್ವಾಮಿ:–** ನಾರಾಯಣಸ್ವಾಮಿಯವರೆ, ಈಗ ನೀವು ಆಡಳಿತ ಪಕ್ಷದಲ್ಲಿದ್ದೀರಿ, ವಿರೋಧ ಪಕ್ಷದಲ್ಲಿಲ್ಲ. ಅದು ನೆನಪಿರಲಿ.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಗಳೆ, ನಾನು ಕೇಳುವುದು ಇಷ್ಟೆ, ಇಷ್ಟು ದೊಡ್ಡ ಪ್ರವಾಹ ಎಂದೂ ಕೇಳರಿಯದಂತಹ, ಶತಮಾನಗಳಿಂದ ಕಂಡರಿಯದಂತಹ ಭೀಕರ ನೆರೆ ಹಾವಳಿ ಉಂಟಾಗಿದೆ. ಇಷ್ಟು ದೊಡ್ಡ ಪ್ರಮಾಣದ ಪ್ರವಾಹಕ್ಕೆ ತುತ್ತಾದಂತಹ ಈ ಪರಿಸ್ಥಿತಿಯನ್ನು ರಾಷ್ಟ್ರೀಯ ವಿಪತ್ತು ಎಂದು ಕೇಂದ್ರ ಸರ್ಕಾರ ಘೋಷಣೆ ಮಾಡಬೇಕು. ಆಡಳಿತ ಪಕ್ಷದವರು ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡಬೇಕು. Let the Central Government declare it as a national tragedy. ಇದರಿಂದ ನಮ್ಮ ರಾಜ್ಯಕ್ಕೆ ಬಹಳಷ್ಟು ಸೌಲಭ್ಯಗಳು ಸಿಗುತ್ತವೆ ಎನ್ನುವ ಉದ್ದೇಶದಿಂದ ಹೇಳುತ್ತಿದ್ದೇನೆ. ಈಗ ಸರ್ಕಾರ ಘೋಷಣೆ ಮಾಡಿರುವ 5 ಲಕ್ಷ ರೂ.ಗಳು ಯಾವುದಕ್ಕೂ ಸಾಕಾಗುವುದಿಲ್ಲ. ಬರೀ bedroom, bath room ಗೆ 5 ಲಕ್ಷ ರೂ.ಗಳನ್ನು ಖರ್ಚು ಮಾಡುವಂತಹವರು ಇಲ್ಲಿ ಇದ್ದಾರೆ. ಯಾರು ಎಂದು ನಾನು ಹೇಳಲು ಹೋಗುವುದಿಲ್ಲ. ಮಾನ್ಯ ಅರುಣ ಶಹಾಪೂರರವರೇ ಹೇಳಬೇಕು, ಅವರ ಮನೆ ಬಾತ್‌ರೂಂ ನೋಡಿದ್ದೇನೆ ನಾನು.

ಶ್ರೀ ಎಸ್.ವ್ಹಿ.ಸಂಕನೂರ:– ತಮ್ಮ ಮನೆ ಹೇಗೆ ಇದೆ ಸರ್.

ಶ್ರೀ ಎಸ್.ಆರ್.ಪಾಟೀಲ್:– ಮಾನ್ಯ ಸಭಾಪತಿಗಳೆ, ನನ್ನ ಮನೆ ಬಂದು ನೋಡಿ. ನಾನು ಹೌಸಿಂಗ್ ಬೋರ್ಡ್ ಮನೆಯಲ್ಲಿ ಇದ್ದೇನೆ. ಮೇಲಿನ R.C.C. roofing ಯಾವಾಗ ನನ್ನ ಮೇಲೆ ಕತ್ತರಿಸಿ ಬೀಳುತ್ತದೆ ಗೊತ್ತಿಲ್ಲ. ಬೇಕಾದರೆ ಬಂದು ನೋಡಿ ತಾವು. Whatever I will tell, I will swear in the name of the God and I will tell the truth. You have come to my residence so many times. ಮೊನ್ನೆ ನಮ್ಮ ಮನೆಗೆ ಇಬ್ಬರು ಸ್ವಾಮಿಗಳು ಬಂದಿದ್ದರು. ಏನ್ರಿ ಪಾಟೀಲ್‌ರವರೇ, ಇಂತಹ ಮನೆಯಲ್ಲಿ ಇದ್ದೀರಿ ಎಂದು ಕೇಳಿದರು.

**ಶ್ರೀ ಎಸ್.ವ್ಹಿ,ಸಂಕನೂರ:–** ಅರುಣ ಶಹಾಪೂರರವರು ಬಾಡಿಗೆ ಮನೆಯಲ್ಲಿದ್ದಾರೆ. ಅವರಿಗೂ ಸ್ವಂತ ಮನೆ ಇಲ್ಲ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಗಳೆ, ಅರುಣ ಶಹಾಪೂರರವರಿಗೆ ಹೇಳಿದ್ದೇನೆ ಎಂದು ಅಲ್ಲ. ದೊಡ್ಡ-ದೊಡ್ಡವರು ಇರುತ್ತಾರೆ. ಕೈಗೆ ಸಿಗದಂತಹ ದೊಡ್ಡವರು ಇರುತ್ತಾರೆ. ಅವರ ಬಾತ್‌ರೂಂ ನಲ್ಲಿರುವ commode ಗಳೇ ರೂ. 5 ಲಕ್ಷಗಳಿಂದ ರೂ. 10 ಲಕ್ಷಗಳಷ್ಟು ಬೆಲೆ ಇರುತ್ತದೆ.

ಸರ್ಕಾರ ಈಗ ಘೋಷಣೆ ಮಾಡಿರುವ ರೂ. 5 ಲಕ್ಷ ಗಳನ್ನು ಕನಿಷ್ಠ ರೂ. 10 ಲಕ್ಷಗಳಾದರೂ ಮಾಡಬೇಕು. ಇನ್ನು ಬಹಳ ಕೇಳಬೇಕಾಗಿತ್ತು. ಆದರೆ ಈಗ ಕೇಳಿರುವ ಅಂಕಿಯನ್ನು ಸರ್ಕಾರ ಒಪ್ಪಿಕೊಳ್ಳುತ್ತದೆ ಎಂದು ಹೇಳುತ್ತಿದ್ದೇನೆ. ಪದೇ-ಪದೇ ಪ್ರವಾಹಕ್ಕೆ ಒಳಗಾಗುವ ಹಳ್ಳಿಗಳನ್ನು ಒಂದೇ ಸಾರಿ ಸ್ಥಳಾಂತರಿಸುವುದು ಒಳ್ಳೆಯದು. ನಮ್ಮ ಭಾಗಕ್ಕೆ ತಿಂಗಳಿಗೆ ಎರಡು ಸಾರಿ ಪ್ರವಾಹ ಬಂತು. It has come twice. Let there be a permanent solution and permanent remedy. ಸಂತ್ರಸ್ಥರಿಗೆ 10 ಲಕ್ಷ ರೂ.ಗಳನ್ನು ಕೊಡುವುದಕ್ಕಿಂತ ಮೊದಲು individual ಆಗಿ ಒಂದೊಂದು ತಗಡಿನ ಶೆಡ್‌ಗಳಾದರೂ ನಿರ್ಮಿಸಿ ಕೊಡಿ. ನಮ್ಮ ಜಿಲ್ಲೆಯಲ್ಲಿ ದಿನಕ್ಕೆ ತಾಪಮಾನ 44 ಡಿಗ್ರಿ ಇರುತ್ತದೆ. ತಂಪಾದ ಸ್ಥಳದಿಂದ ಬಂದ ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರಿಗೆ ಅದರ ಬಗ್ಗೆ ಗೊತ್ತಿರುವುದಿಲ್ಲ. ಆ ಶೆಡ್ ಮೇಲೆ ಮೊಟ್ಟೆ ಇಟ್ಟರೆ omelette ಆಗುತ್ತದೆ. ಆದರೂ ಪರವಾಗಿಲ್ಲ, individual ಆಗಿ ಒಂದೊಂದು ಶೆಡ್ ಮಾಡಿ ಕೊಡಿ. ಪ್ರತಿಯೊಂದು ಕುಟುಂಬವನ್ನು ಸ್ಥಳಾಂತರ ಮಾಡಬೇಕು, ಮತ್ತು ಯು.ಕೆ.ಪಿ., ಮಾದರಿಯಲ್ಲಿ ಸ್ಥಳಾಂತರ ಮಾಡಬೇಕು.

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಗಳೆ, ಹೊಳೆ-ಆಲೂರಿನಲ್ಲಿ ಸ್ವಂತ ನೂರಾರು ಮನೆಗಳನ್ನು ಕಟ್ಟಿಸಿ ಕೊಟ್ಟಿದ್ದಾರೆ. ಇಲ್ಲಿ ಪದೇ-ಪದೇ ನೆರೆ ಹಾವಳಿ ಉಂಟಾಗುತ್ತದೆ, ಆ ಮನೆಗಳಿಗೆ ಹೋಗಿ ಎಂದು ಹೇಳಿದರೂ ಅಲ್ಲಿಯ ಜನರು ಹೋಗುವುದಿಲ್ಲ. ನೆರೆಹಾವಳಿ ಬಂದಾಗ ಹೋಗುತ್ತಾರೆ. ಮತ್ತೆ ವಾಪಸ್ ಊರಿಗೆ ಬರುತ್ತಾರೆ. ಆ ಮನೆಗಳಿಗೆ ಹೋಗಿ ಇರಲು ಅಲ್ಲಿಯ ಜನರು ತಯಾರಿಲ್ಲ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರು ಬಹಳ ಒಳ್ಳೆಯ ಕೆಲಸ ಮಾಡಿದರು. You are acquainted with Kamathagi. ಕಮತಗಿಯಲ್ಲಿ ಕಟ್ಟಿರುವ ಮನೆಗಳ ಬಗ್ಗೆ ಅವರು ಹೇಳುತ್ತಿದ್ದಾರೆ. ಅಲ್ಲಿಗೆ ಹೋಗಿ ನೋಡಿ ಅದರ ಉದ್ದ-ಅಗಲ 6/7 ಅಡಿ ಅಷ್ಟೆ. ಇವು 2009ರಲ್ಲಿ ದಾನಿಗಳು ಕಟ್ಟಿಕೊಟ್ಟಿರುವ ಮನೆಗಳು. ಅವುಗಳ ಬಗ್ಗೆ ಅವರು ಹೇಳುತ್ತಿದ್ದಾರೆ. ಅವುಗಳಿಗೆ ಬಾಗಿಲು ಇಲ್ಲ, ಕಿಟಗಿ ಇಲ್ಲ, ಚೌಕಟ್ಟು ಇಲ್ಲ. ಜನರು ಅವುಗಳನ್ನು ಟಾಯ್ಲೆಟ್ ಆಗಿ ಉಪಯೋಗಿಸುತ್ತಿದ್ದಾರೆ. ಅಲ್ಲಿ ಹೋಗಿ ಇರಿ ಎಂದು ಇವರು

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೇಳುತ್ತಿದ್ದಾರೆ. ನಮ್ಮ ರಾಜ್ಯದ ಜನರು ಇಂದು ಕಷ್ಟದಲ್ಲಿ, ನೋವಿನಲ್ಲಿ ಮುಳುಗಿದ್ದಾರೆ. ನಾನೂ ಒಬ್ಬ ರೈತ ನಾನು ಬೆಳೆಯುವ ತರಕಾರಿ ಇತರೆ ಬೆಳೆಗಳನ್ನು ಇಡಲು ಜಾಗ ಬೇಕು. ದನಗಳನ್ನು ಕಟ್ಟಲು ಜಾಗ ಬೇಕು, ದನಗಳ ಮೇವು ಸಂಗ್ರಹ ಮಾಡಲು ಜಾಗ ಬೇಕು, ದನಗಳ ಗೊಬ್ಬರವನ್ನು ಹಾಕಲು ಒಂದು ದೊಡ್ಡಿ ಇರಬೇಕು. ಇವುಗಳ ಬಗ್ಗೆ ಮಾನ್ಯ ಸಂಕನೂರರವರಿಗೆ ತಿಳಿಯಬೇಕು. ಅವರು ಉತ್ತರ ಕರ್ನಾಟಕದವರು. ಏನು ಇಲ್ಲದಂತಹ ಮೂರು ಕೊಠಡಿಗಳ ಮನೆಗಳನ್ನು ದಾನಿಗಳ ಮುಖಾಂತರ ಕಟ್ಟಿದ್ದಾರೆ, ಅವುಗಳಿಗೆ ಮೇಲೆ ತಾರಸಿ ಕೂಡಾ ಇಲ್ಲ. ಅಂತಹ ಮನೆಗಳಲ್ಲಿ ಹೋಗಿ ಇರಬೇಕು ಎಂದು ಹೇಳುತ್ತಿದ್ದಾರೆ. ಮನೆಗಳನ್ನು ಕಟ್ಟಿದರೆ ಅವರು ಅಲ್ಲಿ ಗೌರವದಿಂದ ಬದುಕುವಂತಹ ಮನೆಗಳನ್ನು ಕಟ್ಟಿಕೊಡಿ. ನಾವೇನು ಮೈಸೂರು ಮಹಾರಾಜರ ಅರಮನೆಯಂತಹ ಮನೆಯನ್ನು ಕಟ್ಟಿಸಿಕೊಡಿ ಎಂದು ಹೇಳುತ್ತಿಲ್ಲ. ಒಬ್ಬೊಬ್ಬ ನಾಯಕರ ಮನೆಯಲ್ಲಿ 10 ಲಕ್ಷ ರೂ.ಗಳ ಟಾಯ್ಲೆಟ್ ಕಟ್ಟಿದ್ದಾರೆ. ಅಂತಹ ಮನೆಗಳನ್ನು ಕಟ್ಟಿಕೊಡಿ ಎಂದು ಕೇಳುತ್ತಿಲ್ಲ. ಸಾರ್ವಜನಿಕ ಬದುಕಿನಲ್ಲಿ ಇಂತಹ ಜನಪ್ರತಿನಿಧಿಗಳಿದ್ದಾರೆ. ಆ ರೀತಿಯ ಮನೆಗಳನ್ನು ಕಟ್ಟಿಕೊಡಿ ಎಂದು ನಾನು ಹೇಳುತ್ತಿಲ್ಲ. 10 ಲಕ್ಷ ರೂ.ಗಳನ್ನು ಕೊಡಿ, it is quite reasonable. Before that, kindly provide them one individual shed. ಹಳ್ಳಿಗಳನ್ನು ಯು.ಕೆ.ಪಿ., ಮಾದರಿಯಲ್ಲಿ ಸ್ಥಳಾಂತರಿಸುವ ಯೋಜನೆಯನ್ನು ಮಾಡಿಕೊಳ್ಳಬೇಕು. ಇದರ ಬಗ್ಗೆ ಸರ್ಕಾರದವರು valuation ಮಾಡಲಿ.

**ಶ್ರೀ ಅರುಣ ಶಹಾಪೂರ:–** ಮಾನ್ಯ ಸಭಾಪತಿಗಳೆ, "ಹೇಳುವಂತಹವನು ಮೊದಲು ನೀತಿವಂತನಾಗಿರಬೇಕು" ಎಂದು ಬೆಳಿಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ಬಹಳ ಚೆನ್ನಾಗಿ ಹೇಳಿದರು. ನಾನು ಕೇಳುವುದು, 2009ರಲ್ಲಿ ಕಟ್ಟಿರುವ ಮನೆಗಳು ಸರಿ ಇಲ್ಲ ಎನ್ನುವುದಾದರೆ 5 ವರ್ಷಗಳ ಕಾಲ ಅವರ ಪಕ್ಷವೇ ಆಡಳಿತದಲ್ಲಿ ಇತ್ತು. ಆಗ ಇವರಿಗೆ ಒಳ್ಳೆಯ ಮನೆಗಳನ್ನು ಕಟ್ಟಿಸಿಕೊಡಲು ಅವರಿಗೆ ಏನು ತೊಂದರೆ ಇತ್ತು. ಅವರು ಹೇಳಿದ ನೀತಿ ಮಾತನ್ನು ನಾನು ಒಪ್ಪಿಕೊಳ್ಳುತ್ತೇನೆ. ನಾವು ಕೂಡಾ ನಿಮ್ಮಂತಹ ಹಿರಿಯರಿಂದ ಕಲಿತು ಆದರ್ಶವನ್ನು ಪಾಲಿಸಬೇಕು ಎನ್ನುವಂತಹವರು. 5 ವರ್ಷ ಆಡಳಿತದಲ್ಲಿದ್ದಾಗ ಒಂದು ಸಾರಿಯೂ ಅವರ ಕಡೆಗೆ ತಿರುಗಿ ನೋಡಲಿಲ್ಲ. ಈಗ ತಾವು ಹೇಳುವುದನ್ನು ನಾವು ಮಾಡುತ್ತೇವೆ. ಅದರ ಬಗ್ಗೆ ತಾವೇನು ಕಾಳಜಿ ಮಾಡಬೇಡಿ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಎಸ್.ಆರ್.ಪಾಟೀಲ್:– ಮಾನ್ಯ ಸಭಾಪತಿಗಳೆ, ತಿಂಗಳಿಗೆ ಎರಡು ಸಾರಿ ಪ್ರವಾಹ ಬಂತು. ಇನ್ನು ಪ್ರತಿ ವರ್ಷವು ಈ ಪ್ರವಾಹ ಬಂದೇ ಬರುತ್ತದೆ. ಇನ್ನು 100 ವರ್ಷ ಪ್ರವಾಹ ಬರುವುದಿಲ್ಲ ಎಂದು ಯಾರೂ ಜ್ಯೋತಿಷ್ಯ ಶಾಸ್ತ್ರ ಹೇಳಿರುವುದಿಲ್ಲ. ಇದು ಪದೇ–ಪದೇ ಬಂದೇ ಬರುತ್ತದೆ. ಜ್ಯೋತಿಷ್ಯ ಶಾಸ್ತ್ರದಲ್ಲಿ ನನಗೆ ನಂಬಿಕೆಯೇ ಇಲ್ಲ. ನಾನು ಎಲ್ಲಿಯೂ ಶಾಸ್ತ್ರವನ್ನು ಕೇಳುವುದು ಇಲ್ಲ. ಇದು ನನ್ನ ವೈಯಕ್ತಿಕ ಅಭಿಪ್ರಾಯ.

ಮಂಗಳ ಗ್ರಹದ ಬಗ್ಗೆ ಹೇಳುತ್ತಾರೆ. ಮಂಗಳ ಗ್ರಹಕ್ಕೆ ಹೋಗಬೇಕಾದರೆ ಸಾಕಷ್ಟು ಸಮಯ ಬೇಕು. ಅದರಿಂದ ನಮ್ಮ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ. ಮಂಗಳ ಗ್ರಹ, ಶನಿ ಗ್ರಹ ಎಂದು ಏನೇನೋ ಹೇಳುತ್ತಾರೆ. ಅವುಗಳ ಬಗ್ಗೆ ನನಗೆ ನಂಬಿಕೆ ಇಲ್ಲ. ಜ್ಯೋತಿಷ್ಯ ಶಾಸ್ತ್ರದ ಬಗ್ಗೆ ನಂಬಿಕೆ ಇರುವವರು ನನಗೆ ಬೈಯ್ಯಬೇಡಿ, ಇದು ನನ್ನ ಅಭಿಪ್ರಾಯ. ನನ್ನ ಅಭಿಪ್ರಾಯವನ್ನು ನಾನು ಇನ್ನೊಬ್ಬರ ಮೇಲೆ ಹೇರಲು ಹೋಗುವುದಿಲ್ಲ. ಇನ್ನು 100 ವರ್ಷ ಪ್ರವಾಹ ಬರುವುದಿಲ್ಲ ಎಂದು ಹೇಳಲು ಬರುವುದಿಲ್ಲ. ಮುಂದಿನ ವರ್ಷ ಮತ್ತೆ ಬರಬಹುದು. ಮಾನ್ಯ ಮಂತ್ರಿಗಳಾದ ಸಿ.ಸಿ.ಪಾಟೀಲ್‌ರವರು ಇಷ್ಟೆಲ್ಲ ಡಿಫೆನ್ಸ್‌ನವರನ್ನು, ಕಾಪ್ಟರ್‌ಗಳನ್ನು, ಈಜುವಂತಹ ಪರಿಣಿತರನ್ನು ಕರೆಯಿಸಲಾಗಿತ್ತು ಎಂದು ಹೇಳಿದರು. ಹಾಗೆಯೇ ಹಳ್ಳಿಗಳನ್ನು ಸ್ಥಳಾಂತರ ಮಾಡಿ. Once for all, kindly shift all these villages. ಎತ್ತರದ ಸ್ಥಳಕ್ಕೆ ಸ್ಥಳಾಂತರ ಮಾಡಿ. ಯು.ಕೆ.ಪಿ., ಮಾದರಿಯಲ್ಲಿ ಈಗ ಇರುವ ಮನೆಗಳಿಗೆ valuation ಮಾಡಿ, ಅವರಿಗೆ ಒಂದೊಂದು ಸೈಟ್‌ನ್ನು ಕೊಡಲಿ. ಬೇಕಾದರೆ ಹಣವನ್ನು ಜನರ ಕೈಗೆ ಕೊಡದೆ ಸರ್ಕಾರವೇ ಮನೆಗಳನ್ನು ಕಟ್ಟಿ ಕೊಡಲಿ. Valuation ಮಾಡಿದ ಅಮೌಂಟ್‌ನಲ್ಲಿ ಮನೆ ಕಟ್ಟಿ ಕೊಡಿ, ಒಂದು ಸೈಟ್ ಕೊಡಿ. 2009ರಲ್ಲಿ ಮಾನ್ಯ ಬಿ.ಎಸ್.ಯಡಿಯೂರಪ್ಪನವರು ಮುಖ್ಯಮಂತ್ರಿಗಳಾಗಿದ್ದಾಗ ಬಹಳಷ್ಟು ಕಡೆಗಳಲ್ಲಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ. ಈಗ ಜಾಗ ಇದೆ. ಸೈಟ್ ಅಲಾಟ್‌ಮೆಂಟ್ ಮಾಡಬೇಕು ಅಷ್ಟೆ. ಇರುವ ಮನೆಗಳನ್ನು ಯು.ಕೆ.ಪಿ., ಮಾದರಿಯಲ್ಲಿ valuation ಮಾಡಿ. Once for all, this problem will be solved for ever. ಇನ್ನೊಂದು ವಿಚಾರ ಎಂದರೆ, ನಾನು ಬಹಳ ಸಭೆಗಳಿಗೆ ಹಾಜರಾಗಿದ್ದೇನೆ, ಯೋಜನಾಬಾಧಿತ ಜನರೇ ಬೇರೆ ಮತ್ತು ನೆರೆಬಾಧಿತ ಜನರೇ ಬೇರೆ ಎಂದು ಸಭೆಗಳಲ್ಲಿ ಹೇಳುತ್ತಾರೆ.

(ಮುಂದು)

(127) 10-10-2019 (04-40) ಬಿಎಸ್‌ಡಿ-ಜಿಆರ್

ಶ್ರೀ ಎಸ್.ಆರ್. ಪಾಟೀಲ್ (ಮುಂದು)

ಯು.ಕೆ.ಪಿ ಯಲ್ಲಿ ಮುಳುಗಡೆಯಾಗಿರುವುದು ಯೋಜನಾ ಬಾಧಿತ ಗ್ರಾಮವಾಗಿರುತ್ತದೆ. ಆದರೆ ಇದು ನೆರೆಯಿಂದ ಮುಳುಗುವ ಗ್ರಾಮವಾಗಿರುತ್ತದೆ. ಯೋಜನಾ ಬಾಧಿತದಲ್ಲಿ ಇಂತಹ ದಿವಸ ಜಲಾಶಯದಿಂದ water impound ಮಾಡುವುದರಿಂದ ನಿಮ್ಮ ಗ್ರಾಮ ಅಥವಾ ಮನೆ ಮುಳುಗಡೆಯಾಗುತ್ತದೆಂದು ಸ್ಥಳಾಂತರ ಮಾಡಲಾಗುತ್ತದೆ. ಆದರೆ ನೆರೆ ಬಾಧಿತದಲ್ಲಿ ರಾತ್ರೋರಾತ್ರಿ ನೀರು ಬಂದುಬಿಡುತ್ತದೆ. ಮಹಾರಾಷ್ಟ್ರದಲ್ಲಿ ಮಳೆ ಹೆಚ್ಚಾದಾಗ ಕೊಯ್ನಾ ನದಿಯಿಂದ ಭೀಮ, ಮಲ್ಲಪ್ರಭಾ, ಕೃಷ್ಣ, ಘಟಪ್ರಭಾ ನದಿಗಳಿಗೆ ನೀರು ಬಿಡುತ್ತಾರೆ. ಆ ನೀರು ಆಲಮಟ್ಟಿ ಜಲಾಶಯಕ್ಕೆ ಬಂದು ನಾರಾಯಣಪುರಕ್ಕೆ ಬಂದು ನಂತರ ಮುಂದೆ ಹರಿಯುತ್ತದೆ. ಇದರಿಂದ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಲ್ಯಾಣ ಕರ್ನಾಟಕದ ಗ್ರಾಮಗಳು ಮುಳುಗುತ್ತವೆ. ಆದ್ದರಿಂದ ಒಂದೇ ಸಾರಿ ಅವರೆಲ್ಲರನ್ನು ಸ್ಥಳಾಂತರಗೊಳಸಲು ನಿರ್ಣಯ ಕೈಗೊಳ್ಳಬೇಕೆಂದು ಒತ್ತಾಯ ಮಾಡುತ್ತೇನೆ.

ಇನ್ನು ಆಲಮಟ್ಟಿ ಜಲಾಶಯದ ಎತ್ತರವನ್ನು 519.6 ಮೀಟರ್‌ನಿಂದ 524.256 ಮೀಟರ್‌ಗಳಿಗೆ ಎತ್ತರಿಸುವ ಕೆಲಸವು ಬೇಗನೇ ಆಗಬೇಕೆಂದು ಅಪೇಕ್ಷೆ ಮಾಡುತ್ತೇನೆ. ಬಹುತೇಕ ಪೂರಕ ಬಜೆಟ್‌ನಲ್ಲಿ ಈ ಬಗ್ಗೆ ಕ್ರಮ ಕೈಗೊಳ್ಳುತ್ತಾರೆ ಎಂದು ನಾನು ಭಾವಿಸುತ್ತೇನೆ. 195 ಹಳ್ಳಿಗಳಲ್ಲಿ 126 ಹಳ್ಳಿಗಳು ಯು.ಕೆ.ಪಿ ಮತ್ತು ನಾರಾಯಣಪುರಕ್ಕೆ ಸಂಬಂಧಪಟ್ಟ ಹಳ್ಳಿಗಳಿವೆ. ಆದ್ದರಿಂದ ಒಂದೇ ಸಾರಿ 524.256 ಮೀಟರ್‌ಗಳಿಗೆ ಎತ್ತರಿಸಿದರೆ ಈ ಎಲ್ಲಾ ಹಳ್ಳಿಗಳು ಸ್ಥಳಾಂತರವಾಗುತ್ತವೆ. ಇದರಿಂದ ಅವರ ಭಾರವೂ ಕಡಿಮೆಯಾಗುತ್ತದೆ. ಸುಮಾರು 130.9 ಟಿ.ಎಂ.ಸಿ ನೀರು ಸಂಗ್ರಹವಾಗಿ, 9 ಏತನೀರಾವರಿ ಯೋಜನೆಗಳಿಗೆ ನೀರು ಬಂದು ಉತ್ತರ ಕರ್ನಾಟಕದ ಅನೇಕ ಜಿಲ್ಲೆಗಳಿಗೆ ನೀರಾವರಿಯಾಗುತ್ತದೆ. ಇದರಿಂದ ಸುಮಾರು 14 ಲಕ್ಷ ಎಕರೆ ಜಮೀನು ನೀರಾವರಿಗೆ ಒಳಗೊಳ್ಳುತ್ತದೆ. ನಮ್ಮ ಜೀವನಾಡಿಯಾದ ಕೃಷ್ಣ ನದಿಯ ಮೂಲಕ ನ್ಯಾಯ ಒದಗಿಸಲು ಸಹಾಯವಾಗುತ್ತದೆ ಎಂದು ಹೇಳುವುದಕ್ಕೆ ಬಯಸುತ್ತೇನೆ.

ಇನ್ನು ಫಸಲು ನಾಶದ ಬಗ್ಗೆ ಎನ್.ಡಿ.ಆರ್.ಎಫ್., ಮತ್ತು ಎಸ್.ಡಿ.ಆರ್.ಎಫ್., ನಾರ್ಮ್ಸ್ ಪ್ರಕಾರ ಹಣ ನೀಡಿದಾಗ ಆ ಜನರು ಉದ್ಧಾರವಾಗಲು ಸಾಧ್ಯವಾಗುತ್ತದೆಯೇ? ಮಾನ್ಯ ಸಭಾಪತಿಯವರೇ, ತಾವು ಕಲ್ಯಾಣ ಕರ್ನಾಟಕದ ಬಳ್ಳಾರಿ ಜಿಲ್ಲೆಯವರಾಗಿದ್ದೀರಿ. ತಾವು ಬಳ್ಳಾರಿ ರಿಪಬ್ಲಿಕ್‌ನವರಾಗಿದ್ದೀರಿ.

ಶ್ರೀ ರಘುನಾಥರಾವ್ ಮಲ್ಕಾಪೂರೆ:- ನಮ್ಮ ರಾಜ್ಯದ ಎಲ್ಲಾ ಜಿಲ್ಲೆಗಳು ರಿಪಬ್ಲಿಕ್ ಆಗಿವೆ.

ಶ್ರೀ ಎಸ್.ಆರ್. ಪಾಟೀಲ್:- ಮಾನ್ಯ ಸಭಾಪತಿಯವರೇ, ತಾವು ನೇರ ನಡೆ-ನುಡಿ ಹೊಂದಿದವರಾಗಿದ್ದು, ಇದ್ದದ್ದನ್ನು ಇದ್ದ ಹಾಗೆ ಹೇಳುತ್ತಾರೆ. ಎನ್.ಡಿ.ಆರ್.ಎಫ್., ಮತ್ತು ಎಸ್.ಡಿ.ಆರ್.ಎಫ್., ನಾರ್ಮ್ಸ್ ಅನ್ನು ಬದಿಗೆ ಸರಿಸಬೇಕು. ಇವತ್ತು ಒಂದು ಲಕ್ಷ ರೂಪಾಯಿಗಳು ಕಬ್ಬು ಬೆಳೆಯಿಂದ ಆದಾಯ ಬಂದರೆ ಅದರ ನಷ್ಟಕ್ಕೆ ರೂ.50,000/- ಗಳನ್ನಾದರೂ ಕೊಡಲಿ, ಇಲ್ಲದಿದ್ದರೆ ಅಲ್ಲಿನ ಜನರು ಹೇಗೆ ಬದುಕಬೇಕು? ಅತ್ಯಂತ ಶೋಚನೀಯ ಹಾಗೂ ದುಸ್ಥಿತಿಯಲ್ಲಿ ಇದ್ದಾರೆ. ನಾನು ಸಂಖ್ಯೆಯ ಬಗ್ಗೆ ಹೇಳುವುದಿಲ್ಲ. ಅದನ್ನು ಹೇಳುತ್ತಾ ಹೋದರೆ ಹೆಚ್ಚಾಗುತ್ತಲೇ ಇರುತ್ತದೆ. ಮಾನ್ಯ ಉಪ ಮುಖ್ಯಮಂತ್ರಿಯವರು ಎಲ್ಲೋ ಒಂದು ಕಡೆ ಅವರದೇ 70 ಎಕರೆ ಮುಳುಗಡೆಯಾಗಿದ್ದು, ರೂ.70 ಲಕ್ಷ ಕೊಡಬೇಕಾಗುತ್ತದೆ ಎಂದು ನೀಡಿರುವ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಹೇಳಿಕೆಯನ್ನು ನೋಡಿದ್ದೇನೆ. ಅವರು ದೊಡ್ಡ ಜಮೀನ್ದಾರರಾಗಿದ್ದು, ನಾವು ನಾಲ್ಕೈದು ಎಕರೆ ಹೊಂದಿರುವ ಸಣ್ಣ ರೈತರಾಗಿದ್ದೇವೆ.

ಶ್ರೀ ಲಕ್ಷ್ಮಣ ಎಸ್. ಸವದಿ (ಉಪ ಮುಖ್ಯಮಂತ್ರಿಗಳು):- ಮಾನ್ಯ ಸಭಾಪತಿಯವರೇ, ಪ್ರವಾಹ ಪೀಡಿತ ಸಂದರ್ಭದಲ್ಲಿ ನಾನು ಸುಮಾರು 15 ದಿವಸ ಅದೇ ಭಾಗದಲ್ಲಿದ್ದು, ಪ್ರತಿಯೊಂದು ಹಳ್ಳಿ, ಮನೆ ಮತ್ತು ನಿರಾಶ್ರಿತರನ್ನು ಭೇಟಿ ಮಾಡಿದ್ದೇನೆ. ಇಡೀ ರಾಜ್ಯದಿಂದ ಸಂತ್ರಸ್ತರಿಗೆ ಅನುಕೂಲವಾಗಲಿ ಎಂದು ಕಳುಹಿಸುವ ಸಾಮಗ್ರಿಗಳನ್ನು ಸರಿಯಾಗಿ ವಿತರಣೆ ಮಾಡುವ ಕೆಲಸದಲ್ಲಿ ನಾನು ತೊಡಗಿಸಿಕೊಂಡಿದ್ದೆನು. ಮಾನ್ಯ ಮುಖ್ಯಮಂತ್ರಿಯವರು ಬೆಳಗಾವಿ ಭಾಗಕ್ಕೆ ಭೇಟಿ ನೀಡಿದ್ದಾಗ ನಾಲ್ಕೈದು ಜನ ರೈತರು ಅಲ್ಲಿಗೆ ಬಂದಿದ್ದರು. ಮಾನ್ಯ ವಿರೋಧ ಪಕ್ಷದ ನಾಯಕರು ಒಂದು ಎಕರೆ ಕಬ್ಬಿನ ಬೆಳೆ ನಾಶಕ್ಕೆ ರೂ. 1 ಲಕ್ಷ ರೂಪಾಯಿಗಳ ಪರಿಹಾರವನ್ನಾದರೂ ಕೊಡಬೇಕು, ಇಲ್ಲದಿದ್ದರೆ ಕನಿಷ್ಠ ರೂ. 50,000/- ಗಳನ್ನಾದರೂ ಕೊಡಬೇಕೆಂದು ಪ್ರಸ್ತಾಪ ಮಾಡಿದರು. ಮಾಧ್ಯಮಗಳಲ್ಲಿ ವರದಿಯಾಗಿರುವುದರಿಂದ ಕ್ಲಾರಿಫೈ ಮಾಡುತ್ತೇನೆ. ಆಗ ಎಲ್ಲರಿಗೂ ಒಂದು ಲಕ್ಷ ರೂಪಾಯಿಗಳನ್ನು ಕೊಟ್ಟರೆ ನಮ್ಮ ಕುಟುಂಬದ ಸುಮಾರು 80 ರಿಂದ 100 ಎಕರೆ ಕಬ್ಬು ಬೆಳೆ ಮುಳುಗಡೆಯಾಗಿದ್ದು, ಎಲ್ಲಾ ರೈತರ ಜೊತೆ ನಮಗೂ ಸುಮಾರು ರೂ.80 ರಿಂದ 100 ಕೋಟಿ ಪರಿಹಾರ ದೊರೆಯುತ್ತದೆ ಎಂದು ಹೇಳಿದ್ದೆನು. ಈ ಹೇಳಿಕೆಯನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಮಾಧ್ಯಮಗಳಲ್ಲಿ ನೋಡಿ ಹೇಳುತ್ತಿದ್ದಾರೆ.

**ಶ್ರೀ ಎಸ್.ಆರ್. ಪಾಟೀಲ್ (ವಿರೋಧ ಪಕ್ಷದ ನಾಯಕರು)**:- ಮಾನ್ಯ ಸಭಾಪತಿಯವರೇ, ನಾನು ಮಾಧ್ಯಮದಲ್ಲಿ ನೋಡಿ ಕೇಳಿದೆ. ನಂತರ ಮಾನ್ಯ ಸಚಿವರು ನನಗೆ ಸಿಕ್ಕಿಲ್ಲ, ಅವರು ಸಿಕ್ಕದ್ದರೆ ಸ್ನೇಹಿತರಾಗಿ ಈ ವಿಚಾರದ ಬಗ್ಗೆ ಕೇಳುತ್ತಿದ್ದೆನು. ಇದಲ್ಲದೇ ದಾಳಿಂಬೆ, ಬಾಳೆ, ದ್ರಾಕ್ಷಿ, ಸೂರ್ಯಕಾಂತಿ, ಅರಿಶಿನ, ಉಳ್ಳಾಗಡ್ಡೆ, ಗೋವಿನ ಜೋಳ ಸೇರಿದಂತೆ ಮುಂತಾದ ಫಸಲುಗಳಿಗೆ ನಷ್ಟ ಆಗಿದೆ. ಉಳಿದ ಫಸಲುಗಳು ನಷ್ಟವಾಗಿದೆ. ಪರಿಹಾರವನ್ನು ನೀಡಿದಾಗ ಇತಿಹಾಸದ ಪುಟಗಳಲ್ಲಿ ಅಜರಾಮರವಾಗಿ ಉಳಿಯುತ್ತಾರೆ. ಕೇವಲ ಉತ್ತರ ಕರ್ನಾಟಕ ಮಾತ್ರವಲ್ಲದೇ ಸಂತ್ರಸ್ತರ ಬದುಕು ಮತ್ತು ಹೃದಯದಲ್ಲಿ ಶಾಶ್ವತ ಸ್ಥಾನ ಸಿಗುತ್ತದೆ. ಈ ದೇಶದ 130 ಕೋಟಿ ಜನತೆಗೆ ಅನ್ನ ನೀಡುವ ರೈತರು ಹಗಲು-ರಾತ್ರಿ, ಬಿಸಲು-ಮಳೆ-ಚಳಿ ಎನ್ನದೇ ಹೆಂಡತಿ ಮಕ್ಕಳೊಡನೆ ಮಣ್ಣಲ್ಲಿ ಮಣ್ಣಾಗಿ ದುಡಿಯುತ್ತಾರೆ. ಇವತ್ತು ಕಂಪ್ಯೂಟರ್ ಇಂಜಿನಿಯರ್‌ಗೆ ರೂ.10 ಲಕ್ಷ ಸಂಬಳ ಇದ್ದರೆ ಕಂಪ್ಯೂಟರ್ ಅನ್ನು ತಿನ್ನುವುದಕ್ಕೆ ಆಗುತ್ತದೆಯೇ? ರೈತ ಉತ್ತಿ-ಬಿತ್ತಿ ಬೆಳೆ ತೆಗೆದಾಗ ನಮಗೆಲ್ಲರಿಗೂ ರೊಟ್ಟಿ-ಅನ್ನ ಸಿಗುತ್ತದೆ. ಅಂತಹ ಶ್ರಮ ಜೀವಿಗಳಿಗೆ ಹಾನಿಯಾಗಿದೆ. ಮನೆಯ ಬಗ್ಗೆ ನಾವು ಕೇಳಿಲ್ಲ. ಅವರು ಎಂತಹ ಮನೆಯಲ್ಲಿ ಬೇಕಾದರೂ ಇರಲು ತಯಾರಿದ್ದಾರೆ. ಆದರೆ ಬೆಳೆ ಸರ್ವನಾಶವಾಗಿ ತಲೆ ಮೇಲೆ ಇಟ್ಟುಕೊಂಡು

ಕುಳಿತಿದ್ದಾರೆ. ಮುಳುಗಡೆಯಾದ ಭಾಗದಲ್ಲಿ ಅವರನ್ನು ನೋಡಿದರೆ ಎದೆ ಝಲ್ ಎನ್ನುತ್ತದೆ. ಅದಕ್ಕಾಗಿ ಎನ್.ಡಿ.ಆರ್.ಎಫ್., ಮತ್ತು ಎಸ್.ಡಿ.ಆರ್.ಎಫ್., ನಾರ್ಮ್ಸ್ ಮತ್ತು ಸರ್ಕಾರದ norms ಗಳನ್ನು set aside ಮಾಡಲಿ. It will not be wrong. The Government can announce any amount of compensation. ಅವರಿಗೆ ಕಡಿಮೆ ಕೊಟ್ಟರೆ ಮಾತ್ರ ಆಕ್ಷೇಪಣೆ ವ್ಯಕ್ತವಾಗುತ್ತದೆ ಹೊರತು ಈ ಕೆಲಸ ಮಾಡಿದರೆ ಅವರ ಕುರ್ಚಿ ಶಾಶ್ವತವಾಗಿ ಅಲ್ಲಿಯೇ ಇರುತ್ತದೆ. ಅವರು ಅಲ್ಲಿಯೇ ಇರಲಿ ಎಂದು ಹೇಳುತ್ತಿದ್ದೇನೆ. ಬೆಳೆ ಪರಿಹಾರವನ್ನು cost to cost ಗೆ ಸಮನಾಗಿ ನೀಡಬೇಕು. ಕಬ್ಬಿಗೆ ಮಾತ್ರ ರೂ. 1 ಲಕ್ಷ ಕೊಡಬೇಕು. ಮಾನ್ಯ ಉಪ ಮುಖ್ಯಮಂತ್ರಿಗಳಿಗೆ ಕಬ್ಬಿನ ಬೆಳೆ ಬಗ್ಗೆ ಬಹಳ ಅನುಭವ ಇದೆ. ಅವರ ಸಕ್ಕರೆ ಕಾರ್ಖಾನೆಯಿಂದ ಒಂದೊಂದು ಸಾರಿ ಒಬ್ಬೊಬ್ಬರಿಗೆ ರೂ. 1 ಕೋಟಿಗೂ ಹೆಚ್ಚು ಚೆಕ್ ಮುಖಾಂತರ ವಿತರಿಸಿರುತ್ತಾರೆ ಎಂದು ನಾನು ಭಾವಿಸಿದ್ದೇನೆ. ಆದ್ದರಿಂದ ನಾರ್ಮ್ಸ್ ಬದಿಗೆ ಇಡಬೇಕು. ಇವತ್ತು ಪ್ರವಾಹದಿಂದ ಫಸಲು ಹಾನಿಯಾಗಿರುವ ರೈತರಿಗೆ cost to cost ಪರಿಹಾರ ಕೊಡಬೇಕೆಂದು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಮಾನ್ಯ ಪ್ರಕಾಶ್ ಹುಕ್ಕೇರಿಯವರು ಸಕ್ಕರೆ ಸಚಿವರಾಗಿದ್ದ ಸಂದರ್ಭದಲ್ಲಿ ಒಂದು ಟನ್ ಕಬ್ಬಿನ ಬೆಲೆ ರೂ. 2,200/- ಗಳೆಂದು ನಿರ್ಧಾರ ಮಾಡಿದರು. ಈ ಹಣವನ್ನು ಸಕ್ಕರೆ ಕಾರ್ಖಾನೆಯವರು ಕೊಡುವುದಕ್ಕೆ ಆಗಲಿಲ್ಲ. ಆಗ ಹಿಂದಿನ ಮುಖ್ಯಮಂತ್ರಿಗಳು ಹಾಗೂ ಕೆಳಮನೆಯ ಹಾಲಿ ವಿರೋಧ ಪಕ್ಷದ ನಾಯಕರಾದ ಶ್ರೀಮಾನ್ ಸಿದ್ಧರಾಮಯ್ಯನವರು ಒಂದು ಟನ್ ಕಬ್ಬಿಗೆ ರೂ. 3,050/-ಗಳನ್ನು ಕೊಟ್ಟರು. ಸುಮಾರು ರೂ.1,800 ಕೋಟಿಗಳನ್ನು ರಾಜ್ಯದ ಬೊಕ್ಕಸದಿಂದ ನೀಡಿದರು. ಆಗ ರೂ. 2,500/- ಗಳನ್ನು ಒಂದು ಟನ್‌ಗೆ ಕಬ್ಬಿಗೆ ನೀಡುವುದಾಗಿ ಹೇಳಿದ ನಂತರ ಬೆಳಗಾವಿಯಲ್ಲಿ ಅಧಿವೇಶನ ನಡೆದ ಸಂದರ್ಭದಲ್ಲಿ ದೊಡ್ಡ ಪ್ರಮಾಣದಲ್ಲಿ ಸತ್ಯಾಗ್ರಹ ನಡೆಯಿತು. ನಾವು ಈ ಸರ್ಕಾರದವರಂತೆ ಅಂಜಿಕೊಂಡು ಬೆಂಗಳೂರಿನಲ್ಲಿ ಅಧಿವೇಶನ ನಡೆಸಲಿಲ್ಲ. ಅಲ್ಲಿನ ರೈತರು ಬಂದು ಸತ್ಯಾಗ್ರಹ ಮಾಡಿದರೂ ಎದುರಿಸುತ್ತೇವೆ ಎಂದುಕೊಂಡು ಬೆಳಗಾವಿಯಲ್ಲಿ ಅಧಿವೇಶನ ನಡೆಸಿದೆವು. ಆ ಅಧಿವೇಶನವನ್ನು ಜ್ಞಾಪಿಸಿಕೊಳ್ಳಬೇಕು. ಸಕ್ಕರೆ ಕಾರ್ಖಾನೆಯವರ ಹಣ ಕೊಟ್ಟಿಲ್ಲ. ವ್ಯತ್ಯಾಸದ ಹಣ ರೂ. 350/-ಗಳು ನಮ್ಮ ಕೊರಳಿಗೆ ಬೀಳುತ್ತದೆ ಎಂದು ಗೊತ್ತಿದ್ದರೂ ಬೆಳಗಾವಿಯಲ್ಲಿ ಅಧಿವೇಶನವನ್ನು ನಡೆಸಿದೆವು. ಇವತ್ತು ಉತ್ತರ ಕರ್ನಾಟಕದ 13 ಜಿಲ್ಲೆಗಳಲ್ಲಿ 12 ಜಿಲ್ಲೆಗಳು ಮುಳುಗಡೆಯಾಗಿದ್ದು, ಅವರ ಅಹವಾಲು ಕೇಳುವವರಿಲ್ಲ. ಬೆಳಗಾವಿಯಲ್ಲಿ ಅಧಿವೇಶನ ನಡೆಸಿದ್ದರೆ ಅವರೆಲ್ಲರಿಗೂ ನೈತಿಕ ಸ್ಥೈರ್ಯ ಬರುತ್ತಿತ್ತು. ಹಿಂದೆ ಮಾನ್ಯ ಮುಖ್ಯಮಂತ್ರಿಗಳು, ಎಲ್ಲಾ ಮಂತ್ರಿಗಳು ಮತ್ತು ಅಧಿಕಾರಿಗಳು ಬೆಳಗಾವಿಯ ಸುವರ್ಣ ಸೌಧದಲ್ಲಿಯೇ ಅಧಿವೇಶನ ನಡೆಸಿದರು. ಅಲ್ಲಿಯೇ ಅಧಿವೇಶನ ನಡೆಸಿದಾಗ ಅವರಿಗೆ ಧೈರ್ಯ ಮತ್ತು ಆತ್ಮಸ್ಥೈರ್ಯ ಬರುತ್ತದೆ.

(ಮುಂದು)

(128) 10.10.2019 4.50 ಪಿಕೆ: ಎಂಡಿ

ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಎಸ್.ಆರ್.ಪಾಟೀಲ್(ಮುಂದುವರೆದಿದೆ)**

ನಮ್ಮ ಭಾಗದಲ್ಲಿ ಅಧಿವೇಶನ ನಡೆಸುತ್ತಿದ್ದಾರೆ, ನಮ್ಮ ಭಾಗಕ್ಕೆ ಏನಾದರೂ ಅನುಕೂಲ ಮಾಡಿಯೇ ಹೋಗುತ್ತಾರೆ, ಉತ್ತರ ಕರ್ನಾಟಕದವರೆಗೆ ಬಂದು ಬರಿಗೈಲಿ ಹೋಗುವುದಿಲ್ಲ ಎನ್ನುವ ವಿಶ್ವಾಸ ಅವರಲ್ಲಿ ಬರುತ್ತಿತ್ತು. ಆದರೆ ಹಾಗೆ ನೀವು ಮಾಡಲಿಲ್ಲ. ದುಡ್ಡು ಕೊಡುವುದಿರಲಿ, ಕೊನೆಯ ಪಕ್ಷ ಬೆಳಗಾವಿಯಲ್ಲಿ ಅಧಿವೇಶನ ಕೂಡ ಮಾಡಲಿಲ್ಲ. I feel very sorry for you people. You would have taken a decision of conducting the session in Belgaum itself. ಅಲ್ಲೇನು ಜನ ಮುಳುಗುತ್ತಿದ್ದಾರೋ ಅವರ ಹತ್ತಿರ ನೀವು ಹೋಗಿ ಅವರ ಕೈಹಿಡಿದು ಎಳೆಯುವುದು ಬೇಡ; ಕನಿಷ್ಠ ಅಧಿವೇಶನ ನಡೆಸಿದ್ದರೆ ಅವರಿಗೆ ಧೈರ್ಯ ಬರುತ್ತಿತ್ತು. ನೈತಿಕ ಬಲ ಬರುತ್ತಿತ್ತು.

**ಶ್ರೀ ಲಕ್ಷ್ಮಣ ಎಸ್. ಸವದಿ(ಉಪಮುಖ್ಯಮಂತ್ರಿಗಳು)**:- ಮಾನ್ಯ ಸಭಾಪತಿಯವರೇ, ಬೆಳಗಾವಿಯಲ್ಲಿ ಏಕೆ ಅಧಿವೇಶನ ಮಾಡಲಿಲ್ಲ ಎಂಬುದನ್ನು ಮಾನ್ಯ ವಿರೋಧ ಪಕ್ಷದ ನಾಯಕರ ಗಮನಕ್ಕೆ ತರಬಯಸುತ್ತೇನೆ. ನಾಳೆ ಉತ್ತರ ಕೊಡುವಾಗ ಈ ಅಂಶದ ಬಗ್ಗೆ ಪ್ರಸ್ತಾಪ ಮಾಡಲಿಲ್ಲ ಎಂದು ದಯವಿಟ್ಟು ಯಾರೂ ಹೇಳಬಾರದು.

**ಶ್ರೀ ಎಸ್.ಆರ್.ಪಾಟೀಲ್**:- ನೀವೇ reply ಮಾಡಿಬಿಡಿ.

**ಶ್ರೀ ಲಕ್ಷ್ಮಣ ಎಸ್. ಸವದಿ**:- ಪ್ರತಿಯೊಬ್ಬರಿಗೂ ಅವರದೇ ಆದ ಜವಾಬ್ದಾರಿ ಇರುತ್ತದೆ. ಸಂಬಂಧಪಟ್ಟವರು ಇದಕ್ಕೆ ಉತ್ತರಿಸುತ್ತಾರೆ. ಮಾನ್ಯ ಸಭಾಪತಿಯವರೇ, ಇತರ ಎಲ್ಲಾ ಜಿಲ್ಲೆಗಳಿಗಿಂತ ಹೆಚ್ಚು ಹಾನಿಯಾಗಿರುವ ಜಿಲ್ಲೆ ಎಂದರೆ ಅದು ಬೆಳಗಾವಿ ಜಿಲ್ಲೆ. ಅಲ್ಲಿನ ಇಡೀ ಜಿಲ್ಲಾಡಳಿತ ಇವತ್ತಿಗೂ ಪ್ರವಾಹ ಪೀಡಿತರ ನೆರವಿನ ಕಾರ್ಯದಲ್ಲಿ ತೊಡಗಿದೆ. ಸರ್ವೇ ಕಾರ್ಯ ಇರಬಹುದು, ಹಣ ಕೊಡುವಂಥದ್ದು ಇರಬಹುದು, ಮನೆ ಕಟ್ಟಿಕೊಳ್ಳುವುದಕ್ಕೆ ಸರ್ವೇ ಮಾಡುವಂತಹ ಅನೇಕ ಕೆಲಸಗಳಲ್ಲಿ ಗ್ರಾಮ ಮಟ್ಟದ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳು ತೊಡಗಿದ್ದಾರೆ. ಅಲ್ಲಿ ನಾವು ಅಧಿವೇಶನ ಮಾಡಿದರೆ, ಇಡೀ ಜಿಲ್ಲೆಯ ಎಲ್ಲಾ ಅಧಿಕಾರಿಗಳು ಬರಬೇಕಾಗುತ್ತದೆ, ಇದರಿಂದ ಸಂತ್ರಸ್ತರಿಗೆ ಇನ್ನಷ್ಟು ತೊಂದರೆ ಕೊಟ್ಟ ಹಾಗೆ ಆಗುತ್ತದೆಯೇ ಹೊರತಾಗಿ ಅದರಿಂದ ಪ್ರಯೋಜನ ಆಗುವುದಿಲ್ಲ; ಸಹಾಯ ಮಾಡಿದ ಹಾಗೆ ಆಗುವುದಿಲ್ಲ. ಈ ಎಲ್ಲಾ ಅಧಿಕಾರಿಗಳು ಆಲೋಚನೆ ಮಾಡಿ, ಜಿಲ್ಲಾಧಿಕಾರಿಗಳ ಮುಖಾಂತರ ನಮಗೆ, ದಯವಿಟ್ಟು ಈ ಅಧಿವೇಶನ ಮಾಡಬೇಡಿ, ಸಂತ್ರಸ್ತರ ಕಾರ್ಯ ಮುಗಿದ ಮೇಲೆ, ಎರಡು ತಿಂಗಳ ನಂತರ ಅಧಿವೇಶನ ಮಾಡಿ ಎಂದು ಒಕ್ಕೊರಲಿನಿಂದ ಹೇಳಿದ್ದಾರೆ. ಸಂತ್ರಸ್ತರಿಗೆ ಪರಿಹಾರ ಕೊಡಲು ತೊಂದರೆ ಆಗಬಾರದು ಎನ್ನುವ ಉದ್ದೇಶದಿಂದ ಮೂರು ದಿನ ಅಧಿವೇಶನ ಇಟ್ಟಿದ್ದೇವೆ.

"ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ಮುಖ್ಯಮಂತ್ರಿಗಳು ಮುಂದಿನ ದಿನಮಾನದಲ್ಲಿ ಬೆಳಗಾವಿಯಲ್ಲಿ ವಿಸ್ತಾರವಾದ ಅಧಿವೇಶನ ನಡೆಸುವಂತಹ ಸಂಕಲ್ಪವನ್ನು ಮಾಡಿದ್ದಾರೆ.

**ಶ್ರೀ ಎಸ್.ಆರ್.ಪಾಟೀಲ್**:- ಮಾನ್ಯ ಸಭಾಪತಿಯವರೇ, ಅಲ್ಲಿನ ಸಂತ್ರಸ್ತರ ಬವಣೆಗಳನ್ನು ಕೇಳುವುದರಲ್ಲಿ ಅಲ್ಲಿನ ಅಧಿಕಾರಿಗಳು ನಿರತರಾಗಿದ್ದಾರೆ ಎಂದು ಮಾನ್ಯ ಉಪ ಮುಖ್ಯಮಂತ್ರಿಗಳು ಹೇಳಿದರು. ಬೆಳಗಾವಿಯಲ್ಲಿ ಅಧಿವೇಶನ ಮಾಡುವುದರಿಂದ, ಜಿಲ್ಲಾಧಿಕಾರಿಗಳು, Regional Commissioner ಮತ್ತು ಇತರ ಅಧಿಕಾರಿಗಳಿಗೆ ಕೆಲಸ ಬರುತ್ತದೆ. ಅಧಿವೇಶನ ಬಂದರೆ ಅವರಿಗೆ ಕುತ್ತಿಗೆಗೆ ಬಂದ ಹಾಗೆ ಆಗುತ್ತದೆ. 13 ಜಿಲ್ಲೆಗಳ ಪೈಕಿ 12 ಜಿಲ್ಲೆಗಳು ಮುಳುಗಿವೆ, ಸಾವಿರಾರು ಗ್ರಾಮಗಳು ಮುಳುಗಿವೆ, ಲಕ್ಷಾಂತರ ಜನ ನಿರ್ಗತಿಕರಾಗಿದ್ದಾರೆ. ನಾವು cabinet meeting ಗಳನ್ನು ಗುಲ್ಬರ್ಗಾ ಮತ್ತು ಇತರ ಕಡೆಗಳಲ್ಲಿ ನಡೆಸಿದಂತಹ ಉದಾಹರಣೆ ಇದೆ. ಮಾನ್ಯ ಸಿದ್ಧರಾಮಯ್ಯನವರು ಮುಖ್ಯ ಮಂತ್ರಿಯಾಗಿದ್ದಾಗ ಗುಲ್ಬರ್ಗಾದಲ್ಲಿ cabinet meeting ಮಾಡಿದ್ದರು. ಅಲ್ಲಿ cabinet meeting ಆದರೆ, ಆ ಜನತೆ, ನಮ್ಮ ಭಾಗಕ್ಕೆ ಏನಾದರೂ ಕೊಡುಗೆಗಳು ಸಿಗುತ್ತವೆ ಎಂದು ಖುಷಿ ಪಡುತ್ತಾರೆ. ಕೊಡುಗೆಗಳನ್ನು ಕೊಡಲಿ, ಬಿಡಲಿ ಆದರೆ ಖುಷಿ ಪಡುತ್ತಾರೆ. ಮಾನ್ಯ ಸಭಾಪತಿಯವರೇ, ಈಗೇನು ಇಲ್ಲಿ ಒಂದು ತಿಂಗಳು ಅಧಿವೇಶನ ನಡೆಸುತ್ತಾರೆಯೇ? ನೀವು ಹೇಳುವುದನ್ನು ಜನ ನಂಬಬೇಕು. ನೀವು ಹೇಳುವುದನ್ನು ಕೇಳಿ ನಾನು ಸುಮ್ಮನೆ ಕುಳಿತುಕೊಳ್ಳಬೇಕು. Belgaum is a nerve centre of North Karnataka. ಅಲ್ಲಿ ನೀವು ಅಧಿವೇಶನ ಮಾಡಿದರೆ, ಮುಳುಗಡೆ ಆಗಿರುವಂತಹ ಪ್ರದೇಶಗಳ ಜನರಿಗೆ ಚೈತನ್ಯ ಬರುತ್ತದೆ, ಆತ್ಮಸ್ಥೈರ್ಯ ಬರುತ್ತದೆ ಎನ್ನುವ ವಿಚಾರವನ್ನು ಇಟ್ಟುಕೊಂಡು ನೀವು ಬೆಳಗಾವಿಯಲ್ಲಿ ಅಧಿವೇಶನ ಮಾಡಬೇಕಾಗಿತ್ತು. ಅಲ್ಲಂತೂ ಮಾಡುವುದಕ್ಕಾಗಲಿಲ್ಲ, ಆದರೆ ಇಲ್ಲೇನು ಒಂದು ತಿಂಗಳು ಅಧಿವೇಶನ ಮಾಡುತ್ತೀರಾ? ಮೂರು ದಿನ ಅಧಿವೇಶನ ಇಟ್ಟುಕೊಂಡಿದ್ದೀರಿ. ಮೊದಲು ಹತ್ತು ದಿನ ಅಧಿವೇಶನ ಮಾಡುತ್ತೇವೆ ಎಂದು ಘೋಷಣೆ ಮಾಡಿದ ಮೇಲೆ ಚುನಾವಣೆ ಬಂದ ಕಾರಣ, ಮೂರು ದಿನ ಅಧಿವೇಶನ ಮಾಡುತ್ತೇವೆ ಎಂದು ಹೇಳಿದಿರಿ. ಆದರೆ ಈಗ ಚುನಾವಣೆ ಡಿಸೆಂಬರ್ 5ರ ತನಕ ಮುಂದೂಡಲ್ಪಟ್ಟಿದೆ. BAC (Business Advisory Committee) ಯಲ್ಲಿ ಏನು ಚರ್ಚೆಯಾಯಿತು? ಏಕೆ ಪಲಾಯನವಾದ ಮಾಡುತ್ತೀರಿ? ಬೆಳಗಾವಿಯಲ್ಲಿ ಅಧಿವೇಶನ ಮಾಡದೇ ಪಲಾಯನ ಮಾಡಿ ಬೆಂಗಳೂರಿಗೆ ಬಂದಿರಿ. ಆದರೆ ಬೆಂಗಳೂರಿನಲ್ಲಿ ಒಂದು ತಿಂಗಳು ಅಧಿವೇಶನ ಮಾಡುತ್ತೀರಾ? ಹೋಗಲಿ 15 ದಿವಸವಾದರೂ ಅಧಿವೇಶನ ನಡೆಸಿ. ಉತ್ತರ ಕರ್ನಾಟಕದ ನೆರೆ ಬಗ್ಗೆ ವಿಸ್ತೃತವಾಗಿ ಚರ್ಚೆ ಮಾಡೋಣ. ಉತ್ತರ ಕರ್ನಾಟಕದ ನೆರೆ ಬಗ್ಗೆ ಬಿಡಿ ಬಿಡಿಯಾಗಿ ಹೇಳುತ್ತೇವೆ. ಪ್ರತಿಪಕ್ಷ ಹಾಗೂ ಆಡಳಿತ ಪಕ್ಷ ಒಂದು ನಾಣ್ಯದ ಎರಡು ಮುಖ ಇದ್ದ ಹಾಗೆ. ಒಂದು ಮುಖ ಮಸುಕಾದರೆ ಅಂತಹ ನಾಣ್ಯ ಚಲಾವಣೆ ಆಗುವುದಿಲ್ಲ. ನಾವು ಪ್ರತಿಪಕ್ಷವಾಗಿ ಸರ್ಕಾರ ಎಲ್ಲಿ ಎಡವಿದೆ ಎಂದು

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೇಳುತ್ತೇವೆ. ನೀವು ಸರಿ ಮಾಡಿಕೊಂಡರೆ ನಿಮಗೆ ಒಳ್ಳೆಯ ಭವಿಷ್ಯ ಇರುತ್ತದೆ, ನಿಮ್ಮನ್ನು ಜನ ಪ್ರೀತಿ, ವಿಶ್ವಾಸ, ಗೌರವದಿಂದ ಕಾಣುತ್ತಾರೆ. ಅದು ಬಿಟ್ಟು, ಕೋಣದ ಮುಂದೆ ಕಿನ್ನರಿ ಬಾರಿಸಿದ ಹಾಗೆ ನಡೆದುಕೊಂಡರೆ ಅದರ ಪರಿಣಾಮವನ್ನೂ ಎದುರಿಸುತ್ತೀರಿ. ನಾವು ಆ ಕಡೆ ಕುಳಿತಿದ್ದವರು ಈಗ ಈಕಡೆ ಬಂದಿದ್ದೇವೆ. ನೀವು ಶಾಶ್ವತವಾಗಿ ಅಲ್ಲೇ ಕುಳಿತುಕೊಳ್ಳಬೇಕು ಎಂದು ನಾವು ಬುದ್ಧಿವಾದ ಹೇಳಹೊರಟಿದ್ದೇವೆ. ನಮಗೆ ತಿಳಿದ ವಿಚಾರಗಳನ್ನು ಹೇಳುತ್ತೇವೆ. You are very much eager to come here. ನೀವು ವಿರೋಧ ಪಕ್ಷಕ್ಕೆ ಬರುವುದು ಬೇಡವೆಂದು ಹೇಳುತ್ತಿದ್ದೇನೆ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:–** ನೀವು ಮಾತನಾಡುತ್ತಿರುವುದು ನೋಡಿದರೆ ಈ ಕಡೆ ಬಂದುಬಿಡುತ್ತಿರೇನೋ ಎನ್ನುವ ಸಂಶಯ ಬರುತ್ತದೆ.

(ಗೊಂದಲ)

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೆ, ಜನಸೇವೆ ಮಾಡಬೇಕು ಎನ್ನುವ ದೃಷ್ಟಿಯಿಂದ ನಾನು ರಾಜಕಾರಣಕ್ಕೆ ಬಂದಿದ್ದೇನೆ. ರಾಜಕಾರಣಕ್ಕೆ ಬರುವ ಮೊದಲೂ ಆರ್ಥಿಕವಾಗಿ ನಾನು ಗಟ್ಟಿಯಾಗಿದ್ದೆ, ರಾಜಕಾರಣಕ್ಕೆ ಬಂದಮೇಲೆಯೇ ನಾನು ಆರ್ಥಿಕ ಸಮಸ್ಯೆಯನ್ನು ಎದುರಿಸಿದ್ದು. ಮೂರೂವರೆ ವರ್ಷಗಳ ಕಾಲ ಮಂತ್ರಿಯಾಗಿ ಮೂರೂವರೆ ಕೋಟಿ ನಾನು ಸಾಲ ತೆಗೆದುಕೊಂಡಿದ್ದೆ. ಇನ್ನೂ ಎರಡು ವರ್ಷ ಮಂತ್ರಿಯಾಗಿದಿದ್ದರೆ ಮತ್ತೆ ಎರಡು ಕೋಟಿ ಸಾಲ ಆಗುತ್ತಿತ್ತು. ಆಗ ನಾನು ಮಾನ್ಯ ಸಿದ್ದರಾಮಯ್ಯನವರಿಗೆ, ನನ್ನನ್ನು ಇನ್ನೆರಡು ವರ್ಷ ಇಟ್ಟುಕೊಂಡಿದ್ದರೆ ಇನ್ನೂ 2 ಕೋಟಿ ಸಾಲ ಆಗುತ್ತಿತ್ತು, ನನ್ನ drop ಮಾಡಿ ಒಳ್ಳೆಯ ಕೆಲಸ ಮಾಡಿದಿರಿ ಎಂದು ಹೇಳಿದೆ. ಪ್ರಾಮಾಣಿಕವಾಗಿ, ಜನಸೇವೆಯೇ ಜನಾರ್ಧನನ ಸೇವೆ ಎನ್ನುವ ಭಾವನೆಯಿಂದ ರಾಜಕಾರಣಕ್ಕೆ ಬರುತ್ತೇವೆ. ಜನಸೇವೆ ಮಾಡುವ ಉದ್ದೇಶದಿಂದ ರಾಜಕಾರಣಕ್ಕೆ ಬರಬೇಕೇ ಹೊರತು ಜಾತ್ರೆ ಮಾಡುವುದಕ್ಕೆ ಬರಬಾರದು. ಜನರ ಕಣ್ಣೀರು ಒರೆಸಬೇಕು, ಜನರ ದುಃಖ–ದುಮ್ಮಾನಗಳಿಗೆ ಸ್ಪಂದಿಸಬೇಕು. ರಾಜಕೀಯ ಅಧಿಕಾರದಿಂದ ಜನರ ಹತ್ತಿರಕ್ಕೆ ಹೋಗಿ ಹೆಚ್ಚು ಪರಿಣಾಮಕಾರಿಯಾಗಿ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಒಂದು ಸ್ಥಾನ–ಮಾನದಲ್ಲಿದ್ದು ಜನರ ಸೇವೆಯನ್ನು ಪರಿಣಾಮಕಾರಿಯಾಗಿ ಮಾಡಬಹುದು. ಅವರ ದು:ಖ–ದುಮ್ಮಾನಗಳನ್ನು, ನೋವು–ನಲಿವುಗಳನ್ನು, ಕಷ್ಟ–ನಷ್ಟಗಳನ್ನು ಕೇಳಿ, ಪರಾಮರ್ಶಿಸಿ ಪರಿಹಾರ ಕೊಡುವುದಕ್ಕೆ ನಮಗೆ ಸಾಧ್ಯವಾಗುತ್ತದೆ. ಇದರಲ್ಲಿ ರಾಜಕಾರಣ ಮಾಡಬಾರದು. ಇಂತಹ ದುಸ್ತರವಾದ ಸ್ಥಿತಿಯಲ್ಲಿ, ಭಯಾನಕವಾದ ಸ್ಥಿತಿಯಲ್ಲಿ ಸಂತ್ರಸ್ತರ ಕಷ್ಟಕ್ಕೆ ಸರ್ಕಾರ ಧಾವಿಸಿ ಬರಬೇಕು. ಈ ರೀತಿ ಮಾಡಿದರೆ ಜನ ನಿಮ್ಮನ್ನು ದೇವರ ಹಾಗೆ ಜಗಲಿ ಮೇಲೆ ಇಟ್ಟು ಪೂಜೆ ಮಾಡುತ್ತಾರೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಲಕ್ಷ್ಮಣ ಎಸ್. ಸವದಿ**:- ನೀವು ಒಂದು ಕಡೆ ನಾಸ್ತಿಕರ ಹಾಗೆ ಮಾತನಾಡುತ್ತೀರಿ, ಇನ್ನೊಂದು ಸಲ ಪೂಜೆ ಮಾಡುವ ಸಂಬಂಧ ಹೇಳುತ್ತೀರಿ.

**ಶ್ರೀ ಎಸ್.ಆರ್.ಪಾಟೀಲ್**:- ನಾನು ಜನರ ಅಭಿಪ್ರಾಯವನ್ನು ಹೇಳುತ್ತಿದ್ದೇನೆ. ಕಷ್ಟ ಪರಿಸ್ಥಿತಿಯಲ್ಲಿ ನೀವು ಜನರನ್ನು ಸ್ಪಂದಿಸಿದರೆ ಅವರು ನಿಮ್ಮನ್ನು 'ದೇವರು' ಎಂದು ಪೂಜೆ ಮಾಡುತ್ತಾರೆ.

**ಶ್ರೀ ಎನ್.ರವಿಕುಮಾರ್**:- ಮಾನ್ಯ ಸಭಾಪತಿಯವರೇ, ನನಗೆ ಮಾತನಾಡುವುದಕ್ಕೆ ಅವಕಾಶ ಕೊಡಿ.

**ಶ್ರೀ ಎಸ್.ಆರ್.ಪಾಟೀಲ್**:- ನಾನು conclude ಮಾಡುತ್ತಿದ್ದೇನೆ. ನಂತರ ತಾವು ಮಾತನಾಡಿ ಎಂದು ನಾನು ಮನವಿ ಮಾಡುತ್ತಿದ್ದೇನೆ. ದಯಮಾಡಿ ಈಗ yield ಆಗುವುದು ಬೇಡ. I am concluding. I have come to the last sentence. ಇನ್ನೊಂದೆರಡು ಬೇಡಿಕೆಗಳ ಬಗ್ಗೆ ನಾನು ಮಾತನಾಡಿ ಕುಳಿತುಕೊಳ್ಳುತ್ತೇನೆ. ಮಾನ್ಯ ಸಭಾಪತಿಯವರೇ, ಪ್ರವಾಹ ಪೀಡಿತ ಪ್ರದೇಶದ ರೈತರು ಏನು ಸಾಲ ಪಡೆದಿದ್ದಾರೋ, ಅದು ಕೃಷಿ ಸಾಲ ಇರಬಹುದು, ಬೆಳೆ ಸಾಲ ಇರಬಹುದು ಅಥವಾ ಹೆಣ್ಣು ಮಕ್ಕಳು ಏನು ಸ್ವಸಹಾಯ ಸಂಘದಿಂದ ಸಾಲ ಪಡೆದಿದ್ದಾರೋ, ಸಣ್ಣಪುಟ್ಟ ವ್ಯಾಪಾರಿಗಳು ಮತ್ತು ನೇಕಾರರು ಏನು ಸಾಲ ಪಡೆದುಕೊಂಡಿದ್ದಾರೋ ಅದನ್ನು ಸರ್ಕಾರ ಮನ್ನಾ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

(ಮುಂದು...)

(129)10-10-2019 5.00 ಡಿಎಸ್-ಎಂಡಿ
ಶ್ರೀ ಎಸ್.ಆರ್.ಪಾಟೀಲ್(ಮುಂದು)

ಏಕೆಂದರೆ ಅವರು ಸಾಲ ತೀರಿಸುವ ಪರಿಸ್ಥಿತಿಯಲ್ಲಿಲ್ಲ. They are in a very worst situation. They can't repay the loan. ಈಗ ಅವರ ಹತ್ತಿರ ಕೊಡುವುದಕ್ಕೆ ಏನು ಇಲ್ಲ, ಬೆಳೆಯೆಲ್ಲಾ ಮುಳುಗಿಬಿಟ್ಟಿದೆ. ಮನೆಯೂ ಮುಳುಗಿದೆ, ಹೊಲವೂ ಮುಳುಗಿದೆ. ಮನೆಯಲ್ಲಿ ಸಾಮಾನು ಕೂಡ ಉಳಿದಿಲ್ಲ. ಬೆಳೆಯೂ ಉಳಿದಿಲ್ಲ. ರೈತರ ಕೃಷಿ ಸಾಲ ಆಗಲಿ, ಸ್ವಸಹಾಯ ಸಂಘಗಳಿಂದ ತೆಗೆದುಕೊಂಡಂತಹ ಸಾಲ, ಸಣ್ಣಪುಟ್ಟ ವ್ಯಾಪಾರಿಗಳು, ನೇಕಾರ ಬಂಧುಗಳು, rural artisans ಎಂದು ಹೇಳುತ್ತಾರೆ. ನಾವು ಐಗಾರ್ ಎಂದು ಹೇಳುತ್ತೇವೆ. ಬಡಿಗಾರ್, ಕಂಬಾರ್, ಪತ್ತಾರ್, ನೇಕಾರರು, ಇವರೆಲ್ಲಾ ಐಗಾರ್, ಇವರು ಊರಿನ ಹೆಣ್ಣುಮಕ್ಕಳು ಇದ್ದಹಾಗೆ. ಇವತ್ತು ನಾವು ಒಂದು ಹಳ್ಳಿಗೆ ಹೋಗಿದ್ದೆವು. ನಮ್ಮ ರೈತರ ಜಮೀನು ಮುಳುಗಿದೆ,

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ನಮ್ಮದೇನು ಇದೆಯಪ್ಪಾ ಎಂದು ಅವರು ಹೇಳಿದರು. ರೈತರ ಜಮೀನು, ಮನೆಗಳು ಮುಳುಗಿ ಹೋಗಿವೆ, ನಮ್ಮನ್ನು ಯಾರು ಕೇಳುತ್ತಾರೆ ಎಂದು ಅವರು ಹೇಳಿದರು. ಅವರದ್ದೇನಾದರೂ ಸಣ್ಣಪುಟ್ಟ ಸಾಲಗಳು ಇದ್ದರೆ ಆ ಸಾಲವನ್ನು ಮನ್ನಾ ಮಾಡಿ. ಸಣ್ಣಪುಟ್ಟ ವ್ಯಾಪಾರಿಗಳ ಅಂಗಡಿಗಳು ನೀರಿನಲ್ಲಿ ಮುಳುಗಿವೆ, ಅಷ್ಟೇ ಅಲ್ಲದೆ ಮಠಗಳು ಕೂಡ ನೀರಿನಲ್ಲಿ ಮುಳುಗಿವೆ. ಯಾವ್ಯಾವ ಮಠಗಳು ಮುಳುಗಿವೆ ಎಂದು ತಮಗೆ ಗೊತ್ತಿದೆ. ಅದನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಸಣ್ಣಪುಟ್ಟ ವ್ಯಾಪಾರಸ್ಥರು, ಬಡವರು, ಕೃಷಿ ಕಾರ್ಮಿಕರು, ರೈತರು ಇವರೇನು ಸಾಲ ಪಡೆದಿದ್ದಾರೆ ಆ ಸಾಲ ಮನ್ನಾ ಮಾಡುವುದಕ್ಕೆ ಒಂದು ದಿಟ್ಟವಾದ ನಿರ್ಧಾರವನ್ನು ಕೈಗೊಳ್ಳಬೇಕೆನ್ನುವ ಮಾತನ್ನು ಈ ಸಂದರ್ಭದಲ್ಲಿ ತಮ್ಮ ಮೂಲಕ ವ್ಯಕ್ತ ಮಾಡುತ್ತಿದ್ದೇನೆ. SDRF (State Disaster Response Fund), NDRF (National Disaster Response Fund) ಇವೆಲ್ಲಾ ಓಬಿರಾಯನ ಕಾಲದಿಂದಲೂ ಇವೆ. ಓಬಿರಾಯನ ಕಾಲದ್ದನ್ನು ಸರ್ಕಾರದ ಮಟ್ಟದಲ್ಲಿ review ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳಬೇಕು. ಕೇಂದ್ರ ಸರ್ಕಾರಕ್ಕೂ ಪ್ರಪೋಸಲ್ ಕಳುಹಿಸಿ ಒತ್ತಾಯ ಮಾಡಿ. ಕೇಂದ್ರ ಸರ್ಕಾರದಲ್ಲಿ ಅವರದ್ದೇ ಸರ್ಕಾರ ಇದೆ. ಅವರು ಹೇಳಿದ್ದಕ್ಕೆ ಜೈ ಎಂದು ಹೇಳುತ್ತಾರೆ. ಈ ರಾಜ್ಯದ ಜನ ಬಹಳ ನಿರೀಕ್ಷೆ ಮಾಡಿದ್ದಾರೆ. 'ಈಗ ಬಹಳ ಚಲೋ ಆಯಿತು, ಇಲ್ಲಿಯೂ ಬಿಜೆಪಿ ಸರ್ಕಾರ ಬಂತು, ಕೇಂದ್ರದಲ್ಲೂ ಬಿಜೆಪಿ ಸರ್ಕಾರ ಇದೆ, ಇನ್ನು ನಮ್ಮ ಭಾಗ್ಯದ ಬಾಗಿಲು ತೆರೆಯುತ್ತದೆ' ಎಂದು ಹೇಳಿದರು. ಈಗ ಮುಳುಗಡೆ ಆಗಿಬಿಟ್ಟಿದೆ. ಅವರಿಗೆಲ್ಲಾ ಸರಿಯಾದ ಕೆಲಸ ಮಾಡಿ. ಅವರ ಭಾಗ್ಯದ ಬಾಗಿಲು ತೆರೆಯುತ್ತದೆಂದು ಅವರೇನು ಕನಸು ಕಂಡಿದ್ದಾರೆ ಆ ಕನಸು ನನಸಾಗುತ್ತದೆ ಎನ್ನುವ ಮಾತನ್ನು ಹೇಳುವುದಕ್ಕೆ ಬಯಸುತ್ತಿದ್ದೇನೆ. ಪ್ರಮುಖವಾಗಿ ಬೆಳೆಗಳ ಬಗ್ಗೆ, ಮನೆಗಳ ಬಗ್ಗೆ, ಸಾಲದ ಬಗ್ಗೆ ವಿಚಾರ ಮಾಡಬೇಕೆಂದು ನಾನು ಸರ್ಕಾರಕ್ಕೆ ಕೇಳಿಕೊಳ್ಳುತ್ತಿದ್ದೇನೆ. ಮೂರು ದಿನಗಳ ಅಧಿವೇಶನ ಇದೆಯಲ್ಲಾ, ಮೂರು ಎಂದರೆ ನಮ್ಮ ಕಡೆ 'ಮೂರಾಬಟ್ಟೆ' ಎಂದು ಹೇಳುತ್ತಾರೆ. ಈ ಮೂರು ದಿನ ಇರುವುದನ್ನು ಮೂವತ್ತು ದಿನ ಮಾಡಿ. ಮೂವತ್ತು ದಿನ ಆಗುವುದಿಲ್ಲ, ಮುಂದೆ ಚುನಾವಣೆ ಸಮೀಪ ಇದೆ ಎಂದರೆ, ಈಗಾಗಲೇ ಚುನಾವಣೆ ಫಲಿತಾಂಶ ಗೊತ್ತಾಗಿಬಿಟ್ಟಿದೆ, ಗುದ್ದಾಡುವುದಕ್ಕೆ ಹೋಗಬೇಡಿ, ಕೊನೆಪಕ್ಷ ಹದಿನೈದು ದಿವಸವಾದರೂ ಅಧಿವೇಶನ ನಡೆಸಿ. Already they know the result. ನಾನೇನು ಬೇರೆ ರೀತಿಯಲ್ಲಿ ಹೇಳಿಲ್ಲ. ಈಗಾಗಲೇ ಮಂಡಲಿಗಳಿಗೆ ಅಧ್ಯಕ್ಷರುಗಳನ್ನು ನೇಮಕ ಮಾಡಿದ್ದಾರೆ. ಇಂಥದ್ದರಲ್ಲಿ ಅವರು ಮುಂದುವರೆದಿದ್ದಾರೆ. ಪಾಪ, ಅವರು ಪಕ್ಷದ ಶಾಸಕರಾಗಿದ್ದರು, ಅವರನ್ನು ಬಾಂಬೆಗೆ ಕರೆದುಕೊಂಡು ಹೋಗಿ ಹೋಟೆಲ್‌ನಲ್ಲಿ ಇಟ್ಟಿರಿ, ಅವರ ಸುತ್ತಲು ಮೂರು ಮಂದಿ ಬಾಕ್ಸರ್‌ಗಳನ್ನು ಇಟ್ಟು, ಪೊಲೀಸ್ ಇಟ್ಟು, ಏನೇನೋ ಮಾಡಿ ಅವರ ಪರಿಸ್ಥಿತಿಯನ್ನು ಎಲ್ಲಿಗೆ ತಂದಿಟ್ಟಿದ್ದೀರಿ? ಈಗ ಅವರು ಕಣ್ಣೀರಲ್ಲಿ ಕೈ ತೊಳೆಯುವ ಹಾಗೆ ಮಾಡಿದ್ದೀರಿ. ತಾವು ನನಗೆ ಬಹಳಷ್ಟು ಸಮಯವನ್ನು ಒದಗಿಸಿದ್ದೀರಿ. ನನಗೆ ತಿಳಿದ ಮಟ್ಟಿಗೆ ಆ ಭಾಗದಿಂದ ಬಂದವನಾಗಿರುವುದರಿಂದ, ಅವರ ಮಧ್ಯದಲ್ಲಿ ನಾನು ಹಾಸುಹೊಕ್ಕಾಗಿ ಬೆಳೆದವನು. ಅವರ ಕಷ್ಟ,

ನೋವು, ದುಃಖ, ದುಮ್ಮಾನವನ್ನು ಕಣ್ಣಾರೆ ನೋಡಿದ್ದೇನೆ. ನಾನು ಪ್ರತಿನಿತ್ಯ ಪ್ರತಿ ಗ್ರಾಮಕ್ಕೂ ಹೋಗಿ ಪ್ರತಿ ಸಂತ್ರಸ್ತರನ್ನು ಭೇಟಿಯಾಗಿ ಅರಿತುಕೊಂಡಿರುವುದರಿಂದ ನನಗನಿಸಿರುವ ಅತ್ಯಂತ ಪ್ರಮುಖವಾದಂತಹ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದೇನೆ ಮತ್ತು most genuine ವಿಚಾರಗಳನ್ನು ಹೇಳಿದ್ದೇನೆ. ಇದರಲ್ಲೇನು ಅತಿಶಯೋಕ್ತಿಯಾಗಲಾರದು. ಗ್ರಾಮಗಳನ್ನು ಸ್ಥಳಾಂತರ ಮಾಡುವುದಾಗಲಿ, cost to cost payment ಮಾಡುವುದಾಗಲಿ, ಮನೆಗಳನ್ನು ಕಟ್ಟಿಕೊಡುವ ವಿಚಾರಲ್ಲಾಗಲಿ, ಮನೆಗಳನ್ನು ಕಟ್ಟಿಕೊಡುವುದಕ್ಕಿಂತ ಪೂರ್ವದಲ್ಲಿ ಅವರಿಗೆ ಶೆಡ್‌ಗಳನ್ನು ನಿರ್ಮಿಸುವಂತಹ ವಿಚಾರದಲ್ಲಾಗಲಿ ದಯಮಾಡಿ ಸರ್ಕಾರ ತಕ್ಷಣ ಸ್ಪಂದನೆ ಮಾಡಬೇಕೆಂದು ಈ ಸಂದರ್ಭದಲ್ಲಿ ವ್ಯಕ್ತ ಮಾಡಿ ನನ್ನ ಮಾತುಗಳನ್ನು ಮುಗಿಸುತ್ತೇನೆ, ನಮಸ್ಕಾರ.

**ಶ್ರೀ ಎಂ.ಕೆ.ಪ್ರಾಣೇಶ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ಮಾನ್ಯ ವಿರೋಧ ಪಕ್ಷದ ನಾಯಕರು ಸುದೀರ್ಘವಾಗಿ ಮಾತನಾಡಿದ್ದಾರೆ. ಅವರ ಕಾಳಜಿಗೆ ನಾನು ಅಭಿನಂದಿಸುತ್ತೇನೆ. ಆದರೆ, ವಿರೋಧ ಪಕ್ಷದ ನಾಯಕರು ಕೇವಲ ಉತ್ತರ ಕರ್ನಾಟಕಕ್ಕೆ ಮಾತ್ರ ಸೀಮಿತವಾಗಿಬಿಟ್ಟರು ಎಂಬುದು ನನಗೆ ನೋವಾಗಿದೆ. ಏಕೆಂದರೆ, ಅವರು ಇಡೀ ರಾಜ್ಯದ ಬಗ್ಗೆ ಮಾತನಾಡಬೇಕಾಗಿತ್ತು.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ದಯಮಾಡಿ ನಾನು ಒಂದು ನಿಮಿಷ ಮಾತನಾಡುತ್ತೇನೆ. It should not go wrong. I am representing the entire state. ನಾನು ಬೆಳಿಗ್ಗೆಯೇ ಈ ರಾಜ್ಯದಲ್ಲಿ 22 ಜಿಲ್ಲೆಗಳು, 103 ತಾಲ್ಲೂಕುಗಳು ಇವೆ ಎಂದು ಓದಿ ಹೇಳಿದ್ದೇನೆ. ಬೆಳಗಾವಿ, ಬಾಗಲಕೋಟೆ, ಚಿಕ್ಕಮಗಳೂರು, ಉತ್ತರ ಕನ್ನಡ, ಉಡುಪಿ, ಧಾರವಾಡ, ಕೊಡಗು, ಮೈಸೂರು, ಹಾವೇರಿ, ಹಾಸನ, ಶಿವಮೊಗ್ಗ, ಕೊಪ್ಪಳ, ಗದಗ, ಬಳ್ಳಾರಿ, ವಿಜಯಪುರ, ರಾಯಚೂರು, ದಾವಣಗೆರೆ, ಕಲ್ಬುರ್ಗಿ, ಮಂಡ್ಯ, ದಕ್ಷಿಣ ಕನ್ನಡ, ಚಾಮರಾಜನಗರ, ಯಾದಗಿರಿ. ಇವುಗಳು ಕಡತದಲ್ಲಿ ಇಲ್ಲವೆಂದರೆ ಹೇಳಿ, ನಾನು ಇಲ್ಲಿಂದ ನಿರ್ಗಮಿಸಿಬಿಡುತ್ತೇನೆ. ನಾನು ಈ ಎಲ್ಲಾ ಜಿಲ್ಲೆಗಳನ್ನು ತೆಗೆದುಕೊಂಡೇ ಮಾತನಾಡಿದ್ದೇನೆ. ಆದರೆ ಹೆಚ್ಚು damage ಆಗಿರುವುದು ಆ ಭಾಗ. 13 ಜಿಲ್ಲೆಗಳಲ್ಲಿ 12 ಜಿಲ್ಲೆಗಳು ಮುಳುಗಿವೆ. ಈ ಕಡೆ 15 ಜಿಲ್ಲೆಗಳಲ್ಲಿ 10 ಜಿಲ್ಲೆಗಳು ಮುಳುಗಿವೆ. ಅದನ್ನು ಕೂಡ ನಾನು ಹೇಳಿದ್ದೇನೆ. ನಾನು ಅಖಂಡ ಕರ್ನಾಟಕದ ಕನಸು ಕಾಣುವವನು. ನಮ್ಮ ಪೂರ್ವಜರು ಏನು ಅಖಂಡ ಕರ್ನಾಟಕವನ್ನು ನಿರ್ಮಾಣ ಮಾಡಿದ್ದಾರಲ್ಲಾ ಆ ಕನಸು ಕಾಣುವವನು ನಾನು. ನಾನು ವಿಭಜನೆ ಮಾಡುವ ಕನಸು ಕಾಣುವುದಿಲ್ಲ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಂ.ಕೆ.ಪ್ರಾಣೇಶ್:–** ಮಾನ್ಯ ಸಭಾಪತಿಯವರೇ, ಭೀಕರವಾದಂತಹ ಅತಿವೃಷ್ಟಿಯಲ್ಲಿ ನಾವು ಸಿಕ್ಕಿಹಾಕಿಕೊಂಡಿದ್ದೇವೆ. ಏಕೆಂದರೆ, ನಾನು ಕೂಡ ಅತಿವೃಷ್ಟಿ ಪ್ರದೇಶದಿಂದ ಬಂದಿರುವಂಥವನು. ಬಹುಶಃ ಮಲೆನಾಡು ಭಾಗದಲ್ಲಿ ಇವತ್ತು ತುಂಬಾ ಜನರು ಮನೆಗಳು ಇಲ್ಲದೆ, ಆಸ್ತಿ ನಷ್ಟವಾಗಿ ಬೀದಿಯಲ್ಲಿ ಬೀಳುವಂತಹ ಪರಿಸ್ಥಿತಿಗಳು ನಿರ್ಮಾಣವಾಗಿತ್ತು. ಇಂತಹ ಸಂದರ್ಭದಲ್ಲಿ ಸರ್ಕಾರ ಕೂಡಲೇ ಸ್ಪಂದಿಸಿ ಅವರ ಕಷ್ಟಕ್ಕೆ ನೆರವಾಗುವ ರೀತಿಯಲ್ಲಿ ನಡೆದುಕೊಂಡಿರುವುದಕ್ಕೆ ನಾನು ಪ್ರಥಮವಾಗಿ ಸರ್ಕಾರಕ್ಕೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಇದರಲ್ಲಿ ಗುಣಕ್ಕೆ ಮತ್ಸರ ಇರಬಾರದೆನ್ನುವ ಮಾತನ್ನು ಹೇಳುತ್ತಾರೆ. ಏಕೆಂದರೆ, ನಾವು ಒಂದು ಪಕ್ಷದಲ್ಲಿ ಇದ್ದೇವೆ, ಪಕ್ಷವನ್ನು ಸಮರ್ಥಿಸಿಕೊಳ್ಳುವಂತಹ ಪ್ರಶ್ನೆಯಲ್ಲ. ಕಷ್ಟ ಕಾಲದಲ್ಲಿ ಯಾರು ಸ್ಪಂದನೆಯನ್ನು ಮಾಡಿದ್ದಾರೆ ಅವರನ್ನು ಅಭಿನಂದಿಸುವುದು ಮನುಷ್ಯನ ಒಂದು ಗುಣವಾಗಿರಬೇಕೆಂದು ನಾನು ತಿಳಿದುಕೊಂಡಿದ್ದೇನೆ. ಉದಾಹರಣೆಗೆ ಅಲ್ಲಿ ನಡೆದಿರುವಂಥದ್ದು. ಏಕೆಂದರೆ, ಹೇಳಿ ಕೇಳಿ ಬರುವಂತಹ ಅತಿವೃಷ್ಟಿಯಲ್ಲ. ನಮಗೆ ಯಾರಿಗೂ ಗೊತ್ತಿಲ್ಲದಿರುವಂತಹ ಸಂದರ್ಭದಲ್ಲಿ ಒಂದೇ ದಿವಸದೊಳಗೆ ಅತೀಯಾದ ಮಳೆ ಬಂದಿರುವಂಥದ್ದು. ಸಾಮಾನ್ಯವಾಗಿ ಒಂದು ವರ್ಷದೊಳಗೆ 70–80–90 ಇಂಚು ಮಳೆ ಬರುವ ಪ್ರದೇಶದಲ್ಲಿ ಕೇವಲ ಐದು ದಿನಗಳಲ್ಲಿ 75 ಇಂಚು ಮಳೆ ಬಂದಿರುವುದು ಒಂದು ಇತಿಹಾಸ. ಇಂತಹ ಸಂದರ್ಭಗಳಲ್ಲಿ ಸರ್ಕಾರ ಸ್ಪಂದನೆ ಮಾಡದಿದ್ದರೆ ಸಾಕಷ್ಟು ಸಾವು–ನೋವುಗಳಾಗುತ್ತಿತ್ತು. ಕೂಡಲೇ ಸರ್ಕಾರ ಸ್ಪಂದಿಸಿದ ರೀತಿಯಿಂದ ಸಾವು–ನೋವುಗಳನ್ನು ತಡೆಯುವ ಹಂತದಲ್ಲಿ ಸರ್ಕಾರ ಯಶಸ್ವಿಯಾಯಿತು ಎಂದು ಹೇಳಿದರೆ ತಪ್ಪಾಗಲಾರದು. ಕೂಡಲೇ NDRF ನವರು, ಆರ್ಮಿಯವರು ಬಂದು ಜನರ ಜೀವವನ್ನು ಉಳಿಸಿರುವಂಥದ್ದು, ಇವೆಲ್ಲವೂ ಕೂಡ ಸರ್ಕಾರ ಆ ಕಡೆ ಹೆಚ್ಚಿನ ಆಸಕ್ತಿ ವಹಿಸಿರುವುದರಿಂದ ಆಗಿದೆ ಎಂದು ನಾನು ಭಾವಿಸಿದ್ದೇನೆ. ಈಗ ನಾನು ನನ್ನ ಜಿಲ್ಲೆಗೆ ಸೀಮಿತವಾಗಿ ನಾನು ಮಾತನಾಡುತ್ತೇನೆ. ಏಕೆಂದರೆ, ನನಗೆ ನನ್ನ ಜಿಲ್ಲೆಯ ಬಗ್ಗೆ ಸಂಪೂರ್ಣವಾದ ಮಾಹಿತಿ ಇದೆ. ಹಾಗಾಗಿ ನಾನು ನನ್ನ ಜಿಲ್ಲೆಯ ಬಗ್ಗೆ ಮಾತನಾಡುತ್ತೇನೆ. ಕೂಡಲೇ ಸರ್ಕಾರ 24 ಗಂಜಿ ಕೇಂದ್ರಗಳನ್ನು ತೆರೆಯಿತು. ತದನಂತರ ಎಲ್ಲಿ ಜನರು ಹಳ್ಳಿ, ಗುಡ್ಡಗಾಡು ಪ್ರದೇಶದಲ್ಲಿದ್ದಾರೆ, ನಮ್ಮದು ಪಶ್ಚಿಮಘಟ್ಟ ಪ್ರದೇಶವಾಗಿದೆ. ಅದರಿಂದ ಜನರನ್ನು ಹೊರ ತರುವಂಥದ್ದು ಸಣ್ಣ ವಿಚಾರವೇನಲ್ಲ. ಅಲ್ಲಿಗೆ ಯಾವ ವಾಹನಗಳು ಹೋಗುವ ಪರಿಸ್ಥಿತಿಗಳಿರಲಿಲ್ಲ. ಅಲ್ಲಿಗೆ ಜನರೇ ಹೋಗಿ ಅವರನ್ನು ಸ್ಥಳಾಂತರ ಮಾಡುವಂತಹ ಕೆಲಸಗಳನ್ನು ಮಾಡಿದ್ದಾರೆ. ಸರ್ಕಾರದ ನಿರ್ದೇಶನದಂತೆ ಅಧಿಕಾರಿಗಳು ಕೂಡ ಉತ್ತಮವಾದ ಸ್ಪಂದನೆಯನ್ನು ಮಾಡಿದರು. ಜನರಿಗೆ ಶಾಶ್ವತವಾದ ಪರಿಹಾರವನ್ನು ಕೂಡಲೇ ಕೊಡುವುದಕ್ಕೆ ಆಗುವುದಿಲ್ಲ. ಆದರೆ ತಾತ್ಕಾಲಿಕವಾದ ಪರಿಹಾರವನ್ನು ಕೊಡುವ ನಿಟ್ಟಿನಲ್ಲಿ ಎಲ್ಲವನ್ನು ಮಾಡಿರುವಂಥದ್ದು ಇತಿಹಾಸವಾಗಿದೆ ಎಂದು ನಾನು ಭಾವಿಸಿದ್ದೇನೆ. ಅಲ್ಲಿಗೆ ಕೂಡಲೇ ಮುಖ್ಯಮಂತ್ರಿಗಳು, ಕಂದಾಯ ಸಚಿವರು, ಕಾನೂನು ಸಚಿವರು ಬಂದರು. ಅಲ್ಲಿನ ಸ್ಥಳೀಯ ಉಸ್ತುವಾರಿ ಸಚಿವರು ಕೂಡ ಬಂದರು. ಅವರುಗಳು ಕೇವಲ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಗರಗಳಿಗೆ ಬರಲಿಲ್ಲ. ಎಲ್ಲೆಲ್ಲಿ ಸಮಸ್ಯೆಗಳಾಗಿವೆ ಅಲ್ಲಿ ವಾಹನಗಳು ಹೋಗದಿರುವಂತಹ ಪರಿಸ್ಥಿತಿಯಲ್ಲಿ ಅವರು ನಡೆದುಕೊಂಡು ಆ ಭಾಗಗಳಿಗೆ ಹೋಗುವಂತಹ ಕೆಲಸಗಳಾಯಿತು. ಕಂದಾಯ ಸಚಿವರು ಅಲ್ಲಿಗೆ ಬಂದಂತಹ ಸಂದರ್ಭದಲ್ಲಿ ಅಲ್ಲಿಯ ಮಾಹಿತಿಗಳನ್ನು ಸಂಗ್ರಹ ಮಾಡುವುದಕ್ಕೆ, ಯಾವುದೋ ಪತ್ರಿಕೆಗಳಿಗೆ ಅಥವಾ ಟಿ.ವಿ.ಗಳಿಗೆ ಫೋಸ್ ಕೊಡುವುದಕ್ಕೆ ಅವರು ಬರಲಿಲ್ಲ.  ಅವರು ಕಾಳಜಿ ಕೇಂದ್ರಕ್ಕೆ ಬಂದರು, ಅವರು ಬರುವಾಗ ನಾನು ಊಟಕ್ಕೆ ಬರುತ್ತೇನೆ ಎಂದು ಹೇಳಲಿಲ್ಲ, ಊಟ ಮಾಡುವುದಕ್ಕಿಂತ ಮೊದಲು ಯಾವ ರೀತಿ ಊಟವನ್ನು ಮಾಡಿದ್ದಾರೆ ಎಂದು ನೋಡಿದರು. ಕಾಳಜಿ ಕೇಂದ್ರದಲ್ಲಿ ಇದ್ದಂಥವರನ್ನು ಅವರು ಪ್ರಶ್ನೆ ಮಾಡಿದರು.

(ಮುಂದು)

130/10-10-2019/5-10/bkp-ak

**ಶ್ರೀ ಎಂ.ಕೆ. ಪ್ರಾಣೇಶ್(ಮುಂದು...)**

ಮಾನ್ಯ ಕಂದಾಯ ಸಚಿವರು ಕಾಳಜಿ ಕೇಂದ್ರಕ್ಕೆ ಬಂದಂತಹ ಸಂದರ್ಭದಲ್ಲಿ ಅಲ್ಲಿ ಇದ್ದಂತಹವರನ್ನು ದಿನನಿತ್ಯ ಇದೇ ರೀತಿಯ ಊಟ ಸಿಗುತ್ತಿದೆಯೇ ಅಥವಾ ನಾನು ಇಲ್ಲಿಗೆ ಬಂದಿದ್ದೇನೆಂದು ಈ ರೀತಿಯಲ್ಲಿ ಅಡುಗೆ ಮಾಡಿದ್ದಾರೆಯೋ ಎಂದು ಪ್ರಶ್ನೆ ಮಾಡಿದರು.  ಆಗ ಅವರು ಪ್ರತಿ ದಿವಸವೂ ಸಹ ಇದೇ ರೀತಿಯಲ್ಲಿ ಊಟವನ್ನು ಕೊಡುತ್ತಿದ್ದಾರೆಂದು ಹೇಳಿದರು. ಅಲ್ಲಿ ಇದ್ದಂತಹ ಪ್ರತಿಯೊಬ್ಬರನ್ನೂ ಸಹ ಒಬ್ಬರಾದ ಮೇಲೆ ಒಬ್ಬರನ್ನು ಕರೆದು ಈ ಬಗ್ಗೆ ವಿಚಾರಿಸಲಾಯಿತು. ಆದರೆ, ಒಬ್ಬರೂ ಸಹ ಸರ್ಕಾರವನ್ನು ಎಲ್ಲಿಯೂ ನಿಂದನೆ ಮಾಡಲಿಲ್ಲ. ನಾನು ಈ ಬಗ್ಗೆ ಸುಳ್ಳು ಹೇಳುತ್ತಿಲ್ಲ ಮತ್ತು ಸರ್ಕಾರವನ್ನು ಹೊಗಳುತ್ತಿಲ್ಲ. ವಾಸ್ತವಿಕವಾಗಿ ಆದಂತಹ ವಿಚಾರಗಳನ್ನು ನಾವು ಇಲ್ಲಿ ಮಾತನಾಡಬೇಕಾಗುತ್ತದೆ. ತದನಂತರ ಗುಡ್ಡಗಾಡುಗಳ ಎಲ್ಲಾ ಪ್ರದೇಶಗಳಿಗೆ ಅಂದರೆ ಒಂದು ಭಾಗದಿಂದ ಮತ್ತೊಂದು ಭಾಗಕ್ಕೆ ಹೋಗಬೇಕಾದರೆ ಖಂಡಿತವಾಗಿಯೂ ರಾತ್ರಿ ಏಳು–ಏಳೂವರೆ ಗಂಟೆಯಾಯಿತು. ಅಂದರೆ, ಅದು ನಗರ ಪ್ರದೇಶವಲ್ಲ. ನಮ್ಮ ಇಡೀ ಮೂಡಿಗೆರೆ ಭಾಗದಲ್ಲಿ ಸಂಪೂರ್ಣವಾಗಿ ಎಲ್ಲರೂ ಹೆಚ್ಚಿನ ಭಾಗ ಆಸ್ತಿಯನ್ನು ಕಳೆದುಕೊಂಡಿದ್ದಾರೆ. ಅದರಲ್ಲೂ ಅಲ್ಲಿನ ಜನರು ತಮ್ಮ ತಮ್ಮ ಮಾನವೀಯತೆಯನ್ನು ತೋರಿಸಿದ್ದಾರೆ. ತಮ್ಮ ಆಸ್ತಿ ಹೋಗಿದ್ದರೂ ಸಹ ಪರವಾಗಿಲ್ಲ, ಯಾರೋ ಪಾಪದವರ ಮನೆ ಬಿದ್ದು ಹೋಗಿದ್ದು, ಅವರು ಬದುಕಲಿಕ್ಕೆ ಅಸಾಧ್ಯವಾಗಿದೆ, ಅಂತಹವರಿಗೆ ಪ್ರಥಮವಾಗಿ ನೀವುಗಳು ಸಹಕಾರ ಮಾಡಿ ಎಂದು ಹೇಳಿ ತಮ್ಮ ಮಾನವೀಯತೆಯನ್ನು ತೋರಿಸಿದ್ದಾರೆ. ಆ ವಿಚಾರವನ್ನು ನಾವು ಇಲ್ಲಿ ನೆನಪು ಮಾಡಿಕೊಳ್ಳಬೇಕಾಗಿದೆ. ಈಗ ಬಂದಿರುವಂತಹ 10 ಸಾವಿರ ರೂಪಾಯಿಗಳನ್ನು ಕೊಟ್ಟಿರುವಂತಹದ್ದು.  ಅವರಿಗೆ ಬಾಡಿಗೆ ಮನೆಯನ್ನು ಮಾಡಲಿಕ್ಕೆ 5 ಸಾವಿರ ರೂಪಾಯಿಗಳ ಮನೆ ಬಾಡಿಗೆ ವ್ಯವಸ್ಥೆಯನ್ನು ಮಾಡಿರುವಂತಹದ್ದು. ಹಾಗೆಯೇ 5 ಲಕ್ಷ ರೂಪಾಯಿಗಳನ್ನು ಕೊಡುವುದಾಗಿ ಘೋಷಣೆ ಮಾಡಲಾಗಿದೆ.  25 ನೆರವು ಕೇಂದ್ರಗಳನ್ನು

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ತೆರೆದಂತಹ ಸಂದರ್ಭದಲ್ಲಿ ಪ್ರತಿಯೊಬ್ಬರಿಗೂ ಸಹ 4 ದಿವಸಗಳಲ್ಲಿಯೇ 10 ಸಾವಿರ ರೂಪಾಯಿಗಳ ಆರ್ಥಿಕ ನೆರವನ್ನು ಕೂಡಲೇ ವಿತರಣೆ ಮಾಡಲಾಯಿತು. ಅಂತಹ ವ್ಯವಸ್ಥೆಗಳು ಅಲ್ಲಿ ಆಗಿದೆ. ಅಲ್ಲಿ ವಿರೋಧ ಪಕ್ಷದವರು, ಆಡಳಿತ ಪಕ್ಷದವರು ಎಲ್ಲರೂ ಇದ್ದಾರೆ. ಆ ಸಂದರ್ಭದಲ್ಲಿ ಎಲ್ಲರೂ ಕೂಡಿಕೊಂಡು ಕೆಲಸ ಮಾಡಿದ್ದೇವೆ. ವಿರೋಧ ಪಕ್ಷದವರು ಈ ವಿಚಾರದಲ್ಲಿ ಕೆಲಸ ಮಾಡಲಿಲ್ಲ, ನಾವೇ ಮಾಡಿದೆವು ಎಂದು ನಾನು ಹೇಳಲಿಕ್ಕೆ ಹೋಗುವುದಿಲ್ಲ. ಏಕೆಂದರೆ, ಎಲ್ಲರೂ ಸೇರಿಕೊಂಡು ಕೆಲಸ ಮಾಡಿದ್ದೇವೆ. ವಿರೋಧಕ್ಕಾಗಿ ವಿರೋಧ ಮಾಡಿಕೊಂಡು ಹೋಗುವುದು ಒಳ್ಳೆಯದಲ್ಲ ಎನ್ನುವುದು ನನ್ನ ಅಭಿಪ್ರಾಯ. ಬಹುಶಃ ಅಲ್ಲಿ ಹೋಗಿ ನೋಡಿದರೆ ಪರಿಸ್ಥಿತಿ ಯಾವ ರೀತಿ ಇದೆ ಎಂದು ಗೊತ್ತಾಗುತ್ತದೆ. ಅಲ್ಲಿ ಚಿಂತಾಜನಕ ವ್ಯವಸ್ಥೆಯಲ್ಲಿ ಜನರು ಇದ್ದಾರೆ ಎನ್ನುವ ವಿಚಾರವನ್ನು ಖಂಡಿತವಾಗಿ ಹೇಳಲಿಕ್ಕೆ ಬಯಸುತ್ತೇನೆ. ಯಾವುದೇ ಸರ್ಕಾರ ಇರಬಹುದು. ಇಂದು ನಮ್ಮ ಭಾರತೀಯ ಜನತಾ ಪಕ್ಷದ ನೇತೃತ್ವದ ಸರ್ಕಾರ ಇರಬಹುದು. ನಿಮ್ಮ ಸರ್ಕಾರ ಇದ್ದರೂ ಕೂಡ ಅಲ್ಲಿ ಮಾಡಲಿಕ್ಕೆ ಆಗದಂತಹ ಪರಿಸ್ಥಿತಿಗಳು ಇವೆ. ಆದರೆ, ಪ್ರತಿಯೊಬ್ಬರು ಸಹ ನನ್ನ ಮನೆಯ ಕೆಲಸ ಎನ್ನುವ ಭಾವನೆಗಳಿಂದ ವಿವಿಧ ಸಂಘಟನೆಗಳು ಕೈಜೋಡಿಸಿವೆ. ಸರ್ಕಾರ ಬಹಳ ಪ್ರಮಾಣಿಕವಾಗಿ ಕೆಲಸ ಮಾಡಿದೆ. ಅಲ್ಲಿನ ಜಿಲ್ಲಾಧಿಕಾರಿಗಳು ಒಂದು ದಿವಸವೂ ಸಹ ಸರಿಯಾಗಿ ನಿದ್ದೆ ಮಾಡದೇ ರಾತ್ರಿ 12–00 ಗಂಟೆ, 1–00 ಗಂಟೆ ಆದರೂ ಸಹ ಅಲ್ಲಿನ ಜನರಿಗೆ ನೆರವು ಕೊಡುವಂತಹ ವ್ಯವಸ್ಥೆಗಳನ್ನು ಮಾಡಿದ್ದಾರೆ. ಈಗ ಕೊಟ್ಟಿರುವಂತಹ ಪರಿಹಾರ ಸಾಕಾಗುವುದಿಲ್ಲವೆಂದು ಎಲ್ಲರಿಗೂ ಗೊತ್ತಿದೆ. ಯಾವ ವಿಚಾರಗಳಲ್ಲೂ, ಯಾವ ಮನುಷ್ಯನನ್ನು ತೃಪ್ತಿ ಮಾಡಲಿಕ್ಕೆ ಈ ಸಮಾಜದೊಳಗೆ ಸಾಧ್ಯವಿಲ್ಲ. ಆದರೆ, ನಿಮಗೆ ಈ ವಿಚಾರದಲ್ಲಿ ಅನುಮಾನಗಳಿದ್ದಲ್ಲಿ ನಿಜವಾಗಿಯೂ ಸಹ ನಿರಾಶ್ರಿತರು ಎಂದು ನಾವು ಏನು ಗುರುತು ಮಾಡಿದ್ದೇವೆ, ಅವರನ್ನು ನೀವು ಅಂದರೆ, ಯಾರು ಬೇಕಾದರೂ ಅಲ್ಲಿ ಹೋಗಿ ಅಲ್ಲಿ ಮಾತನಾಡಿಸಿ ಕೇಳಬಹುದು. ಏಕೆಂದರೆ, ಇಲ್ಲಿ ಕುಳಿತಂತಹ ಸಂದರ್ಭದಲ್ಲಿ ಮಂತ್ರಿಗಳು ಸರಿಯಾಗಿ ಸ್ಪಂದನೆ ಮಾಡಲಿಲ್ಲ, ಹೀಗಾಗಿ, ಅಲ್ಲಿ ಪರಿಸ್ಥಿತಿ ಬಹಳ ದುಸ್ಥಿತಿಯಲ್ಲಿದೆ ಎಂದು ಹೇಳಿ ಇಲ್ಲಿ ಕುಳಿತುಕೊಂಡು ಮಾತನಾಡುತ್ತೇವೆ. ದಯವಿಟ್ಟು ಅಲ್ಲಿಗೆ ಬಂದು ನೋಡಿಕೊಂಡು ಬರಲು ತಮಗೆಲ್ಲಾ ಆಹ್ವಾನವನ್ನು ಕೊಡುತ್ತೇನೆ. ನೀವುಗಳು ಅಲ್ಲಿಗೆ ಬರಬೇಕು. ಸರ್ಕಾರ ಈ ವಿಚಾರದಲ್ಲಿ ಸ್ಪಂದಿಸಿರುವ ವಿಚಾರವನ್ನು ನೋಡಬೇಕು. ನೋಡಿದ ಮೇಲೆ ಇಲ್ಲಿ ಚರ್ಚೆ ಮಾಡಬೇಕು. ಅಲ್ಲಿ ತಪ್ಪಾಗಿದ್ದರೆ, 'ಇಲ್ಲಾ' ಈ ರೀತಿ ಮಾಡಬಹುದಿತ್ತು ಎಂದು ಹೇಳುವಂತಹ ಕೆಲಸ ಮಾಡಿದರೆ ಸೂಕ್ತ ಎನ್ನುವುದು ನನ್ನ ಅಭಿಪ್ರಾಯ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನನ್ನ ಸನ್ಮಿತ್ರರಾದಂತಹ ಶ್ರೀ ಎಂ.ಕೆ. ಪ್ರಾಣೇಶ್‌ರವರು ಬಹಳ ಚೆನ್ನಾಗಿ ಮಾತನಾಡುತ್ತಿದ್ದಾರೆ. ಅವರು ಒಂದು ಮುಖವನ್ನು ಮಾತ್ರ ಇಲ್ಲಿ ಪರಿಚಯ ಮಾಡುತ್ತಿದ್ದಾರೆ. ನಮ್ಮ ಸಚಿವರು ಒಂದು ಬೆಟ್ಟು ಮಾಡಿ ತೋರಿಸಿದರು. ಬಹುಶಃ ಚಿಕ್ಕಮಗಳೂರು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಕಳಸ ಭಾಗದ ವಿಚಾರವನ್ನು ಇಲ್ಲಿ ಹೇಳಲಿಲ್ಲ. ಈ ರಾಜ್ಯದಲ್ಲಿ ನೆರೆ ಹಾವಳಿಯಿಂದ ಎಲ್ಲಿಯಾದರೂ ಆತ್ಮಹತ್ಯೆ ಪ್ರಕರಣ ಆಗಿದೆ ಎಂದರೆ ಕಳಸ ಭಾಗದಲ್ಲಿ ಮಾತ್ರ ಆಗಿದೆ. ಇಲ್ಲಿ ಇಬ್ಬರು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ; ಒಬ್ಬರು ಚಂದ್ರೇಗೌಡ ಮತ್ತೊಬ್ಬರು ಬಚ್ಚೇಗೌಡ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಏಕೆಂದರೆ, ಅವರು ನಂಬಿದಂತಹ ಭೂಮಿ, ಆ ವ್ಯವಸಾಯದ ಜಮೀನು ಮತ್ತೆ ವ್ಯವಸಾಯ ಮಾಡಲಿಕ್ಕೆ ಬರಲಾರದಂತಹ ಮಟ್ಟವನ್ನು ಮುಟ್ಟಿಬಿಟ್ಟಿದೆ. ಈ ಜಮೀನು ಹೋದ ಮೇಲೆ ನನ್ನ ಬದುಕು ಏತಕ್ಕೆ ಎಂದು ಹೇಳಿ ಗನ್ ಮೂಲಕ ಶೂಟ್ ಮಾಡಿಕೊಂಡು ಅವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಆ ವಿಚಾರವನ್ನು ಇಲ್ಲಿ ಏತಕ್ಕೆ ಮಾನ್ಯ ಸದಸ್ಯರು ಪ್ರಸ್ತಾಪ ಮಾಡುತ್ತಿಲ್ಲ. ಮಾನ್ಯ ಸದಸ್ಯರು ಅಲ್ಲಿ ತೃಪ್ತಿಯಾಗಿ ಕೆಲಸ ಮಾಡಲಾಗಿದೆ ಎಂದು ಹೇಳಿದರು.

(ಗೊಂದಲ)

**ಶ್ರೀ ಎಂ.ಕೆ.ಪ್ರಾಣೇಶ್:–** ಮಾನ್ಯ ಸಭಾಪತಿಯವರೇ, ನಾನು ಇನ್ನೂ ಪೂರ್ಣವಾಗಿ ಮಾತನಾಡಿಲ್ಲ. ನನಗೆ ತಾವು ಮಾತನಾಡಲಿಕ್ಕೆ ಅವಕಾಶವನ್ನು ಕೊಟ್ಟಿದ್ದೀರಿ.

(ಗೊಂದಲ)

**ವೈಸ್ ಚೇರ್ಮನ್:–** ಮಾನ್ಯ ಸದಸ್ಯರಾದ ಶ್ರೀ ಎಂ.ಕೆ. ಪ್ರಾಣೇಶ್‌ರವರು yield ಆಗುವುದು ಬೇಡ. ನೀವು ನಿಮ್ಮ ಭಾಷಣವನ್ನು ಮುಂದುವರಿಸಿ. ಶ್ರೀಯುತ ಶ್ರೀಕಂಠೇಗೌಡರವರು ಅವರಿಗೆ ಸಮಯ ಕೊಟ್ಟಾಗ ಮಾತನಾಡಬಹುದು.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಖಂಡಿತವಾಗಿಯೂ ಮಾತನಾಡುತ್ತೇನೆ.

**ಶ್ರೀ ಎಂ.ಕೆ.ಪ್ರಾಣೇಶ್:–** ಮಾನ್ಯ ಸಭಾಪತಿಯವರೇ, ನಾನು ಹಂತ–ಹಂತವಾಗಿ ಮಾತನಾಡುತ್ತಾ ಬರುತ್ತಿದ್ದೇನೆ. ಅಲ್ಲಿಯ ವಿಚಾರಕ್ಕೂ ಬರುತ್ತೇನೆ. ಏಕೆಂದರೆ, ಅದು ನನ್ನ ಭಾಗ. ಆ ಜಿಲ್ಲೆಯ ಸ್ಥಳೀಯ ಸಂಸ್ಥೆಯಿಂದ ಆಯ್ಕೆಯಾಗಿ ಬಂದಿದ್ದರೂ ಸಹ ನಾನು ವಾಸ ಮಾಡುವಂತಹ ಜಾಗ ಮೂಡಿಗೆರೆ ನನ್ನ ತಾಲ್ಲೂಕು. ಹೆಚ್ಚು ಕಡಿಮೆ ಈ ಪ್ರದೇಶ ಪಕ್ಕದಲ್ಲಿಯೇ ಇದೆ. ಅದರ ಸಂಪೂರ್ಣ ಮಾಹಿತಿ ನನಗೆ ಇದೆ. ಅಲ್ಲಿಗೆ ಇವರುಗಳು ಕೊನೆಯಲ್ಲಿ ಬಂದಿರುತ್ತಾರೆ. ಹೀಗಾಗಿ, ಸಂಪೂರ್ಣ ಮಾಹಿತಿ ಇವರಿಗೆ ಇರುವುದಿಲ್ಲ. ನಾವುಗಳು ನಿರಂತರವಾಗಿ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಂದರೆ ವಾರಗಟ್ಟಲೆ ಅಲ್ಲಿ ಇದ್ದೇವೆ. ಮಾನ್ಯ ಸದಸ್ಯರು ಕಳಸ ಭಾಗದ ವಿಚಾರವನ್ನು ಪ್ರಸ್ತಾಪ ಮಾಡಿದರು. ಅಲ್ಲಿಯೇ ಹೆಚ್ಚು ಹಾನಿಯಾಗಿದೆ. ಬಾಳೂರು, ಜಾವಳಿ, ಕಳಸ ಈ ಭಾಗಗಳಲ್ಲಿ ಗುಡ್ಡಗಾಡುಗಳು ಜರುಗಿರುವುದು, ಕಾಫಿ ತೋಟಗಳು ಹಾಳಾಗಿರುವುದು, ಮೆಣಸು ಬೆಳೆ ಹಾಳಾಗಿರುವುದು, ಗದ್ದೆ ಬೆಳೆ ನಾಶವಾಗಿರುವುದು, ಈ ರೀತಿಯಲ್ಲಿ ಅದೇ ಭಾಗದಲ್ಲಿ ಹೆಚ್ಚಿನ ಹಾನಿಯಾಗಿರುವುದಾಗಿದೆ. ನಮ್ಮ ಭಾಗದಲ್ಲಿ ಹಾನಿಯಾಗಿದೆ. ಆದರೆ, ಯಾವುದೇ ಜೀವ ಹಾನಿಯಾಗಿಲ್ಲ. ಆಸ್ತಿ ಹಾನಿಯಾಗಿದೆ. ಆದರೆ, ನಮ್ಮ ಅಭಿಪ್ರಾಯಗಳು ಏನೆಂದರೆ ಅವರಿಗೆ ಮೊದಲು ಆದ್ಯತೆಯನ್ನು ಕೊಟ್ಟು, ಅವರ ಸಮಸ್ಯೆಯನ್ನು ಬಗೆಹರಿಸಿದ ನಂತರ ನಮ್ಮ ಕಡೆ ಸರ್ಕಾರ ಗಮನಹರಿಸಲಿ ಎನ್ನುವುದಾಗಿದೆ. ನಮಗೆ ಆಗಿರುವಂತಹ ಪೂರ್ಣ ಅನಾಹುತಗಳ ಬಗ್ಗೆ ಸರ್ಕಾರಕ್ಕೆ ಇನ್ನೂ ಹೇಳಲಿಕ್ಕೆ ಹೋಗಿಲ್ಲ. ಏಕೆಂದರೆ, ಮಾನವೀಯತೆಯ ಯೋಚನೆಗಳು ಅಷ್ಟೆ. ಈಗ ಮಾನ್ಯ ಸದಸ್ಯರು ಆ ವಿಚಾರವನ್ನು ಉಲ್ಲೇಖ ಮಾಡಿದರು. ಅಲ್ಲಿ ಕಳಸ, ಬಾಳೂರು, ಜಾವಳಿ ಪ್ರದೇಶಗಳಲ್ಲಿ ಏನಾಗಿದೆ ಎನ್ನುವುದು ತಮಗೆ ಗೊತ್ತಿದೆ. ಅಲ್ಲಿ ಹಿಡುವಳಿ ಜಾಗಗಳು, ಒತ್ತುವರಿ ಜಾಗಗಳು ಇವೆ. ಈ ಸಂದರ್ಭದಲ್ಲಿ ಏನಾಗಿದೆ ಎಂದರೆ, ಹಿಡುವಳಿ ಜಾಗಗಳಿಗೆ ಸರ್ಕಾರದಿಂದ ಪರಿಹಾರವನ್ನು ಕೊಡುವಂತಹ ವ್ಯವಸ್ಥೆ ಆಗುತ್ತದೆ. ಇನ್ನು ಒತ್ತುವರಿ ಮಾಡಿರುವಂತಹ ಜಾಗಗಳಿಗೆ ಪರಿಹಾರವನ್ನು ಕೊಡಲಿಕ್ಕೆ ಆಗುವುದಿಲ್ಲವೆನ್ನುವುದು ಅಲ್ಲಿ ಆಗಿರುವಂತಹ ಪ್ರಚಾರದ ವಿಷಯ. ಅಲ್ಲಿಗೆ ಮಾನ್ಯ ಕಂದಾಯ ಮಂತ್ರಿಗಳು ಬಂದರು. ಅವರು ಅಲ್ಲಿಗೆ ಬಂದಂತಹ ಸಮಯದಲ್ಲಿ ಈ ವಿಚಾರವನ್ನು ಅವರ ಮಾಹಿತಿಗೆ ತರಲಾಯಿತು. ಈ ರೀತಿಯ ಸಮಸ್ಯೆ ಇಲ್ಲಿ ಇದೆ, ಈ ಸಮಸ್ಯೆಗೆ ಒಂದು ಪರಿಹಾರ ಆಗಬೇಕು. ಇಲ್ಲದಿದ್ದರೆ, ಮನುಷ್ಯನ ಜೀವಕ್ಕೆ ತೊಂದರೆಯಾಗುತ್ತದೆ. ಏಕೆಂದರೆ, ಪಾಪ ಅವನು ಅಲ್ಲಿ ಕಷ್ಟಪಟ್ಟು ಬೆಳೆಯನ್ನು ಬೆಳೆದಿದ್ದಾನೆ. ಆದರೆ, ಆ ಜಮೀನಿಗೆ ಸಂಬಂಧಪಟ್ಟಂತೆ ಅವನ ಹತ್ತಿರ ದಾಖಲೆಗಳಿಲ್ಲ. ಈ ವಿಚಾರವಾಗಿ ರಾತ್ರಿ 10 ಗಂಟೆಗೆ ಜಿಲ್ಲಾಧಿಕಾರಿಯವರ ಜೊತೆ ಒಂದು ಸಭೆ ನಡೆಯಿತು. ಸಭೆ ಆದಂತಹ ಸಂದರ್ಭದಲ್ಲಿ ನಾನು ಸರ್ಕಾರದ ಜೊತೆ ಮಾತನಾಡಿದ್ದೇನೆ. ಈ ವಿಚಾರವಾಗಿ ಇವತ್ತು ಹೇಳಿ, ನಾಳೆ ಆದೇಶದ ಮೂಲಕ ಮಾಡುವಂತಹ ಕೆಲಸ ಇದಲ್ಲ. ಏಕೆಂದರೆ, ಒತ್ತುವರಿ ಜಾಗಕ್ಕೆ ಕೂಡಲೇ ದಾಖಲೆ ಸೃಷ್ಟಿ ಮಾಡಲಿಕ್ಕೆ ಯಾರಿಂದಲೂ ಸಾಧ್ಯವಿಲ್ಲ. ನೀವೇ ಅಲ್ಲ, ಯಾರೇ ಅಧಿಕಾರಕ್ಕೆ ಬಂದರೂ ಸಾಧ್ಯವಿಲ್ಲ. ಆದರೆ, ಅದನ್ನು ಪರಿಗಣನೆಗೆ ತೆಗೆದುಕೊಂಡು, ಅಲ್ಲಿನ ಜನರಿಗೆ ಈ ವಿಚಾರದಲ್ಲಿ ಯಾವುದೇ ತೀರ್ಮಾನಗಳನ್ನು ನೀವು ತೆಗೆದುಕೊಳ್ಳಬೇಡಿ, ನಿಮ್ಮ ಜಾಗಗಳನ್ನು ಉಳಿಸಿಕೊಡುವುದಕ್ಕೆ ನಾನು ಖಂಡಿತವಾಗಿಯೂ ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತೇನೆಂದು ಆ ಸಭೆಯಲ್ಲಿ ನಾನು ಹೇಳಿದೆ. ಒತ್ತುವರಿ ಜಮೀನುಗಳಲ್ಲಿ ಬೆಳೆ ಬೆಳೆದಿದ್ದರೂ ಆ ಜಾಗಕ್ಕೆ ಸರ್ಕಾರದ ವತಿಯಿಂದ ಏನು ಪರಿಹಾರವನ್ನು ಕೊಡಬೇಕೋ ಅದನ್ನು ಪಟ್ಟಿ ಮಾಡಿ ಎಂದು ಸ್ಥಳದಲ್ಲಿಯೇ ಇದ್ದಂತಹ ಜಿಲ್ಲಾಧಿಕಾರಿಗಳು ಹೇಳಿದರು. ಅದಕ್ಕೆ ಪರಿಹಾರವನ್ನು ಕೊಡಿಸುವಲ್ಲಿ ಅಲ್ಲಿಯೇ ಮಾನ್ಯ ಮುಖ್ಯಮಂತ್ರಿಗಳ ಕಚೇರಿಗೆ ದೂರವಾಣಿ ಸಂಪರ್ಕವನ್ನು ತೆಗೆದುಕೊಂಡು ಮಾತನಾಡುವುದರ ಮೂಲಕ ಇಲ್ಲಿ ಈ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ರೀತಿಯ ಪರಿಸ್ಥಿತಿಗಳಾಗಿದೆ, ಇವರುಗಳಿಗೆ ಪರಿಹಾರವನ್ನು ಕೊಡಲೇ ಬೇಕು, ಇಲ್ಲಿ ಎಲ್ಲರೂ ಸಣ್ಣ–ಮಟ್ಟ ರೈತರು ಇದ್ದು, ಇವರುಗಳು 2 ಎಕರೆ, 3 ಎಕರೆ ಜಮೀನುಗಳನ್ನು ಹೊಂದಿರುವಂತಹವರು. ಇವರಿಗೆ ಪರಿಹಾರವನ್ನು ಕೊಡಬೇಕೆಂದು ಹೇಳಿ, ಸ್ಥಳದಲ್ಲಿಯೇ ಆದೇಶವನ್ನು ಮಾಡಿದರು. ಜಿಲ್ಲಾಧಿಕಾರಿಗಳು ಅದನ್ನೂ ಸಹ ಪಟ್ಟಿ ಮಾಡಿದರು. ಎರಡನೆಯದಾಗಿ, 5 ಸಾವಿರ ರೂಪಾಯಿಗಳ ಮನೆ ಬಾಡಿಗೆಯನ್ನು ಕೊಡಲಿಕ್ಕೆ ಸರ್ಕಾರದಿಂದ ನಿಗದಿಯಾಯಿತು. ಮಾನ್ಯ ಕಂದಾಯ ಸಚಿವರು ಅಲ್ಲಿಗೆ ಬಂದಂತಹ ಸಂದರ್ಭದಲ್ಲಿ ಅಲ್ಲಿ ಇದ್ದಂತಹ ಎಲ್ಲರೂ ಹೇಳಿದರು. "ನೋಡಿ ನಮಗೆ ನೀವು 5 ಸಾವಿರ ರೂಪಾಯಿಗಳ ಮನೆ ಬಾಡಿಗೆ ಹಣವನ್ನು ಕೊಡುತ್ತೀರಿ. ಆದರೆ, ನಾವು ಬಾಡಿಗೆ ಮನೆಯನ್ನು ತೆಗೆದುಕೊಳ್ಳಬೇಕೆಂದರೆ ಅದಕ್ಕೆ ಮುಂಗಡ ಹಣವಿಲ್ಲದೇ ಯಾರೂ ಸಹ ಬಾಡಿಗೆ ಮನೆಯನ್ನು ಕೊಡುವುದಿಲ್ಲವೆನ್ನುವ" ವಿಚಾರವನ್ನು ಅವರ ಗಮನಕ್ಕೆ ತಂದಾಗ ಕೂಡಲೇ 5 ಸಾವಿರ ರೂಪಾಯಿಗಳಂತೆ 10 ತಿಂಗಳಿಗೆ 50 ಸಾವಿರ ರೂಪಾಯಿಗಳನ್ನು ಸರ್ಕಾರ ಕೊಡುತ್ತದೆ ಎಂದು ಕೂಡಲೇ ಆದೇಶ ಮಾಡಿದರು. ಸರ್ಕಾರ 10 ತಿಂಗಳ ಬಾಡಿಗೆ ಹಣವನ್ನು ಮುಂಗಡಕ್ಕಾಗಿ ಕೊಟ್ಟಂತಹ ಸಂದರ್ಭದಲ್ಲಿ 50% ರಷ್ಟು ಹಣವನ್ನು ಕೂಡಲೇ ಬಿಡುಗಡೆ ಮಾಡಬೇಕು. ಏಕೆ ಬಿಡುಗಡೆ ಮಾಡಬೇಕೆಂದರೆ ಆ 50% ರಷ್ಟು ಹಣದಲ್ಲಿ 10 ಸಾವಿರ ರೂಪಾಯಿಗಳನ್ನು ಮುಂಗಡ ಹಣವಾಗಿ ಕೊಡುವಂತಹದ್ದು ಎಂದು ಹೇಳಿ ಪ್ರತಿ ತಿಂಗಳು 5 ಸಾವಿರ ರೂಪಾಯಿಗಳ ಬಾಡಿಗೆಯನ್ನು ಕೊಟ್ಟುಕೊಂಡು ವಾಸ ಮಾಡಬೇಕೆಂದು ಹೇಳಿ ಕೂಡಲೇ ಆದೇಶ ಮಾಡಲಾಯಿತು. ಜನರು ಖುಷಿಯಾದರು. ನೀವು ಅಲ್ಲಿಗೆ ಬಂದು ನೋಡಿ.

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ಈ ಹಣವನ್ನು ಕೊಡಲಾಗಿದೆಯೇ ಎಂದು ಮಾನ್ಯ ಸದಸ್ಯರು ಹೇಳಬೇಕು. ಅಲ್ಲಿ ಇಬ್ಬರು ಸತ್ತು ಹೋಗಿದ್ದಾರೆ. ಈ ಸಂದರ್ಭದಲ್ಲಿ, ಪರಿಹಾರವನ್ನು ಕೊಟ್ಟಾಗ ಅಲ್ಲಿನ ಜನರು ಸಂತೋಷ ಪಟ್ಟರು ಎಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಯಾರಿಗೆ ಪರಿಹಾರವನ್ನು ಕೊಟ್ಟಿದ್ದಾರೆಂದು ಹೇಳಬೇಕು.

(ಗೊಂದಲ)

**ಶ್ರೀ ಎಂ.ಕೆ.ಪ್ರಾಣೇಶ್:–** ಮಾನ್ಯ ಸದಸ್ಯರಿಗೆ ಸ್ವಲ್ಪ ತಾಳ್ಮೆ ಇರಬೇಕು.

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ಇಡೀ ರಾಜ್ಯದಲ್ಲಿ ಎಲ್ಲಿಯೂ ಸಹ ಯಾರಿಗೂ ಬಾಡಿಗೆ ಹಣವನ್ನು ಕೊಟ್ಟಿರುವುದಿಲ್ಲ. 10 ಸಾವಿರ ರೂಪಾಯಿಗಳನ್ನು ಬಿಟ್ಟು, ಈ ಹಣವನ್ನು ಯಾರಿಗೂ ಕೊಟ್ಟಿರುವುದಿಲ್ಲ. 10 ಸಾವಿರ ರೂಪಾಯಿಗಳನ್ನು ಕೊಟ್ಟಿರುವಂತಹದ್ದು ಅವನು ಮನೆ ಸಾಮಗ್ರಿಗಳನ್ನು

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಕೊಂಡುಕೊಳ್ಳಲಿಕ್ಕೆ ಕೊಡಲಾಗಿದೆ. ಅದು ಮನೆ ಬಾಡಿಗೆಗೆ ಕೊಟ್ಟಿರುವುದಲ್ಲ. 5 ಸಾವಿರ ರೂಪಾಯಿಗಳಿಗೆ ಬಾಡಿಗೆ ಮನೆ ಸಿಕ್ಕುತ್ತದೆಯೇ?

**ಶ್ರೀ ಆರ್.ಅಶೋಕ(ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಐವನ್ ಡಿ'ಸೋಜಾರವರು ಇಲ್ಲಿ ಗಮನಿಸಬೇಕು. ಮಾನ್ಯ ಸದಸ್ಯರು ಯಾರಿಗೂ ಮನೆ ಬಾಡಿಗೆಯನ್ನು ಕೊಟ್ಟಿಲ್ಲವೆಂದು ಹೇಳುತ್ತಿದ್ದಾರೆ. ನಾನು ಒಂದು ಅಂಕಿ-ಅಂಶವನ್ನು ಕೊಡಲಿಕ್ಕೆ ಬಯಸುತ್ತೇನೆ. 5180 ಕುಟುಂಬಗಳಿಗೆ ಮನೆ ಬಾಡಿಗೆಯನ್ನು ಕೊಟ್ಟಿದ್ದೇವೆ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ರೀತಿಯಲ್ಲಿ 2500 ನಿರಾಶ್ರಿತ ಕುಟುಂಬಗಳಿವೆ.

**ಶ್ರೀ ಆರ್.ಅಶೋಕ:-** ಒಂದು ಮನೆಗೂ ಸಹ ಬಾಡಿಗೆ ಹಣವನ್ನು ಕೊಟ್ಟಿಲ್ಲವೆಂದು ಮಾನ್ಯ ಸದಸ್ಯರು ಹೇಳಿದರು. ಅದಕ್ಕೋಸ್ಕರ ಮಾಹಿತಿಯನ್ನು ಕೊಡುತ್ತಿದ್ದೇನೆ. ಮಾನ್ಯ ಸದಸ್ಯರ ಜಿಲ್ಲೆಗೆ ಕೊಟ್ಟಿಲ್ಲವೆಂದು ಹೇಳಲಿಲ್ಲ. ಒಂದು ಮನೆಗೂ ಬಾಡಿಗೆ ಹಣವನ್ನು ಕೊಟ್ಟಿಲ್ಲವೆಂದು ಹೇಳಿದ್ದಕ್ಕೆ ನಾನು ಹೇಳುತ್ತಿದ್ದೇನೆ. ಜಿಲ್ಲಾವಾರು ಎಷ್ಟೆಷ್ಟು ಕೊಟ್ಟಿದ್ದೇವೆ, ಅದರ ಮಾಹಿತಿಯನ್ನು ಕೊಡುತ್ತೇನೆ.

**(ಮುಂದು...**

**(131) 10.10.2019 05.20 ಎಸ್‌ವಿ-ಎಕೆ**

**ಶ್ರೀ ಆರ್.ಅಶೋಕ್ (ಮುಂದು)**

ಮಾನ್ಯ ಸಭಾಪತಿಯವರೇ, ಆಯಾ ತಾಲ್ಲೂಕಿನ ತಹಶೀಲ್ದಾರರು ಪ್ರತಿ ತಿಂಗಳು ರೂ.5,000/- ಗಳನ್ನು ಬಿಡುಗಡೆ ಮಾಡುತ್ತಾರೆ. ನಾನು ಅಲ್ಲಿಗೆ ಹೋದಾಗ ಮುಂಗಡ ಹಣವನ್ನು ಕೊಡದೆ ಮನೆ ಬಾಡಿಗೆಗೆ ಕೊಡುವುದಿಲ್ಲ ಎಂದು ಹೇಳಿದರು. ಆಗ ನಾನು ಮುಖ್ಯಮಂತ್ರಿಗಳ ಹತ್ತಿರ ಅನುಮತಿಯನ್ನು ಪಡೆದುಕೊಳ್ಳುವ ಬಗ್ಗೆ ಅಲ್ಲಿಯೇ ತೀರ್ಮಾನಿಸಿ ಕೈಗೊಂಡ ಬಗ್ಗೆ ಈ ಸದನದಲ್ಲಿ ಹೇಳಬಯಸುತ್ತೇನೆ. ಬಾಡಿಗೆಯ ರೂಪದಲ್ಲಿ ಕೊಡುತ್ತಿದ್ದಂತಹ ರೂ.50,000/-ಗಳಲ್ಲಿ ರೂ.25,000/- ವನ್ನು ಕೊಟ್ಟರೆ ಅದರಲ್ಲಿಯೇ ಮುಂಗಡಹಣ ಮತ್ತು ಬಾಡಿಗೆ ನೀಡಲು ಸಂತ್ರಸ್ತರಿಗೆ ಉಪಯೋಗವಾಗುತ್ತದೆ. ಅದರಿಂದ ಸರ್ಕಾರಕ್ಕೆ ಯಾವುದೇ ಹೆಚ್ಚಿನ ಹೊರೆಯಾಗುವುದಿಲ್ಲ. ಆದ್ದರಿಂದ ಆ ಹಣವನ್ನು ಕೊಡಲಾಗುವುದೆಂಬ ಮಾತನ್ನು ಹೇಳಿದ್ದೇನೆ. 5180 ಕುಟುಂಬಗಳು ಮಾತ್ರ ಬಾಡಿಗೆ ಹಣವನ್ನು ಪಡೆದುಕೊಂಡಿವೆ. ಶೆಡ್ ನಿರ್ಮಾಣಕ್ಕೆ 1761 ಕುಟುಂಬಗಳು ರೂ.50,000/-ಗಳನ್ನು ಸರ್ಕಾರದಿಂದ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತೆಗೆದುಕೊಂಡಿವೆ. ಜಿಲ್ಲಾಧಿಕಾರಿಗಳು 635 ಶೆಡ್‌ಗಳನ್ನು ನಿರ್ಮಾಣ ಮಾಡಿದ್ದಾರೆ. ಒಟ್ಟು ರೂ.14.58 ಕೋಟಿ ಹಣವನ್ನು ಶೆಡ್ ನಿರ್ಮಾಣಕ್ಕಾಗಿ ಹಾಗೂ ಬಾಡಿಗೆ ನೀಡುವ ಸಲುವಾಗಿ ಘೋಷಿಸಿದೆ.

**ಶ್ರೀ ಕೆ. ಗೋವಿಂದರಾಜ್ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಹೇಳುತ್ತಿರುವುದು ಇಡೀ ರಾಜ್ಯಕ್ಕಾಗಿ ಖರ್ಚು ಮಾಡಿರುವುದೇ?

**ಶ್ರೀ ಆರ್.ಅಶೋಕ್ (ಕಂದಾಯ ಸಚಿವರು):–** ಮಾನ್ಯ ಸಭಾಪತಿಯವರೇ, ಹೌದು. ಮಾನ್ಯ ಶ್ರೀಕಂಠೇಗೌಡರು ಪ್ರಸ್ತಾಪಿಸಿದಂತೆ ಚಿಕ್ಕಮಗಳೂರು ಜಿಲ್ಲೆಯ ಹಂದಿಗೋಡು ಗ್ರಾಮದಲ್ಲಿ ಆತ್ಮಹತ್ಯೆ ಮಾಡಿಕೊಂಡಿರುವ ರೈತನ ಬಗ್ಗೆ ನಾನು ಮಾಹಿತಿಯನ್ನು ತೆಗೆದುಕೊಂಡಿದ್ದೇನೆ. ಆತ ಸಾಕಷ್ಟು ಕಷ್ಟಪಟ್ಟು ಬೆಳೆಯನ್ನು ಬೆಳೆದಿದ್ದನು. ಆ ಜಾಗಕ್ಕೆ ಅಂದರೆ ಭೂಕುಸಿತ ಉಂಟಾದ ಸ್ಥಳಕ್ಕೆ ನಾನು ಭೇಟಿಯನ್ನು ನೀಡಿದ್ದೇನೆ. ಸುಮಾರು ನಾಲ್ಕೈದು ಕಿ.ಮೀ. ದೂರವನ್ನು ನಡೆದುಕೊಂಡೇ ಹೋಗಿಬಂದಿದ್ದೇನೆ. ಭೂಕುಸಿತದಿಂದ ನಷ್ಟವಾದ ನೋವಿನಿಂದಾಗಿ ಅವನು ಗುಂಡು ಹಾರಿಸಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುತ್ತಾನೆ. ಮಾನ್ಯ ಸಿ.ಟಿ.ರವಿಯವರೂ ಸ್ಥಳಕ್ಕೆ ಭೇಟಿ ನೀಡಿದ್ದು, ಅವರೂ ಸಹ ಇದೇ ಮಾತನ್ನು ಹೇಳಿದರು. ಮೃತರ ಕುಟುಂಬದವರಿಗೆ ಮಾನ್ಯ ಸಿ.ಟಿ.ರವಿಯವರು ಈಗಾಗಲೇ ರೂ.5 ಲಕ್ಷ ಪರಿಹಾರವನ್ನು ಘೋಷಿಸಿದ್ದಾರೆ. ಭೂಕುಸಿತದಿಂದ ಜಾಗ ಕಳೆದುಕೊಂಡವರಿಗೆ ಬದಲಿ ಜಾಗವನ್ನು ಕೊಡಬೇಕೆಂದು ಸರ್ಕಾರ ತೀರ್ಮಾನಿಸಿದೆ ಎಂದು ಈಗಾಗಲೇ ನಾನು ಹೇಳಿದ್ದೇನೆ. ಅದಕ್ಕಾಗಿ ಮೂಡಿಗೆರೆ ತಾಲ್ಲೂಕಿನಲ್ಲಿ 380 ಎಕರೆಯನ್ನು ಜಿಲ್ಲಾಧಿಕಾರಿಗಳು ಗುರುತಿಸಿದ್ದಾರೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಅಲ್ಲಿ ಒಂದು ಎಕರೆಗೆ ರೂ. 25–30 ಲಕ್ಷ ಇದೆ. ಸರ್ಕಾರ ರೂ. 35,000/– ಕೊಡುತ್ತದೆ. ಅವನು ಆ ಜಾಗವನ್ನು ಯಥಾಸ್ಥಿತಿಗೆ ತರಲು ರೂ. 3–4 ಲಕ್ಷ ಬೇಕು. ಆತ್ಮಹತ್ಯೆ ಮಾಡಿಕೊಂಡ ರೈತನ ಕುಟುಂಬದವರಿಗೆ ನಂತರ ರೂ. 5 ಲಕ್ಷಗಳನ್ನು ಪರಿಹಾರ ರೂಪದಲ್ಲಿ ಕೊಡುತ್ತದೆ. ನಾವು ಸರ್ಕಾರವನ್ನು ಕೇಳುವುದೇನೆಂದರೆ, ಅವನ ಭೂಮಿಯನ್ನು ಯಥಾಸ್ಥಿತಿ ತಂದು ಉಳುಮೆಗೆ ಸಿದ್ಧಪಡಿಸಿಕೊಟ್ಟರೆ ಸಾಕು. ರೈತರು ನಂಬಿರುವ ಭೂಮಿಯಲ್ಲಿ ಮತ್ತೆ ಬೆಳೆಯನ್ನು ಬೆಳೆಯಲು ಅವಕಾಶವಾದರೆ ಸಾಕಷ್ಟೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಆರ್.ಅಶೋಕ್:–** ಮಾನ್ಯ ಸಭಾಪತಿಯವರೇ, ಈಗ ಭೂಕುಸಿತ ಉಂಟಾಗಿರುವ ಜಾಗ ಸಂಪೂರ್ಣವಾಗಿ ಕುಸಿದು ಬಿದ್ದಿದೆ. ಅಲ್ಲಿ ಏನೂ ಮಾಡುವುದಕ್ಕಾಗುವುದಿಲ್ಲ. ಅದು ಸ್ವಾಭಾವಿಕವಾಗಿಯೇ ಸರಿಹೋಗಬೇಕಷ್ಟೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಮೃತ ರೈತನ ಒಂದೂವರೆ ಎಕರೆ ಭೂಮಿ ಆ ರೀತಿಯಾಗಿದ್ದು, ಇನ್ನೂ ಎರಡು ಎಕರೆ ಉಳಿದಿದೆ. ಅದನ್ನು ಸರಿಪಡಿಸಿಕೊಳ್ಳಲು ಹೆಚ್ಚು ಹಣ ಬೇಕಾಗುತ್ತದೆ.

**ಶ್ರೀ ಆರ್.ಅಶೋಕ್:–** ಮಾನ್ಯ ಸಭಾಪತಿಯವರೇ, ನಾನು ಹೇಳುತ್ತಿರುವುದು ಬದಲಿ ಜಾಗವನ್ನು ಕೊಡುವ ಬಗ್ಗೆ. ಇದಕ್ಕಾಗಿ ಒಟ್ಟು 380 ಎಕರೆಯನ್ನು ಜಿಲ್ಲಾಧಿಕಾರಿಗಳು ಗುರುತಿಸಿದ್ದಾರೆ. ಅವರಿಗೆ ಬದಲಿ ಜಾಗ ಹಾಗೂ ಮನೆ ಕಟ್ಟಲು ರೂ.5 ಲಕ್ಷವನ್ನು ನೀಡಲಾಗುವುದು. ಭೂಕುಸಿತ ಉಂಟಾಗಿರುವ ಜಾಗವನ್ನು ಸರ್ಕಾರದ ವಶಕ್ಕೆ ತೆಗೆದುಕೊಳ್ಳಲಾಗುವುದು. ಏಕೆಂದರೆ ಅದನ್ನು ಬೇರೆ ಏನೂ ಮಾಡಲಾಗುವುದಿಲ್ಲ. ಸಂತ್ರಸ್ತರಿಗೆ ಬದಲಿ ಜಾಗವನ್ನು ನೀಡಿ ಸ್ಥಳಾಂತರಗೊಳಿಸಲಾಗುವುದು.

**ಶ್ರೀ ಪ್ರಕಾಶ್ ಕೆ. ರಾಥೋಡ್ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಮಾನ್ಯ ಕಂದಾಯ ಸಚಿವರು ಸರ್ಕಾರದಿಂದ ನೆರೆ ಸಂತ್ರಸ್ತರಿಗೆ ನೀಡಲಾಗಿರುವ ಪರಿಹಾರದ ಬಗ್ಗೆ ಸಾಕಷ್ಟು ಅಂಕಿ ಅಂಶಗಳನ್ನು ನೀಡಿದ್ದಾರೆ. ನೆರೆಯಿಂದಾಗಿ ಬಹಳ ದೊಡ್ಡ ಮಟ್ಟದಲ್ಲಿ ಹಾನಿಯಾಗಿದ್ದು, ಸಾಕಷ್ಟು ಮಂದಿ ಮನೆಗಳನ್ನು ಕಳೆದುಕೊಂಡಿದ್ದಾರೆ. ರಾಜ್ಯದಲ್ಲಿ ಉಂಟಾಗಿರುವ ಹಾನಿಯನ್ನು ನೋಡಿದರೆ, ಸರ್ಕಾರ ನೀಡುತ್ತಿರುವ ಪರಿಹಾರ ಬಹಳ ಕಡಿಮೆ ಎಂಬುದು ನನ್ನ ಭಾವನೆ. ಮನೆಯಿಲ್ಲದವರಿಗೆ ರೂ.5,000/– ಮನೆ ಬಾಡಿಗೆ ನೀಡುವುದು, ಭೂಕುಸಿತ ಉಂಟಾಗಿರುವ ಕಡೆಯಲ್ಲಿ ಬದಲಿ ಜಾಗವನ್ನು ನೀಡುವುದು ಇದು ಪರಿಹಾರದ ಒಂದು ಭಾಗವಷ್ಟೆ. ಇನ್ನೂ ಸಾಕಷ್ಟು ಅಂಕಿ ಅಂಶಗಳ ಬಗ್ಗೆ ಚರ್ಚೆಯಾಗಬೇಕಿದೆ. ಸರ್ಕಾರ ಸಂತ್ರಸ್ತರಿಗೆ ನೀಡಿರುವ ಪರಿಹಾರ ಸಾಲುತ್ತದೆಯೇ ಎಂದು ಒಮ್ಮೆ ಆತ್ಮಾವಲೋಕನ ಮಾಡಿಕೊಳ್ಳಬೇಕು. ಸರ್ಕಾರ ಪ್ರವಾಹ ಸಂತ್ರಸ್ತರಿಗೆ ನೀಡಿರುವ ಪರಿಹಾರ ಇನ್ನೂ ಹೆಚ್ಚಾಗಬೇಕೆಂದು ಹೇಳುತ್ತಿದ್ದೇವೆಯೇ ವಿನಃ ಸರ್ಕಾರವನ್ನು ನಿಂದನೆ ಮಾಡುತ್ತಿಲ್ಲ.

"ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ಆರ್.ಅಶೋಕ್:–** ಮಾನ್ಯ ಸಭಾಪತಿಯವರೇ, ಇದು ಎನ್.ಡಿ.ಆರ್.ಎಫ್., ನಾರ್ಮ್ಸ್ ಪ್ರಕಾರ ನೀಡುತ್ತಿರುವಂತಹ ದರಗಳಾಗಿವೆ. ಈ ದರಗಳ ಬಗ್ಗೆ ವಿವರಗಳು ಕೆಳಕಂಡಂತಿದೆ:

| ಪ್ರತಿ ಹೆಕ್ಟೇರ್‌ಗೆ | ನಿಗದಿತ ದರ |
|---|---|
| ಹೂಳು ತುಂಬಿರುವುದನ್ನು ತೆಗೆಯುವುದಕ್ಕಾಗಿ | ರೂ. 12,200/– |
| ಅವಶೇಷಗಳನ್ನು ತೆಗೆಯುವುದಕ್ಕಾಗಿ | ರೂ. 12,200/– |
| ಭೂಕುಸಿತದಿಂದ ಹಾನಿಯಾಗಿರುವುದಕ್ಕಾಗಿ | ರೂ. 37,500/– |
| ಮಳೆ ಆಧಾರಿತ ಪ್ರದೇಶದಲ್ಲಿ ಬೆಳೆಹಾನಿಗಾಗಿ | ರೂ. 6,800/– |
| ನೀರಾವರಿ ಪ್ರದೇಶದಲ್ಲಿ ಬೆಳೆಹಾನಿಗಾಗಿ | ರೂ. 13,500/– |
| ವಾಣಿಜ್ಯ ಬೆಳೆ ಹಾನಿಗಾಗಿ | ರೂ. 17,500/– |

ಹಿಂದಿನ ಪ್ರಧಾನಿಗಳಾಗಿದ್ದ ಶ್ರೀ ಮನಮೋಹನ್‌ಸಿಂಗ್ ಅವರ ಅವಧಿಯಲ್ಲಿ ಈ ರೀತಿಯಾಗಿ ಎನ್.ಡಿ.ಆರ್.ಎಫ್., ದರವನ್ನು ನಿಗದಿ ಮಾಡಲಾಗಿದೆ.

**ಶ್ರೀ ಯು.ಬಿ.ವೆಂಕಟೇಶ್ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಮೋದಿಯವರಿಗೆ ಹೇಳಿ ಅದನ್ನು ಬದಲಾಯಿಸುವುದಕ್ಕಾಗುವುದಿಲ್ಲವೇ? ಮೋದಿ ಎಲ್ಲಿಗೆ ಹೋದರು?

**ಶ್ರೀ ಆರ್.ಅಶೋಕ್:–** ಮಾನ್ಯ ಸಭಾಪತಿಯವರೇ, ಈಗ ಕೇಂದ್ರದಿಂದ ರೂ.1200 ಕೋಟಿ ಪರಿಹಾರ ಬಂದಿದೆ. ಅದರಲ್ಲಿ ರೂ.1035 ಕೋಟಿಯನ್ನು ನಿನ್ನೆಯಿಂದಲೇ ಬೆಳೆ ಪರಿಹಾರವಾಗಿ ನೀಡಲು ಆದೇಶ ಮಾಡಿದ್ದೇನೆ. ಉಳಿದಂತೆ ಮನೆ ಕಟ್ಟುವುದಕ್ಕೆ, ಬಾಡಿಗೆ ಕಟ್ಟುವುದಕ್ಕೆ ರಾಜ್ಯ ಸರ್ಕಾರದಿಂದಲೇ ಹಣ ನೀಡಲಾಗುತ್ತದೆ. ಈಗಾಗಲೇ ಇದಕ್ಕಾಗಿ ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಅಗತ್ಯವಿರುವಷ್ಟು ಹಣವನ್ನು ಡೆಪಾಸಿಟ್ ಮಾಡಲಾಗಿದೆ. ಮಾನ್ಯ ಸಭಾಪತಿಯವರು ಅನುಮತಿಯನ್ನು ನೀಡಿದರೆ ಜಿಲ್ಲಾವಾರು ಮಾಹಿತಿಯನ್ನು ನೀಡಲು ನಾನು ಸಿದ್ಧನಿದ್ದೇನೆ.

**ಸಭಾಪತಿಯವರು:–** ಮಾನ್ಯ ಸಚಿವರೇ, ಸರ್ಕಾರದಿಂದ ಉತ್ತರ ನೀಡುವ ಸಂದರ್ಭದಲ್ಲಿ ತಿಳಿಸಿ.

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ಯು.ಬಿ.ವೆಂಕಟೇಶ್:–** ಮಾನ್ಯ ಸಭಾಪತಿಯವರೇ, ಎನ್.ಡಿ.ಆರ್.ಎಫ್. ನಾರ್ಮ್ಸ್ ಬಿಟ್ಟು ದರವನ್ನು ಹೆಚ್ಚಿಸಲು ಈ ಸರ್ಕಾರಕ್ಕೆ ಆಗುವುದಿಲ್ಲವೇ?

**ಶ್ರೀ ಆರ್.ಅಶೋಕ್:–** ಮಾನ್ಯ ಸಭಾಪತಿಯವರೇ, ಇದು ಕೇವಲ ನಮ್ಮ ರಾಜ್ಯಕ್ಕೆ ಮಾತ್ರವಲ್ಲ, ಇಡೀ ದೇಶಕ್ಕೆ ಸಂಬಂಧಪಟ್ಟಿರುವ ವಿಷಯವಾಗಿದೆ. ಕೇಂದ್ರ ಸರ್ಕಾರಕ್ಕೆ ಪತ್ರವನ್ನು ಬರೆದು ಎನ್.ಡಿ.ಆರ್.ಎಫ್., ನಾರ್ಮ್ಸ್‌ಗಳಲ್ಲಿ ರಿಲ್ಯಾಕ್ಸೇಷನ್ ನೀಡಲು ಕೋರುವಂತೆ ನಮ್ಮ ಮುಖ್ಯಮಂತ್ರಿಯವರಿಗೂ ನಾವು ವಿನಂತಿಸಿದ್ದೇವೆ. ಏಕೆಂದರೆ ಅಂದಿಗೂ ಇಂದಿಗೂ ಬಹಳಷ್ಟು ವರ್ಷಗಳಾಗಿರುವುದರಿಂದ ಬದಲಾವಣೆ ಮಾಡುವುದು ಅಗತ್ಯವಾಗಿದೆ.

**ಶ್ರೀ ಎನ್.ಎಸ್.ಬೋಸ್‌ರಾಜು (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಹೇಳುತ್ತಿರುವ ಎನ್.ಡಿ.ಆರ್.ಎಫ್. ನಾರ್ಮ್ಸ್ ಹತ್ತು ವರ್ಷಗಳ ಹಿಂದೆ ಮಾಡಿರುವುದಾಗಿದೆ. Extraordinary floods ಬಂದಾಗ ಎನ್.ಡಿ.ಆರ್.ಎಫ್., ನಾರ್ಮ್ಸ್ ಅನ್ನು ಬದಲಾಯಿಸಬೇಕಾಗಿತ್ತು. ಆದರೆ ಇಂದಿನವರೆವಿಗೂ ಯಾವುದೇ ಸರ್ಕಾರದವರೂ ಮಾಡಿರುವುದಿಲ್ಲ. 2014–15ರಲ್ಲಿ ತುಂಗಭದ್ರಾ ಅಚ್ಚುಕಟ್ಟು ಪ್ರದೇಶದಲ್ಲಿ ಆಲಿಕಲ್ಲು ಮಳೆ ಬಂದಾಗ ನಾವು ಅಂದಿನ ಮುಖ್ಯಮಂತ್ರಿಯವರ ಬಳಿ ಬಂದು ಅವರನ್ನು ಹೆಲಿಕಾಪ್ಟರ್‌ನಲ್ಲಿ ಕರೆದೊಯ್ದು ಗಂಗಾವತಿ, ಸಿಂಧನೂರು, ಬಳ್ಳಾರಿ ಮತ್ತು ಸಿರುಗುಪ್ಪ ಪ್ರದೇಶವನ್ನು ತೋರಿಸಿದೆವು. ಅದನ್ನು 'special crop losses' ಎಂದು ಘೋಷಿಸಿ ರೂ.35,000/– ಪರಿಹಾರವಾಗಿ ನೀಡಬೇಕೆಂದು ಅಲ್ಲಿದ್ದಂತಹ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ನಾವು ಮುಖ್ಯಮಂತ್ರಿಯವರನ್ನು ಕೋರಿದೆವು. ಅವರು ರೂ.25,000/– ನೀಡಲು ಒಪ್ಪಿ, ಎಲ್ಲರಿಗೂ ಪರಿಹಾರವನ್ನು ನೀಡಿದರು. ಇದರ ಬಗ್ಗೆ ಎಲ್ಲಾ ಮಾಹಿತಿಯು ತಮ್ಮ ದಾಖಲೆಗಳಲ್ಲಿ ದೊರೆಯುತ್ತದೆ. ಆ ರೀತಿಯಾಗಿ state exchequer ನಿಂದಲೋ, ಕೇಂದ್ರ ಸರ್ಕಾರದಿಂದಲೋ ಅಥವಾ ಇನ್ನಾವುದೇ ವಿಶೇಷ ಅನುದಾನವಾಗಿ ಈ ಪರಿಸ್ಥಿತಿಯನ್ನು 'extraordinary' ಎಂದು ಪರಿಗಣಿಸಿ ನೀಡಬಹುದು.

**ಶ್ರೀ ಐವನ್ ಡಿ'ಸೋಜ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಎನ್.ಡಿ.ಆರ್.ಎಫ್ ಮತ್ತು ಎಸ್.ಡಿ.ಆರ್.ಎಫ್. ನಿಯಮಗಳಿದ್ದರೂ ಕೂಡ ಸರ್ಕಾರ ಇದನ್ನು ವಿಶೇಷ ಪ್ರಕರಣವೆಂದು ಪರಿಗಣಿಸಿ special package ನೀಡಬಹುದು.

**(ಗೊಂದಲ)**

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಂ.ನಾರಾಯಣಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಕೇಂದ್ರದಿಂದ ಬಂದಿರುವ ರೂ.1200 ಕೋಟಿಗಳಲ್ಲಿ ರೂ.1035 ಕೋಟಿಗಳನ್ನು ಬೆಳೆಹಾನಿ ಪರಿಹಾರವಾಗಿ ನೀಡಲು ನಿರ್ದೇಶನ ಕೊಟ್ಟಿದ್ದೇನೆಂದು ಹಾಗೂ ಮನೆ ಬಾಡಿಗೆ ಮತ್ತು ಇತರ ಪರಿಹಾರಗಳಿಗೆ ರಾಜ್ಯ ಸರ್ಕಾರವೇ ಹಣವನ್ನು ನೀಡುತ್ತಿದೆಯೆಂದು ಮಾನ್ಯ ಸಚಿವರು ಹೇಳಿದರು. ಇದುವರೆವಿಗೂ ರಾಜ್ಯ ಸರ್ಕಾರ ಎಷ್ಟು ಹಣವನ್ನು ಬಿಡುಗಡೆ ಮಾಡಿದೆಯೆಂದು ಹೇಳುವುದಕ್ಕೆ ಸಾಧ್ಯವೇ?

**ಶ್ರೀ ಆರ್.ಅಶೋಕ್:–** ಮಾನ್ಯ ಸಭಾಪತಿಯವರೇ, ತಾವು ಅನುಮತಿಯನ್ನು ನೀಡಿದರೆ ನಾನು ವಿವರಗಳನ್ನು ಹೇಳಬಹುದು.

**ಸಭಾಪತಿಯವರು:–** ಮಾನ್ಯ ಸಚಿವರೇ, ತಾವು ಉತ್ತರವನ್ನು ನೀಡುವಾಗ ಹೇಳಿ.

**ಶ್ರೀ ಎಂ.ಕೆ.ಪ್ರಾಣೇಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಈಗಾಗಲೇ ಸಾಕಷ್ಟು ವಿಚಾರಗಳನ್ನು ಮಾನ್ಯ ಕಂದಾಯ ಮಂತ್ರಿಗಳು ಮಾತನಾಡಿದ್ದಾರೆ. ಭೂಕುಸಿತ ಉಂಟಾದ ಪ್ರದೇಶಕ್ಕೆ ಮಾನ್ಯ ಮುಖ್ಯಮಂತ್ರಿಗಳು ಭೇಟಿ ನೀಡಿದ್ದರು. ಬಹುಶಃ ಅಲ್ಲಿಗೆ ಬರುವವರೆವಿಗೂ ಅವರಿಗೆ ಪರಿಸ್ಥಿತಿಯ ಭೀಕರತೆಯ ಅರಿವಿರಲಿಲ್ಲವೇನೋ? ಸ್ಥಳವನ್ನು ನೋಡಿದ ತಕ್ಷಣ ಅವರು ಹಣವನ್ನು ಕೊಡಿಸುವಂತಹ ವ್ಯವಸ್ಥೆಯನ್ನು ಮಾಡುತ್ತೇನೆಂದು ಹೇಳಿದರು. ಇಲ್ಲಿಯ ಜನರ ಬದುಕನ್ನು ಕಟ್ಟಿಕೊಡಬೇಕಾದಂತಹ ಜವಾಬ್ದಾರಿಯು ನಮ್ಮ ಮೇಲಿದೆ. ಕೇಂದ್ರದಿಂದ ಪರಿಹಾರ ಬರುವವರೆಗೆ ಕಾಯದೆ, ಯಾವುದಾದರೊಂದು ರೀತಿಯಲ್ಲಿ ಪರಿಹಾರವನ್ನು ಕೊಡಿಸುವ ಪ್ರಯತ್ನವನ್ನು ಮಾಡುತ್ತೇನೆಂದು ಹೇಳಿ ಕೂಡಲೇ ರೂ.10,000/–ವನ್ನು ಪರಿಹಾರವಾಗಿ ಘೋಷಿಸಿದರು.

**(ಮುಂದು)**

(132) 10.10.2019 5.30 ಕೆಜಿ–ಆರ್‌ಎನ್

**ಶ್ರೀ ಎಂ.ಕೆ.ಪ್ರಾಣೇಶ್ (ಮುಂದು)**

ಇವತ್ತು ವಿರೋಧ ಪಕ್ಷದವರು ಚಿಕ್ಕಮಗಳೂರು ಜಿಲ್ಲೆಗೆ ಬಂದು ನಿರಾಶ್ರಿತ ಕೇಂದ್ರದಲ್ಲಿ ಇದ್ದಂತಹವರಿಗೆ ಯಾರಾದರೂ ಒಬ್ಬರಿಗೆ 10 ಸಾವಿರ ರೂಪಾಯಿ ಹಣ ತಲುಪಿಲ್ಲವೆಂದರೆ, ಅವರು ಹೇಳುವಂತಹ ಆರೋಪಗಳನ್ನು ನಾವು ಒಪ್ಪಿಕೊಳ್ಳಲು ಸಿದ್ದರಿದ್ದೇವೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

(ಗೊಂದಲ)

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ನಾವು dispute ಮಾಡುತ್ತಿಲ್ಲ.

**ಶ್ರೀ ಎಂ.ಕೆ.ಪ್ರಾಣೇಶ್:–** ಮಾನ್ಯ ಸಭಾಪತಿಯವರೇ, 'ಗುಣಕ್ಕೆ ಮತ್ಸರ' ಇರಬಾರದು ಎನ್ನುವಂತಹ ಮಾತನ್ನು ನಾನು ಮೊದಲೇ ಹೇಳಿದ್ದೇನೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಅವರ ಜಿಲ್ಲಾಧಿಕಾರಿಗಳ ಬಗ್ಗೆ ಒಂದು ಮಾತನ್ನು ಹೇಳಿದ್ದಾರೆ. ಮಾನ್ಯ ಸದಸ್ಯರು ಜಿಲ್ಲಾಧಿಕಾರಿಯವರ ಬಗ್ಗೆ ಏನು ಹೇಳಿದ್ದಾರೆ, ಅದಕ್ಕಿಂತಲೂ ಹೆಚ್ಚಿನ ಕೆಲಸವನ್ನು ಬಾಗಲಕೋಟೆಯ ಜಿಲ್ಲಾಧಿಕಾರಿ ಶ್ರೀ 'ರಾಮಚಂದ್ರನ್' ಎಂಬುವವರು ಮಾಡಿದ್ದಾರೆ. Somehow, I had forgotten his name. But day and night he did wonderful work. ದುರ್ದೈವದ ಸಂಗತಿ ಎಂದರೆ, ಅವರನ್ನು ಈಗ ವರ್ಗಾವಣೆ ಮಾಡಿದ್ದಾರೆ.

**ಶ್ರೀ ಎಂ.ಕೆ.ಪ್ರಾಣೇಶ್:–** ಮಾನ್ಯ ಸಭಾಪತಿಯವರೇ, ಜಿಲ್ಲಾಧಿಕಾರಿಯವರ ನೇತೃತ್ವದಲ್ಲಿ ಇಡೀ ಜಿಲ್ಲೆಯ ತಂಡ ಕೆಲಸ ಮಾಡಿದೆ. ಏಕೆಂದರೆ, ಒಬ್ಬರೆ ಮಾಡುವುದಕ್ಕೆ ಸಾಧ್ಯವಿಲ್ಲ. ಮಾನ್ಯ ಮುಖ್ಯ ಮಂತ್ರಿಯವರು ಆ ಜಿಲ್ಲೆಗೆ ಬಂದು ನೋಡಿದ ಕೂಡಲೇ ಹಣವನ್ನು ಪ್ರತಿಯೊಬ್ಬರಿಗೂ ಬಿಡುಗಡೆ ಮಾಡಬೇಕು. ನಾಳೆಯಿಂದ ಯಾರಿಗೂ ಹಣ ತಲುಪಿಲ್ಲವೆಂಬ ದೂರುಗಳು ಬರಬಾರದು ಎಂದು ಜಿಲ್ಲಾಧಿಕಾರಿಯವರಿಗೆ ಆದೇಶ ಮಾಡಿದರು. ಮಾನ್ಯ ಮುಖ್ಯ ಮಂತ್ರಿಯವರು ಆದೇಶ ಮಾಡಿದ ತಕ್ಷಣ ಪ್ರತಿಯೊಬ್ಬರಿಗೂ ಹಣ ತಲುಪಿಸುವಂತಹ ಕೆಲಸ ಮಾಡಲಾಯಿತು. ನಿರಾಶ್ರಿತರಿಗೆ ಆಶ್ರಯ ನೀಡಿರುವಂತಹ 25 ಕೇಂದ್ರಗಳಿಗೂ ಹಣವನ್ನು ತಲುಪಿಸಲಾಯಿತು. ಇವತ್ತು ಸಹ ಒಂದು ನಿರಾಶ್ರಿತ ಕೇಂದ್ರ ಇದೆ. ಅವರಿಗೆ ಮನೆಗಳನ್ನು ಕಟ್ಟಿಕೊಳ್ಳಲು ಜಾಗವನ್ನು ಗುರುತಿಸುವಂತಹ ಕೆಲಸ ಆಗಿದೆ. ಅವರು ಎಷ್ಟು ಜಾಗವನ್ನು ಕಳೆದುಕೊಂಡಿದ್ದಾರೆ, ಅಷ್ಟು ಜಾಗವನ್ನು ಕೊಡಬೇಕೆಂದು ಆಗಿದೆ. ಇದು ಇಷ್ಟಕ್ಕೆ ಮುಗಿಯಿತು ಎಂದಲ್ಲ, ನಮ್ಮ ಒತ್ತಾಯ ಇನ್ನೂ ಇದೆ. ಮಾನ್ಯ ಕಂದಾಯ ಸಚಿವರು ಸದನದಲ್ಲಿಯೇ ಇದ್ದಾರೆ. ಮಾನ್ಯ ಮುಖ್ಯ ಮಂತ್ರಿಯವರಿಗೆ ಮತ್ತು ಅದಕ್ಕೆ ಸಂಬಂಧಪಟ್ಟ ಸಚಿವರಿಗೆ ಸ್ಥಳೀಯನಾಗಿ ನನ್ನ ಒತ್ತಾಯವು ಸಹ ಇದೆ. ಈ ಪರಿಹಾರ ಸಾಲುವುದಿಲ್ಲ. ನಿಮ್ಮ ಪ್ರಯತ್ನಗಳು ಇನ್ನೂ ಬೇಕಾಗಿದೆ. ಇಲ್ಲಿಯವರೆಗೆ ಮನೆಯನ್ನು ಕಟ್ಟಿಕೊಳ್ಳುವುದಕ್ಕೆ ಯಾವ ಸರ್ಕಾರವು ಐದು ಲಕ್ಷ ರೂಪಾಯಿಗಳನ್ನು ಕೊಟ್ಟಿರಲಿಲ್ಲ. ಆ ಕೆಲಸವನ್ನು

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಮ್ಮ ಸರ್ಕಾರ ಮಾಡಿದೆ. ಆದರೂ ಸಹ, ಇವತ್ತು ಮಧ್ಯಮ ವರ್ಗದವರು ಬೇಕಾದಷ್ಟು ಜಾಗವನ್ನು ಕಳೆದುಕೊಂಡಿದ್ದಾರೆ, ಕಾಫಿ ತೋಟಗಳನ್ನು ಕಳೆದುಕೊಂಡಿದ್ದಾರೆ. ನಾವು ಕಾಫಿ ತೋಟಗಳ ಬೆಳೆಗಾರರ ಕಷ್ಟಗಳಿಗೂ ಸಹ ಸ್ಪಂದಿಸಬೇಕಾಗಿದೆ. ಈಗ ಮಾನ್ಯ ಸದಸ್ಯರಾದ ಕೆ.ಟಿ.ಶ್ರೀಕಂಠೇಗೌಡರವರು ಉಲ್ಲೇಖ ಮಾಡಿದ್ದಾರೆ. ಇವತ್ತು ಅಲ್ಲಿ ಎಕರೆಗೆ ಸುಮಾರು 10 ಲಕ್ಷ, 20 ಲಕ್ಷ ಬೆಲೆ ಇದೆ ಎನ್ನುವುದು ಖಂಡಿತ ಹೌದು. ಮುಂದಿನ ದಿವಸಗಳಲ್ಲಿ ಅವರ ಬದುಕೆ ಇಲ್ಲ.  ಒಬ್ಬ ಸಣ್ಣ ಕಾಫಿ ಬೆಳೆಗಾರ ಕನಿಷ್ಠ 20 ರಿಂದ 25 ಜನ ಕಾರ್ಮಿಕರಿಗೆ ಕೆಲಸ ಕೊಡುವಂತಹ ವ್ಯವಸ್ಥೆ ಆಗುತ್ತಿತ್ತು. ಇವತ್ತು ಆ ಕಾರ್ಮಿಕರು ಸಹ ನಿರಾಶ್ರಿತರಾಗುತ್ತಾರೆ. ಈಗ ಸರ್ಕಾರ ಪರಿಹಾರವನ್ನು ಕೊಟ್ಟಿದೆ. ಇನ್ನೂ ಹೆಚ್ಚಿನ ರೀತಿಯಲ್ಲಿ ಪರಿಹಾರವನ್ನು ಕೊಡುವಂತಹ ವ್ಯವಸ್ಥೆಗಳನ್ನು ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ.

ಮಾನ್ಯ ಸಭಾಪತಿಯವರೇ, ಹಾಗೆಯೇ, ‘ಕಳಸಾ’ದಲ್ಲಿ ಎರಡು ಆತ್ಮಹತ್ಯೆ ಪ್ರಕರಣಗಳಾಗಿವೆ ಎಂದು ಹೇಳಿದರು. ನಾನು ಸಹ ‘ಕಳಸಾ’ಕ್ಕೆ ಹೋಗಿದ್ದೆ. ಅವರಲ್ಲಿ ಒಂದು ರೀತಿಯ ಆತಂಕ ಇತ್ತು. ಅದು ಯಾವ ರೀತಿಯ ಆತಂಕ ಎಂದರೆ, ಅರಣ್ಯ ಪ್ರದೇಶದ ಒತ್ತುವರಿ ಬಗ್ಗೆ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶ ಇದೆ. ಅದು ಎಲ್ಲರಿಗೂ ಗೊತ್ತಿದೆ. ನಮ್ಮಲ್ಲಿ ಕೆಲವರಿಗೆ ಗೊತ್ತಿಲ್ಲದೆ ಇವತ್ತು ಅದಕ್ಕೆ ದಾಖಲೆಗಳನ್ನು ಇಟ್ಟುಕೊಂಡಿರುವಂಥದ್ದು ಇದೆ. ಆದರೆ, ಇವತ್ತು ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶದ ಪ್ರಕಾರ ಅವರು ತೊಂದರೆಗೆ ಸಿಕ್ಕಿಹಾಕಿಕೊಂಡಿದ್ದಾರೆ. ಈ ಮಧ್ಯದಲ್ಲಿ ಆ ಸಮಸ್ಯೆಯು ಸಹ ಇದರಲ್ಲಿ ಸೇರಿಕೊಂಡಿದೆ. ಹಾಗಾಗಿ, ಆತ ಪಾಪ! ಕಷ್ಟ ಪಟ್ಟಿದ್ದ ಆ ಜಾಗದಲ್ಲಿ ಬೆಳೆ ತೆಗೆಯುತ್ತಿದ್ದ. ಅದು ಹೋಯಿತು. ಸರ್ಕಾರದಿಂದ ಪುನಃ ಬರುವಂತಹ ವ್ಯವಸ್ಥೆಗಳು ಇಲ್ಲವೆಂದು ಹೇಳಿ ಅವರು ಅಂದುಕೊಂಡಿದ್ದರು. ನಾನು ಒಂದು ಮಾತನ್ನು ಹೇಳಿದ್ದೆ.  ಮಾನ್ಯ ಮುಖ್ಯಮಂತ್ರಿಯವರು ಮತ್ತು ಮಾನ್ಯ ಸಚಿವರು ಬಂದು ಅವರಿಗೆ ಮಾನಸಿಕವಾಗಿ ಧೈರ್ಯವನ್ನು ತುಂಬದಿದ್ದರೆ ಖಂಡಿತವಾಗಿ ಆ ಭಾಗಗಳಲ್ಲಿ ಆತ್ಮಹತ್ಯೆ ಪ್ರಕರಣಗಳು ಇವತ್ತಿನ ದಿವಸಕ್ಕೆ 100ರ ಗಡಿ ದಾಟುತ್ತಿತ್ತು. ಮಾನ್ಯ ಮುಖ್ಯ ಮಂತ್ರಿಯವರು ಅವತ್ತಿನ ದಿವಸ ಆತ್ಮಸ್ಥೈರ್ಯವನ್ನು ತುಂಬುವಂತಹ ಕೆಲಸವನ್ನು ಮಾಡಿದರು. ಅದು ಆ ರೀತಿ ಆಗಬಾರದಿತ್ತು. ಆದರೂ ಸಹ ಇಬ್ಬರು ಆತ್ಮಹತ್ಯೆ ಮಾಡಿಕೊಂಡುಬಿಟ್ಟರು. ಹಾಗಾಗಿ, ಆಡಳಿತ ಪಕ್ಷದವರಲ್ಲಿ ಮತ್ತು ವಿರೋಧ ಪಕ್ಷದವರಲ್ಲಿ ನನ್ನದೊಂದು ವಿನಂತಿ ಇದೆ. ನಮ್ಮಲ್ಲಿ ನಾವು ಸ್ವಲ್ಪ ಆರ್ಥಿಕವಾಗಿ ಸದೃಢರಾಗಿದ್ದರೆ, ನಾವು ಎಲ್ಲವನ್ನು ಸರ್ಕಾರದ ಮೇಲೆ ಹಾಕುವ ಬದಲು, ನಾವು ಅದರ ಜೊತೆಗೆ ಮಾನವೀಯತೆಯನ್ನು ಜೋಡಿಸಿಕೊಳ್ಳುವಂತಹ ಕೆಲಸವನ್ನು ಮಾಡಿ, ನಮ್ಮಲ್ಲಿ ಎಷ್ಟು ಸಾಧ್ಯವೋ ಅಷ್ಟು ಮತ್ತು  ನಮ್ಮ ಗೆಳೆಯರೊಂದಿಗೆ, ಆರ್ಥಿಕ ಬಲಾಢ್ಯರೊಂದಿಗೆ, ಕೈಗಾರಿಕಾ ಉದ್ಯಮಿಗಳೊಂದಿಗೆ ನಮ್ಮ ಶಕ್ತಿಗೆ  ಅನುಸಾರವಾಗಿ ನಮ್ಮ influence

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಉಪಯೋಗಿಸಿ ಅವರಿಗೆ ಬದುಕಿನ ಒಂದು ದಾರಿಯನ್ನು ಕಟ್ಟಿಕೊಳ್ಳುವಂತಹ ವ್ಯವಸ್ಥೆಯನ್ನು ಮಾಡಿದರೆ ನಮ್ಮ ಜೀವನವು ಸಹ ಸಾರ್ಥಕವಾಗುತ್ತದೆ. ಆ ದೇವರು ಸಹ ನಮಗೆ ಒಳ್ಳೆಯದನ್ನು ಮಾಡುತ್ತಾನೆ.

ಮಾನ್ಯ ಸಭಾಪತಿಯವರೇ, ಕೊನೆಯದಾಗಿ, ಒಂದು ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ನಾವು ಈ ವಿಷಯದಲ್ಲಿ ರಾಜಕಾರಣ ಮಾಡುವುದು ಬೇಡ. ಇದರಲ್ಲಿ ರಾಜಕಾರಣವನ್ನು ಮಾಡಿದರೆ ನಮಗೆ ಖಂಡಿತವಾಗಿ ಒಳ್ಳೆಯದಾಗುವುದಿಲ್ಲ. ನಾವು ಅವರಿಗೆ ಬದುಕನ್ನು ಕಟ್ಟಿಕೊಟ್ಟಮೇಲೆ ರಾಜಕಾರಣ ಮಾಡೋಣ. ರಾಜಕಾರಣ ಮಾಡಲು ಬೇಕಾದಷ್ಟು ವಿಚಾರಗಳು ಇವೆ. ಆದರೆ, ಈ ಅತಿವೃಷ್ಟಿಯೊಳಗೆ ರಾಜಕಾರಣ ಮಾಡುವುದು ಬೇಡ. ನಾವು ನೀವು ಎಲ್ಲರೂ ಸೇರಿ ಅವರಿಗೆ ನ್ಯಾಯವನ್ನು ಒದಗಿಸಿಕೊಡುವಂತಹ ಕೆಲಸವನ್ನು ಮಾಡೋಣ. ಈಗ ಸತ್ತು ಹೋಗಿರುವವರು ಹೋಗಿದ್ದಾರೆ. ನಾವೀಗ ಬದುಕಿರುವವರಿಗಾದರೂ ನೆರವಾಗುವಂತಹ ಕರ್ತವ್ಯ ನಮ್ಮ ಮೇಲಿದೆ ಎಂದು ಹೇಳುವುದಕ್ಕೆ ಈ ಸಂದರ್ಭದಲ್ಲಿ ಬಯಸುತ್ತೇನೆ. ಸರ್ಕಾರ ಒಳ್ಳೆಯ ಕೆಲಸವನ್ನು ಮಾಡಿದೆ. ಸರ್ಕಾರ ಜನರಿಗೆ ಸ್ಪಂದಿಸುವಂತಹ ಕೆಲಸವನ್ನು ಮಾಡಿದೆ. ಸರ್ಕಾರ ಅವರಿಗೆ ಮಾನಸಿಕವಾಗಿ ಧೈರ್ಯ ತುಂಬುವಂತಹ ಕೆಲಸವನ್ನು ಮಾಡಿದೆ. ನಾನು ಆ ಭಾಗದವನಾಗಿ ಸರ್ಕಾರಕ್ಕೆ ಅಭಿನಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

**ವೈಸ್ ಛೇರ್ಮನ್‌ರವರು:–** ಮಾನ್ಯ ಐವನ್ ಡಿ'ಸೋಜಾರವರೇ, ಈಗ ಮಾತನಾಡಿ.

**ಶ್ರೀ ಐವನ್ ಡಿ'ಸೋಜಾ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ನಿಲುವಳಿ ಸೂಚನೆ ಮಂಡಿಸಲು ಅನುಮತಿ ಕೋರಿ ತಂದಂತಹ ಪ್ರಸ್ತಾವದ ಮೇಲೆ ಈಗ ಚರ್ಚೆ ನಡೆಯುತ್ತಿದೆ. ಇದು ಬಹಳ ಗಂಭೀರವಾದಂತಹ ವಿಚಾರ. ಈ ರಾಜ್ಯದಲ್ಲಿ ಸುಮಾರು 100 ವರ್ಷಗಳ ಇತಿಹಾಸದಲ್ಲಿ, 100 ವರ್ಷಗಳ ನಂತರ ಇಂತಹ ಒಂದು ದೊಡ್ಡ ಸಾರ್ವಜನಿಕರ ಆಸ್ತಿ–ಪಾಸ್ತಿಗಳು ನಾಶವಾಗಿವೆ. ಅದೇರೀತಿ ಜಾನುವಾರುಗಳು ನಾಶವಾಗಿವೆ. ಈಗಾಗಲೇ ಮಾನ್ಯ ಸದಸ್ಯರು ಹೇಳಿದಂತೆ, ಈ ವಿಚಾರದಲ್ಲಿ ರಾಜಕಾರಣ ಮಾಡುವುದು ಬೇಡ. ನಾವೆಲ್ಲರೂ ಒಟ್ಟಿಗೆ ಸೇರಿ ಸಂತ್ರಸ್ಥರಿಗೆ ಬದುಕನ್ನು ಕಟ್ಟಿಕೊಡುವಂತಹ ಕೆಲಸವನ್ನು ಮಾಡುವುದು ನಮ್ಮ ಮುಂದೆ ಇರುವಂತಹ ದೊಡ್ಡ ಸವಾಲು. ಇವತ್ತು ನಮ್ಮ ರಾಜ್ಯದಲ್ಲಿ ಸುಮಾರು 22 ಜಿಲ್ಲೆಗಳು, 103 ತಾಲ್ಲೂಕ್‌ಗಳು ಮತ್ತು ಅನೇಕ ಹಳ್ಳಿಗಳು ಅವುಗಳ ಮೂಲ ಸ್ವರೂಪವನ್ನೇ ಕಳೆದುಕೊಂಡಿರುವಂಥದ್ದನ್ನು ನಾವು ಕಂಡಿದ್ದೇವೆ. ಉತ್ತರ ಕರ್ನಾಟಕ ಮತ್ತು ದಕ್ಷಿಣ ಕರ್ನಾಟಕ ಎನ್ನುವ ಬೇದಭಾವ ಇಲ್ಲದೆ ಎರಡು ಕಡೆ ನಷ್ಟವಾಗಿದೆ, ಎರಡು ಕಡೆಗೂ ಪರಿಹಾರವನ್ನು ಕೊಡಬೇಕು ಎನ್ನುವುದರ ಬಗ್ಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಮ್ಮ ವಿರೋಧ ಪಕ್ಷದ ನಾಯಕರು ತಮ್ಮ ಮುಂದೆ ಬಹಳ ಚೆನ್ನಾಗಿ ಅನೇಕ ಅಂಕಿ ಅಂಶಗಳನ್ನಿಟ್ಟು ಅದಕ್ಕೆ ಸರಿಯಾದಂತಹ ಪ್ರತಿಕ್ರಿಯೆಯನ್ನು ಸಹ ಆಡಳಿತ ಪಕ್ಷದ ಸಚಿವರು ಕೊಟ್ಟಿರುವಂತಹದ್ದು ಬಹಳ ಸಂತೋಷದ ವಿಚಾರ.

ಮಾನ್ಯ ಸಭಾಪತಿಯವರೇ, ಇವತ್ತು ಬಹಳ ಒಳ್ಳೆಯ ಚರ್ಚೆ ನಡೆದಿದೆ. ನಾನು ದಕ್ಷಿಣ ಕರ್ನಾಟಕದ ಭಾಗದಿಂದ ಬಂದಿದ್ದೇನೆ. ನಮ್ಮ ಮಲೆನಾಡು ಭಾಗದಲ್ಲಿ ಹೆಚ್ಚು ಮಳೆ ಆಗುವಂತಹ ಪ್ರದೇಶಗಳೆಂದರೆ, ಕರಾವಳಿ, ಉಡುಪಿ, ದಕ್ಷಿಣ ಕನ್ನಡ, ಶಿವಮೊಗ್ಗ ಮತ್ತು ಚಿಕ್ಕಮಗಳೂರು ಎಂದು ಹೇಳಬಹುದು. ಆದರೆ ಈ ವರ್ಷ ಉತ್ತರ ಕರ್ನಾಟಕಕ್ಕೂ ಈ ಮಳೆ ವಿಸ್ತರಿಸಿ ಆ ಭಾಗದಲ್ಲಿಯೂ ಸಹ ಅತಿಯಾದ ಮಳೆಯಾಗಿ ಅತಿಯಾದ ನಷ್ಟವಾಗಿದೆ ಎನ್ನುವುದು ಬಹಳ ಗಂಭೀರವಾದಂತಹ ವಿಚಾರ. ನಾವು ವಿರೋಧ ಪಕ್ಷದವರಾಗಿ ಪರಿಹಾರ ಕೊಡಬೇಕು ಎಂದು ಪದೇ ಪದೇ ಹೇಳಿದ್ದೇವೆ. ಈ ಮಳೆ ಬಂದು ನಷ್ಟವಾದ ಮೇಲೆ ಇವತ್ತಿಗೆ 79 ದಿವಸಗಳನ್ನು ನಾವು ಮುಟ್ಟಿದ್ದೇವೆ. 79 ದಿವಸಗಳಲ್ಲಿ ಕೊಟ್ಟಂತಹ ಪರಿಹಾರ ಎಷ್ಟೆಂದು ಅಥವಾ ಅಂಕಿ–ಅಂಶಗಳ ಪ್ರಕಾರ 10 ಸಾವಿರ ರೂಪಾಯಿ ಬಿಟ್ಟರೆ, ಉಳಿದ ಪರಿಹಾರ ಯಾರಿಗೆ ಸಿಗಬೇಕಾಗಿತ್ತೋ, ಅವರಿಗೆ ಸಿಕ್ಕಿಲ್ಲ. ಕೆಲವು ಕಡೆ ಬಿಡುಗಡೆಯಾದರೂ ಸಹ ಸಂತ್ರಸ್ಥರ ಕೈಗೆ ಆ ಪರಿಹಾರದ ಹಣ ಸಿಕ್ಕಿಲ್ಲ. ಸುಮಾರು ಒಂದು ಲಕ್ಷ ಮನೆಗಳು ಸಂಪೂರ್ಣವಾಗಿ ನಾಶವಾಗಿವೆ. ಸುಮಾರು 50 ಸಾವಿರ ಮನೆಗಳು ಭಾಗಶಃ ನಾಶಗೊಂಡಿವೆ. ಇದನ್ನು 'ಎ, ಬಿ ಮತ್ತು ಸಿ' ಎಂದು ಮೂರು ಕ್ಯಾಟಗರಿಯನ್ನಾಗಿ ಮಾಡಲಾಗಿದೆ. 'ಎ' ಕ್ಯಾಟಗರಿಯಲ್ಲಿ ಬರುವಂತಹ ಮನೆಗಳು ಸಂಪೂರ್ಣವಾಗಿ ನಾಶಗೊಂಡಿವೆ. ಈಗ ಒಂದು ಲಕ್ಷ ಮನೆಗಳು ನಾಶಗೊಂಡಿವೆ ಎಂದಾದರೆ, ಅವರು ಆ ಮನೆಗಳಲ್ಲಿ ವಾಸ ಮಾಡಲು ಆಗುವುದಿಲ್ಲ. ಅವರು ಎಲ್ಲಿಯಾದರೂ ಬಾಡಿಗೆಗೆ ವಾಸ ಇರಬೇಕಾಗುತ್ತದೆ. ಅವರು ಟೆಂಟ್‌ಗಳಲ್ಲಿ ವಾಸ ಇರಬೇಕು, ಇಲ್ಲವಾದರೆ ದೇವಸ್ಥಾನಗಳಲ್ಲಿ ವಾಸ ಇರಬೇಕು ಅಥವಾ ಅಂಗನವಾಡಿಗಳಲ್ಲಿ ವಾಸ ಇರಬೇಕು. ಅಂತಹ ಪರಿಸ್ಥಿತಿ ಇದ್ದಾಗ, ಮಾನ್ಯ ಮುಖ್ಯಮಂತ್ರಿಯವರು ನಮ್ಮ ದಕ್ಷಿಣ ಕನ್ನಡ ಜಿಲ್ಲೆಗೆ ಭೇಟಿಕೊಟ್ಟಿದ್ದಂತಹ ಧರ್ಮಸ್ಥಳದಲ್ಲಿ ಒಂದು ಸಭೆಯನ್ನು ಮಾಡಿದ್ದರು. ಆ ಸಭೆಗೆ ನಮ್ಮನ್ನು ಸಹ ಕರೆದಿದ್ದರು. ಆ ಸಭೆಯಲ್ಲಿ ಮಾನ್ಯ ಮುಖ್ಯ ಮಂತ್ರಿಯವರು ಪ್ರತಿ ಕುಟುಂಬಕ್ಕೆ ತಿಂಗಳಿಗೆ 5 ಸಾವಿರ ರೂಪಾಯಿಗಳಂತೆ ಬಾಡಿಗೆ ಕೊಡುತ್ತೇವೆಂದು ಹೇಳಿದ್ದರು. ಅದನ್ನು ತಕ್ಷಣ ಕೊಡಬೇಕು. 10 ಸಾವಿರ ರೂಪಾಯಿಗಳ ಪರಿಹಾರವನ್ನು ಯಾವಾಗ ಕೊಡುತ್ತೀರಿ, ಅದೇ ಸಮಯದಲ್ಲಿ ಆ ಬಾಡಿಗೆಯನ್ನು ಸಹ ಕೊಡಿ ಎಂದು ನಾವು ಹೇಳಿದ್ದೆವು. ಏಕೆಂದರೆ, 10 ಸಾವಿರ ರೂಪಾಯಿಗಳನ್ನು ಅವರ ಊಟ–ತಿಂಡಿಗೆ ಮತ್ತು ಮನೆಯಲ್ಲಿದ್ದ ವಸ್ತುಗಳು ಹಾಳಾಗಿವೆ ಅವುಗಳನ್ನು ತನ್ನಿ ಎಂದು ಕೊಡುತ್ತೀರಿ, ಮೊದಲು ಅವರು ನಿಲ್ಲುವುದು ಎಲ್ಲಿ ಎಂದು ಆಗಬೇಕು ಅಲ್ಲವೇ:

**(ಮುಂದು...)**

(133)10–10–2019(5–40)ಎಂವಿ–ಆರ್‌ಎನ್

**ಶ್ರೀ ಐವನ್ ಡಿ'ಸೋಜಾ (ಮುಂದು)**

ಅವರಿಗೂ ಪರಿಹಾರ ನೀಡಿ ಎಂದು ಹೇಳಿದಾಗ, ಅದಕ್ಕೆ ಸನ್ಮಾನ್ಯ ಮುಖ್ಯಮಂತ್ರಿಗಳು ತಕ್ಷಣ ಜಿಲ್ಲಾಧಿಕಾರಿಗಳಿಗೆ ತಿಳಿಸಿದರು. ಸಂತ್ರಸ್ತರು ಅವರ ಮನೆಯಲ್ಲಿ ಇರಲಿ, ಅವರ ಸಂಬಂಧಿಕರ ಮನೆಯಲ್ಲಿ ಇರಲಿ ಅಥವಾ ಅವರು ಎಲ್ಲಿ ಬೇಕಾದರೂ ಇರಲಿ ತಕ್ಷಣ ಅವರಿಗೆ ಐದು ಸಾವಿರ ರೂಪಾಯಿಗಳನ್ನು ಕೊಡಬೇಕು ಅದಕ್ಕೆ ಯಾವುದೇ ಕಾನೂನಿನ ಅಥವಾ ಬೇರೆ ಬೇರೆ ವಿಚಾರಗಳ ಸಬೂಬನ್ನು ಹೇಳುವುದು ಬೇಡ ಎನ್ನುವಂತಹ ಮಾತನ್ನು ಹೇಳಿದರು. ಆ ಸಮಯದಲ್ಲಿ ನಾನು ಮತ್ತು ಮಾನ್ಯ ಸದಸ್ಯರಾದ ಶ್ರೀ ಹರೀಶ್ ಕುಮಾರ್ ಇಬ್ಬರೂ ಸಹ ಇದ್ದೆವು. ಆದಕಾರಣ ನಾನು ಮಾನ್ಯ ಮುಖ್ಯಮಂತ್ರಿಯವರನ್ನು ಅಭಿನಂದಿಸುತ್ತೇನೆ. ಆದರೆ, ಪರಿಸ್ಥಿತಿ ಮಾತ್ರ ಆ ರೀತಿಯಾಗಿಲ್ಲ. ಈಗಿನ ಪರಿಸ್ಥಿತಿ ಏನಾಗಿದೆ ಎಂದರೆ, ಹತ್ತು ಸಾವಿರ ರೂಪಾಯಿಗಳನ್ನು ಕೊಡುವುದಕ್ಕೂ ಮೊದಲು ಎನ್‌ಡಿಆರ್‌ಎಫ್ ಅವರ ಮಾರ್ಗಸೂಚಿಯ ಪ್ರಕಾರ 3,800/– ರೂಪಾಯಿಗಳನ್ನು ಕೊಟ್ಟರು, ಮತ್ತೆ ಸರ್ಕಾರದಿಂದ ಉಳಿದ ಹಣವನ್ನು ನೀಡಿದರು. ಆ ಹಣವನ್ನು ನೀಡುವುದಕ್ಕೆ ಸುಮಾರು ಒಂದು ತಿಂಗಳ ಸಮಯವನ್ನು ತೆಗೆದುಕೊಂಡರು. ನಾವು ಒಬ್ಬರಿಗೆ ಸಹಾಯ ಮಾಡಬೇಕು, ಒಬ್ಬರ ಬದುಕನ್ನು ಕಟ್ಟಬೇಕು, ಒಬ್ಬರ ಹಸಿದ ಹೊಟ್ಟೆಗೆ ಅನ್ನ ಕೊಡಬೇಕು ಮತ್ತು ಅವರ ಹಸಿವನ್ನು ನೀಗಿಸಬೇಕು ಎಂದಾದರೆ ಅದಕ್ಕೆ ಸರ್ಕಾರ ತಕ್ಷಣ ಸ್ಪಂದನೆ ಮಾಡಬೇಕು. ಸ್ಪಂದನೆ ಮಾಡುವುದಕ್ಕೆ ಸರ್ಕಾರ ತಡ ಮಾಡಿದ್ದು ಏಕೆ ಎನ್ನುವುದು ನನ್ನ ಪ್ರಶ್ನೆಯಾಗಿದೆ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸರ್ಕಾರದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ಜನರಿಗೆ ತಪ್ಪು ಮಾಹಿತಿ ಹೋಗಬಾರದು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾ ನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಐವನ್ ಡಿ'ಸೋಜಾರವರು ಹೇಳಿರುವುದು ಜನರಿಗೆ ತಪ್ಪು ಮಾಹಿತಿ ಹೋಗಬಾರದು ಎನ್ನುವ ಕಾರಣಕ್ಕೋಸ್ಕರ ನಾನು ಸ್ಪಷ್ಟನೆ ಕೊಡಬೇಕಾಗಿದೆ. ಎಲ್ಲಿ ನಿರಾಶ್ರಿತರ ಕೇಂದ್ರ ಅಥವಾ ಕಾಳಜಿ ಕೇಂದ್ರವೆಂದು ಇದೆ ಅಲ್ಲಿ ಒಂದು ದಿವಸ ಇದ್ದರೂ ಅವರ ಖಾತೆಗಳಿಗೆ ಹತ್ತು ಸಾವಿರ ರೂಪಾಯಿಗಳನ್ನು ಜಮಾ ಮಾಡಲಾಗಿದೆ. ಅಲ್ಲಿದ್ದಂತಹ ಜಿಲ್ಲಾಧಿಕಾರಿಗಳು ಬಹಳ ಪರಿಣಾಮಕಾರಿಯಾಗಿ ಕೆಲಸ ಮಾಡಿದ್ದಾರೆ. ಏಕೆಂದರೆ, ಅವರು ರಾತ್ರಿ 12.00 ಗಂಟೆಯಿಂದ 1.00 ಗಂಟೆಯವರೆಗೆ ನಮ್ಮ ಜೊತೆಯಲ್ಲಿ ಇದ್ದರು. ಅದು ಮಾನ್ಯ ಸದಸ್ಯರಿಗೂ ಸಹ ಗೊತ್ತಿದೆ. ಹಾಗಾಗಿ ಯಾರಿಗೂ ಒಂದು ರೂಪಾಯಿ ಕೂಡ ವಿಳಂಬವಾಗಿಲ್ಲ. ಏಕೆಂದರೆ, ಚೆಕ್ ಕೊಡಬಾರದು ನೇರವಾಗಿ ಅವರ ಖಾತೆಗೆ ಹಾಕಬೇಕು ಎಂದು ಇತ್ತು. ಅವರ ಖಾತೆಗೆ ಹಾಕಬೇಕು ಎನ್ನುವ ಕಾರಣಕೋಸ್ಕರ ತಡವಾಯಿತು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆಗ ಅಲ್ಲಿನ ಬೆಳ್ತಂಗಡಿಯ ಮಾನ್ಯ ಶಾಸಕರಾದ ಶ್ರೀ ಹರೀಶ್ ಪುಂಜರವರು ಇದ್ದರು. ಸಂತ್ರಸ್ತರು ಶಾಲೆಯಲ್ಲಿದ್ದಾರೆ ನೀವು ಅವರಿಗೆ ಚೆಕ್ ಕೊಟ್ಟರೆ ಅವರು ಬ್ಯಾಂಕ್‌ಗೆ ಹೋಗಿ ತೆಗೆದುಕೊಂಡು ಬರುವುದಕ್ಕೆ ಆಗುವುದಿಲ್ಲ ಮತ್ತು ಆರ್‌ಟಿಜಿಎಸ್ ಮಾಡುವುದಕ್ಕೆ ಕೆಲವರ ಬಳಿಯಲ್ಲಿ ಖಾತೆಗಳಿಲ್ಲ. ಆದುದರಿಂದ ಅವರಿಗೆ ನಗದಾಗಿ ಕೊಡಬೇಕೆಂದು ಹೇಳಿದರು. ಆಗ ಜಿಲ್ಲಾಧಿಕಾರಿಗಳು ಏನು ಮಾಡಿದರು ಎಂದರೆ, ಅಲ್ಲಿಗೆ ಬ್ಯಾಂಕ್ ಮ್ಯಾನೇಜರ್‌ರವರನ್ನು ನಗದು ಸಹಿತ ಕರೆದುಕೊಂಡು ಬಂದರು. ಆಗ ಅವರು ಅಲ್ಲೇ ಚೆಕ್‌ಗೆ ದರ್‌ಖಾಸ್ತು ಹಾಕಿಕೊಟ್ಟು ನಗದು ಕೊಟ್ಟು ಹೋಗಿರುವುದನ್ನು ನಾನೇ ಕಣ್ಣಾರೆ ಕಂಡಿದ್ದೇನೆ. ಅದಕ್ಕೆ ನಾನು ಜಿಲ್ಲಾಧಿಕಾರಿಗಳಿಗೆ ಅಭಿನಂದನೆಯನ್ನು ತಿಳಿಸಿದ್ದೇನೆ. ಅಂತಹ ಯಾವುದೇ ನಿರ್ದಿಷ್ಟ ಪ್ರಕರಣಗಳು ಇದ್ದರೆ, ಶಾಸಕರು ಪುನಃ ಮಾತನಾಡಿ ಅದನ್ನು ಕೊಡಿಸುವುದಕ್ಕೆ ಅಧಿಕಾರವಿದೆ. ದಯವಿಟ್ಟು ತಾವು ಹೇಳಿರುವುದಕ್ಕೆ ಸ್ಪಷ್ಟೀಕರಣ ಕೊಟ್ಟಿದ್ದೇನೆ. ಏಕೆಂದರೆ ಸದನಕ್ಕೆ ತಪ್ಪು ಮಾಹಿತಿ ಹೋಗಬಾರದು ಎನ್ನುವ ಕಾರಣಕ್ಕೋಸ್ಕರ ಅಷ್ಟೇ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ಈಗ ಮಾನ್ಯ ಸಭಾನಾಯಕರು ಹೇಳಿದ ಹಾಗೆ ಹತ್ತು ಸಾವಿರ ರೂಪಾಯಿ ಕೊಟ್ಟಿರುವಂಥದ್ದು ಸಿಕ್ಕಿದೆ. ಅವರು ಹತ್ತು ಸಾವಿರಕ್ಕಿಂತ ಮೇಲೆ ಮಾತನಾಡಲಿ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 12 ಜೀವ ಹಾನಿಯಾಗಿದೆ ಮತ್ತು 2412 ಕುಟುಂಬಗಳು ಸಂಕಷ್ಟಕ್ಕೆ ಒಳಗಾಗಿವೆ. ಅವರಿಗೆ ಹತ್ತು ಸಾವಿರ ರೂಪಾಯಿಗಳ ಪರಿಹಾರವನ್ನು ನೀಡಿದ್ದಾರೆ. ಮನೆ ಕಳೆದುಕೊಂಡ 2412 ಕುಟುಂಬಗಳಿಗೆ ಏನಾದರೂ ಹಣವನ್ನು ಬಿಡುಗಡೆ ಮಾಡಿದ್ದಾರೆಯೇ? ಅವರು ಬಾಡಿಗೆ ಮನೆಯಲ್ಲಿ ಇರುವುದಕ್ಕೆ ಏನಾದರೂ ಕೊಟ್ಟಿದ್ದಾರೆಯೇ? ಅಥವಾ ಮನೆಯನ್ನು ಕಟ್ಟಿಕೊಳ್ಳಿ ಎಂದು ಜಾಗವನ್ನೇನಾದರೂ ಕೊಟ್ಟಿದ್ದಾರೆಯೇ? ಅಥವಾ ಅವಿಭಕ್ತ ಕುಟುಂಬದವರು ಇದ್ದರೆ ಅಷ್ಟೂ ಕುಟುಂಬದವರನ್ನು ವಿಂಗಡಿಸಿ, ಅವರಲ್ಲಿ ಎಷ್ಟು ಕುಟುಂಬದವರು ಎಲ್ಲಿ ಇರಬೇಕೆಂದು, ಅವರಿಗೆ ಏನಾದರೂ ಮಾಹಿತಿ ಕೊಟ್ಟಿದ್ದಾರೆಯೇ? ಅವರಿಗೆ ಏನನ್ನು ಮಾಹಿತಿ ಕೊಡದೇ ಇದ್ದಾಗ ಅವರು ಎಲ್ಲಿಗೆ ಹೋಗಬೇಕು?

**ವೈಸ್ ಛೇರ್ಮನ್‌ರವರು:-** ಮಾನ್ಯ ಸಭಾನಾಯಕರೇ, ತಾವು ಮಾನ್ಯ ಸದಸ್ಯರು ಮಾತನಾಡಿದ ಮೇಲೆ ಹೇಳಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ನನಗೆ ಮತ್ತು ಮಾನ್ಯ ಐವನ್ ಡಿ'ಸೋಜಾರವರ ಜೊತೆ ಒಂದು ಒಳ್ಳೆಯ ಒಡನಾಟವಿದೆ ಅದು ಮಾನ್ಯ ಕೆ.ಟಿ.ಶ್ರೀಕಂಠೇಗೌಡರಿಗೆ ಗೊತ್ತಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಮೊದಲು ಮಾನ್ಯ ಸದಸ್ಯರು ಮಾತನಾಡುವುದನ್ನು ಕೇಳಿಸಿಕೊಳ್ಳಲಿ. ನಂತರ ಮಾನ್ಯ ಸಭಾನಾಯಕರು ಉತ್ತರ ಹೇಳಲಿ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಮಾಹಿತಿ ಕೇಳಿರುವುದಕ್ಕೆ ನಾನು ಹೇಳುತ್ತಿದ್ದೇನೆ ಅಷ್ಟೇ.

**ವೈಸ್ ಛೇರ್ಮನ್‌ರವರು:–** ಮಾನ್ಯ ಸಭಾನಾಯಕರು, ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುವ ರೀತಿಯಲ್ಲಿ ಮಾತನಾಡುತ್ತಿದ್ದಾರೆ. ಮಾನ್ಯ ಸಭಾನಾಯಕರು ತಾವು ಉತ್ತರ ನೀಡುವಾಗ ಅದನ್ನು ಹೇಳಿ.

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ಜಿಲ್ಲೆಯಲ್ಲಿ ಒಟ್ಟು 20 ಪರಿಹಾರ ಕೇಂದ್ರಗಳನ್ನು ತೆರೆಯಲಾಗಿತ್ತು. ಆ ಭಾಗದಲ್ಲಿ ಸುಮಾರು 1326 ಮಂದಿ ಸಂತ್ರಸ್ತರು ಇದ್ದರು. ಈ ಮೊದಲು ನಾವು ಅವುಗಳನ್ನು ಗಂಜಿ ಕೇಂದ್ರಗಳೆಂದು ಕರೆಯುತ್ತಿದ್ದೆವು. ಈಗ ಗಂಜಿ ಕೇಂದ್ರವನ್ನು ಸ್ವಲ್ಪ upgrade ಮಾಡಿ, ಅವುಗಳನ್ನು 'ಕಾಳಜಿ ಕೇಂದ್ರ' ಗಳೆಂದು ಕರೆಯುವುದಕ್ಕೆ ಪ್ರಾರಂಭ ಮಾಡಿದರು. ಗಂಜಿ ಕೇಂದ್ರ ಎನ್ನುವುದಕ್ಕಿಂತ ಅವರ ಬಗ್ಗೆ ಕಾಳಜಿ ತೆಗೆದುಕೊಳ್ಳುವುದರಿಂದ ಅದಕ್ಕೆ ಕಾಳಜಿ ಕೇಂದ್ರ ಎಂದು ಕರೆದರು. The term 'Ganji Kendra' doesn't sounds well. ಅದಕ್ಕೆ ನಾನು ಸರ್ಕಾರವನ್ನು ಅಭಿನಂದಿಸುತ್ತೇನೆ. ಪ್ರಾರಂಭಿಕ ಹಂತದಲ್ಲಿ ಕೆಲಸಗಳು ಒಳ್ಳೆಯ ರೀತಿಯಲ್ಲಿ ನಡೆದಿವೆ. ಅವರು ಕಾಳಜಿ ಕೇಂದ್ರಕ್ಕೆ ಭೇಟಿ ನೀಡಿದಂತಹ ಸಂದರ್ಭದಲ್ಲಿ ಏಕ ಚಕ್ರಾಧಿಪತ್ಯ; 'One Man Minister' ಸರ್ಕಾರವಿತ್ತು. ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್.ಯಡಿಯೂರಪ್ಪನವರು ಒಬ್ಬರೇ ಮಂತ್ರಿಯಾಗಿದ್ದರು. ಬೇರೆ ಯಾರು ಸಹ ಇರಲಿಲ್ಲ. ಅವರು ತಮಗೆ ಎಷ್ಟು ಸಾಧ್ಯವೋ ಅಷ್ಟು ಓಡಾಟ ಮಾಡಿದರು, ಅದಕ್ಕೆ ನಾನು ಅವರನ್ನು ಅಭಿನಂದಿಸುತ್ತೇನೆ. ತದನಂತರದ ಕೆಲಸಗಳು ಅಂದರೆ, ನಮಗೆ ಸಂಕಷ್ಟಗಳು ಬರುವುದು ಯಾವಾಗ ಎಂದರೆ; ಸಂಕಷ್ಟ ಬಂದಮೇಲೆ ಅವರಿಗೆ ಪರಿಹಾರ ಕೊಡದೆ ಇದ್ದರೆ ಏನಾಗುತ್ತದೆ ಎಂಬುದರ ಪರಿಣಾಮ ಈಗ ಜನರ ಮುಂದೆ ಬರುವುದಕ್ಕೆ ಪ್ರಾರಂಭವಾಗಿದೆ. ಈಗಾಗಲೇ ಅದರ ಬಗ್ಗೆ ಚರ್ಚೆಯಾಗಿದೆ. ಕಳೆದ ಬಾರಿ ಇಬ್ಬರು ರೈತರು ಆತ್ಮಹತ್ಯೆ ಮಾಡಿಕೊಂಡರು. ನಂತರ ಒಬ್ಬ ರೈತ ಆತ್ಮಹತ್ಯೆ ಮಾಡಿಕೊಂಡರು. ಈಗ ಪರಿಹಾರ ಸರಿಯಾಗಿ ಸಿಗದೆ ಇದ್ದರೆ. ಮುಂದಕ್ಕೆ ಬರುವಂತಹ ಪರಿಣಾಮ ಆತ್ಮಹತ್ಯೆಗೆ ಹೋಗುತ್ತದೆ. ಹಾಗಾಗಿ ಇದರ ಬಗ್ಗೆ ಸರ್ಕಾರಕ್ಕೆ ತುಂಬಾ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಜವಾಬ್ದಾರಿ ಇದೆ. ಆದರೆ, ಸರ್ಕಾರದಲ್ಲಿ ಹಣದ ಕೊರತೆ ಇದೆ ಎಂದು ನನಗೆ ಅನಿಸುತ್ತದೆ. ಆದರೆ, ಮಾನ್ಯ ಮುಖ್ಯಮಂತ್ರಿಗಳು ಹಣದ ಕೊರತೆ ಇಲ್ಲವೆಂದು ಹೇಳಿದರು. ಆದರೆ, ಎಲ್ಲಾ ಕಡೆ ಹೇಳುವುದು ಖಜಾನೆ ಖಾಲಿ ಮಾಡಿದ್ದಾರೆ ಮತ್ತು ಲೂಟಿ ಹೊಡೆದಿದ್ದಾರೆ ಎನ್ನುವಂತಹ ಮಾತನ್ನು ಹೇಳಿದ್ದಾರೆ. ಅದಕ್ಕೆ ಪರ ಮತ್ತು ವಿರೋಧವಾಯಿತು. ಇವತ್ತು ಸಂತ್ರಸ್ತರಿಗೆ ಸಹಾಯ ಮಾಡಬೇಕಾದವರು ಯಾರು? ನಾವು ತೊಂದರೆಯಲ್ಲಿ ಇದ್ದೇವೆ. ಸಂಗ್ರಹವಾದ ತೆರಿಗೆಯಲ್ಲಿ ಶೇಕಡಾ 58ರಷ್ಟು ಕೇಂದ್ರ ಸರ್ಕಾರಕ್ಕೆ ಹೋಗುತ್ತದೆ ಮತ್ತು ಶೇಕಡಾ 42ರಷ್ಟು ರಾಜ್ಯ ಸರ್ಕಾರಕ್ಕೆ ಉಳಿಯುತ್ತದೆ. ಆದರೆ, ಈ ತರಹದ ತೊಂದರೆಗಳು ಬಂದಾಗ, ಸುಮಾರು ಒಂದು ಲಕ್ಷ ಕೋಟಿಗೂ ಹೆಚ್ಚು ನಷ್ಟ ಸಂಭವಿಸಿದಾಗ, ಕೇಂದ್ರ ಸರ್ಕಾರ ನಮ್ಮ ಸಹಾಯಕ್ಕೆ ಬರಬೇಕಲ್ಲವೇ? ನಾವು ಕೇಂದ್ರ ಸರ್ಕಾರವನ್ನು ಕೇಳುವುದು ಬೇಡವೆ? ಈಗ ಯಾರು ಹಣ ನೀಡಿ ಎಂದು ಧ್ವನಿ ಎತ್ತುತ್ತಾರೆ ಅಂತಹವರಿಗೆ ಕೆಲವು ಕಡೆಗಳಲ್ಲಿ ಷೋಕಾಸ್ ನೋಟಿಸ್ ನೀಡುತ್ತಾರೆ.  ಮತ್ತೆ ಕೆಲವರನ್ನು ಅವರು ದೇಶದ್ರೋಹಿ ಎನ್ನುವಂತಹ ಮಾತನ್ನು ಹೇಳಿದ್ದೇ ಆದರೆ, ಈ ರಾಜ್ಯವನ್ನು ರಕ್ಷಣೆ ಮಾಡುವವರು ಯಾರು? ಇವತ್ತಿನ ದಿವಸ ಒಂದು ಲಕ್ಷ ಕೋಟಿಗೂ ಹೆಚ್ಚು ನಷ್ಟವಾದಾಗ ಕೇವಲ 1200 ಕೋಟಿ ರೂಪಾಯಿಗಳನ್ನು ಕೊಟ್ಟು ನೀವು ಸುಧಾರಿಸಿಕೊಳ್ಳಿ ಎಂದು ಹೇಳಿದರೆ, ಈ ರಾಜ್ಯದ ಜನ ಎಲ್ಲಿಗೆ ಹೋಗಬೇಕು? ಈ ರಾಜ್ಯದ ಜನರ ಬದುಕನ್ನು ಕಟ್ಟಿಕೊಡುವವರು ಯಾರು? ನಾವು ರಾಜಕಾರಣ ಮಾತನಾಡುವುದು ಬೇಡ. 2009ರಲ್ಲಿ ಈ ತರಹದ ಘಟನೆ ನಡೆಯಿತು. ಅಂದು ಮಾನ್ಯ  ಬಿ.ಎಸ್.ಯಡಿಯೂರಪ್ಪನವರು ಮುಖ್ಯಮಂತ್ರಿಗಳಾಗಿದ್ದರು. ಆಗ ಕೇಂದ್ರದಲ್ಲಿ ಯುಪಿಎ ಸರ್ಕಾರವಿತ್ತು. ಶ್ರೀಮತಿ ಸೋನಿಯಾ ಗಾಂಧಿ ಮತ್ತು ಮಾಜಿ ಪ್ರಧಾನ ಮಂತ್ರಿಗಳಾದ ಡಾ॥ ಮನಮೋಹನ್ ಸಿಂಗ್‌ರವರು ಬಂದು ನೆರೆ ವೀಕ್ಷಣೆ ಮಾಡಿ, ಸುಮಾರು 1600 ಕೋಟಿ ರೂಪಾಯಿಗಳನ್ನು ತಕ್ಷಣವೇ ಬಿಡುಗಡೆ ಮಾಡುವುದಕ್ಕೆ ಆದೇಶ ಕೊಟ್ಟು ಹೋಗಿರುವಂಥದ್ದು ನಮ್ಮ ಮುಂದೆ ಇದೆ. ಈಗ ಅದು ಒಂದು ಚರಿತ್ರೆಯಾಗಿದೆ. ಆಗ ಆಗಿದ್ದಂತಹ ನಷ್ಟ ಈಗ ಆಗಿರುವಂತಹ ನಷ್ಟದಲ್ಲಿ ಶೇಕಡಾ 10 ಪಾಲು ಸಹ ಇರಲಿಲ್ಲ. ಆದರೆ, ಇವತ್ತು ಇಷ್ಟು ದೊಡ್ಡ ನಷ್ಟವಾದಾಗ ಕೇಂದ್ರ ಸರ್ಕಾರದ ತಂಡದವರು ಬಂದು ವರದಿಯನ್ನು ತೆಗೆದುಕೊಂಡು ಹೋಗುತ್ತಾರೆ. ಮತ್ತೆ ಕೇಂದ್ರ ಸರ್ಕಾರದಿಂದ ವರದಿ ವಾಪಸ್ಸು ಬರುತ್ತದೆ. ಅದರಲ್ಲಿ ರಾಜ್ಯ ಸರ್ಕಾರದ ವರದಿಗೂ ಮತ್ತು ಕೇಂದ್ರ ಸರ್ಕಾರದ ವರದಿಗೂ ತಾಳೆ ಆಗುವುದಿಲ್ಲವೆಂದು ಹೇಳುತ್ತಾರೆ. ಸ್ವಾಮಿ, ನಷ್ಟ ಮತ್ತು ಕಷ್ಟ ಉಂಟಾದಾಗ ನಮಗೆ ವರದಿಗಳು ಬೇಕೇ? ಅಲ್ಲಿಗೆ ಆಹ್ವಾನ ಬೇಕೆ? ನಮಗೆ ಪರಿಚಯ ಇರುವಂತಹವರ ಮನೆಯಲ್ಲಿ ಯಾರಾದರೂ ಮರಣ ಹೊಂದಿದರೆ, ಅವರ ಮನೆಯವರು ನಮಗೆ ಆಹ್ವಾನ ಪತ್ರಿಕೆ ಕಳುಹಿಸಿದಾಗ ನಾವು ಅವರ ಮರಣವನ್ನು ನೋಡುವುದಕ್ಕೆ ಹೋಗುತ್ತೇವೆಯೇ? ಯಾರೇ ಇರಲಿ ಅಥವಾ ನಮ್ಮ ವಿರೋಧಿಯೇ ಇರಲಿ ನೇರವಾಗಿ ಮೊದಲು ಅವರ ಮನೆಗೆ ಹೋಗಿ, ಅವರ ಕುಟುಂಬದವರನ್ನು ಸಂತೈಸುವಂತಹ ಕೆಲಸ ಮಾಡುತ್ತೇವೆ. ಆ ಕೆಲಸ ಕೇಂದ್ರ ಸರ್ಕಾರದಿಂದ ಆಗಲಿಲ್ಲ ಎನ್ನುವುದನ್ನು ಪ್ರಾಮಾಣಿಕವಾಗಿ ಆಡಳಿತ ಪಕ್ಷದವರು ಒಪ್ಪಿಕೊಳ್ಳಬೇಕು. ಅದರಲ್ಲಿ

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ರಾಜಕಾರಣ ಬೇಡ, ನೆರೆ ಸಂಭವಿಸಿ ಇಂದಿಗೆ 79 ದಿವಸವಾಗಿದೆ. ಈ ದೇಶದ ಪ್ರಧಾನ ಮಂತ್ರಿಗಳು ಈ ಭಾಗಕ್ಕೆ ಬಂದು ಅದರ ವೀಕ್ಷಣೆ ಮಾಡಿ ಹೋಗಿದ್ದರೆ ನಮಗೆ ಸಂತೋಷವಾಗುತ್ತಿತ್ತು. ಅವರು ನಮಗೂ ಸಹ ಪ್ರಧಾನ ಮಂತ್ರಿಗಳು. ಅವರು ಇಲ್ಲಿಗೆ ಏಕೆ ಬರಲಿಲ್ಲವೆಂದು ಮತ್ತು ಹಣವನ್ನು ಏಕೆ ಕೊಡಲಿಲ್ಲವೆಂದು ಪ್ರಶ್ನೆ ಮಾಡಬೇಕು. ತಾವು ಕೇಂದ್ರ ಸರ್ಕಾರಕ್ಕೆ ಒಂದು ನಿಯೋಗವನ್ನು ಕರೆದುಕೊಂಡು ಹೋಗಬಹುದಾಗಿತ್ತಲ್ಲವೇ? ನಾವೆಲ್ಲರೂ ಸಹ ಒಟ್ಟಾಗಿ ಸೇರಿಕೊಂಡು ಹೋಗಿ ನಮಗೆ ಪರಿಹಾರ ಕೊಡಿ ಎಂದು ಕೇಳಬಹುದಾಗಿತ್ತು. ಆ ಕೆಲಸದಲ್ಲಿ ನಾವು ಹಿಂದೆ ಬಿದ್ದಿದ್ದೇವೆಂದು ನನಗೆ ಅನಿಸುತ್ತಿದೆ. ಏನಾದರೂ ಸಹಾಯ ಮಾಡಬೇಕಾದರೆ ನಮಗೆ ಹಣ ಬೇಕು. ಹಣವಿಲ್ಲದೆ ಏನನ್ನು ಮಾಡುವಂತಿಲ್ಲ. ಹಾಗಾಗಿ ಇವತ್ತು ಈ ರಾಜ್ಯದ ಜನರಿಗೆ ಎಲ್ಲೋ ಒಂದು ಕಡೆ ನಮ್ಮ ರಕ್ಷಣೆಗೆ ಯಾರು ಇಲ್ಲವೆಂಬ ಭಾವನೆ ಬಂದಿದೆ. ಅದಕ್ಕಾಗಿ ರೈತರು ತಮಗೆ ತಾವೇ ಗುಂಡಿಕಿಕೊಂಡು ಸಾಯುತ್ತಿದ್ದಾರೆ. ಆ ರೀತಿ ಗುಂಡು ಹಾರಿಸಿಕೊಂಡ ರೈತನ ಮನೆಗೆ ನಾನು ಮತ್ತು ಕೆಳಮನೆಯ ವಿರೋಧ ಪಕ್ಷದ ನಾಯಕರಾದ ಶ್ರೀ ಸಿದ್ದರಾಮಯ್ಯನವರು ಭೇಟಿ ನೀಡಿದ್ದೆವು. ಅವರ ಮನೆಯ ಕೂಗು, ಅವರು ಹೇಳುವಂತಹ ವಿಚಾರವೆಂದರೆ, ಬಹುಶಃ ಹಲವಾರು ಈ ರೀತಿಯ ವಿಚಾರಗಳು ಬರುವಂತಹ ಅವಕಾಶಗಳಿವೆ. ಹಾಗಾಗಿ ಇವತ್ತು ಬದುಕನ್ನು ಕಟ್ಟಿಕೊಳ್ಳಬೇಕಾದರೆ, ಅವರಿಗೆ ಎಲ್ಲೋ ಒಂದು ಕಡೆ ನೆಮ್ಮದಿಯ ಜೀವನ ಕೊಡಬೇಕಾದರೆ, ನಾವು ಅವರಿಗೆ ಏನು promise ಮಾಡಿದ್ದೇವೆ. ಈಗ ಅವರು ಏನು ಹೇಳಿದ್ದಾರೆ ಅಂದರೆ, ಸಂಪೂರ್ಣ ಮನೆಯನ್ನು ಕಳೆದುಕೊಂಡವರಿಗೆ ಐದು ಲಕ್ಷ ರೂಪಾಯಿಗಳನ್ನು ಕೊಡುತ್ತೇವೆ ಮತ್ತು ಭಾಗಶಃ ಮನೆ ಕಳೆದುಕೊಂಡವರಿಗೆ ಒಂದು ಲಕ್ಷ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿದ್ದಾರೆ. ಆದರೆ. ಹಣ ಇನ್ನೂ ಸಹ ಬಿಡುಗಡೆಯಾಗಿಲ್ಲ. ಅದರ ಬಗ್ಗೆ ಇನ್ನು ಏನೂ ವಿಚಾರಗಳು ನಡೆದಿಲ್ಲ. ಹಾಗಿರುವಾಗಿ ನಮ್ಮ ಊರಾದ ಬೆಳ್ತಂಗಡಿ ತಾಲ್ಲೂಕಿನಲ್ಲಿ ಬೆಳೆ ನಾಶವಾಗಿರುವ ಪರಿಸ್ಥಿತಿಯನ್ನು ಕಂಡರೆ, ಅಲ್ಲಿನ ಒಂದೊಂದು ಗುಡ್ಡಗಳು ಸಂಪೂರ್ಣವಾಗಿ ಜರುಗುತ್ತಿವೆ ಇದರಿಂದ ಭೌಗೋಳಿಕವಾದಂತಹ ಪ್ರದೇಶವೇ ಬೇರೆಯಾಗಿ ಬಿಟ್ಟಿದೆ.

**(ಮುಂದು...)**

(134) 10.10.2019-05.50-LL-VK

ಶ್ರೀ ಐವನ್ ಡಿ'ಸೋಜಾ(ಮುಂದುವರೆದಿದ್ದು...)

ಗ್ರಾಮಕ್ಕೆ ಗ್ರಾಮಗಳು ಒಂದಾಗಿಬಿಟ್ಟಿವೆ. ಮಳೆಯಿಂದಾಗಿ ಎಷ್ಟು ಹೋಯ್ಗೆ ಬಂದು ತುಂಬಿದೆಯೆಂದರೆ, ಸುಮಾರು 20 ರಿಂದ 30 ಅಡಿಯಷ್ಟು ಎತ್ತರದ ಒಯ್ಗೆ ಬಂದು ಮನೆಗಳು ತುಂಬಿ ಹೋಗಿವೆ. ಅಲ್ಲದೇ, ಆ ಭಾಗದ ಕೃಷಿ ಭೂಮಿಗಳಲ್ಲಿಯೂ ಸಹ ಒಯ್ಗೆ ತುಂಬಿಕೊಂಡಿದ್ದು, ಆ ಜಮೀನಿನಲ್ಲಿ ಕೃಷಿ ಮಾಡುವುದಕ್ಕೆ ಇನ್ನು ಎಷ್ಟು ವರ್ಷಗಳು ಬೇಕಾಗಬಹುದು ಎಂಬ ಅಂಶದ ಬಗ್ಗೆ ನಾವು ಚಿಂತನೆ ಮಾಡಬೇಕಾಗಿದೆ. ಮಂಗಳೂರಿನಲ್ಲಿ...

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಂ.ಕೆ.ಪ್ರಾಣೇಶ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು 1 ಲಕ್ಷ ರೂಪಾಯಿ ಪರಿಹಾರದ ಹಣವನ್ನು ಯಾವುದೇ ಮನೆಗಳಿಗೆ ನೀಡಿರುವುದಿಲ್ಲವೆಂದು ಹೇಳಿದ್ದಾರೆ. ಆದರೆ, ನಾನು ನನ್ನ ಜಿಲ್ಲೆಯಿಂದ ಸಂಪೂರ್ಣ ಮಾಹಿತಿ ತರಿಸಿಕೊಂಡಿದ್ದೇನೆ. ಅದರ ಪ್ರಕಾರ ನಮ್ಮ ಜಿಲ್ಲೆಯಲ್ಲಿ 38 ಲಕ್ಷ ರೂಪಾಯಿಗಳಷ್ಟು ಹಣವನ್ನು ಹಾನಿಗೊಳಗಾದ ಪ್ರತಿ ಮನೆ ಸದಸ್ಯರ ಬ್ಯಾಂಕ್ ಖಾತೆಗೆ ಈಗಾಗಲೇ ತುಂಬಲಾಗಿರುತ್ತದೆ. ಈ ಬಗ್ಗೆ ನನ್ನ ಬಳಿ ದಾಖಲೆ ಇದೆ. ಏತಕ್ಕೆ ಇದನ್ನು ಹೇಳುತ್ತಿದ್ದೇನೆಂದರೆ, ಸದನದ ದಿಕ್ಕು ತಪ್ಪಿಸುವಂತಹ ಕೆಲಸ ಇಲ್ಲಿ ಆಗಬಾರದು.

**ಶ್ರೀ ಯು.ಬಿ.ವೆಂಕಟೇಶ್:–** ಮಾನ್ಯ ಸಭಾಪತಿಯವರೇ, ಮಾನ್ಯ ಐವನ್ ಡಿ'ಸೋಜಾರವರು ತಮ್ಮ ಭಾಗದ ಜನರ ಬ್ಯಾಂಕ್ ಖಾತೆಗಳಿಗೆ ಹಣ ತುಂಬಿರುವುದಿಲ್ಲವೆಂದು ಹೇಳುತ್ತಿದ್ದಾರೆ. ಮಾನ್ಯ ಪ್ರಾಣೇಶ್‌ರವರ ಜಿಲ್ಲೆಯ ಬಗ್ಗೆ ಮಾತನಾಡಿರುವುದಿಲ್ಲ.

**(ಗೊಂದಲ)**

**ಶ್ರೀ ಎಂ.ಕೆ.ಪ್ರಾಣೇಶ್:–** ಮಾನ್ಯ ಸಭಾಪತಿಯವರೇ, ನಾನು ಹೇಳುತ್ತಿರುವುದೇನೆಂದರೆ ಇವೊತ್ತಿನ ದಿವಸ ರಾಜ್ಯ ಸರ್ಕಾರ ನಿರಾಶ್ರಿತರಿಗೆ ಯಾವುದೇ ಪರಿಹಾರ ಹಣವನ್ನು ನೀಡಿರುವುದಿಲ್ಲವೆಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಆದರೆ, ಪರಿಹಾರ ನೀಡಿರುವುದಕ್ಕೆ ನನ್ನ ಬಳಿ ದಾಖಲೆ ಇದೆ.

**(ಗೊಂದಲ)**

**ಶ್ರೀ ಯು.ಬಿ.ವೆಂಕಟೇಶ್:–** ಮಾನ್ಯ ಸಭಾಪತಿಯವರೇ, ಮಾನ್ಯ ಐವನ್ ಡಿ'ಸೋಜಾರವರು ತಮ್ಮ ಭಾಗದ ನಿರಾಶ್ರಿತರ ಬಗ್ಗೆ ಮಾತನಾಡಬೇಕಾದರೆ, ಮಧ್ಯದಲ್ಲಿ ಮಾನ್ಯ ಪ್ರಾಣೇಶ್‌ರವರು ಏತಕ್ಕೆ ಎದ್ದು ನಿಂತು ಮಾತನಾಡುತ್ತಾರೆ?

**(ಗೊಂದಲ)**

**ವೈಸ್ ಛೇರ್ಮನ್:–** ಮಾನ್ಯ ಪ್ರಾಣೇಶ್‌ರವರೇ, ಸರ್ಕಾರದಿಂದ ಉತ್ತರ ಕೊಡುವಾಗ ತಮ್ಮ ಉತ್ತರವನ್ನು ಸಹ ಕೊಡಬಹುದಾಗಿರುತ್ತದೆ.

**(ಗೊಂದಲ)**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಎಂ.ಕೆ. ಪ್ರಾಣೇಶ್:–** ಮಾನ್ಯ ಸಭಾಪತಿಯವರೇ, ನಿರಾಶ್ರಿತರ ಪರಿಹಾರ ಹಣವಾಗಿ ರಾಜ್ಯ ಸರ್ಕಾರ ಒಟ್ಟು 5 ಲಕ್ಷ ರೂಪಾಯಿಗಳನ್ನು ಘೋಷಣೆ ಮಾಡಿದ್ದು, ಈಗಾಗಲೇ ಫೌಂಡೇಷನ್‌ಗಾಗಿ 1 ಲಕ್ಷ ರೂಪಾಯಿ ಹಣವನ್ನು ಸಂಬಂಧಪಟ್ಟ ನಿರಾಶ್ರಿತರ ಬ್ಯಾಂಕ್ ಖಾತೆಗೆ ತುಂಬಲಾಗಿರುತ್ತದೆ. ಉಳಿದ 4 ಲಕ್ಷ ರೂಪಾಯಿಗಳನ್ನು ಮನೆ ಕಟ್ಟುವುದಕ್ಕೆ ನಂತರದಲ್ಲಿ ಅವರ ಬ್ಯಾಂಕ್ ಖಾತೆಗೆ ತುಂಬಲಾಗುತ್ತದೆ.

**(ಗೊಂದಲ)**

**ವೈಸ್ ಛೇರ್ಮನ್:–** ಈ ಬಗ್ಗೆ ಸರ್ಕಾರದಿಂದ ಉತ್ತರ ಕೊಡುವಾಗ ಹೇಳುತ್ತಾರೆ ಬಿಡಿ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಪ್ರತಿಪಕ್ಷದವರು ಹೇಳಿದ ರೀತಿ ನಾವು ಕೇಳಬೇಕೇ?

**(ಗೊಂದಲ)**

**ಶ್ರೀ ಯು.ಬಿ.ವೆಂಕಟೇಶ್:–** ಮಾನ್ಯ ಸಭಾಪತಿಯವರೇ, ಮಾನ್ಯ ಐವನ್ ಡಿ'ಸೋಜಾರವರು ತಮ್ಮ ಭಾಗದ ನಿರಾಶ್ರಿತರ ಬ್ಯಾಂಕ್ ಖಾತೆಗೆ ಹಣ ತುಂಬಿರುವುದಿಲ್ಲವೆಂದು ಹೇಳುತ್ತಿದ್ದಾರೆ. ಮಾನ್ಯ ಪ್ರಾಣೇಶ್‌ರವರ ಭಾಗದ ಬಗ್ಗೆ ಕೇಳುತ್ತಿಲ್ಲ.

**(ಗೊಂದಲ)**

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಇಡೀ ಕರ್ನಾಟಕ ರಾಜ್ಯದಲ್ಲಿ ಪ್ರವಾಹದಿಂದ ಹಾನಿಗೊಳಗಾದ ನಿರಾಶ್ರಿತರಿಗೆ ರಾಜ್ಯ ಸರ್ಕಾರ ಇದುವರೆವಿಗೆ ಎಷ್ಟು ಪರಿಹಾರ ನೀಡಿದೆ ಎಂಬ ಬಗ್ಗೆ ಮಾಹಿತಿ ನೀಡಿ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ...

**(ಗೊಂದಲ)**

**ವೈಸ್ ಛೇರ್ಮನ್:–** ಈ ಎಲ್ಲಾ ವಿಚಾರಗಳನ್ನು ಸರ್ಕಾರದಿಂದ ಉತ್ತರ ಕೊಡುವಾಗ ಹೇಳಬಹುದಾಗಿರುತ್ತದೆ.

**(ಗೊಂದಲ)**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಮಾನ್ಯ ಡಿಸೋಜಾರವರು ತಮ್ಮ ಜಿಲ್ಲೆಯ ಬಗ್ಗೆ ಮಾತನಾಡುತ್ತಿದ್ದಾರೆ. ಮಾನ್ಯ ಪ್ರಾಣೇಶ್‌ರವರ ಜಿಲ್ಲೆಯ ವಿಚಾರ ಬಂದಾಗ ಅವರು ಮಾತನಾಡಲಿ. ಆದರೆ, ಬೇರೆಯವರ ಜಿಲ್ಲೆಯ ಬಗ್ಗೆ ಮಾತನಾಡುವಾಗ ಏತಕ್ಕೆ ತೊಂದರೆ ಕೊಡಬೇಕು?

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಸದನದ ಯಾವುದೇ ಸದಸ್ಯರು ಯಾವುದೇ ವಿಷಯದ ಬಗ್ಗೆ ಮಾತನಾಡುವಾಗ ಸರ್ಕಾರ ಮಧ್ಯಪ್ರವೇಶ ಮಾಡುವುದಕ್ಕೆ ಅಧಿಕಾರವಿರುತ್ತದೆ. ಪ್ರಸ್ತುತ ಸದನದ ನಿಯಮ ಕೂಡ ಹಾಗೆಯೇ ಇರುತ್ತದೆ.

**(ಗೊಂದಲ)**

**ವೈಸ್ ಛೇರ್ಮನ್:-** ಮಾನ್ಯ ಐವನ್ ಡಿ’ಸೋಜಾರವರೇ, ತಾವು yield ಆಗದೇ ತಮ್ಮ ಮಾತನ್ನು ಮುಕ್ತಾಯ ಮಾಡಿ.

**(ಗೊಂದಲ)**

**ಶ್ರೀ ಐವನ್ ಡಿ’ಸೋಜಾ:-** ಮಾನ್ಯ ಸಭಾಪತಿಯವರೇ...

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ...

**(ಗೊಂದಲ)**

**ವೈಸ್ ಛೇರ್ಮನ್:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಈ ಎಲ್ಲಾ ವಿಷಯಗಳನ್ನು ಸರ್ಕಾರದಿಂದ ಉತ್ತರ ಕೊಡುವಾಗ ತಾವು ಹೇಳಬಹುದಾಗಿರುತ್ತದೆ.

**(ಗೊಂದಲ)**

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಸದನದ ಸದಸ್ಯರು ಮಾತನಾಡುವಾಗ ಸರ್ಕಾರ ಮಧ್ಯಪ್ರವೇಶ ಮಾಡುವುದಕ್ಕೆ ಅಧಿಕಾರವಿದೆ.

**ವೈಸ್ ಛೇರ್ಮನ್:–** ಹೌದು, ಸರ್ಕಾರಕ್ಕೆ ಅಧಿಕಾರವಿದೆ.

**(ಗೊಂದಲ)**

**ಶ್ರೀ ಹೆಚ್.ಎಂ.ರಮೇಶ್ ಗೌಡ:–** ಮಾನ್ಯ ಸಭಾಪತಿಯವರೇ...

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ರಮೇಶ್ ಗೌಡರವರೇ, ಸದನದ ಸದಸ್ಯರೊಬ್ಬರು ಮಾತನಾಡುವಾಗ ಸರ್ಕಾರ ಮಧ್ಯಪ್ರವೇಶ ಮಾಡುವುದಕ್ಕೆ ಅಧಿಕಾರವಿದೆ. ಆ ಲೆಕ್ಕದಲ್ಲಿ ನಾನು ತಮಗೆ ಹೇಳುತ್ತಿದ್ದೇನೆ.

**(ಗೊಂದಲ)**

**ವೈಸ್ ಛೇರ್ಮನ್:–** ಹೌದು, ಅಂತಹ ಸಂದರ್ಭದಲ್ಲಿ ವಿರೋಧ ಪಕ್ಷದ ನಾಯಕರಾದ ತಾವು ಮಾತನಾಡಬೇಕು. ಬೇರೆಯವರು ಏತಕ್ಕೆ ಮಾತನಾಡಬೇಕು?

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದ ಸದಸ್ಯರು ಮಾತನಾಡುತ್ತಾರೆ. ಅದಕ್ಕೆ ಆಡಳಿತ ಪಕ್ಷದವರು ಸಹ ಮಾತನಾಡುತ್ತಾರೆ.

**(ಗೊಂದಲ)**

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಭಾ ನಾಯಕರು ಮಾತನಾಡುವುದಕ್ಕೆ ನಮ್ಮ ಅಭ್ಯಂತರವೇನು ಇಲ್ಲ. ಆದರೆ, ಅವರು ಸಭಾ ನಾಯಕರೆಂಬ ವಿಷಯವನ್ನು ಮರೆತು, ವಿರೋಧ ಪಕ್ಷದ ನಾಯಕರಂತೆ ಮಾತನಾಡುತ್ತಿದ್ದಾರೆ.

**(ಗೊಂದಲ)**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಐವನ್ ಡಿ'ಸೋಜಾರವರೇ, ...

**(ಗೊಂದಲ)**

**ವೈಸ್ ಛೇರ್ಮನ್:–** ಮಾನ್ಯ ಸಭಾ ನಾಯಕರೇ, ತಾವು ಸರ್ಕಾರದಿಂದ ಉತ್ತರ ಕೊಡುವಾಗ ಈ ಎಲ್ಲಾ ವಿಷಯಗಳನ್ನು ಹೇಳಬಹುದು. ಈಗ ಏತಕ್ಕೆ ಈ ರೀತಿ ಮಾತನಾಡುತ್ತಿದ್ದೀರಿ?

**(ಗೊಂದಲ)**

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಡಿ'ಸೋಜಾರವರು ಅವರ ಜಿಲ್ಲೆಗೆ ಸಂಬಂಧಪಟ್ಟಂತೆ ಮಾತನಾಡುತ್ತಿದ್ದಾರೆ.

**(ಗೊಂದಲ)**

**ಶ್ರೀ ಎಂ.ಕೆ.ಪ್ರಾಣೇಶ್:–** ಮಾನ್ಯ ಸಭಾಪತಿಯವರೇ, ಮಾನ್ಯ ಡಿ'ಸೋಜಾರವರು ಇಡೀ ರಾಜ್ಯದಲ್ಲಿ ಎಲ್ಲಿಯೂ ಸಹ ನಿರಾಶ್ರಿತರಿಗೆ 1 ಲಕ್ಷ ರೂಪಾಯಿ ಪರಿಹಾರ ಹಣ ನೀಡಿರುವುದಿಲ್ಲವೆಂದು ಹೇಳಿದ್ದಾರೆ.

**(ಗೊಂದಲ)**

**ವೈಸ್ ಛೇರ್ಮನ್:–** ಈ ಉತ್ತರವನ್ನು ಸರ್ಕಾರದಿಂದ ಕೊಡುವ ಉತ್ತರದಲ್ಲಿ ಹೇಳಿ.

**(ಗೊಂದಲ)**

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಡಿ'ಸೋಜಾರವರು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಲ್ಲಿಯೂ ಸಹ ಪರಿಹಾರದ ಹಣ ಕೊಟ್ಟಿರುವುದಿಲ್ಲವೆಂದು ಹೇಳಿದ್ದಾರೆ.

**(ಗೊಂದಲ)**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ:–** ಮಾನ್ಯ ಸಭಾಪತಿಯವರೇ, ಮಾನ್ಯ ಐವನ್ ಡಿ'ಸೋಜಾರವರು ಇಡೀ ರಾಜ್ಯದಲ್ಲಿ ಎಲ್ಲಿಯೂ ಸಹ 1 ಲಕ್ಷ ರೂಪಾಯಿ ಹಣ ನಿರಾಶ್ರಿತರಿಗೆ ನೀಡಿರುವುದಿಲ್ಲವೆಂದು ಹೇಳಿದ್ದಾರೆ. ಅದು ರೆಕಾರ್ಡ್ ಆಗಿದೆ. ತಾವು ಅದನ್ನು ಪರಿಶೀಲನೆ ಮಾಡಬಹುದಾಗಿದೆ.

**(ಗೊಂದಲ)**

**ಶ್ರೀ ಎಂ.ಕೆ. ಪ್ರಾಣೇಶ್:–** ಮಾನ್ಯ ಸಭಾಪತಿಯವರೇ, ಮಾನ್ಯ ಡಿ'ಸೋಜಾರವರು ಇಡೀ ರಾಜ್ಯದಲ್ಲಿ ಎಲ್ಲಿಯೂ ಸಹ 1 ಲಕ್ಷ ರೂಪಾಯಿ ಹಣ ನೀಡಿರುವುದಿಲ್ಲವೆಂದು ಹೇಳಿರುವುದಕ್ಕೆ ನಾನು ನನ್ನ ಜಿಲ್ಲೆಯ ಮಾಹಿತಿ ಹೇಳಿದ್ದೇನೆ.

**(ಗೊಂದಲ)**

**ಶ್ರೀ ಹೆಚ್.ಎಂ.ರಮೇಶ್ ಗೌಡ:–** ಮಾನ್ಯ ಸಭಾಪತಿಯವರೇ, ಸರ್ಕಾರದವರಲ್ಲಿ ಮಾಹಿತಿ ಇದ್ದರೆ, ದಕ್ಷಿಣ ಕನ್ನಡ ಜಿಲ್ಲೆಯ ನಿರಾಶ್ರಿತರಿಗೆ ಎಷ್ಟು ಪರಿಹಾರ ಹಣ ನೀಡಿದ್ದಾರೆಂಬ ಬಗ್ಗೆ ಮಾಹಿತಿ ನೀಡಲಿ.

**(ಗೊಂದಲ)**

**ವೈಸ್ ಛೇರ್ಮನ್:–** ಅದನ್ನು ಸರ್ಕಾರದಿಂದ ಉತ್ತರ ಕೊಡುವಾಗ ಹೇಳಿ. ಮಾನ್ಯ ಐವನ್ ಡಿ'ಸೋಜಾರವರೇ ತಾವು yield ಆಗದೇ ತಮ್ಮ ಮಾತನ್ನು ಮುಕ್ತಾಯ ಮಾಡಿ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಐವನ್ ಡಿಸೋಜಾರವರು ವಿಸ್ತಾರವಾಗಿ ಮಾತನಾಡುತ್ತಾ ಪ್ರವಾಹದಿಂದ ಹಾನಿಗೊಳಗಾದ ನಿರಾಶ್ರಿತರಿಗೆ 5 ಲಕ್ಷ ರೂಪಾಯಿ ಪರಿಹಾರ ಹಣ ಕೊಡುತ್ತೇವೆಂದು ಹೇಳಿದ್ದಾರೆ. ಆದರೆ, ಯಾವ ಮನೆಗಳಿಗೆ ನೀಡಿದ್ದಾರೆಂಬ ಬಗ್ಗೆ ಪ್ರಶ್ನೆ ಕೇಳಿದ್ದಾರೆ. ಇದರ ಜೊತೆಗೆ, ಪ್ರವಾಹದಿಂದ ಜೀವಹಾನಿಯಾಗಿರುವ ಕುಟುಂಬಗಳಿಗೆ ಎಷ್ಟು ಪರಿಹಾರ ನೀಡಲಾಗಿದೆ ಹಾಗೂ ಪರಿಹಾರವನ್ನು ಎಷ್ಟು ನೀಡಿದ್ದಾರೆಂಬ ಬಗ್ಗೆ ಗೊತ್ತಿಲ್ಲವೆಂದು ಹೇಳಿದ್ದಾರೆ. ಅದಕ್ಕೆ ಉತ್ತರವಾಗಿ ನಾನು ಅವರ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಗಮನಕ್ಕೆ ತರುವುದೇನೆಂದರೆ, ಪ್ರವಾಹದಿಂದ ಯಾವುದೇ ಮನೆ ಸಂಪೂರ್ಣವಾಗಿ ನಾಶವಾಗಿದ್ದರೆ, ಅಂತಹ ಮನೆಗಳಿಗೆ 5 ಲಕ್ಷ ರೂಪಾಯಿ ಪರಿಹಾರ ಹಣ ಘೋಷಣೆ ಮಾಡಿದ್ದು, ಪ್ರಥಮ ಕಂತಿನಲ್ಲಿ 1 ಲಕ್ಷ ರೂಪಾಯಿ ಹಣವನ್ನು ಕೊಡಲಾಗಿದೆ. ಮನೆ ಕಟ್ಟುವುದಕ್ಕೆ ಅನುಕೂಲವಾಗುವಂತೆ ಉಳಿದ 4 ಲಕ್ಷ ರೂಪಾಯಿಗಳಿಗೆ ಸಂಬಂಧಿಸಿದಂತೆ ಮಂಜೂರಾತಿ ಪತ್ರವನ್ನು ನೀಡಲಾಗಿದೆ. ಅದರಂತೆ, ತಳಪಾಯ ನಿರ್ಮಿಸಿದಾಗ, ಗೋಡೆ ನಿರ್ಮಿಸಿದಾಗ ಹಣ ಬಿಡುಗಡೆ ಮಾಡುವಂತಹ ಪರಂಪರೆ ಇದೆ. ಪ್ರವಾಹದಿಂದ ಒಟ್ಟು 12 ಜೀವಹಾನಿಯಾಗಿದೆ, ಅವರಿಗೆ ಏನು ಪರಿಹಾರ ನೀಡಿದ್ದಾರೆಂಬ ಬಗ್ಗೆಯೂ ಸಹ ಪ್ರಶ್ನೆ ಕೇಳಿದ್ದು, ಜೀವಹಾನಿಯಾದ ಪ್ರತಿ ಕುಟುಂಬಕ್ಕೆ ತಲಾ 5 ಲಕ್ಷ ರೂಪಾಯಿ ಹಣವನ್ನು ನಗದಾಗಿ ಕೊಡುವಂತಹ ವ್ಯವಸ್ಥೆ ಮಾಡಲಾಗಿದೆ. ಇಷ್ಟು ಮಾಹಿತಿಯನ್ನು ಮಾನ್ಯ ಸದಸ್ಯರ ಗಮನಕ್ಕೆ ತರುತ್ತಿದ್ದೇನೆ.

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ...

**ಶ್ರೀ ಎಸ್.ವ್ಹಿ. ಸಂಕನೂರ:–** ಮಾನ್ಯ ಐವನ್ ಡಿ'ಸೋಜಾರವರೇ ಒಂದು ನಿಮಿಷ...

**(ಗೊಂದಲ)**

**ಶ್ರೀ ಎಸ್.ವ್ಹಿ. ಸಂಕನೂರ:–** ಮಾನ್ಯ ಐವನ್ ಡಿ'ಸೋಜಾರವರು ಬಹಳ ಚೆನ್ನಾಗಿ ಮಾತನಾಡುತ್ತಿದ್ದಾರೆ. ಆ ಬಗ್ಗೆ ಪ್ರಶ್ನೆಯೇ ಇಲ್ಲ. ಆದರೆ, ಅವರು ಹೇಳಿರುವಂತಹ ಕೆಲವು ಅಂಶಗಳು ಸದನಕ್ಕೆ ತಪ್ಪು ಸಂದೇಶ ಹೋಗಬಹುದು.

**(ಗೊಂದಲ)**

**ವೈಸ್ ಛೇರ್ಮನ್:–** ಸರ್ಕಾರದಿಂದ ಉತ್ತರ ಕೊಡುವಾಗ ಇವೆಲ್ಲವನ್ನು ಸರಿ ಮಾಡಿ.

**ಶ್ರೀ ಯು.ಬಿ. ವೆಂಕಟೇಶ್:–** ಮಾನ್ಯ ಸಭಾಪತಿಯವರೇ, ಪ್ರತಿಯೊಬ್ಬರು ಈ ರೀತಿ ಮಾತನಾಡುತ್ತಿದ್ದರೆ...

**(ಗೊಂದಲ)**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ವ್ಹಿ. ಸಂಕನೂರ:–** ಮಾನ್ಯ ಸಭಾಪತಿಯವರೇ, ದಯಮಾಡಿ ಸಹಕಾರ ಕೊಡಿ.

**(ಗೊಂದಲ)**

**ಶ್ರೀ ಎಸ್.ವ್ಹಿ. ಸಂಕನೂರ:–** 2009ನೇ ಇಸವಿಯಲ್ಲಿ ಮಾಜಿ ಪ್ರಧಾನಿ ಡಾ॥ ಮನಮೋಹನ್ ಸಿಂಗ್‌ರವರು ನಮ್ಮ ರಾಜ್ಯಕ್ಕೆ ಭೇಟಿ ನೀಡಿ, ಪ್ರವಾಹ ಪೀಡಿತ ಪ್ರದೇಶಗಳನ್ನು ವೀಕ್ಷಣೆ ಮಾಡಿ ಹಣ ಕೊಟ್ಟಿದ್ದಾರೆಂದು ಹೇಳಿದ್ದಾರೆ. ಆದರೆ, 2009ನೇ ಇಸವಿಯ ಬಗ್ಗೆ ಮಾತ್ರ ಏತಕ್ಕೆ ಮಾತನಾಡುತ್ತಾರೆ? ಯುಪಿಎ ಸರ್ಕಾರ ನಮ್ಮ ರಾಜ್ಯದಲ್ಲಿ ಬರಗಾಲ ಬಂದಾಗ ಅಥವಾ ನೆರೆ ಹಾವಳಿಯಾದಾಗ, ಅಂತಹ ಎಷ್ಟು ಸಂದರ್ಭಗಳಲ್ಲಿ ನಮ್ಮ ರಾಜ್ಯ ವೀಕ್ಷಣೆ ಮಾಡಿ, ನಾವು ಎಷ್ಟು ಪರಿಹಾರ ಕೇಳಿದ್ದೆವು, ಅವರು ಎಷ್ಟು ಪರಿಹಾರ ನೀಡಿದ್ದಾರೆಂಬ ಬಗ್ಗೆ ಏತಕ್ಕೆ ಹೇಳುತ್ತಿಲ್ಲ? ಕೇವಲ 2009ನೇ ಇಸವಿಯ ಬಗ್ಗೆ ಮಾತ್ರ ಏಕೆ ಮಾತನಾಡುತ್ತಾರೆ?

**(ಗೊಂದಲ)**

**ವೈಸ್ ಛೇರ್ಮನ್:–** ಮಾನ್ಯ ಸಂಕನೂರರವರೇ, ಮಾನ್ಯ ಐವನ್ ಡಿ’ಸೋಜಾರವರು ಇನ್ನೂ yield ಆಗಿರುವುದಿಲ್ಲ. ತಾವು ತಮ್ಮ ಸರದಿ ಬಂದಾಗ ಮಾತನಾಡಿ.

**(ಗೊಂದಲ)**

**ಶ್ರೀ ಎಸ್.ವ್ಹಿ. ಸಂಕನೂರ:–** ಮಾನ್ಯ ಸಭಾಪತಿಯವರೇ, 2005–06 ರಲ್ಲಿ ...

**(ಗೊಂದಲ)**

**ವೈಸ್ ಛೇರ್ಮನ್:–** ಮಾನ್ಯ ಸಂಕನೂರರವರೇ, ದಯಮಾಡಿ ತಾವು ತಮ್ಮ ಸರದಿ ಬಂದಾಗ ಮಾತನಾಡಿ.

**(ಗೊಂದಲ)**

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ಎಸ್.ವ್ಹಿ. ಸಂಕನೂರ:–** ಮಾನ್ಯ ಸಭಾಪತಿಯವರೇ, 2006–07ರಲ್ಲಿ ...

**(ಗೊಂದಲ)**

**ವೈಸ್ ಛೇರ್ಮನ್:–** ಮಾನ್ಯ ಸಂಕನೂರರವರೇ, ತಾವು ತಮ್ಮ ಸರದಿ ಬಂದಾಗ ಮಾತನಾಡಿ. ಈಗ ಏನೇ ಮಾತನಾಡಿದರೂ ಸಹ ಅದು ಯಾವುದೂ ದಾಖಲೆಗೆ ಹೋಗುವುದಿಲ್ಲ.

**(ಗೊಂದಲ)**

**ವೈಸ್ ಛೇರ್ಮನ್:–** ಮಾನ್ಯ ಸಂಕನೂರರವರು ಮಾತನಾಡಿದ್ದು ದಾಖಲೆಗೆ ಹೋಗುವುದಿಲ್ಲ. ಅವರ ಸರದಿ ಬಂದಾಗ ಮಾತ್ರ ಅವರು ಮಾತನಾಡಲಿ. ಮಾನ್ಯ ಐವನ್ ಡಿ'ಸೋಜಾರವರೇ, ತಾವು ತಮ್ಮ ಮಾತನ್ನು ಮುಂದುವರೆಸಿ.

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಂಕನೂರರವರೇ...

**(ಗೊಂದಲ)**

**ವೈಸ್ ಛೇರ್ಮನ್:–** ಮಾನ್ಯ ಸಭಾ ನಾಯಕರೇ, ಪ್ರತಿಯೊಬ್ಬ ಸದಸ್ಯರು ಸಹ ಅವರವರ ಸರದಿ ಬಂದಾಗ ಮಾತ್ರ ಮಾತನಾಡಲಿ. ಇನ್ನು ಯಾವುದಾದರೂ ಸದಸ್ಯರು ಮಾತನಾಡುವುದು ಇದ್ದರೆ ಮೊದಲು ಹೆಸರು ನೀಡಿ, ನಂತರ ಮಾತನಾಡಲಿ.

**(ಗೊಂದಲ)**

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾಜಿ ಪ್ರಧಾನಿ ಡಾ॥ ಮನಮೋಹನ್ ಸಿಂಗ್‌ರವರು ನಮ್ಮ ರಾಜ್ಯಕ್ಕೆ ಭೇಟಿ ನೀಡಿ ಪ್ರವಾಹ ಪೀಡಿತರಿಗಾಗಿ 1600 ಕೋಟಿ ರೂಪಾಯಿ ಪರಿಹಾರ ಹಣವನ್ನು ನೀಡಿದ್ದಾರೆ. ಅದನ್ನು ನಾವು ಪ್ರಶಂಸೆ ಮಾಡುತ್ತಿದ್ದೇವೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**(ಗೊಂದಲ)**

**ವೈಸ್ ಛೇರ್ಮನ್:–** ಮಾನ್ಯ ಐವನ್ ಡಿಸೋಜಾರವರೇ, ಈಗ ತಾವು ತಮ್ಮ ಮಾತನ್ನು ಮುಂದುವರೆಸಿ.

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ನಮ್ಮ ದೇಶದ ಪ್ರಧಾನ ಮಂತ್ರಿಗಳು...

**(ಗೊಂದಲ)**

**ಶ್ರೀ ಎಸ್.ವ್ಹಿ. ಸಂಕನೂರ:–** ಮಾನ್ಯ ಸಭಾಪತಿಯವರೇ...

**(ಗೊಂದಲ)**

**ವೈಸ್ ಛೇರ್ಮನ್:–** ಮಾನ್ಯ ಸಂಕನೂರರವರೇ, ಈ ಪಟ್ಟಿಯಲ್ಲಿ ತಮ್ಮ ಹೆಸರು ಸಹ ಇದ್ದು, ತಮ್ಮ ಸರದಿ ಬಂದಾಗ ಮಾತನಾಡಿ. ಮಾನ್ಯ ಐವನ್ ಡಿ'ಸೋಜಾರವರೇ, ತಾವು yield ಆಗದೇ ಮಾತನಾಡಿ.

**ಶ್ರೀ ಐವನ್ ಡಿ'ಸೋಜಾ(ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಈ ದೇಶದ ಪ್ರಧಾನ ಮಂತ್ರಿಗಳು ಮಾನ್ಯ ಸಂಕನೂರರವರಿಗೆ ಅಥವಾ ಮಾನ್ಯ ಡಿ'ಸೋಜಾರವರಿಗೆ ಮಾತ್ರವಲ್ಲ. ಅವರು ಇಡೀ ಭಾರತ ದೇಶಕ್ಕೆ ಪ್ರಧಾನ ಮಂತ್ರಿಗಳು. ಹಾಗಾಗಿ, ನಾವು ಅವರಿಗೆ ಕೇಳುವುದಕ್ಕೆ ಬಯಸುವುದೇನೆಂದರೆ, ಬಿಹಾರ ರಾಜ್ಯದಲ್ಲಿ ನೆರೆ ಬಂದಾಗ ಪ್ರಧಾನ ಮಂತ್ರಿಗಳು ಟ್ವೀಟ್ ಮಾಡಿ, ಸಂತಾಪವನ್ನು ವ್ಯಕ್ತಪಡಿಸಿದರು. ಅಷ್ಟೇ ಅಲ್ಲದೇ, without any report, they have released Rs. 400 crores. ಆದರೆ, ಕರ್ನಾಟಕ ರಾಜ್ಯದವರು ಪರಿಹಾರ ಕೇಳಬೇಕಾದರೆ ಅವರಿಗೆ ರಿಪೋರ್ಟ್ ಬೇಕು. ಆ ರಿಪೋರ್ಟ್ ಸರಿಯಾಗಿರಬೇಕು. ಅದು ಎನ್.ಡಿ.ಆರ್.ಎಫ್. ಮತ್ತು ಎಸ್.ಡಿ.ಆರ್.ಎಫ್. ನಾರ್ಮ್ಸ್ ಪ್ರಕಾರ ಇರಬೇಕು. ಇದು ಯಾವ ನೀತಿ? ಇದು ಮಲತಾಯಿ ಧೋರಣೆ ಅಲ್ಲವೇ?

**(ಗೊಂದಲ)**

**(ಈ ಸಂದರ್ಭದಲ್ಲಿ ಪ್ರತಿಪಕ್ಷದ ಸದಸ್ಯರು ಮೇಜು ತಟ್ಟಿ ಶ್ರೀ ಐವನ್ ಡಿ'ಸೋಜಾರವರ ಮಾತಿಗೆ ಬೆಂಬಲ ಸೂಚಿಸಿದರು)**

**(ಗೊಂದಲ)**

**ಶ್ರೀ ಎಂ.ಕೆ.ಪ್ರಾಣೇಶ್:–** ಮಾನ್ಯ ಸಭಾಪತಿಯವರೇ, ಅದಕ್ಕಿಂತಲೂ ಹೆಚ್ಚು ಪರಿಹಾರ ಹಣವನ್ನು ಕೇಂದ್ರ ಸರ್ಕಾರ ನಮ್ಮ ರಾಜ್ಯಕ್ಕೆ ನೀಡಿರುತ್ತದೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**(ಗೊಂದಲ)**

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಪ್ರಧಾನ ಮಂತ್ರಿಯವರು ನಮ್ಮ ರಾಜ್ಯಕ್ಕೆ ಮೋಸ ಮಾಡಿದ್ದಾರೆ.

**ಡಾ॥ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ಈ ವಿಷಯದಲ್ಲಿ ರಾಜಕೀಯ ಬೇಡ.

**(ಗೊಂದಲ)**

ಕೇಂದ್ರ ಸರ್ಕಾರ ತಮ್ಮ ಕಾಲದಲ್ಲಿ ಕೊಟ್ಟಿರುವಂತಹ ಹಣಕ್ಕೆ ಲೆಕ್ಕ ಇದ್ದರೆ ಅದನ್ನು ಉಲ್ಲೇಖ ಮಾಡಿ.

**(ಗೊಂದಲ)**

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ:–** ಮಾನ್ಯ ಸಭಾಪತಿಯವರೇ, ಹಿಂದಿನ ಯುಪಿಎ ಸರ್ಕಾರ ಯಾವ್ಯಾವ ಅವಧಿಯಲ್ಲಿ ಎಷ್ಟೆಷ್ಟು ಹಣ ಬಿಡುಗಡೆ ಮಾಡಿದೆ ಎಂಬ ಬಗ್ಗೆ ಮಾಹಿತಿ ನೀಡಲಿ.

**ಶ್ರೀ ಎಂ.ಕೆ. ಪ್ರಾಣೇಶ್:–** ಮಾನ್ಯ ಸಭಾಪತಿಯವರೇ...

**(ಗೊಂದಲ)**

**ಶ್ರೀ ಐವನ್ ಡಿ’ಸೋಜಾ:–** ಮಾನ್ಯ ಸಭಾಪತಿಯವರೇ, ನಮ್ಮ ರಾಜ್ಯಕ್ಕೆ...

**(ಗೊಂದಲ)**

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

**ಶ್ರೀ ಪ್ರಕಾಶ್ ಕೆ. ರಾಥೋಡ್:–** ಮಾನ್ಯ ಸಭಾಪತಿಯವರೇ, ನಮ್ಮ ರಾಜ್ಯದ ನೆರೆ ಪರಿಸ್ಥಿತಿಯನ್ನು ವೀಕ್ಷಣೆ ಮಾಡಲು ಪ್ರಧಾನ ಮಂತ್ರಿಗಳು ಬಂದಿದ್ದಾರೆಯೇ?

**(ಗೊಂದಲ)**

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ:–** ಮಾನ್ಯ ಸಭಾಪತಿಯವರೇ, ನಮ್ಮ ರಾಜ್ಯದಲ್ಲಿ ಸಂಭವಿಸಿರುವ ನೆರೆ ಪರಿಸ್ಥಿತಿಯನ್ನು ವೀಕ್ಷಣೆ ಮಾಡಲು ಕೇಂದ್ರದಿಂದ ಗೃಹಮಂತ್ರಿಗಳು ಹಾಗೂ ಹಣಕಾಸು ಮಂತ್ರಿಗಳು ಭೇಟಿ ನೀಡಿರುತ್ತಾರೆ.

**(ಗೊಂದಲ)**

(ಮುಂದುವರೆದಿದೆ...)

(135)10.10.2019/6.00/ವೈಎಲ್–ವಿಕೆ

**ಡಾ॥ ಜಯಮಾಲ(ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ.

(ಗೊಂದಲ)

**(ಈ ಹಂತದಲ್ಲಿ ಮಾನ್ಯ ವೈಸ್‌ಛೇರ್ಮನ್‌ರವರು ಪೀಠದಿಂದ ಎದ್ದು ನಿಂತರು)**

(ಗೊಂದಲ)

**ಶ್ರೀ ಪ್ರಕಾಶ್ ಕೆ.ರಾಥೋಡ್ (ನಾಮನಿರ್ದೇಶಿತರು):–** ಸಭಾಪತಿಯವರು ಪೀಠದಿಂದ ಎದ್ದು ನಿಂತಿದ್ದಾರೆ.

(ಗೊಂದಲ)

**ವೈಸ್ ಛೇರ್ಮನ್:–** ದಯವಿಟ್ಟು ಮಾನ್ಯ ಸದಸ್ಯರೆಲ್ಲರೂ ಹಿರಿಯರಿದ್ದೀರಿ. ಸದನದಲ್ಲಿ ಗಂಭೀರವಾದ ವಿಷಯದ ಬಗ್ಗೆ ಚರ್ಚೆ ನಡೆಯುತ್ತಿದೆ. ಯಾವ ಸದಸ್ಯರ ಹೆಸರನ್ನು ಕರೆಯುತ್ತೇವೆಯೋ ಅವರು ಚರ್ಚೆ ಮಾಡುವಂಥ ಸಂದರ್ಭದಲ್ಲಿ ಬೇರೆಯವರು interrupt ಮಾಡುವುದಕ್ಕೆ ಹೋಗುವುದು ಬೇಡ. ಒಂದು ವೇಳೆ interrupt ಮಾಡಿದರೂ ಅದು ರೆಕಾರ್ಡ್‌ಗೆ ಹೋಗುವುದಿಲ್ಲ. ಸುಮ್ಮನೆ ಕಿರುಚಾಡುವುದು ಬೇಡ.

**ಶ್ರೀ ಎಸ್.ವ್ಹಿ.ಸಂಕನೂರ(ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ತಪ್ಪು ಮಾಹಿತಿ ಕೊಟ್ಟಿರುವಂತವರನ್ನು ಕೇಳಿ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಗೊಂದಲ)

**ವೈಸ್ ಛೇರ್ಮನ್:–** ಮಾನ್ಯ ಸಭಾನಾಯಕರೇ ಅವರೆಲ್ಲಾ ಏನು ಕೇಳುತ್ತಾರೆ ಅದಕ್ಕೆ pin to pin ಉತ್ತರವನ್ನು ನೀಡಿ. ದಯವಿಟ್ಟು ಅದಕ್ಕೆ ತಾವೆಲ್ಲರೂ cooperate ಮಾಡಿ.

**ಶ್ರೀ ಐವನ್ ಡಿ'ಸೋಜಾ(ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಈ ವಿಷಯದ ಬಗ್ಗೆ ಏತಕ್ಕೆ ಪ್ರಸ್ತಾಪ ಮಾಡಿದೆ ಎಂದರೆ, ...

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಐವನ್ ಡಿ'ಸೋಜಾರವರೇ ಒಂದು ನಿಮಿಷ. ಏನೆಂದರೆ ಯಾವತ್ತೂ ಕೂಡಾ...

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಯಾವುದೇ ಕಾರಣಕ್ಕೂ ಸರ್ಕಾರದವರು ಪ್ರತಿಪಕ್ಷಗಳು ಸರ್ಕಾರವನ್ನು ಪ್ರಶಂಸೆ ಮಾಡುತ್ತದೆ ಎನ್ನುವುದನ್ನು ನಿರೀಕ್ಷೆ ಮಾಡುವುದು ಕಡಿಮೆ. ಏಕೆಂದರೆ ನಾವು ಪ್ರತಿಪಕ್ಷದಲ್ಲಿ ಕೆಲಸ ಮಾಡಿದ್ದೇವೆ. ಆದರೆ, ಸದನದಲ್ಲಿ ವೀರಾವೇಷದ ಮಾತುಗಳನ್ನಾಡುವುದರ ಮೂಲಕ ತಪ್ಪು ಮಾಹಿತಿ ಒದಗಿಸಬಾರದು ಎನ್ನುವುದಕ್ಕೋಸ್ಕರ ಅದರ ಮಧ್ಯೆ ಸರ್ಕಾರ ಮಧ್ಯಪ್ರವೇಶಿಸುವ ಅವಶ್ಯಕತೆ ಇದೆ. ಆದ್ದರಿಂದ ಈಗಾಗಲೇ ಮಾನ್ಯ ಐವನ್ ಡಿ'ಸೋಜಾರವರಿಗೆ ನಾನು ಹೇಳಿದೇನೆಂದರೆ, ಮಾನ್ಯ ಮಾಜಿ ಪ್ರಧಾನ ಮಂತ್ರಿಗಳಾದ ಡಾ॥ ಮನಮೋಹನ್ ಸಿಂಗ್‌ರವರು ಒಂದು ಸಲ 1400 ಕೋಟಿ ರೂಪಾಯಿಗಳ ಪರಿಹಾರವನ್ನು ಘೋಷಣೆ ಮಾಡಿದ್ದರು. ಆದರೆ ಪ್ರಥಮ ಕಂತಿನಲ್ಲಿ 500 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆ. ಎರಡನೆ ಸಲ ಉಳಿದ 900 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆ. ಹಾಗಾಗಿ ಇವತ್ತಿನ ಪ್ರಧಾನ ಮಂತ್ರಿಗಳಾದ ಸನ್ಮಾನ್ಯ ನರೇಂದ್ರ ಮೋದಿಯವರು ರಾಜ್ಯಕ್ಕೆ ಪ್ರಥಮ ಕಂತಿನಲ್ಲಿ 1200 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆ. ಎರಡನೆ ಕಂತನ್ನು ನಿರೀಕ್ಷೆ ಮಾಡುತ್ತಿದ್ದೇವೆ.

(ಗೊಂದಲ)

**ಶ್ರೀ ಎಂ.ನಾರಾಯಣಸ್ವಾಮಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, 1200 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುವುದಕ್ಕೆ ಎಷ್ಟು ದಿವಸಗಳಾಯಿತು. ಮಾನ್ಯ ಸಭಾನಾಯಕರೇ ಒಂದು ನಿಮಿಷ.

(ಗೊಂದಲ)

**ವೈಸ್ ಛೇರ್ಮನ್:–** ಮಾನ್ಯ ಸಭಾನಾಯಕರೇ, ತಾವೂ ತಮ್ಮ ಸರದಿ ಬಂದಾಗ ಮಾತನಾಡಿ. ಮಾನ್ಯ ಐವನ್ ಡಿ'ಸೋಜಾರವರೇ, ತಾವು yield ಆಗಬೇಡಿ ಮಾತನ್ನು ಮುಂದುವರೆಸಿ.

**ಶ್ರೀ ಪ್ರಕಾಶ್ ಕೆ.ರಾಥೋಡ್:–** ಮಾನ್ಯ ಸಭಾಪತಿಯವರೇ, ...

**ವೈಸ್ ಛೇರ್ಮನ್:–** ಮಾನ್ಯ ಪ್ರಕಾಶ್ ಕೆ.ರಾಥೋಡ್‌ರವರು ತಮ್ಮ ಸರದಿ ಬಂದಾಗ ಮಾತನಾಡಿ.

**ಶ್ರೀ ಪ್ರಕಾಶ್ ಕೆ. ರಾಥೋಡ್:–** ಮಾನ್ಯ ಸಭಾಪತಿಯವರೇ, ಒಂದೇ ಒಂದು ನಿಮಿಷ ಮಾತನಾಡಲು ಅವಕಾಶ ನೀಡಿ.

(ಗೊಂದಲ)

**ವೈಸ್ ಛೇರ್ಮನ್:–** ಆಗುವುದಿಲ್ಲ. ಮಧ್ಯೆದಲ್ಲಿ ಯಾರು ಮಾತುನಾಡುತ್ತೀರೋ ಅವರ ಮಾತು ರೆಕಾರ್ಡ್‌ಗೆ ಹೋಗುವುದಿಲ್ಲ. ದಯವಿಟ್ಟು ಸಹಕರಿಸಿ.

(ಗೊಂದಲ)

**ಶ್ರೀ ಪ್ರಕಾಶ್ ಕೆ. ರಾಥೋಡ್:–** ಮಾನ್ಯ ಸಭಾಪತಿಯವರೇ, ನಾನು ಮಾತನಾಡಲು ನಿಮ್ಮ ಅನುಮತಿಯನ್ನು ಕೇಳುತ್ತಿದ್ದೇನೆ.

(ಗೊಂದಲ)

**ವೈಸ್ ಛೇರ್ಮನ್:–** ಇಲ್ಲ ನಿಮ್ಮ ಸರದಿ ಬರುತ್ತದೆ ಆಗ ಏನೂ ಬೇಕಾದರೂ ಮಾಡನಾಡಬಹುದು. ಮಾನ್ಯ ಐವನ್ ಡಿ'ಸೋಜಾರವರೇ ತಮ್ಮ ಮಾತನ್ನು ಮುಂದುವರೆಸಿ.

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ವೈಮಾನಿಕ ಸಮೀಕ್ಷೆ ಮಾಡುವುದಕ್ಕೆ ಗೃಹ ಸಚಿವರು ಮತ್ತು ಆರ್ಥಿಕ ಸಚಿವರು ಬಂದಿದ್ದರು ಎಂದು ಆಡಳಿತ ಪಕ್ಷದವರು ಹೇಳಿದ್ದರು. ನಮ್ಮ ದುರ್ದೈವ ಕರ್ನಾಟಕ ರಾಜ್ಯದಿಂದ ರಾಜ್ಯಸಭಾ ಸದಸ್ಯರಾಗಿ ಆಯ್ಕೆಯಾಗಿದಂತಹ ಶ್ರೀಮತಿ ನಿರ್ಮಲಾ ಸೀತಾರಾಮ್‌ರವರು ಪ್ರಸ್ತುತ ಅರ್ಥ ಸಚಿವರಾಗಿ ಯಾವತ್ತೋ ಅನುದಾನ ನೀಡಬೇಕಾಗಿತ್ತು. ಆದರೆ, ಸುಮಾರು 65 ದಿವಸಗಳು ಆದಮೇಲೆ 1200 ಕೋಟಿ ರೂಪಾಯಿಗಳನ್ನು ಘೋಷಣೆ ಮಾಡಿದರು. ಆದರೆ, ಸುಮಾರು 10 ವರ್ಷಗಳ ಹಿಂದೆಯೇ 1600 ಕೋಟಿ ರೂಪಾಯಿಗಳಷ್ಟು ಅನುದಾನವನ್ನು ಮಾನ್ಯ ಮಾಜಿ ಪ್ರಧಾನ ಮಂತ್ರಿಗಳಾದ ಡಾ॥

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಮನ್‌ಮೋಹನ್ ಸಿಂಗ್‌ರವರು ನೀಡಿದ್ದಾರೆ. ಇವತ್ತು ಬೆಲೆಗಳು ಗಗನಕ್ಕೇರಿದೆ. ಅದನ್ನು ಅರ್ಥ ಮಾಡಿಕೊಳ್ಳಬೇಕು. ಒಂದು ವೇಳೆ ತಾವೇ ವಿರೋಧ ಪಕ್ಷದಲ್ಲಿ ಕುಳಿತ್ತಿದ್ದರೆ ಈ ಸದನ ನಡೆಯುವುದಕ್ಕೆ ಬಿಡುತ್ತಿರಲಿಲ್ಲ. ಆದರೆ, ನಾವು ಸಹಕಾರ ಕೊಡುತ್ತಿದ್ದೇವೆ.

(ಗೊಂದಲ)

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ,

**ಶ್ರೀ ಪ್ರಕಾಶ್ ಕೆ. ರಾಥೋಡ್:–** ಮಾನ್ಯ ಸಭಾಪತಿಯವರೇ,

**ವೈಸ್ ಛೇರ್ಮನ್:–** ಪ್ರಕಾಶ್ ಕೆ.ರಾಥೋಡ್‌ರವರೇ, ದಯವಿಟ್ಟು ಅರ್ಥ ಮಾಡಿಕೊಳ್ಳಿ. ನಿಮ್ಮ ಸರದಿ ಬರುತ್ತದೆ ಆಗ ಮಾತನಾಡಿ. ಮಾನ್ಯ ಐವನ್ ಡಿ'ಸೋಜಾರವರೇ ಯಾರಿಗೂ ನೀವು yield ಆಗಬೇಡಿ. ತಮ್ಮ ಮಾತನ್ನು ಮುಂದುವರೆಸಿ ಮುಕ್ತಾಯಗೊಳಿಸಿ. ನಿಮ್ಮ ಸರದಿ ಇದ್ದಾಗ ನಿಮಗೆ ಮತ್ತೆ ಮಾತನಾಡುವುದಕ್ಕೆ ಸಮಯ ಸಿಗುವುದಿಲ್ಲ.

(ಗೊಂದಲ)

**ಶ್ರೀ ರಘುನಾಥ್‌ರಾವ್ ಮಲ್ಕಾಪೂರೆ(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಶ್ರೀ ಪ್ರಕಾಶ್ ಕೆ.ರಾಥೋಡ್‌ರವರು ಕ್ರಿಕೇಟಿಗರು, ಬ್ಯಾಟಿಂಗ್ ಮಾಡಿದರೆ ಬ್ಯಾಟಿಂಗ್ ಮಾಡು ಎಂದು ಹೇಳಿ, ಬೋಲಿಂಗ್ ಮಾಡಿದರೆ ಬೋಲಿಂಗ್ ಮಾಡುವುದಕ್ಕೆ ಹೇಳಿ.

**ವೈಸ್ ಛೇರ್ಮನ್:–** ಶ್ರೀಮತಿ ತೇಜಸ್ವಿನಿಗೌಡರವರೇ ತಾವು ಹಿರಿಯ ಸದಸ್ಯರಿದ್ದೀರಿ, ದಯವಿಟ್ಟು ಅರ್ಥ ಮಾಡಿಕೊಳ್ಳಿ.

(ಗೊಂದಲ)

**ವೈಸ್ ಛೇರ್ಮನ್:–** ಮಾನ್ಯ ಐವನ್ ಡಿ'ಸೋಜಾರವರೇ, ತಮ್ಮ ಮಾತನ್ನು ಮುಂದುವರೆಸಿ ಯಾರಿಗೂ yield ಆಗುವುದಕ್ಕೆ ಹೋಗಬೇಡಿ.

(ಗೊಂದಲ)

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ಇವತ್ತು ಈ ರಾಜ್ಯದಲ್ಲಿ ...

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

(ಗೊಂದಲ)

**ಶ್ರೀ ಪ್ರಕಾಶ್ ಕೆ. ರಾಥೋಡ್:–** ಮಾನ್ಯ ಸಭಾಪತಿಯವರೇ, ನನ್ನ ಒಂದು ಪ್ರಶ್ನೆಯೇನೆಂದರೆ, ಮಾನ್ಯ ಪ್ರಧಾನ ಮಂತ್ರಿಗಳಾದ ನರೇಂದ್ರ ಮೋದಿಯವರು ನಮ್ಮ ಕರ್ನಾಟಕಕ್ಕೆ ವೈಮಾನಿಕ ಸಮೀಕ್ಷೆ ಮಾಡುವುದಕ್ಕೆ ಬಂದಿಲ್ಲ. ನಾವೂ ಸಹ ತಮ್ಮ ಮೂಲಕ ಅವರ ಜೊತೆ ಸೇರಿ ಜಾಸ್ತಿ ಪರಿಹಾರ ಕೊಡಬೇಕೆಂದು ಒತ್ತಾಯಕ್ಕೆ ಕೇಂದ್ರ ಸರ್ಕಾರಕ್ಕೆ ಮನವಿ ಮಾಡುತ್ತಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳು ಮಾನ್ಯ ಪ್ರಧಾನ ಮಂತ್ರಿಗಳಾದ ನರೇಂದ್ರ ಮೋದಿಯವರ ಹತ್ತಿರ ಮನವಿ ಮಾಡುವುದಕ್ಕೆ ಹೋದಾಗ ಸಮಯ ಕೊಡಲಿಲ್ಲ. ಮಾನ್ಯ ಪ್ರಧಾನ ಮಂತ್ರಿಗಳಾದ ನರೇಂದ್ರ ಮೋದಿಯವರು ಕರ್ನಾಟಕ ರಾಜ್ಯಕ್ಕೆ ಬಂದು ವೈಮಾನಿಕ ಸಮೀಕ್ಷೆ ನಡೆಸಿ, ಪರಿಹಾರ ನೀಡಲಿ. ಹೆಚ್ಚು ಪರಿಹಾರ ನೀಡಿದರೆ ನಿರಾಶಿತರಿಗೆ ಹೆಚು ಅನುಕೂಲವಾಗುತ್ತದೆ. ಅದರಿಂದ ಕೇಂದ್ರ ಸರ್ಕಾರಕ್ಕೂ ಕೀರ್ತಿ ಬರುತ್ತದೆ. ಅದಕ್ಕಾಗಿ ನಾವು ಮತ್ತು ಐವನ್ ಡಿ'ಸೋಜಾರವರು ತಮ್ಮ ಮೂಲಕ ಅವರಿಗೆ ಮನವಿ ಮಾಡುತ್ತಿದ್ದೇವೆ. ಮಾನ್ಯ ಪ್ರಧಾನ ಮಂತ್ರಿಯವರು ಕೊನೆ ಪಕ್ಷ ಒಂದು ಟ್ವಿಟ್ ಸಹ ಮಾಡಿಲ್ಲ. ಬಿಹಾರದಲ್ಲಿ ನೆರೆ ಉಂಟಾದಾಗ ಪ್ರಧಾನ ಮಂತ್ರಿಗಳು ಟ್ವಿಟ್ ಮಾಡುತ್ತಾರೆ. ಆದರೆ, ಕರ್ನಾಟಕ ರಾಜ್ಯದಲ್ಲಿ ನೆರೆ ಉಂಟಾದಾಗ ಟ್ವಿಟ್ ಮಾಡುವುದಕ್ಕೆ ಸಮಯವಿರಲಿಲ್ಲ. ಬೆಂಗಳೂರಿಗೆ ಬರುತ್ತಾರೆ ನಮ್ಮ ಮುಖ್ಯಮಂತ್ರಿಗಳ ಹತ್ತಿರ ಚರ್ಚೆ ಮಾಡುವುದಕ್ಕೆ ಅವರಿಗೆ ಸಮಯವಿಲ್ಲ. ಅದಕ್ಕಾಗಿ ಹೇಳುವುದೇನೆಂದರೆ ಸಭಾನಾಯಕರು ಅವರ ಸಂಸತ್ ಸದಸ್ಯರಿಗೆ ಪ್ರಧಾನ ಮಂತ್ರಿಗಳಲ್ಲಿ ಮನವಿ ಮಾಡುವುದಕ್ಕೆ ಹೇಳಲಿ.

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ನಾನು ವಿಚಾರವನ್ನು ಮಂಡನೆ ಮಾಡಿದ್ದು,...

**ಶ್ರೀ ಪ್ರಕಾಶ್ ಕೆ.ರಾಥೋಡ್:–** ಮಾನ್ಯ ಸಭಾಪತಿಯವರೇ, ಇಷ್ಟು ದೊಡ್ಡ ಪ್ರಮಾಣದಲ್ಲಿ ಹಾನಿಯಾಗಿರುವಾಗ ಕೇಂದ್ರ ಸರ್ಕಾರ ಮಧ್ಯಾಂತರ ಪರಿಹಾರವಾಗಿ 1200 ಕೋಟಿ ರೂಪಾಯಿಗಳನ್ನು ಮಾತ್ರ ಬಿಡುಗಡೆ ಮಾಡಿದ್ದಾರೆ. ಇಷ್ಟು ಹಣವನ್ನು ಕೊಟ್ಟರೆ ಸಾಕಾಗುತ್ತದೆಯೇ?

(ಗೊಂದಲ)

**ಶ್ರೀ ಎಸ್.ವ್ಹಿ.ಸಂಕನೂರು:–** ಮಾನ್ಯ ಸಭಾಪತಿಯವರೇ, ಅವರು ಏನು ಮಾತನಾಡುತ್ತಿದ್ದಾರೆ?

(ಗೊಂದಲ)

ಹಾಗಾದರೆ ಒಂದು ಲಕ್ಷ ಕೇಳಿದರೆ ಒಂದು ಲಕ್ಷವೇ ನೀಡುತ್ತಾರೆಯೇ?

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

(ಗೊಂದಲ)

**ವೈಸ್ ಛೇರ್ಮನ್:–** ಮಾನ್ಯ ಐವನ್ ಡಿ'ಸೋಜಾರವರೇ ತಾವು yield ಆಗಬೇಡಿ, ತಮ್ಮ ಮಾತನ್ನು ಮುಂದುವರೆಸಿ ಮಾತನಾಡಿ ಮುಗಿಸಿ.

(ಗೊಂದಲ)

ಪ್ರಕಾಶ್ ಕೆ. ರಾಥೋಡ್‌ರವರೇ ತಮ್ಮ ಸರದಿ ಬಂದಾಗ ಮಾತನಾಡಿ. ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿ ಇವತ್ತು ಎಂದೆಂದಿಗೂ ಕಾಣದಂಥ ಭೀಕರ ನೆರೆ ಬಂದಿದೆ. ನೆರೆ ಬಂದಾಗ ಸರ್ಕಾರದಿಂದ ಪರಿಹಾರ ಕೊಡುವುದು ಅವಶ್ಯಕವಾಗಿದೆ. ಇವತ್ತು ನೀಡಿರತಕ್ಕಂಥ ಪರಿಹಾರದಲ್ಲಿ ಕೇಂದ್ರ ಸರ್ಕಾರಕ್ಕೆ ರಾಜ್ಯ ಸರ್ಕಾರ ಸಲ್ಲಿಸಿದ್ದ ವರದಿಯಲ್ಲಿ ಸುಮಾರು 38.00 ಸಾವಿರ ಕೋಟಿ ರೂಪಾಯಿಗಳು ಹಾನಿಯಾಗಿದೆ ಎಂದು ರಾಜ್ಯ ಸರ್ಕಾರದವರು ಹೇಳಿದ್ದರು. ಆದರೆ, ಕೇಂದ್ರ ಸರ್ಕಾರದವರು ಅಷ್ಟು ನೀಡುವುದಕ್ಕೆ ಆಗಲಿಲ್ಲ, ಕಡಿಮೆ ಅನುದಾನ ನೀಡಲಾಗಿದೆ ಎಂದು ಹೇಳಿದ್ದರು. SDRF (State Disaster Response Fund) ಪ್ರಕಾರ, NDRF (National Disaster Response Fund) ಪ್ರಕಾರ ನೀಡಲಾಗಿದೆ ಎಂದು ಹೇಳಿದ್ದರು. ವಾಸ್ತವವಾಗಿ ಆಗಿರತಕ್ಕಂಥ ನಷ್ಟ ಎಷ್ಟು ಎಂದರೆ 1 ಲಕ್ಷ ಕೋಟಿಗೂ ಮೀರಿ ನಷ್ಟವಾಗಿದೆ ಎಂದು ಹೇಳಿದ್ದಾರೆ. ಆದರೆ, ನಮ್ಮ ಮುಂದೆ ಇರುವ ಸವಾಲು ಏನೆಂದರೆ ಹೆಚ್ಚು ಪರಿಹಾರ ನೀಡಬೇಕಲ್ಲವೇ? ಮಾನ್ಯ ಪ್ರಧಾನ ಮಂತ್ರಿಗಳು ವರದಿಯನ್ನು ತರಿಸದೆಯೇ ಬೇರೆ ರಾಜ್ಯಗಳಿಗೆ compensation grant ಮಾಡಿದ್ದಾರೆ. ನಮ್ಮ ರಾಜ್ಯಕ್ಕೆ ಆರ್ಥಿಕ ಸಚಿವರು ಬಂದು aerial survey ಮಾಡಿರುತ್ತಾರೆ. ಹಾಗೆಯೇ ಗೃಹ ಸಚಿವರು ಬಂದು, aerial survey ಮಾಡಿದ್ದಾರೆ. ಹಾಗಾದರೆ I am asking, whether they have come for a jolly trip or what?

**ಶ್ರೀ ಎಸ್.ವ್ಹಿ. ಸಂಕನೂರ:–** ಮಾನ್ಯ ಸಭಾಪತಿಯವರೇ, ಜಾಲಿ ಟ್ರಿಪ್ ಎಂಬ ಪದವನ್ನು ಏತಕ್ಕೆ ಮಾನ್ಯ ಸದಸ್ಯರು ಬಳಸುತ್ತಿದ್ದಾರೆ. ಏನೂ ಬೇಕಾದರೂ ಮಾತನಾಡುತ್ತಾರೆಯೇ? ಏನಾದರೂ ಶಬ್ಧವನ್ನು ಬಳಸುವುದೇ?

(ಗೊಂದಲ)

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಎಸ್.ವ್ಹಿ. ಸಂಕನೂರ:–** ಮಾನ್ಯ ಸಭಾಪತಿಯವರೇ, ಆ ಪದವನ್ನು ಕಡತದಿಂದ ತೆಗೆಯಿಸಿ.

(ಗೊಂದಲ)

**(ಈ ಹಂತದಲ್ಲಿ ವೈಸ್‌ಛೇರ್ಮನ್‌ರವರು ಪೀಠದಿಂದ ಎದ್ದು ನಿಂತರು)**

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಅದು ಜಾಲಿ ಟ್ರಿಪ್ ಅಲ್ಲ. Donald Trump ಪರವಾಗಿ.

(ಗೊಂದಲ)

**ವೈಸ್ ಛೇರ್ಮನ್:–** ಮಾನ್ಯ ಕೆ.ಟಿ.ಶ್ರೀಕಂಠೇಗೌಡರೇ, ಮಾನ್ಯ ಎಸ್.ವ್ಹಿ.ಸಂಕನೂರರವರೇ ತಮ್ಮ ಸರದಿ ಬಂದಾಗ ಮಾತನಾಡಿ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ಐವನ್ ಡಿ'ಸೋಜಾರವರೇ ತಮ್ಮ ಮಾತನ್ನು conclude ಮಾಡಿ.

(ಗೊಂದಲ)

**ಡಾ॥ತೇಜಸ್ವಿನಿ ಗೌಡ(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಹಿಂದಿನ ಮುಖ್ಯಮಂತ್ರಿಗಳು ಅಮೇರಿಕಾ ಟ್ರಿಪ್‌ನಲ್ಲಿದ್ದಾಗಲೇ ಸರ್ಕಾರ ಬಹುಮತ ಕಳೆದು ಹೋಗಿದ್ದು.

(ಗೊಂದಲ)

**ವೈಸ್ ಛೇರ್ಮನ್:–** ಮಾನ್ಯ ತೇಜಸ್ವಿನಿಗೌಡರವರೇ ತಾವು ಹಿರಿಯ ಸದಸ್ಯರು, ದಯವಿಟ್ಟು ಅರ್ಥ ಮಾಡಿಕೊಳ್ಳಿ.

(ಮುಂದು)

(136) 10.10.2019 6.10 ಎಸ್‌ಕೆ–ಬಿಎನ್‌ಎಸ್

**(ಗೊಂದಲ)**

**ವೈಸ್ ಛೇರ್ಮನ್:–** ಮಾನ್ಯ ಐವನ್ ಡಿ'ಸೋಜಾರವರೇ ಸರ್ಕಾರದ ಬಗ್ಗೆ ತಾವು ನಿರ್ದಿಷ್ಟವಾಗಿ ಏನು ಕೇಳಬೇಕೆಂದುಕೊಂಡಿದ್ದೀರೋ, ಆ ವಿಷಯವನ್ನು ಕೇಳಿ ತಾವು conclude ಮಾಡಿ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ...

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ(ನಾಮ ನಿರ್ದೇಶಿತ ಹೊಂದಿದವರು):–** ಮಾನ್ಯ ಸಭಾಪತಿಯವರೇ, ನಮ್ಮ ರಾಜ್ಯಕ್ಕೆ ಕೇಂದ್ರದಿಂದ ಯಾವುದೇ ತಂಡ ಬಂದರೆ, if any Minister comes, ಅವರು aerial survey ಮಾಡುತ್ತಾರೆಂದರೆ, ಅವರ ಜೊತೆಯಲ್ಲಿ Secretariat ಇದ್ದೇ ಇರುತ್ತದೆ. They will give a report. ನಾವು ಹೋಗಿ ವೀಕ್ಷಣೆ ಮಾಡಿದ್ದೇವೆ. ಇಷ್ಟೊಂದು ನಷ್ಟವಾಗಿದೆ, ಕಷ್ಟವಿದೆ ಎಂದು ಹೇಳುತ್ತಾರೋ ಇಲ್ಲವೋ? ನಾನು ಒಬ್ಬ ಶಾಸಕನಾಗಿ ಕಮಿಟಿಯ ಜೊತೆಗೆ ನನ್ನನ್ನು ಜಿಲ್ಲೆಗೆ ಕಳುಹಿಸಿದರೆ, ನಾವು ರಿಪೋರ್ಟ್ ತಂದು ಕೊಡುತ್ತೇವೆಯೋ ಇಲ್ಲವೋ? So, is it not the duty of the Finance Minister and the Home Minister to submit a report to the Prime Minister? ಇದನ್ನು ಅವರ ಗಮನಕ್ಕೆ ತರುವುದು ಬೇಡವೇ? ತಾವು ಏನು ಬರಲಿಲ್ಲ ಒಂದು ಟೀಂ ಒಂದನ್ನು ಕಳುಹಿಸಿ, ನಂತರ ಟೀಂನ ರಿಪೋರ್ಟ್ ಸರಿಯಿಲ್ಲ ಎಂದು ಹೇಳಿದ್ದೀರಲ್ಲವೇ? ಅದು ಮಲತಾಯಿ ಧೋರಣೆ ಅಲ್ಲವೇ? ಇದನ್ನು ನಾನು ಏಕೆ ಹೇಳಬೇಕು? ಬಿಜೆಪಿ ಪಕ್ಷದ ಹಿರಿಯ ಸದಸ್ಯರು ಹಾಗೂ ಮಾಜಿ ಮಂತ್ರಿಯಾದ ಶ್ರೀ ಸಿದ್ದೇಶ್ವರ್‌ರವರು 'ನೋಡಿ ನಮಗೆ ನಾಚಿಕೆಯಾಗುತ್ತಿದೆ' ಎಂದು ಹೇಳುತ್ತಾರೆ. We have to go and represent before the Prime Minister. ಹೇಗೆ Additional compensation ಕೇಳಬೇಕು. ಇಲ್ಲದೇ ಇದ್ದರೆ ನಾವು ಸುಮ್ಮನೆ ಇರಬೇಕಾಗುತ್ತದೆ ಎನ್ನುವ ಮಾತನ್ನು ಹೇಳುತ್ತಾರೆ. ನಾವು ಹಣವನ್ನು ಕೊಡದೇ ಇದ್ದರೆ, ಇದು ರಾಜ್ಯಕ್ಕೆ ಅನ್ಯಾಯವಾಗುತ್ತದೆ ಎನ್ನುವ ಮಾತನ್ನು ಬಿ.ಜೆ.ಪಿ. ಪಕ್ಷದ ಇನ್ನೊಬ್ಬ ಶಾಸಕರು ಹೇಳುತ್ತಾರೆ. ಶಾಸಕರು ಹೇಳಿದ್ದಕ್ಕೆ ಅವರಿಗೆ ಪನಿಷ್‌ಮೆಂಟ್ ಏನೆಂದರೆ, ಅವರಿಗೆ Show Cause Notice ಕೊಡುತ್ತಾರೆ. Is it not impartial?

**(ಗೊಂದಲ)**

**ವೈಸ್ ಛೇರ್ಮನ್:–** ಮಾನ್ಯ ಐವನ್ ಡಿ'ಸೋಜಾರವರೇ ತಮ್ಮ ಸಲಹೆಯನ್ನು ಸರ್ಕಾರಕ್ಕೆ ಕೊಡಿ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**(ಗೊಂದಲ)**

**ವೈಸ್ ಛೇರ್ಮನ್:–** ಮಾನ್ಯ ಸದಸ್ಯರೇ ದಯವಿಟ್ಟು ಕುಳಿತುಕೊಳ್ಳಿ. ತಮ್ಮ ಸಲಹೆ ಏನಿದೆ ಮತ್ತು ಸರ್ಕಾರದಲ್ಲಿ ತಮ್ಮ ಡಿಮ್ಯಾಂಡ್ ಏನಿದೆ ಎಂಬುದರ ಬಗ್ಗೆ ಹೇಳಿ, conclude ಮಾಡಿ.

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ರಾಜ್ಯಕ್ಕೆ ನೆರೆ ಪರಿಹಾರದಲ್ಲಿ ಕೇಂದ್ರ ಸರ್ಕಾರ ಅನ್ಯಾಯ ಮಾಡುವುದನ್ನು ತಪ್ಪಿಸುವುದಕ್ಕೆ ನಾವೆಲ್ಲರೂ ಒಟ್ಟಾಗಬೇಕು. ಇದರಲ್ಲಿ ರಾಜಕಾರಣ ಮಾಡುವುದು ಬೇಡ. ನಮಗೆ 1200 ಕೋಟಿ ರೂಪಾಯಿಗಳು ಸಾಕೇ? (ಗೊಂದಲ) ನಮ್ಮಲ್ಲಿ ಸುಮಾರು 36 ಸಾವಿರ ಕೋಟಿ ರೂಪಾಯಿಗಳು ನಷ್ಟವಾಗಿದೆ. ಒಂದು ಲಕ್ಷ ಕೋಟಿ ನಷ್ಟವಾಗಿದೆ ಎಂದು ಲೆಕ್ಕವನ್ನು ಕೊಡುವವರು ನಾವು. 1200 ಕೋಟಿ ರೂಪಾಯಿಗಳಲ್ಲಿ ನಮ್ಮ ರಾಜ್ಯದ ನೆರೆ ಸಂತ್ರಸ್ತರಿಗೆ ನಾವು ನ್ಯಾಯ ಕೊಡುವುದಕ್ಕೆ ಸಾಧ್ಯವಾಗುತ್ತದೆಯೇ? ನೆರೆ ಪರಿಹಾರದಿಂದ ನನಗೆ ಹಣ ಸಿಗುವ ಭರವಸೆ ಇಲ್ಲ ಎಂದು ಪತ್ರವನ್ನು ಬರೆದಿಟ್ಟು, ರೈತರು ತಮಗೆ ತಾವೇ ಗುಂಡಿಕ್ಕಿಕೊಂಡು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. He has given the statement saying that, ನೆರೆ ಪರಿಹಾರದಿಂದ ನನಗೆ ಹಣ ಸಿಗುವ ಭರವಸೆ ಇಲ್ಲ ಹಾಗಾಗಿ ನಾನು ಗುಂಡಿಟ್ಟುಕೊಂಡು ಸಾಯುತ್ತೇನೆಂದು ಪತ್ರವನ್ನು ಬರೆದಿಟ್ಟು ಸಾಯುತ್ತಾನೆ. ಆಗ ನಾವು ಪರಿಹಾರ ಕೊಡಿಸುವುದು ಅವಶ್ಯಕತೆ ಇದೆಯೇ ಅಥವಾ ಇಲ್ಲವೇ ಎನ್ನುವುದು ನನ್ನ ಪ್ರಶ್ನೆ. ನೆರೆ ಸಂತ್ರಸ್ತರ ಕುಟುಂಬಗಳವರು ಎಷ್ಟು ತೊಂದರೆಗೊಳಗಾಗಿದ್ದಾರೋ, ಅವರೆಲ್ಲಾ ಸಣ್ಣ ಮತ್ತು ಅತಿ ಸಣ್ಣ ರೈತರು. ಎರಡು ಅಥವಾ ಮೂರು ಎಕರೆಗಿಂತ ಕಡಿಮೆ ಜಮೀನುವುಳ್ಳವರು. ನಾನು ಸರ್ಕಾರಕ್ಕೆ ವಿನಂತಿ ಮಾಡುವುದೇನೆಂದರೆ, ಈ ಎಲ್ಲಾ ರೈತರ ಸಾಲವನ್ನು ಮನ್ನಾ ಮಾಡಬೇಕು. ಯಾವ ರೈತರು ಭೂಮಿ, ಬೆಳೆ ಮತ್ತು ಮನೆಯನ್ನು ಕಳೆದುಕೊಂಡಿದ್ದಾರೋ ಮತ್ತು ಕುಟುಂಬಕ್ಕೆ ತೊಂದರೆಯಾಗಿದೆಯೋ ಅಂತಹ ರೈತರನ್ನು ಗುರುತು ಮಾಡಿ, ಸಾಲವನ್ನು ಸಂಪೂರ್ಣವಾಗಿ ಮನ್ನಾ ಮಾಡಬೇಕು. ತಾವು ಯಾರಿಗೆ ಐದು ಲಕ್ಷ ರೂಪಾಯಿಗಳನ್ನು ಕೊಡುತ್ತೇವೆಂದು promise ಮಾಡಿದ್ದೀರೋ, ಅವರಿಗೆ ತಕ್ಷಣವೇ ಕೊಡಬೇಕು. ಅವರನ್ನು ಬೀದಿಯಲ್ಲಿ ನಿಲ್ಲಿಸುವುದಲ್ಲ. ತಾವು ಅವರಿಗೆ ಟೆಂಟ್ ಕಟ್ಟಿಕೊಡಲಿಲ್ಲ. ಕೆಲವರು ಮನೆ ಕೆಲಸಕ್ಕೆ ಎಲ್ಲೆಲ್ಲೋ ಹೋಗಿ ಬದುಕುತ್ತಾರೆ. ಅವರ ಜೀವನಕ್ಕೆ ಬೆಳಕನ್ನು ತೋರಿಸದೇ ಇದ್ದರೆ, ಕೇಂದ್ರ ಸರ್ಕಾರದ ವಿರುದ್ಧ fight ಮಾಡಿ. ಬಿಜೆಪಿ ಪಕ್ಷದ ಇಪ್ಪತ್ತೈದು ಜನ ಸಂಸದರು ದೆಹಲಿಗೆ ಹೋಗಿದ್ದರೂ ಸಹ ಒಂದು ದಿವಸವೂ ಮಾತನಾಡುವುದಿಲ್ಲ ಮತ್ತು ಒಂದು ದಿವಸವೂ ಧರಣಿಯನ್ನು ಮಾಡುವುದಿಲ್ಲ. ನಮಗೆ ಹಣ ಕೊಡಿ, ಅದು ನಮ್ಮ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಹಕ್ಕು ಎಂದು ಕೇಳುವುದಿಲ್ಲ. ಮಾನ್ಯ ಸಭಾಪತಿಯವರೇ, ಇದನ್ನು ಯಾರು ಕೇಳಬೇಕು? ಯಾರಾದರೂ ಮಾತನಾಡಿದರೆ, ದೇಶದ್ರೋಹಿ ಎಂದು ಹೇಳುವಂತಹ ಮಾತು. ಶ್ರೀಯುತ ಚಕ್ರವರ್ತಿ ಸೂಲಿಬೆಲೆ ಅಂತಹವರು ಪತ್ರಿಕೆಯಲ್ಲಿ ಮತ್ತು ಮಾಧ್ಯಮಗಳಲ್ಲಿ ರೈತರಿಗೆ compensation ಕೊಡುವುದರಲ್ಲಿ ಸರ್ಕಾರ ವಿಫಲವಾಗಿದೆ ಎಂದು ಹೇಳಿದರೆ, ಅವರು ಹೇಳಿದ ಐದು ಗಂಟೆಯೊಳಗಡೆ ಅವರನ್ನು ದೇಶದ್ರೋಹಿ ಎಂದು ಹೇಳುತ್ತಾರೆ. ಇದು ನಮ್ಮ ಪದ್ಧತಿ. ಈ ಪದ್ಧತಿಯಲ್ಲಿ ರಾಜ್ಯ ಸರ್ಕಾರ ರೈತರಿಗೆ ಪರಿಹಾರವನ್ನು ಕೊಡಿಸುವಂತಹ ಭರವಸೆಯಿಲ್ಲ ಎಂದು ಹೇಳುವುದಕ್ಕೆ ಬಯಸುತ್ತೇನೆ.

**(ಗೊಂದಲ)**

**ಶ್ರೀ ಎಂ.ಕೆ. ಪ್ರಾಣೇಶ್ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ...

**(ಗೊಂದಲ)**

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಪ್ರಾಣೇಶ್‌ರವರೇ, ಅವರನ್ನು ಮಾತನಾಡುವುದಕ್ಕೆ ಬಿಡಿ.

**(ಗೊಂದಲ)**

**ವೈಸ್ ಛೇರ್ಮನ್ :–** ಐವನ್ ಡಿ'ಸೋಜಾರವರೆ conclude ಮಾಡಿ.

**ಶ್ರೀ ಐವನ್ ಡಿ'ಸೋಜಾ:–** ಪರಿಹಾರ ಕೊಡುವುದರಲ್ಲಿ ಈ ಸರ್ಕಾರ...

**(ಗೊಂದಲ)**

**ಶ್ರೀ ಯು.ಬಿ. ವೆಂಕಟೇಶ್ (ನಾಮ ನಿರ್ದೇಶಿತರು):–** ಅವರು ಮಾಡನಾಡುವುದಕ್ಕೆ ಬಿಡಿ.

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ(ನಾಮ ನಿರ್ದೇಶಿತರು):–** ಈ ಸರ್ಕಾರದಲ್ಲಿ ನೆರೆ ಸಂತ್ರಸ್ತರಿಗೆ ನ್ಯಾಯ ಸಿಗಲಿಲ್ಲ. ಆದ್ದರಿಂದ ಅವರಿಗೆ ನ್ಯಾಯ ಒದಗಿಸುವ ಕೆಲಸವನ್ನು ಸರ್ಕಾರ ಮಾಡಬೇಕಾಗಿದೆ.

**(ಗೊಂದಲ)**

**ಶ್ರೀ ಎಂ.ನಾರಾಯಣಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಅವರನ್ನು ಮಾತನಾಡುವುದಕ್ಕೆ ಬಿಡಿ. ...

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

(ಗೊಂದಲ)

**ಶ್ರೀ ಐವನ್ ಡಿ'ಸೋಜಾ:–** ಸರ್ಕಾರಕ್ಕೆ ಕೇಳಬಯಸುವುದೇನೆಂದರೆ, .... ಒಂದು ಲಕ್ಷ ರೂಪಾಯಿಗಳನ್ನು ಕೊಡುತ್ತೇನೆ, ಐದು ಲಕ್ಷ ರೂಪಾಯಿಗಳನ್ನು ಕೊಡುತ್ತೇನೆ . . . ತಾವು ಯಾವ ಮಾನದಂಡದಲ್ಲಿ ಅವರನ್ನು ನೇಮಕ ಮಾಡಿದ್ದೀರಿ. ನಮ್ಮ ಊರಿನಲ್ಲಿ ಪ್ರವಾಹ ಬಂದು ಐದಾರು ದಿನಗಳು ನೀರು ಬಂದು ನಿಂತ ಪರಿಣಾಮವಾಗಿ ಮಣ್ಣಿನಿಂದ ನಿರ್ಮಿಸಲ್ಪಟ್ಟಿದ್ದ ಕೆಲವು ಮನೆಗಳು ಇವತ್ತಿನ ದಿವಸ ಬೀಳುವಂತಹ ಪರಿಸ್ಥಿತಿಯಲ್ಲಿವೆ. ಆದರೆ ಮನೆ ಏನಾಗಲಿಲ್ಲ. ಮಳೆ ನಿಂತಿದೆ, ಬಿಸಿಲು ಬಂದಿದೆ ನಿಮ್ಮ ಗೋಡೆ ಸರಿಯಿದೆ ಎಂದು ಅಧಿಕಾರಿಗಳು ಹೇಳಿ ಹೋಗಿರುವಂಥದ್ದು ಇದೆ. ಅನೇಕ ಸಂತ್ರಸ್ತರು ಇವತ್ತಿನ ದಿವಸ ಪ್ರಾಣಾಪಾಯದ ಭಯದಿಂದ ಆ ಮನೆಯೊಳಗಡೆ ಮಲಗುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ರೈತರಿಗೆ ಬೆಳೆ ಬೆಳೆಸುವ ಸಾಧ್ಯತೆಯಿಲ್ಲ. ಇವತ್ತು ಸುಮಾರು 650 ಅಂಗನವಾಡಿ ಕಟ್ಟಡಗಳು ಸಂಪೂರ್ಣವಾಗಿ ಬಿದ್ದು ಹೋಗಿವೆ. ಶಾಲಾ ಕಟ್ಟಡಗಳು ಸಹ ಬಿದ್ದು ಹೋಗಿವೆ. ಆಸ್ಪತ್ರೆಗಳನ್ನು ಇನ್ನೂ rejuvenate ಮಾಡಲಿಲ್ಲ. ಆ ಸಂದರ್ಭದಲ್ಲಿ ನಾನು ಹೇಳುವುದೇನೆಂದರೆ, ಪರಿಹಾರ ಕೊಡದೇ ಇರುವುದಕ್ಕೆ ಕೇಂದ್ರ ಸರ್ಕಾರ ರಾಜ್ಯಕ್ಕೆ ಅನುದಾನ ಕೊಡದೇ ಇರುವುದೇ ಒಂದು ಪ್ರಮುಖವಾದ ಕಾರಣ. ರಾಜ್ಯ ಸರ್ಕಾರದಲ್ಲಿ ಇದಕ್ಕೆ ಸಾಕಷ್ಟು ಹಣ ಇಲ್ಲ. ಆದರೆ, ಕೇಂದ್ರ ಸರ್ಕಾರವನ್ನು ಮಾತನಾಡಿದರೆ, ಇಲ್ಲಿ ಎದುರು ಕುಳಿತಿರುವವರು ಯಾರೂ ಅವರ ಸ್ಥಾನದಲ್ಲಿ ಕುಳಿತುಕೊಳ್ಳುವ ಹಾಗಿಲ್ಲ. ಅವರಿಗೆಲ್ಲಾ Show Cause Notice ನೀಡಲಾಗುತ್ತದೆ. ರಾಜ್ಯಕ್ಕೆ ಅನ್ಯಾಯವಾಗಿದೆ. ಹಾಗಾಗಿ ನಾನು ಒತ್ತಾಯ ಮಾಡುವುದೇನೆಂದರೆ, ಇವತ್ತು ರಾಜ್ಯ ಸರ್ಕಾರಕ್ಕೆ ಏನಾದರೂ ಕಾಳಜಿ ಇದ್ದಿದ್ದರೆ ... one man Minister ಆಗಿದ್ದಾಗ ಮಾನ್ಯ ಯಡಿಯೂರಪ್ಪನವರು ಆಚೆ–ಈಚೆ ಓಡಾಡುತ್ತಿದ್ದರು. ಮಂತ್ರಿಮಂಡಲ ರಚನೆಯಾದ ನಂತರ ಎಲ್ಲಿಯೂ ಹೋಗಲಿಲ್ಲ. ಸಚಿವರುಗಳನ್ನು ಮಾಡಿದ್ದೇ ಮಾಡಿದ್ದು, ಅದರ ನಂತರ ಅವರು ಎಲ್ಲಿಗೂ ಹೋಗಲಿಲ್ಲ. ಅದರ ನಂತರ ಪರಿಹಾರವಿಲ್ಲ. ಈ ಪರಿಸ್ಥಿತಿಯಲ್ಲಿ ರಾಜ್ಯಕ್ಕೆ ಮತ್ತಷ್ಟು ಅನ್ಯಾಯವಾಗುವುದನ್ನು ಸಹಿಸಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಹಾಗಾಗಿ ಇವತ್ತು ನಾವು ನಿಲುವಳಿ ಸೂಚನೆಯನ್ನು ತಂದಿದ್ದೇವೆ. ವಿರೋಧ ಪಕ್ಷದ ನಾಯಕರು ಸಾಕಷ್ಟು ವಿಷಯಗಳನ್ನು ಎಳೆ ಎಳೆಯಾಗಿ ಬಿಡಿಸಿದ್ದಾರೆ. ನಾನು ತಮ್ಮ ಮೂಲಕ ಸರ್ಕಾರಕ್ಕೆ ಮತ್ತೊಮ್ಮೆ ಒತ್ತಾಯ ಮಾಡುವುದೇನೆಂದರೆ, ತಕ್ಷಣವೇ ಅವರಿಗೆ ಮನೆ ಬಾಡಿಗೆ ಕೊಡಬೇಕು. ಆದರೆ ಅದಕ್ಕಾಗಿ ನೀಡಲಾಗುವ ಐದು ಸಾವಿರ ರೂಪಾಯಿಗಳು ಸಾಕಾಗುವುದಿಲ್ಲ. ತಿಂಗಳಿಗೆ ಕನಿಷ್ಠ ಸುಮಾರು ಹತ್ತು ಸಾವಿರ ರೂಪಾಯಿಗಳನ್ನಾದರೂ ಕೊಡಬೇಕು. ಕೊಡಗಿನಲ್ಲಿ ಪರಿಹಾರವನ್ನು ಯಾವ ಮಾದರಿಯಲ್ಲಿ ಕೊಟ್ಟರು, ಎರಡು ಬೆಡ್ ರೂಂ ಇರುವಂತಹ ಮನೆಯನ್ನು ಕಟ್ಟಿಕೊಟ್ಟರು. ಅವರಿಗೆ ಉಚಿತ ಸೈಟ್ ಕೊಟ್ಟರು. ಯಾರಿಗೆ ಮನೆ ಬೇಡವೋ ಅಂತಹವರಿಗೆ ಸುಮಾರು ಹತ್ತು ಲಕ್ಷ ರೂಪಾಯಿಗಳನ್ನು

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೊಟ್ಟರು. ಕೊಡಗಿನ ಮಾದರಿಯನ್ನಾದರೂ ಜಾರಿಗೆ ತರುವ ಮೂಲಕ ಈ ಒಂದು ನೆರೆ ಸಂತ್ರಸ್ತರಿಗೆ ಪರಿಹಾರವನ್ನು ವಿತರಿಸಬೇಕು. ಅದೇ ರೀತಿಯ ಮಂಗಳೂರಿನ ...

**(ಗೊಂದಲ)**

**ವೈಸ್ ಛೇರ್ಮನ್:–** ವಿಷಯವನ್ನು conclude ಮಾಡಿ.

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ:–** ಮಂಗಳೂರಿನ ಪಚ್ಚನಾಡಿ landfill ಸ್ಥಳದಲ್ಲಿ ಸುಮಾರು 27 ಮನೆಗಳು ಹಾಳಾಗಿವೆ. ಮಂಗಳೂರಿನ ಪಚ್ಚನಾಡಿನಲ್ಲಿ ಕಸ ಹಾಕಿರುವಂತಹ ಒಂದು ಭಾಗದಲ್ಲಿ ನೀರು ನುಗ್ಗಿದ ಪರಿಣಾಮ ಸುಮಾರು 27 ಮನೆಗಳು ಕೊಚ್ಚಿ ಹೋಗಿದ್ದು, ಆ ಕುಟುಂಬಗಳು ಇವತ್ತು ಬೀದಿಗೆ ಬಂದಿದ್ದಾರೆ. ಅವರಿಗೆ ಮನೆಯನ್ನು ಕೂಡಲೇ ನಿರ್ಮಾಣ ಮಾಡಿಕೊಡಬೇಕು. ಬೆಳ್ತಂಗಡಿಯಲ್ಲಿ ಅತ್ಯಂತ ಹೆಚ್ಚು ಹಾನಿಯಾಗಿರುವಂತಹ ಪ್ರದೇಶಕ್ಕೆ ಸಹ ಪರಿಹಾರವನ್ನು ಕೊಡಬೇಕು. ಮಾನ್ಯ ಸಭಾನಾಯಕರು ನಮ್ಮ ಜಿಲ್ಲೆಯ ಉಸ್ತುವಾರಿ ಮಂತ್ರಿಯಾಗಿದ್ದು, ಅವರು ಹೊಸದಾಗಿ ಕಛೇರಿಯನ್ನು ತೆರೆದಿದ್ದಾರೆ, ಅವರು ನಮ್ಮನ್ನು ಭೇಟಿಯಾಗುವುದಾಗಿ ಹೇಳಿದ್ದಾರೆ. ಪರಿಹಾರವನ್ನು ಕೊಡಿಸುವುದಾಗಿ ಈಗಾಗಲೇ ಹೇಳಿದ್ದಾರೆ. ನಾವು ನಿಮ್ಮ ಹತ್ತಿರ ಬರುತ್ತೇವೆ, ಪರಿಹಾರವನ್ನು ಕೊಡುವುದಕ್ಕೆ ಹೆಚ್ಚು ಕಾಳಜಿಯನ್ನು ವಹಿಸಿಕೊಳ್ಳಬೇಕು. ಇಡೀ ರಾಜ್ಯದಲ್ಲಿ ಉಂಟಾದ ಪರಿಸ್ಥಿತಿಯನ್ನು ನಿರ್ವಹಣೆ ಮಾಡುವುದರಲ್ಲಿ ಎಲ್ಲಿಯೋ ಒಂದು ಕಡೆ ಆಡಳಿತ ಪಕ್ಷ ಸಂಪೂರ್ಣ ವಿಫಲಗೊಂಡಿದೆ ಎನ್ನುವಂತಹ ಮಾತನ್ನು ಹೇಳುತ್ತೇನೆ.

**ವೈಸ್ ಛೇರ್ಮನ್:–** ಧನ್ಯವಾದಗಳು. ದಯವಿಟ್ಟು ತುಂಬಾ ಜನ ಸದಸ್ಯರು 45 ರಿಂದ 50 ನಿಮಿಷಗಳ ಕಾಲ ಮಾತನಾಡಿದ್ದೀರಿ. ನಾಳೆ ಮಾನ್ಯ ಸದಸ್ಯರೆಲ್ಲರೂ ಮಾತನಾಡಲು ಐದು ನಿಮಿಷ ತೆಗೆದುಕೊಂಡು ಪೂರ್ತಿಗೊಳಿಸಿ. ಏಕೆಂದರೆ ನಾಳೆ ಸರ್ಕಾರ ...

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಪ್ರತಿ ಸದಸ್ಯರಿಗೆ ನೀಡುವ ಕಾಲಾವಧಿಯನ್ನು ಐದು ನಿಮಿಷಕ್ಕೆ ಫಿಕ್ಸ್ ಮಾಡಿ.

**ವೈಸ್ ಛೇರ್ಮನ್:–** ಮಾನ್ಯ ಸದಸ್ಯರು ಮಾತನಾಡುವುದಾದರೆ ಸಂಜೆ ಸುಮಾರು 6.30 ಗಂಟೆಯವರೆಗೆ ಮಾಡನಾಡಲಿ ಎಂದು ನಾನು ಅಂದುಕೊಂಡಿದ್ದೆ. ಸದನದ ಅಭಿಪ್ರಾಯದಂತೆ ಈಗ ಸದನವನ್ನು ನಾಳೆ ಬೆಳಿಗ್ಗೆ 11.00 ಗಂಟೆಯವರೆಗೆ ಮುಂದೂಡುತ್ತಿದ್ದೇನೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಸದನವು ಸಂಜೆ 6 ಗಂಟೆ 20 ನಿಮಿಷಕ್ಕೆ ಮುಕ್ತಾಯಗೊಂಡು, ಪುನಃ ದಿನಾಂಕ: 11ನೇ ಅಕ್ಟೋಬರ್ ಮಾಹೆ 2019ರಂದು ಶುಕ್ರವಾರ ಬೆಳಗ್ಗೆ 11.00 ಗಂಟೆಗೆ ಸೇರಲು ತೀರ್ಮಾನಿಸಿತು)

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "